# ಮಕ್ಕಳ ರಕ್ಷಣಾ ವ್ಯವಸ್ಥೆ ಮತ್ತು ಮಕ್ಕಳ ಅಭಿವೃದ್ಧಿ

## (ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ)

ಸಮಾಜ ಕಾರ್ಯ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ



ಸಂಶೋಧಕರು
ಪ್ರಮೀಳಾ ಜೆ. ವಾಜ್

ಮಾರ್ಗದರ್ಶಕರು
ಡಾ. ದುಗ್ಗಪ್ಪ ಕಜೆಕಾರು
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ
ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾನ್ಯತಾ ಸಂಸ್ಥೆ
ಅಧ್ಯಯನ ಕೇಂದ್ರ
...ಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

೨೦೨೦

# ಮಕ್ಕಳ ರಕ್ಷಣಾ ವ್ಯವಸ್ಥೆ ಮತ್ತು ಮಕ್ಕಳ ಅಭಿವೃದ್ಧಿ

## (ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ)

ಸಮಾಜ ಕಾರ್ಯ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ


ಸಂಶೋಧಕರು
**ಪ್ರಮೀಳಾ ಜೆ. ವಾಜ್**

ಮಾರ್ಗದರ್ಶಕರು
**ಡಾ. ದುಗ್ಗಪ್ಪ ಕಜೆಕಾರು**
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ
ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು



**ಸಮಾಜ ವಿಜ್ಞಾನಗಳ ನಿಕಾಯ**
**ಅಭಿವೃದ್ಧಿ ಅಧ್ಯಯನ ವಿಭಾಗ**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ ೫೮೩೨೭೬**

ಮಾನ್ಯತಾ ಸಂಸ್ಥೆ
**ಅಧ್ಯಯನ ಕೇಂದ್ರ**
**ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ**
**ಬಲ್ಮಠ, ಮಂಗಳೂರು**

**೨೦೨೦**

# ಸಂಶೋಧಕರ ಘೋಷಣಾ ಪತ್ರ

**"ಮಕ್ಕಳ ರಕ್ಷಣಾವ್ಯವಸ್ಥೆ ಮತ್ತು ಮಕ್ಕಳ ಅಭಿವೃದ್ಧಿ (ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ)"**ಎಂಬ ಸಮಾಜ ಕಾರ್ಯ (ಅಭಿವೃದ್ಧಿ ಅಧ್ಯಯನ) ವಿಷಯದ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಮಾಜಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ **ಡಾ. ದುಗ್ಗಪ್ಪ ಕಜೆಕಾರ್** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:

ಸ್ಥಳ: ವಿದ್ಯಾರಣ್ಯ

**(ಪ್ರಮೀಳಾ ಜೆ. ವಾಜ್)**
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

## ಮಾರ್ಗದರ್ಶಕರ ದೃಡೀಕರಣ ಪತ್ರ

**ಪ್ರಮೀಳಾ ಜೆ. ವಾಜ್** ಇವರು **"ಮಕ್ಕಳ ರಕ್ಷಣಾವ್ಯವಸ್ಥೆ ಮತ್ತು ಮಕ್ಕಳ ಅಭಿವೃದ್ಧಿ (ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ)"** ಎಂಬ ಸಮಾಜ ಕಾರ್ಯ (ಅಭಿವೃದ್ಧಿ ಅಧ್ಯಯನ) ವಿಷಯದಲ್ಲಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಪಿಎಚ್.ಡಿ. ಪದವಿಗಾಗಿ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆ ಕೈಗೊಂಡಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಸಲ್ಲಿಸಿರುವುದಿಲ್ಲವೆಂದು ದೃಡೀಕರಿಸುತ್ತೇನೆ.

ದಿನಾಂಕ:

ಸ್ಥಳ: ವಿದ್ಯಾರಣ್ಯ

**(ಡಾ. ದುಗ್ಗಪ್ಪ ಕಜೆಕಾರು)**

ಮಾರ್ಗದರ್ಶಕರು

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

Dr. DUGGAPPA KAJEKAR
Co-ordinator
Departnment of P.G. Studies in Social Work
Govt. First Grade College
Thenkanidiyur, Udupi - 576 106

# ಪರಿಶಿಷ್ಟಗಳು

## ಕೋಷ್ಟಕಗಳು



## ಲಂಬಚಿತ್ರಗಳು

**ವೃತ್ತಚಿತ್ರಗಳು**

# ಸಂಕ್ಷೇಪಣಗಳು

| | | |
|---|---|---|
| CPC | Child Protection Committee | ಚೈಲ್ಡ್ ಪ್ರೊಟೆಕ್ಷನ್ ಕಮಿಟಿ<br>ಮಕ್ಕಳ ರಕ್ಷಣಾ ಸಮಿತಿ |
| CPP | Child Protection Policy | ಚೈಲ್ಡ್ ಪ್ರೊಟೆಕ್ಷನ್ ಪಾಲಿಸಿ<br>ಮಕ್ಕಳ ರಕ್ಷಣಾ ನೀತಿ |
| CPO | Child Protection Officer | ಚೈಲ್ಡ್ ಪ್ರೊಟೆಕ್ಷನ್ ಆಪಿಸರ್<br>ಮಕ್ಕಳ ರಕ್ಷಣಾಧಿಕಾರಿ |
| CWC | Child Welfare Committee | ಚೈಲ್ಡ್ ವೆಲ್ಫೇರ್ ಕಮಿಟಿ<br>ಮಕ್ಕಳ ಕಲ್ಯಾಣ ಸಮಿತಿ |
| DCPO | District Child Protection Officer | ಡಿಸ್ಟ್ರಿಕ್ಟ್ ಚೈಲ್ಡ್ ಪ್ರೊಟೆಕ್ಷನ್ ಆಫಿಸರ್<br>ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ |
| DCPU | District Child Protection Unit | ಡಿಸ್ಟ್ರಿಕ್ಟ್ ಚೈಲ್ಡ್ ಪ್ರೊಟೆಕ್ಯನ್ ಯುನಿಟ್<br>ಜಿಲ್ಲಾ ಮಕ್ಕಳ ರಕ್ಷಣಾ ಘಟಕ |
| DOE | Department of Education | ಡಿಪಾರ್ಟ್‌ಮೆಂಟ್ ಆಫ್ ಎಜ್ಯುಕೇಶನ್<br>ಶಿಕ್ಷಣ ಇಲಾಖೆ |
| DWCD | District Women and<br>Child Department | ಡಿಸ್ಟ್ರಿಕ್ಟ್ ಆಫ್ ವುಮೆನ್ ಆಂಡ್<br>ಚೈಲ್ಡ್ ಡಿಪರ್ಟ್‌ಮೆಂಟ್<br>ಜಿಲ್ಲಾ ಮಕ್ಕಳ ಮತ್ತು ಮಹಿಳಾ ಇಲಾಖೆ |
| EI | Education Inspector | ಎಜ್ಯುಕೇಶನ್ ಇನ್ಸ್ಪೆಕ್ಟರ್<br>ಶಿಕ್ಷಣಾ ನಿರೀಕ್ಷಕರು |
| FIR | First Information Report | ಫಸ್ಟ್ ಇನ್ಫಾರ್ಮೇಶನ್ ರಿಪೋರ್ಟ್<br>ಪ್ರಥಮ ವರ್ತಮಾನ ವರದಿ |
| ICPS | Integrated Child Protection Society | ಇಂಟಿಗ್ರೇಟೆಡ್ ಚೈಲ್ಡ್ ಪ್ರೊಟೆಕ್ಷನ್‌ಸೊಸೈಟಿ<br>ಸಮಗ್ರ ಮಕ್ಕಳ ರಕ್ಷಣಾ ಸಂಘ |
| IO | Inspection Officer | ಇನ್ಸ್ಪೆಕ್ಷನ್ ಆಫಿಸರ್<br>ನಿರೀಕ್ಷಣಾಧಿಕಾರಿ |

| | | |
|---|---|---|
| JJB | Juvenile Justice Board | ಜುವೆನೈಲ್ ಜಸ್ಟಿಸ್ ಬೋರ್ಡ್<br>ಮಕ್ಕಳ ಕಲ್ಯಾಣ ಮಂಡಳಿ |
| NGO | Non-Governmental Organization | ನಾನ್ ಗೌರ್ನ್‌ಮೆಂಟಲ್ ಆರ್ಗನೈಸೇಶನ್<br>ಸರಕಾರೇತರ ಸಂಸ್ಥೆ |
| POCSO | Protection of Child against Sexual Offences | ಪ್ರೊಟೆಕ್ಷನ್ ಆಫ್ ಚೈಲ್ಡ್ ಅಗೈನ್ಸ್ಟ್<br>ಸೆಕ್ಷುಅಲ್ ಒಫೆನ್ಸಸ್<br>ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ |
| PTA | Parent Teacher Association | ಪೇರೆಂಟ್/ ಟೀಚರ್ ಅಸೋಸಿಯೇಶನ್<br>ಪೋಷಕ/ಶಿಕ್ಷಕ ಸಂಘ |
| RTE | Right To Education | ರೈಟ್ ಟು ಎಡ್ಯುಕೇಶನ್<br>ಶಿಕ್ಷಣ ಹಕ್ಕು ಕಾಯಿದೆ |
| SDMC | School Development and Monitoring Committee | ಸ್ಕೂಲ್ ಡೆವೆಲಪ್ಮೆಂಟ್ ಆಂಡ್<br>ಮಾನಿಟರಿಂಗ್ ಕಮಿಟಿ<br>ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ |
| SJPU | Special Juvenile Police Unit | ಸ್ಪೆಶಿಯಲ್ ಜುವೆನೈಲ್ ಪೋಲೀಸ್ ಯುನಿಟ್<br>ವಿಶೇಷ ಮಕ್ಕಳ ಪೋಲೀಸ್ ಘಟಕ |
| SSA | Sarva ShikShana Abhiyana | ಸರ್ವ ಶಿಕ್ಷಣ ಅಭಿಯಾನ<br>ಸರ್ವ ಶಿಕ್ಷಣ ಅಭಿಯಾನ |
| CPP for EI | Child Protection Policy for Education Institution | ಚೈಲ್ಡ್ ಪ್ರೊಟೆಕ್ಷನ್ ಪಾಲಿಸಿ ಫಾರ್<br>ಎಜ್ಯುಕೇಶನ್ ಇನ್ಸ್ಟಿಟ್ಯೂಶನ್<br>ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿ |
| UNCRC | United Nations Child Rights Convention | ಯುನೈಟೆಡ್ ನೇಶನ್ಸ್ ಚೈಲ್ಡ್ ರೈಟ್ಸ್ ಕನ್ವೆನ್ಶನ್<br>ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಸಮಾವೇಶ |
| IO | Investigating Officer (Police) | ಇನ್ವೆಸ್ಟಿಗೇಟಿಂಗ್ ಆಫಿಸರ್(ಪೋಲೀಸ್)<br>ತನಿಖಾಧಿಕಾರಿ |

| | | |
|---|---|---|
| JJA | Juvenile Justice (C&PC) Act 2000 | ಜುವೆನೈಲ್ ಜಸ್ಟೀಸ್ (ಸಿ.ಅಂಡ್ ಪಿಸಿ) ಆಕ್ಟ್ 2000<br>ಮಕ್ಕಳ ನ್ಯಾಯ (ಪೋಲೀಸ್ ಮತ್ತು ಪುನರ್ವಸತಿ ಕಾಯಿದೆ 2000) |
| KSCPCR | Karnataka State Commission for Protection of Child Rights | ಕರ್ನಾಟಕ ಸ್ಟೇಟ್ ಕಮಿಷನ್ ಫಾರ್ ಪ್ರೊಟೆಕ್ಷನ್ ಆಫ್ ಚೈಲ್ಡ್ ರೈಟ್ಸ್<br>ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಕಮಿಷನ್ |
| SCPP | State Child Protection Policy | ಸ್ಟೇಟ್ ಚೈಲ್ಡ್ ಪ್ರೊಟೆಕ್ಷನ್ ಪಾಲಿಸಿ<br>ರಾಜ್ಯ ಮಕ್ಕಳ ರಕ್ಷಣಾ ನೀತಿ |
| CPC | Child Protection Committee | ಚೈಲ್ಡ್ ಪ್ರೊಟೆಕ್ಷನ್ ಕಮಿಟಿ<br>ಮಕ್ಕಳ ರಕ್ಷಣಾ ಸಮಿತಿ |
| CSA | Child Sexual Abuse | ಚೈಲ್ಡ್ ಸೆಕ್ಷುಅಲ್ ಅಬ್ಯುಸ್<br>ಮಕ್ಕಳ ಲೈಂಗಿಕ ದೌರ್ಜನ್ಯ |
| ICC | Internal Complaint Committee | ಇಂಟರ್ನಲ್ ಕಂಪ್ಲೇಂಟ್ ಕಮಿಟಿ<br>ಅಂತರಿಕ ದೂರು ಸಮಿತಿ |
| IEC | Information Education Communication | ಇನ್ಫಾರ್ನೇಶನ್ ಎಡ್ಯುಕೇಶನ್<br>ಮಾಹಿತಿ ಶಿಕ್ಷಣ ಸಂವಹನ |
| KRIES | Karnataka . Registered Institution Education Society | ಕರ್ನಾಟಕ ರೆಜಿಸ್ಟರ್ಡ್ ಇನ್ಸ್ಟಿಟ್ಯೂಟ್ ಎಜ್ಯುಕೇಶನ್ ಸೊಸೈಟಿ<br>ಕರ್ನಾಟಕ ನೋಂದಾಯಿತ ಶಿಕ್ಷಣ ಸಂಸ್ಥೆ |

## ಪರಿವಿಡಿ

# ಅಧ್ಯಾಯ ಒಂದು

# ಪ್ರಸ್ತಾವನೆ

ಪೀಠಿಕೆ

ರಾಷ್ಟ್ರಮಟ್ಟದ ಪ್ರಸ್ತುತ ಸ್ಥಿತಿಗತಿ

ಮಕ್ಕಳ ರಕ್ಷಣೆ 'ಪರಿಭಾಷೆ'

ವ್ಯಾಖ್ಯಾನಗಳು

ಹಕ್ಕುಗಳು

ಮಕ್ಕಳ ರಕ್ಷಣಾ ವ್ಯವಸ್ಥೆಗಳು

ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳು

## ಅಧ್ಯಾಯ ಒಂದು

# ಪ್ರಸ್ತಾವನೆ

**ಪೀಠಿಕೆ**

ಮಕ್ಕಳು ಸಮುದಾಯದ ಆಸ್ತಿ. ಯಾವುದೇ ಕಾರಣಕ್ಕೂ ಮಕ್ಕಳು ಯಾವುದೇ ತೊಂದರೆಗಳಿಗೆ ಈಡಾಗದಂತೆ ಸ್ವಚ್ಛಂದವಾಗಿ, ಆನಂದದಿಂದ ಎಂತಹುದೇ ಭಯ ಕೊರತೆ ಇಲ್ಲದೆ ಬದುಕಿ ಬೆಳೆಯಬೇಕಾಗುತ್ತದೆ ಮತ್ತು ಅಂತಹ ವಾತಾವರಣವನ್ನು ಸೃಷ್ಟಿಸುವುದು ಆಯಾ ದೇಶದ, ರಾಜ್ಯದ, ಪಂಚಾಯತಿ, ಸಮುದಾಯ ಮತ್ತು ಪ್ರತಿ ಕುಟುಂಬಗಳ ಜವಾಬ್ದಾರಿ. ಈ ನಿಟ್ಟಿನಲ್ಲಿ ಮಕ್ಕಳ ಬದುಕು, ರಕ್ಷಣೆ, ವಿಕಾಸ, ಭಾಗವಹಿಸುವಿಕೆಯ ವಿಚಾರಗಳನ್ನು ನಮ್ಮ ದೇಶದಲ್ಲಿ ಜಾರಿಗೊಳಿಸುತ್ತೇವೆ ಎಂದು ಹೇಳಿ ಭಾರತ ಸರ್ಕಾರ ೧೯೯೨ರಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಿ ತನ್ನ ಬದ್ಧತೆಯನ್ನು ಕೋರಿ ಈಗಾಗಲೇ ೨೫ ವರ್ಷಗಳು ಕಳೆದಿವೆ. ಈ ಪರಿಕಲ್ಪನೆಯನ್ನು ಗ್ರಾಮೀಣ ಮಟ್ಟದಲ್ಲಿ ಪ್ರಚುರ ಪಡಿಸಿ ತಳಮಟ್ಟದ ಜನರ ಮನ ಮುಟ್ಟಿಸುವುದು ಇನ್ನೂ ನಮಗೆ ಸಾಧ್ಯವಾಗಿಲ್ಲ. ಮಕ್ಕಳಿಗೆ ದಕ್ಕಬೇಕಾದ ಭದ್ರತೆಯ ಆನಂದದಾಯಕ ಸುಭದ್ರ ಸುರಕ್ಷಿತ ಬದುಕು ಇನ್ನೂ ಕನಸಿನ ಮಾತಾಗಿದೆ. ಸರಕಾರದ ಹತ್ತು ಹಲವು ಕಾರ್ಯಕ್ರಮಗಳು ಅನುಷ್ಠಾನಗೊಂಡಿವೆಯಾದರೂ ಗ್ರಾಮೀಣ ಮಟ್ಟಕ್ಕೆ ಮಕ್ಕಳ ಹಕ್ಕುಗಳು ಸಮರ್ಪಕವಾಗಿ ತಲುಪಿಲ್ಲ ಎನ್ನುವುದು ವಾಸ್ತವ.

ಭಾರತವೂ ವಿಶ್ವದ ಬಹು ದೊಡ್ಡ ಸಂಖ್ಯೆಯ ಮಕ್ಕಳಿಗೆ ಮನೆಯಾಗಿದೆ. ನಮ್ಮ ರಾಷ್ಟ್ರದ ಜನರ ಪ್ರಗತಿ ನಮ್ಮ ಮಕ್ಕಳ ಆರೋಗ್ಯ ಹಾಗೂ ಆನಂದದ ಮೇಲೆ ಹೊಂದಿಕೊಂಡಿದೆ. ಸೂಕ್ತ ವಾತಾವರಣದಲ್ಲಿ ಅವರ ಲಾಲನೆ-ಪಾಲನೆ, ಆರೋಗ್ಯದ ಪ್ರಗತಿ, ಶಿಕ್ಷಣ ಹಾಗೂ ಮಾನಸಿಕ ಬೆಳವಣಿಗೆಯಾಗುವಂತೆ ನೋಡಿಕೊಳ್ಳುವುದು ಹಿರಿಯರ ಪ್ರಮುಖ ಬದ್ಧತೆಯಾಗಿದೆ. ಅದು ನಮ್ಮ ಕರ್ತವ್ಯವೆಂದಲ್ಲ. ಆದರೆ ಕುಟುಂಬದಲ್ಲಿ ಆರೈಕೆ ಸಹಿತವಾಗಿ ಪೋಷಿಸಲ್ಪಡುವುದು, ಘನತೆಯಿಂದ ಬದುಕುವುದು ಹಾಗೂ ದೌರ್ಜನ್ಯ

ಕಡೆಗಣಿಸುವಿಕೆಯಿಂದ ರಕ್ಷಣೆ ಇವು ಮಕ್ಕಳ ಹಕ್ಕುಗಳು. ಮಕ್ಕಳಿಗೆ ದೇಶದಲ್ಲಿ ಇರುವ ಆರೈಕೆಯ ಗುಣಮಟ್ಟ ಹೆಚ್ಚಿಸಲು ಹಾಗೂ ರಕ್ಷಣಾ ವಾತಾವರಣ ನಿರ್ಮಿಸಲು ಸರಕಾರವು ಸಮಗ್ರ ಮಕ್ಕಳ ರಕ್ಷಣಾ ತಾಂತ್ರಿಕತೆಯನ್ನು ಸ್ಥಾಪಿಸಿದೆ. ಅವುಗಳು ಮಕ್ಕಳಿಗೆ ಮಾರಾಟ ಸಾಗಣೆ ತಡೆಗಟ್ಟುವಿಕೆ, ಸ್ಥಿರತೆಯ ಆರೈಕೆ ಹಾಗೂ ಪುನರ್ವಸತಿ ಸೇವೆಗಳಾಗಿ ಮಕ್ಕಳ ಸೇವೆಗೆ ಸಿಗಲೇಬೇಕಾದ ಸಾಂಸ್ಥಿಕ ವ್ಯವಸ್ಥೆಗಳನ್ನು ಆರಂಭಿಸಲು ಕಾರಣವಾಗಿದೆ.

**ರಾಷ್ಟ್ರಮಟ್ಟದ ಪ್ರಸ್ತುತ ಸ್ಥಿತಿಗತಿ**

೨೦೧೧ರಲ್ಲಿ "ಭಾರತೀಯ ಮಕ್ಕಳ ಸಹಾಯವಾಣಿ"ಯ ಅಧ್ಯಯನದ ಪ್ರಕಾರ, ೪೦% ಮಕ್ಕಳು ಬಡತನ, ಕಾರ್ಮಿಕತೆ, ದೌರ್ಜನ್ಯ, ಅಂಗವಿಕಲತೆ, ಅಪೌಷ್ಠಿಕತೆ. ಜಗಳಗಳು. ತಾರತಮ್ಯ. ಆಪತ್ತು ಸ್ಥಳಾಂತರ ಹಾಗೂ ಅನಕ್ಷರಸ್ಥತೆಗೆ ತಡೆತರಲಾಗಿದೆ. ಮಕ್ಕಳ ಲಿಂಗಾನುಪಾತ ೧೯೯೧ರಲ್ಲಿ ೯೪೫ ರಿಂದ ೨೦೧೧ ರಂತೆ ೯೧೪ಕ್ಕೆ ಇಳಿದಿದೆ ವಿಶ್ವದ ಕುಪೋಷಣೆಯ ಪ್ರತಿ ३ನೇ ಮಗು. ಭಾರತದಲ್ಲಿ ವಾಸಿಸುತ್ತದೆ. ಭಾರತದ ಪ್ರತಿ ೨ನೇ ಮಗು ಕಡಿಮೆ ತೂಕದ್ದಾಗಿರುತ್ತದೆ. ಭಾರತದಲ್ಲಿ ೪ರಲ್ಲಿ ३ ಮಕ್ಕಳು ರಕ್ತಹೀನತೆ ಹೊಂದಿದ್ದರೆ ೪೬% ಮಕ್ಕಳು ಕಡಿಮೆ ಜನ್ಮ ಕಾಲದ ತೂಕ ಹೊಂದಿರುತ್ತಾರೆ.

೨೦೧೨ರ ಅಸರ್ (ವಾಮಶೈವ) ಕರ್ನಾಟಕ ವರದಿಯ ಪ್ರಕಾರ ೭೦.೧% ३ನೇ ತರಗತಿ ಮಕ್ಕಳು ೨ ಅಂಕಿಗಳ ಕಳೆಯುವ ಲೆಕ್ಕವನ್ನು, ೭೨.೫%, ೫ನೇ ತರಗತಿಯ ಮಕ್ಕಳು ಸರಳ ಭಾಗಾಕಾರ, ೫೧.೮% ೫ನೇ ತರಗತಿಯ ೨ನೇ ತರಗತಿಯ ಪಠ್ಯವನ್ನು ಓದಲಾರರು. ಭಾರತದಲ್ಲಿ ವಿಶ್ವದಲ್ಲೆ ಅತೀ ಹೆಚ್ಚು ಅಂದರೆ ೧೭ ಮಿಲಿಯ ಬಾಲಕಾರ್ಮಿಕರಿದ್ದಾರೆ. ತೀರಾ ಇತ್ತೀಚಿನ ಅಸರ್ ಪ್ರಕಾರ ೮ನೇ ತರಗತಿಯ ೬೧% ವಿದ್ಯಾರ್ಥಿಗಳು, ಸರಕಾರಿ/ಖಾಸಗಿ ಶಾಲೆಗಳು ಸೇರಿದಂತೆ, ಸರಳ ಭಾಗಾಕಾರ ಮಾಡಲಾರರು. ೫ನೇ ತರಗತಿಯಲ್ಲಿ ಓದುತ್ತಿರುವ ೨೦.೫% ವಿದ್ಯಾರ್ಥಿಗಳಿಗೆ ಮಾತ್ರ ಭಾಗಾಕರ ಮಾಡಬಲ್ಲರು. ೮ನೇ ತರಗತಿಯಲ್ಲಿ ಓದುವ ಮಕ್ಕಳ ಪೈಕಿ ಭಾಗಾಕಾರ ಮಾಡಬಲ್ಲ ವಿದ್ಯಾರ್ಥಿಗಳ ಸಂಖ್ಯೆ ೪೨.೨%ಕ್ಕೆ ಇಳಿಕೆಯಾಗಿದೆ. ೨೦೧೮ ಅಸರ್ ವರದಿಯ ಪ್ರಕಾರ ೮ನೇ ತರಗತಿಯ ೨೬.೬% ವಿದ್ಯಾರ್ಥಿಗಳು ಕಳೆಯುವ ಲೆಕ್ಕವನ್ನ ಮಾಡಬಲ್ಲರು ३೨% ಮಕ್ಕಳು ೧೦ ರಿಂದ ೯೯ರ ನಡುವಿನ ಅಂಕೆಗಳನ್ನು ಗುರುತಿಸಬಲ್ಲರು. ೫ನೇ ತರಗತಿಯ ३೪.೧% ವ್ಯವಕಲನ ಮಾಡಬಲ್ಲರು ಮತ್ತು ३೮% ಮಂದಿ ೧೦ ರಿಂದ ೯೯ರ ನಡುವಿನ ಸಂಖ್ಯೆಗಳನ್ನು ಗುರುತಿಸಬಲ್ಲರು. ಈಗ ಗಣಿತ ಕರ್ನಾಟಕದ ಮಕ್ಕಳ ಪಾಲಿಗೆ ಇನ್ನೂ

ಕಬ್ಬಿಣದ ಕಡಲೆಯಾಗೇ ಉಳಿದಿದೆ. ತಂತ್ರಜ್ಞಾನ, ಅಭಿವೃದ್ಧಿಯಲ್ಲಿ ಮುನ್ನುಗ್ಗುತ್ತಿರುವ ಭಾರತದಲ್ಲಿ ಶಿಕ್ಷಣದ ಗುಣಮಟ್ಟ ಮಾತ್ರ ಹಿಂದಡಿ ಇಡುತ್ತಿದೆ. ಒಟ್ಟಾರೆ ಶಿಕ್ಷಣ ಗುಣಮಟ್ಟ ಕ್ಷೀಣಿಸುತ್ತಿದ್ದರೂ ಕರ್ನಾಟಕ, ಹಿಮಾಚಲ ಪ್ರದೇಶ, ಪಂಜಾಬ್, ಕೇರಳ ಮತ್ತು ತಮಿಳುನಾಡುಗಳಲ್ಲಿ ಹೆಣ್ಣುಮಕ್ಕಳು ಕಲಿಕೆಯಲ್ಲಿ ಮುಂದಿದ್ದಾರೆ ಎಂದು ವರದಿ ತಿಳಿಸಿದೆ.

ಬಾಲಕಾರ್ಮಿಕರ ಸಂಖ್ಯೆ ೧೯೯೧ರಲ್ಲಿ ೧೧.೨೮ ಮಿಲಿಯ ಇದ್ದರು. ೨೦೦೧ರಲ್ಲಿ ೧೨.೬೬ ಮಿಲಿಯ ಆಗಿದೆ. UNICEFನ ವಿಶ್ವ ಮಕ್ಕಳ ವರದಿ ೨೦೧೨ರಲ್ಲಿ ೧೫ ವರ್ಷ ವಯಸ್ಸಿನೊಳಗಿನ ೧೮% ಮಕ್ಕಳು ಹಾಗೂ ೧೮ ವರ್ಷದೊಳಗಿನ ೪೭% ಮಕ್ಕಳು ಮದುವೆಯಾಗುತ್ತಾರೆ. ಎಂ.ಡಬ್ಲ್ಯೂಸಿ.ಡಿ. ವರದಿಯಂತೆ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಸುಮಾರು ೫೪% ಇದ್ದು ೨೦೧೦ರಂತೆ ೧೪೦೮ ಕೊಲೆ, ಲಿಂಗಾಪಾತ ೧೧೧, ೦-೧ ವರ್ಷದೊಳಗಿನ ಬಾಲಕಿಯರ ಸಾವು ೧೦೦, ಆತ್ಮಹತ್ಯೆ ಪ್ರಯತ್ನ, ಅನಾಥವಾದ (೭೫) ಕದ್ದೊಯ್ಯುದು ೧೦೬೭೦ ದುರ್ಬಳಕೆ ೧೦೬೭೦ ಅನೈತಿಕವಾಗಿ ಹದಿಹರೆಯದ ಮಕ್ಕಳನ್ನು ಲೈಂಗಿಕವಾಗಿ ಬಳಸಿದ್ದು- ೬೭೯, ವೇಶ್ಯಾವಾಟಿಕೆಗಾಗಿ ಹೆಣ್ಣುಮಕ್ಕಳು-೧೩, ವೇಶ್ಯಾವಾಟಿಕೆಯಿಂದ ತೆಗೆದು ಕೊಳ್ಳುವುದು ೭೮, ಅತ್ಯಾಚಾರ ೫೪೮೪, ಬಾಲ್ಯವಿವಾಹ ೭೫೩.

ಮಕ್ಕಳು ಸಹಜ ಪ್ರಕ್ರಿಯೆಯಲ್ಲಿ ಬೆಳೆಯಬೇಕಾದುದು ನಿಸರ್ಗದತ್ತ ನಿಯಮವಾಗಿದೆ. ಸಮಾಜದಲ್ಲಿ ಹುಟ್ಟಿ ಬರುವ ಪ್ರತಿ ಮಗುವೂ ತನ್ನ ಹಕ್ಕುಗಳನ್ನು ಅನುಭವಿಸಿ ಅಭಿವೃದ್ಧಿ ಹೊಂದಬೇಕೆನ್ನುವುದು ಪ್ರತೀ ಸಾಮಾಜಿಕ ಚಿಂತಕರ ಕಾಳಜಿಯಾಗಿದೆ. ಆದರೆ ನಮ್ಮ ಸುತ್ತಮುತ್ತ ಕಣ್ಣಾಡಿಸಿದರೆ ನಮ್ಮ ಮಕ್ಕಳು ಒಂದಲ್ಲ ಒಂದು ರೀತಿಯಲ್ಲಿ ಸಮಸ್ಯೆಯಲ್ಲಿದ್ದಾರೆ. ಏಕತೆ, ಸಮಾನತೆಯ ಸಮಾಜದಲ್ಲಿ ಅರಳಬೇಕಾದ ಕಂದಮ್ಮಗಳು ಜಾತಿ, ಧರ್ಮ, ಲಿಂಗ ಆಧಾರಿತ ಭೇದ-ಭಾವ, ತಾರತಮ್ಯಗಳಿಗೆ ಬಲಿಯಾಗಿ ಬದುಕು ಕಳೆದುಕೊಳ್ಳುತ್ತಿದ್ದಾರೆ. ಯಾವ ಸಮಾಜದ ಪೋಷಣೆ, ಪ್ರೀತಿ ಹಾಗೂ ರಕ್ಷಣೆಯನ್ನು ನಮ್ಮ ಮಕ್ಕಳು ಅನುಭವಿಸಬೇಕಿತ್ತೋ, ಅಲ್ಲಿ ಕ್ರೌರ್ಯ, ದೌರ್ಜನ್ಯ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ. ಬಹಳಷ್ಟು ಮಕ್ಕಳು ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆಗಳಿಂದಾಗಿ ಸಾವಿನ ದವಡೆಗೆ ಸಿಲುಕಿದ್ದಾರೆ. ಅಳಿದುಳಿದವರು ಗುಣವಾಗದ ಗಾಯಗಳನ್ನು ಹೊಂದಿ ಪರಿಸ್ಥಿತಿಯ ಬಲಿಪಶುಗಳಾಗಿದ್ದಾರೆ.

**ಮಕ್ಕಳು ಎಂದರೆ ಯಾರು?**

ಏಜ್ ಆಫ್ ಮೆಜಾರಿಟಿ ಆಕ್ಟ್ (Age of Majority Act) ೧೮೭೫ ಪ್ರತಿ ಭಾರತೀಯ ಪ್ರಜೆ ಹಿರಿಯ ಅನಿಸಿಕೊಳ್ಳಬೇಕಾದರೆ ೧೮ ವರ್ಷಗಳು ಆಗಿರಬೇಕು ಎಂದಿದೆ.

ಹಿಂದು ಮೈನಾರಿಟಿ ಆಂಡ್ ಗಾರ್ಡಿಯನ್ ಶಿಪ್ ಆಕ್ಟ್ (Hindu Minority & Guardianship Act) 1956 ಸೆಕ್ಷನ್ 4 (a)ರಲ್ಲಿ ಹೇಳಿದಂತೆ ೧೮ ವರ್ಷ ಪೂರೈಸಿರದ ವ್ಯಕ್ತಿಯನ್ನು ಮಗು ಎಂದು ಕರೆಯಲಾಗುತ್ತದೆ.

ವ್ಯಕ್ತಿಯು 'ಮಗು' ಅನಿಸಿಕೊಳ್ಳಲು ಅರ್ಹತೆ ಕಳೆದುಕೊಳ್ಳಲು ಇರಬೇಕಾದ ವಯಸ್ಸನ್ನು ನೋಡಿದರೆ, ಬಾಲಕಾರ್ಮಿಕತೆ ತಡೆ ಕಾಯಿದೆ ೧೯೮೬ರಂತೆ ೧೪ ವರ್ಷ ತುಂಬಿರದ ವ್ಯಕ್ತಿಯನ್ನು 'ಮಗು' ಎನ್ನಲಾಗುತ್ತದೆ. ಭಾರತ ದಂಡ ಸಂಹಿತೆ ೧೮೬೦ರಂತೆ 'ಮಗು'ವಿನ ವಯಸ್ಸು ೭ ರಿಂದ ೧೨ ಎಂತಾಗಿದೆ. ಕಿಡ್ನಾಪ್ಸ್ ಅಬ್ಡಕ್ಶನ್ ಸಂಬಂಧಿತ ಕಾನೂನಿನಲ್ಲಿ ಹೆಣ್ಣಿನ ವಯಸ್ಸು ಕನಿಷ್ಟ ೧೮ ಹಾಗೂ ಗಂಡಿನ ವಯಸ್ಸು ಕನಿಷ್ಠ ೧೬ ಎನ್ನಲಾಗಿದೆ. ಆದರೆ ೨೦೦೦ದಲ್ಲಿ ಚಾಲ್ತಿಗೆ ಬಂದಿರುವ ಮಕ್ಕಳ ನ್ಯಾಯ ಕಾಯಿದೆಯಲ್ಲಿ ೧೮ ವರ್ಷದೊಳಗಿನ ಎಲ್ಲರೂ ಮಕ್ಕಳು ಎಂದು ಹೇಳಲಾಗಿದೆ.

**"ಮಕ್ಕಳ ರಕ್ಷಣೆ" ಪರಿಭಾಷೆ:**

**ಮಕ್ಕಳ ರಕ್ಷಣೆ ಅಂದರೆ ಮಕ್ಕಳನ್ನು ಕ್ರೌರ್ಯ, ದೌರ್ಜನ್ಯ ಹಿಂಸೆ ಮತ್ತು ನಿರ್ಲಕ್ಷ್ಯದಿಂದ ರಕ್ಷಿಸುವುದು** ಎಂದು ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಸಮಾವೇಶದ ೧೯ನೇ ಆರ್ಟಿಕಲ್‌ನಲ್ಲಿ ವ್ಯಾಖ್ಯಾನಿಸಲಾಗಿದೆ.

**ಮಕ್ಕಳ ರಕ್ಷಣೆ ಏನಿದು?**

ಮಕ್ಕಳ ರಕ್ಷಣೆ ಎಂದರೆ ಮಗು ಯಾವುದೇ ವ್ಯಕ್ತಿ, ಸಂಸ್ಥೆ, ವ್ಯವಸ್ಥೆ ಅಥವಾ ಪ್ರಾಧಿಕಾರದ ಪೋಷಣೆಯಲ್ಲಿರುವಾಗ ನಿರ್ಲಕ್ಷ್ಯ ತಾರತಮ್ಯ, ಹಿಂಸೆ (ಮೌಖಿಕ ಮತ್ತು ಧೈಹಿಕ), ನಿಂದನೆ (ಮಾನಸಿಕ ಮತ್ತು ದೈಹಿಕ), ಆರ್ಥಿಕ ಮತ್ತು ಲೈಂಗಿಕ ಶೋಷಣೆಗೆ ಒಳಗಾಗದಂತೆ ರಕ್ಷಿಸುವುದು ಮತ್ತು ಪ್ರತಿ ಮಗುವಿನ ಮೂಲಭೂತ ಹಕ್ಕುಗಳ ರಕ್ಷಣೆಯಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆಯು ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆ ೧೯೮೯ (UNCRC), ಭಾರತ ಸಂವಿಧಾನ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನೇಕ

ಕಾಯಿದೆಗಳು ಮತ್ತು ರಾಷ್ಟ್ರೀಯ ಮಕ್ಕಳ ನೀತಿ ೨೦೧೩ರ ಅಂಶಗಳನ್ನು ಒಳಗೊಂಡಿದೆ. ಶಾಸನಾತ್ಮಕವಾಗಿ ರೂಪಿಸಲಾದ ಮಕ್ಕಳ ಹಕ್ಕುಗಳು ಮಗುವು ವಾಸಿಸುವ ಸ್ಥಳ/ವಾತಾವರಣವು ರಕ್ಷಣಾತ್ಮಕವಾಗಿರುವುದಾಗಿಯೂ ಮತ್ತು ಮಗುವು ನಿರ್ಲಕ್ಷ್ಯ ತಾರತಮ್ಯ, ಹಿಂಸೆ, ನಿಂದನೆ, ಆರ್ಥಿಕ ಮತ್ತು ಲೈಂಗಿಕ ಪೋಷಣೆಗಳಿಂದ ಸುರಕ್ಷಿತವಾಗಿರುವುದರ ಬಗ್ಗೆ ಸರ್ಕಾರದ ಬದ್ಧತೆಯನ್ನು ಖಾತರಿಪಡಿಸುವುದಲ್ಲದೆ, ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು ಉತ್ತಮ ವಾತಾವರಣ ನಿರ್ಮಾಣಕ್ಕಾಗಿ ಸರ್ಕಾರವು ಮುಂಜಾಗ್ರತೆ ಮತ್ತು ಪ್ರತಿಕ್ರಿಯಾತ್ಮಕ ವ್ಯವಸ್ಥೆಯನ್ನು ಹೊಂದಬೇಕಾಗಿದೆ. ಸರ್ಕಾರವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯಮಾವಳಿಗಳಿಗೆ ಬದ್ಧವಾಗಿರುವುದಾಗಿ ತಿಳಿಸಿದೆ. ಮಕ್ಕಳ ರಕ್ಷಣೆ ಮತ್ತು ರಕ್ಷಣಾತ್ಮಕ ಪರಿಸರ ನಿರ್ಮಾಣವನ್ನು ಖಾತರಿ ಪಡಿಸುವಲ್ಲಿ ನಿಯಮಾವಳಿಗಳು, ಮಕ್ಕಳಿಗಾಗಿ ಕಾರ್ಯಕ್ರಮಗಳು, ಮಕ್ಕಳ ಪೋಷಣೆಯಲ್ಲಿ ತೊಡಗಿರುವವರ ಅವಶ್ಯಕತೆಗಳನ್ನು ಸರ್ಕಾರವು ಗುರುತಿಸಿದೆ.

ಭಾರತದ ಪ್ರತಿ ರಾಜ್ಯದಲ್ಲಿ ಮಕ್ಕಳ ಹಕ್ಕು ಮತ್ತು ರಕ್ಷಣಾತ್ಮಕ ಪರಿಸರವನ್ನು ಹೊಂದಿರುವುದನ್ನು ಖಾತರಿ ಪಡಿಸಲು ಮಕ್ಕಳ ರಕ್ಷಣಾ ನೀತಿಯು ಮಾನದಂಡಗಳನ್ನು ರೂಪಿಸಿರುವುದಲ್ಲದೇ, ವಿವಿಧ ಭಾಗೀದಾರರುಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ತಿಳಿಸುತ್ತದೆ.

ಸಮಗ್ರ ಮಕ್ಕಳ ರಕ್ಷಣಾ ವ್ಯವಸ್ಥೆಯ ಉದ್ದೇಶ ಭಾರತದಾದ್ಯಂತ ಮಕ್ಕಳ ರಕ್ಷಣಾ ಸೇವೆಗಳ ಪ್ರಮುಖ ಪ್ರಕ್ರಿಯೆ ಹಾಗೂ ಕಾರ್ಯವಿಧಾನಗಳ ವಿವರಣೆ ನೀಡುವುದಾಗಿದೆ. ಮಕ್ಕಳ ರಕ್ಷಣೆ ಅಂದರೆ ಮಕ್ಕಳು ಎದುರಿಸಬಹುದಾದ ಅಥವಾ ನೈಜ್ಯ ಅಪಾಯ ಅಥವಾ ಬದುಕಿನ ಕಂಠಕಗಳಿಂದ ಅವರನ್ನು ಪಾರು ಮಾಡುವುದಾಗಿದೆ. ತನ್ಮೂಲಕ ಆಕೆ/ಆತನ ಒಟ್ಟು ರಕ್ಷಣೆಯ ಖಾತ್ರಿಯೊಂದಿಗೆ ಮಕ್ಕಳಿಗೆ ಅವರ ವ್ಯಕ್ತಿತ್ವ, ಬಾಲ್ಯಕ್ಕೆ ಸೂಕ್ತ ವಾತಾವರಣ ನಿರ್ಮಿಸುವುದು ಆಗಿದೆ. ಸರಕಾರ ಈ ಮಕ್ಕಳನ್ನು "ಸಮಸ್ಯೆಯಲ್ಲಿರುವ ಮಕ್ಕಳು" ಎಂದು ಗುರುತಿಸುತ್ತದೆ ಮತ್ತು ಅದು ನಿರ್ದಿಷ್ಟ ಸಾಮಾಜಿಕ, ಆರ್ಥಿಕ ಹಾಗೂ ಭೂ–ರಾಜಕೀಯ ಗುಣಗಳನ್ನು ಹೊಂದಿದೆ. ಮಕ್ಕಳ ರಕ್ಷಣೆ ಎಂದರೆ ದೌರ್ಜನ್ಯ ಹಾಗೂ ನಿರ್ಲಕ್ಷದ ಫಲವಾಗಿ ಸಂಕಟದಲ್ಲಿರುವ ಅಥವಾ ಸಂಕಟದಲ್ಲಿ ಬೀಳುವ ಸಾಧ್ಯತೆ ಇರುವವರೆಂದು ಗುರುತಿಸಲಾಗಿರುವ ಮಕ್ಕಳ ರಕ್ಷಣಾ ಪ್ರಕ್ರಿಯೆ.

**ವ್ಯಾಖ್ಯಾನಗಳು**

ಎ. 'ಮಗು'ಎಂದರೆ ೧೮ ವರ್ಷದೊಳಗಿನ ಯಾವುದೇ ವ್ಯಕ್ತಿ, ಅಥವಾ ಬಾಲ ನ್ಯಾಯ (ಮಕ್ಕಳಪಾಲನೆ ಮತ್ತು ಸಂರಕ್ಷಣೆ) ಕಾಯ್ದೆ, ೨೦೦೦ದ ಕಲಂ ೨(ಕೆ)ರ ಪ್ರಕಾರ ಹದಿನೆಂಟು ವರ್ಷ ವಯಸ್ಸು ಪೂರ್ಣಗೊಂಡಿರದೇ ಇರುವವರು.

ಬಿ. **'ಮಗುವಿನ ದುರುಪಯೋಗ'**: ಮಗುವಿನ ಜವಾಬ್ದಾರಿಯನ್ನು ಹೊಂದಿರುವವರು, ಮಗುವಿನ ನಂಬಿಕೆಯನ್ನು ಹಾಳುಮಾಡಿ, ವಿವಿದ ಸಂದರ್ಭಗಳಲ್ಲಿ 'ಮಗುವಿನ ದುರುಪಯೋಗ' ಮಾಡುವುದು ಅಥವಾ 'ಕೆಟ್ಟದಾಗಿ ನಡೆಸಿಕೊಳ್ಳುವುದು' ಆಗಿದೆ. ಎಲ್ಲಾ ರೀತಿಯಿಂದಲೂ ಮಗುವನ್ನು ದೈಹಿಕ ಅಥವಾ ಭಾವನಾತ್ಮಕವಾಗಿ ಅಲಕ್ಷ್ಯ, ನಿರ್ಲಕ್ಷ್ಯವಾಗಿ ನಡೆಸಿಕೊಳ್ಳುವುದು, ಲೈಂಗಿಕ ಶೋಷಣೆ (ದುರ್ಬಳಕೆ) ಅಥವಾ ವ್ಯಾವಹಾರಿಕ ಅಥವಾ ಇತರೆ ಶೋಷಣೆಗಳನ್ನು ಒಳಗೊಂಡಿದ್ದು, ಈ ಕಾರಣಗಳಿಂದಾಗಿ ಮಗುವಿನ ಆರೋಗ್ಯ, ಅಸ್ತಿತ್ವ, ಬೆಳವಣಿಗೆ ಮತ್ತು ಘನತೆಗೆ ಹಾನಿಯುಂಟಾಗುವುದನ್ನು ಮಗುವಿನ ದುರುಪಯೋಗ ಎನ್ನಲಾಗಿದೆ.

**ರಕ್ಷಾಕವಚ ಹಾಗೂ ಮಕ್ಕಳರಕ್ಷಣೆಯ ನಡುವಿನ ವ್ಯತ್ಯಾಸ:**

ರಕ್ಷಾ ಕವಚ ಒದಗಿಸುವುದು ಎಂದರೆ ಮಕ್ಕಳ ರಕ್ಷಣೆಯ ಪರಿಕಲ್ಪನೆಗಿಂತ ವಿಶಾಲವಾಗಿದೆ. ಅದು ಮಕ್ಕಳನ್ನು ಅಸಂಬದ್ದವಾಗಿ ನಡೆಸಿಕೊಳ್ಳುವ, ಮಕ್ಕಳ ಆರೋಗ್ಯ ಹಾಗೂ ವಿಕಾಸದ ಕೊರತೆಯಾಗದಂತೆ ನೋಡುವ ಹಾಗೂ ಮಕ್ಕಳ ಸೂಕ್ತ ಬೆಳವಣಿಗೆಗೆ ಪೂರಕವಾದುದಾಗಿದೆ. ಸೇವ್ ದ ಚಿಲ್ಡ್ರನ್ ಪ್ರಕಾರ ಮಕ್ಕಳ ರಕ್ಷಣೆಯು ಮಕ್ಕಳಿಗೆ ಬಾಧಿಸುವ ದೌರ್ಜನ್ಯ, ಹಿಂಸೆ, ನಿರ್ಲಕ್ಷ, ಮಕ್ಕಳನ್ನು ಹಿಂಸೆ ದೌರ್ಜನ್ಯ ರಕ್ಷಣೆ ನೀಡುವ ಗುರಿ ಹೊಂದಿದೆ. ಮಕ್ಕಳ ರಕ್ಷಣೆ ಅವರ ಇತರ ಹಕ್ಕುಗಳಿಗಿಂತ ಬಿನ್ನವಾಗಿದೆ. ಮಕ್ಕಳ ರಕ್ಷಣೆ ಸಾಂಸ್ಥಿಕ, ಕಾನೂನು ಪ್ರಕ್ರಿಯೆಗಳಿಂದ ಬಿನ್ನವಾಗಿದೆ.

**೧. ವಿಶ್ವಸಂಸ್ಥೆಯ ವ್ಯಾಖ್ಯಾನ**

**"ಮಗುವಿನ ಹಕ್ಕುಗಳ ಸ್ನೇಹಿ"**: ಎಂದರೆ ಮಕ್ಕಳ ಹಿತದೃಷ್ಟಿಯಿಂದ ಉತ್ತಮ ಎಂದು ಭಾವಿಸಲಾದ ಯಾವುದೇ ಕ್ರಿಯೆ, ಮನೋಭಾವ, ಉಪಚಾರ ಮತ್ತು ಪರಿಸರವು ಮಾನವೀಯ, ವಿವೇಚನಾತ್ಮಕ ಮತ್ತು ತಾರತಮ್ಯ ರಹಿತವಾಗಿರುವುದಾಗಿದೆ.

**"ಮಗು ಸಂವೇದಿ ಸೂಕ್ಷ್ಮ ಪರಿಸರ"**: ಎಂದರೆ ಯಾವುದೇ ಒಂದು ಸ್ಥಳದ ಸುತ್ತಮುತ್ತಲಿನ ಪರಿಸರವು ಮಗುವಿಗೆ ಹಿತಕರ ಭಾವನೆಯನ್ನು ಮೂಡಿಸುವಂತಿದ್ದು,

ಮಗು(ಅವನು/ಅವಳು)ವು ಭಯಮುಕ್ತವಾಗಿ ನಿರ್ಭೀತಿಯಿಂದ ಇರಬಹುದಾದ ಪರಿಸರ ವಾಗಿವೆ.

**"ಸಕ್ಷಮ ಪ್ರಾಧಿಕಾರಗಳು"** ಎಂದರೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, ೨೦೦೦ ಮೇರೆಗೆ ಕಡ್ಡಾಯವಾಗಿರುವ ಶಾಸನಾತ್ಮಕವಾಗಿ ಗುರುತಿಸಲಾದ ಮಕ್ಕಳ ಕಲ್ಯಾಣ ಸಮಿತಿಗಳು, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸು ಘಟಕಗಳು, ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ, ೨೦೧೨ರ ಮೇರೆಗೆ ಸ್ಥಾಪಿಸಲಾದ ವಿಶೇಷ ನ್ಯಾಯಾಲಯ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ, ೨೦೦೫ರ ಮೇರೆಗೆ ಸ್ಥಾಪಿಸಲಾದ ಕರ್ನಾಟಕ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮತ್ತು ಮಕ್ಕಳಿಗೆ ಸಂಬಂಧಿಸಿದ ಯಾವುದೇ ಕಾನೂನು ಅಥವಾ ಕಾಯ್ದೆಗಳಡಿ ಗುರುತಿಸಲಾಗಿರುವ ಇತರೆ ಸಕ್ಷಮ ಪ್ರಾಧಿಕಾರಗಳು.

**ದುರುಪಯೋಗದ ಬಗೆಗಳು'** : ಮಗುವಿನ ದುರುಪಯೋಗವು ದೈಹಿಕ, ಭಾವನಾತ್ಮಕ ಅಥವಾ ಮಾನಸಿಕ ದುರುಪಯೋಗ, ಲೈಂಗಿಕ ದುರುಪಯೋಗ, ಅಲಕ್ಷ್ಯ, ಕೆಟ್ಟದಾಗಿ ನಡೆಸಿ ಕೊಳ್ಳುವುದು, ತಾರತಮ್ಯ ಮೊದಲಾದವನ್ನು ಒಳಗೊಂಡಿದೆ.

**ಹಾನಿ:** ಎಂದರೆ ಒಂದು ಕ್ರಿಯೆ (ಕೃತ್ಯ)/ನಡವಳಿಕೆ (ವರ್ತನೆ) ಪದೇ ಪದೇ ಉದ್ದೇಶ ಪೂರ್ವಕವಾಗಿ ಮಗುವಿಗೆ ನೋವು ಅಥವಾ ಗಾಯ ಅಥವಾ ಆಘಾತವನ್ನು ಉಂಟು ಮಾಡುವುದಾಗಿದೆ. ಇದು ಬಹುತೇಕ ಸಂದರ್ಭದಲ್ಲಿ ದೈಹಿಕ ಸ್ವರೂಪದ್ದಾಗಿದ್ದರೆ ಕೆಲವೊಮ್ಮೆ ಸ್ವಯಂ ಪ್ರೇರಿತ ಅಂದರೆ ಗಾಯಗೊಳಿಸಿಕೊಳ್ಳುವುದು, ಸುಟ್ಟುಕೊಳ್ಳುವುದು, ಪದಾರ್ಥಗಳ ದುರ್ಬಳಕೆ ಇತ್ಯಾದಿಗಳನ್ನೊಳಗೊಂಡಿದೆ.

**"ನಿರ್ಲಕ್ಷ್ಯ"** ಎಂದರೆ ಯಾವುದೇ ರೀತಿಯ ಅಪಾಯ ಅಥವಾ ಹಾನಿಯಿಂದ ಮಗುವನ್ನು ರಕ್ಷಿಸುವಲ್ಲಿ ವಿಫಲವಾದ ಕಾರಣದಿಂದ, ಮಗುವಿನ ಆರೋಗ್ಯ ಮತ್ತು ಬೆಳವಣಿಗೆಗೆ ಮಾರಕವಾಗಿರುವ ಸ್ಥಿತಿ. ನಿರ್ಲಕ್ಷ್ಯವು ಕೆಲವೊಮ್ಮೆ ದೀರ್ಘಾವಧಿಯ ದ್ದಾಗಿರಬಹುದು ಮತ್ತು ಅದು ಹಸಿವೆಯಿಂದ ನರಳುವುದು ಅಥವಾ ಆಹಾರ ಮತ್ತು ಪೋಷಣೆಯನ್ನು ನೀಡದಿರುವುದು, ಭಾವನಾತ್ಮಕ ಬೆಂಬಲವನ್ನು ನೀಡದಿರುವುದು ಅಥವಾ ವೈದ್ಯಕೀಯ, ಶೈಕ್ಷಣಿಕ ಸೇವೆಗಳನ್ನು ನೀಡದಿರುವುದು ಮತ್ತು ಆಶ್ರಯ, ವಸತಿ, ಬಟ್ಟೆ ಮೊದಲಾದ ಇತರ ಮೂಲಭೂತ ಸೌಲಭ್ಯಗಳನ್ನು ಒದಗಿಸದಿರುವುದು ಅಥವಾ ಮಗುವಿನ ಮೇಲ್ವಿಚಾರಣೆ ಮಾಡದೇ ಇರುವುದಾಗಿದೆ.

**"ಲೈಂಗಿಕ ದುರುಪಯೋಗ"** : ಎಂದರೆ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ, ೨೦೧೨(ಪೊಕ್ಸೊ) ಮತ್ತು/ಅಥವಾ ಭಾರತ ದಂಡ ಸಂಹಿತೆ ೧೮೬೦ರ ಮೇರೆಗೆ ಅಪರಾಧವೆಂದು ಪರಿಗಣಿಸಲ್ಪಡುವ ಕೃತ್ಯಗಳು ಅಥವಾ ವರ್ತನೆ.

**ಶೋಷಣೆ** ಎಂದರೆ ವಯಸ್ಕರು ಅಥವಾ ಮಗುವಿನ ಪಾಲಕರು ಆರ್ಥಿಕ ಲಾಭ ಅಥವಾ ಇನ್ನಿತರೆ ಕಾರಣಗಳಿಗಾಗಿ ಉದ್ದೇಶ ಅಥವಾ ಒತ್ತಾಯಪೂರ್ವಕವಾಗಿ ಮಕ್ಕಳನ್ನು ತೊಂದರೆ ಮತ್ತು ಅಪಾಯಕ್ಕೆ ಗುರಿಪಡಿಸುವುದು ಅಥವಾ ಮಗುವಿನ ಒಟ್ಟಾರೆ ಬೆಳವಣಿಗೆಗೆ ಅಡ್ಡಿಪಡಿಸುವುದು ಉದಾ: ಭಿಕ್ಷೆ ಬೇಡುವುದು, ಬಾಲ್ಯ ವಿವಾಹ, ಒತ್ತಾಯ ಪೂರ್ವಕ ಕೂಲಿ, ವಿವಿಧ ಉದ್ದೇಶಗಳಿಗಾಗಿ ಮಕ್ಕಳ ಸಾಗಾಟ ಮಾಡುವುದು. ಮಕ್ಕಳೊಂದಿಗೆ ನೇರ ಸಂಪರ್ಕದಲ್ಲಿರುವ ವ್ಯಕ್ತಿಗಳು" ಎಂದರೆ ವೃತ್ತಿಪರ /ಶೈಕ್ಷಣಿಕ/ ಸ್ವಯಂ ಸೇವಾ ಕಾರ್ಯದ ಭಾಗವಾಗಿ ನಿಯತ/ಸಾಂದರ್ಭಿಕವಾಗಿ/ತಾತ್ಕಾಲಿಕವಾಗಿ/ದೀರ್ಘಾವಧಿಯವರೆಗೆ ಮಗುವಿನ ಅಥವಾ ಮಕ್ಕಳ ಒಡನಾಟದಲ್ಲಿರುವ ವ್ಯಕ್ತಿಗಳು.

**ಮಕ್ಕಳೊಂದಿಗೆ ಪರೋಕ್ಷ ಸಂಪರ್ಕ ಹೊಂದಿರುವ ವ್ಯಕ್ತಿಗಳು"**ಎಂದರೆ ಶಾಲೆ ಅಥವಾ ಸ್ವಯಂ ಸೇವಾಕಾರ್ಯದಲ್ಲಿ ನೇರ ಒಡನಾಡಿಯಂತೆ ಮಗವಿನೊಂದಿಗೆ ನಿಯತವಾಗಿ / ಸಾಂದರ್ಭಿಕವಾಗಿ / ತಾತ್ಕಾಲಿಕವಾಗಿ / ದೀರ್ಘಾವಧಿಯವರೆಗೆ ಮಗುವಿನೊಂದಿಗೆ ವ್ಯವಹರಿಸ ದಿದ್ದರೂ, ಮಗುವಿನ ಭಾವಚಿತ್ರಗಳು, ಕಡತಗಳು, ಮಕ್ಕಳ ಕುರಿತಾದ ವೈಯಕ್ತಿಕ ವಿವರಗಳು, ಮಾಹಿತಿ ದತ್ತಾಂಶಗಳನ್ನು ನಿರ್ವಹಿಸುವ ವ್ಯಕ್ತಿಗಳು.

**ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಲ್ಲಿರುವ ಮಗು ಎಂದರೆ:**

೧. ಮನೆ, ವಾಸ್ತವ್ಯ ಅಥವಾ ಜೀವನ ನಿರ್ವಹಣೆಗೆ ಅನ್ಯ ಮಾರ್ಗವಿಲ್ಲದವರು

೨. ಮಗುವಿಗೆ ಜೀವ ಬೆದರಿಕೆ, ಆಪತ್ತು ಅಥವಾ ನಿರ್ಲಕ್ಷಿಸಲ್ಪಡುವ ಭವಿದ್ದಲ್ಲಿ

೩. ದೈಹಿಕ ಹಾಗೂ ಮಾನಸಿಕ ಅನಾರೋಗ್ಯದಿಂದ ಬಳಲುತ್ತಿರುವ ಹಾಗೂ ನೆರವು ನೀಡಲು ಯಾರೂ ಇಲ್ಲದಿದ್ದಲ್ಲಿ

೪. ನಿಯಂತ್ರಿಸಲು ಸಾಧ್ಯವಿರದ ಮಗು

೫. ಪರಿತ್ಯಕ್ತ ಮಗು ಅಥವಾ ನಿರ್ಗತಿಕ ಮಗು

೬. ಲೈಂಗಿಕತೆ ಹಾಗೂ ಕಾನೂನು ಬಾಹಿರ ಕೆಲಸಗಳಿಗಾಗಿ ಬಳಸುವಂತಹ ಮಗು

೭. ಮಾದಕ ವಸ್ತುಗಳ ಮಾರಾಟ ಹಾಗೂ ಬಳಕೆಗೆ ಗುರುಪಯೋಗಿಸಲ್ಪಡುವ ಮಗು

೮. ನಿಂದನೆಗೆ ಒಳಪಟ್ಟು ಕಾನೂನು ಬಾಹಿರ ಲಾಭಕ್ಕಾಗಿ ಬಳಸುವಂತಹ ಮಗು

೯. ಸೈನಿಕ ಸಂಘರ್ಷದಲ್ಲಿ, ಕೋಮು ಗಲಭೆಗಳಲ್ಲಿ, ಪ್ರಾಕೃತಿಕ ವಿಕೋಪಗಳಲ್ಲಿ ಸಿಕ್ಕಿರುವ ಮಕ್ಕಳು.

ಸಂಕಷ್ಟದಲ್ಲಿರುವ ಮಕ್ಕಳಿಗೆ ಪಾಲನೆ ಮತ್ತು ಪೋಷಣೆಗೆ ಅಗತ್ಯವಿರುವ ಮತ್ತು ಕಾನೂನಿನ ಅಡಿಯಲ್ಲಿ ಸಂಘರ್ಷದಲ್ಲಿರುವ ಮಕ್ಕಳಿಗೆ ಅವರ ವೈಯಕ್ತಿಕ ಪರಿಸ್ಥಿತಿಗೆ ಅನುಗುಣವಾಗಿ ರಕ್ಷಣೆಯ ಅವಶ್ಯಕತೆ ಇದೆ. ಮಗು ಸಂಭಾವ್ಯ ಪರಿಸ್ಥಿತಿಯಲ್ಲಿ ಸಿಲುಕುವ ಸಂದರ್ಭದಲ್ಲಿ ಮಕ್ಕಳಿಗೆ ರಕ್ಷಣೆಯ ಅವಶ್ಯಕತೆ ಇದೆ. ಹೀಗೆ ಅಪಾಯದಲ್ಲಿರುವ ಮತ್ತು ಅಪಾಯದ ಸಂಭಾವ್ಯ ಸಂದರ್ಭದಲ್ಲಿರುವ ಮಕ್ಕಳಿಗೆ ರಕ್ಷಣೆ ಬೇಕು. ಮಗುವಿಗೆ ಸಾಧ್ಯವಾದಷ್ಟು ಮಟ್ಟಿಗೆ ನ್ಯಾಯ ಪ್ರಕ್ರಿಯೆಯ ಹೊರಗಿನ ಚೌಕಟ್ಟಿನಲ್ಲಿ ಸಮಗ್ರ ರಕ್ಷಣೆ ಮತ್ತು ಪುನರ್ವಸತಿ ನೀಡುವುದು ಬಾಲ ನ್ಯಾಯ ವ್ಯವಸ್ಥೆಯ ಉದ್ದೇಶವಾಗಿದೆ.

**ಬಾಲ ನ್ಯಾಯ ಕಾಯಿದೆ ನಡೆದು ಬಂದ ಹಂತಗಳು:**

೧. ರಿಯಾದ್ ಘೋಷಣೆ: ಹುಡುಗರ ವಯಸ್ಸು ೧೬ ಮತ್ತು ಹುಡುಗಿಯರ ವಯಸ್ಸಾನ್ನು ೧೮ ರವರೆಗೆ ಎಂದು ಪರಿಗಣಿಸಲಾಗಿದೆ.

೨. ೧೯೮೬ರಲ್ಲಿ ಬಾಲ ನ್ಯಾಯ ಕಾಯಿದೆ: ಈ ಕಾಯಿದೆಯಡಿ ಮಕ್ಕಳ ನಡವಳಿಕೆ ಯನ್ನು ತಿದ್ದುವುದು ಪ್ರಮುಖವಾಗಿದೆ. ಹಾಗಾಗಿ ನಡವಳಿಕೆಯಲ್ಲಿ ಸ್ವಲ್ಪ ವ್ಯತ್ಯಾಸ ಇರುವವರು, ಕೊಲೆ, ಅತ್ಯಾಚಾರ ಮಾಡಿದಂತಹಾ ಮಕ್ಕಳು ಎಲ್ಲರೂ ಒಂದೇ ಮನೆಯಲ್ಲಿ ಇರುತ್ತಿದ್ದರು. ಇದನ್ನು ಸುಧಾರಣಾ ಸಂಸ್ಥೆ ಎಂದು ಕರೆಯುತಿದ್ದರು

೩. ಬಾಲ ನ್ಯಾಯ ಕಾಯಿದೆ ೨೦೦೦

೪. ಬಾಲನ್ಯಾಯ ಕಾಯಿದೆ ೨೦೦೬

೫. ಬಾಲನ್ಯಾಯ ಕಾಯಿದೆ ಎರಡನೇ ತಿದ್ದುಪಡಿ ೨೦೧೧

೬. ಬಾಲನ್ಯಾಯ ಕಾಯಿದೆ ೨೦೧೫

ಮಕ್ಕಳ ಹಕ್ಕುಗಳ ಒಡಂಬಡಿಕೆ ಬಂದ ನಂತರ ಮಕ್ಕಳ ವಯಸ್ಸು ೧೮ಕ್ಕೆ ನಿಗದೆ ಮಾಡಿದ್ದರು. ಹಾಗಾಗಿ ಬಾಲನ್ಯಾಯ ಕಾಯಿದೆಯಡಿ ಮಕ್ಕಳು ಎಂದರೆ ೧೮ ವಯಸ್ಸಿನವರು. ಬೇರೆ ಬೇರೆ ನಡವಳಿಕೆಯಲ್ಲಿ ನ್ಯೂನತೆ ಇರುವವರಿಗೆ ಪಾಲನೆ, ರಕ್ಷಣೆ ಮತ್ತು ಕಾನೂನಿನಡಿಯಲ್ಲಿ ಸಂಘರ್ಷದಲ್ಲಿರುವ ಮಕ್ಕಳು ಎಂದಿ ವಿಂಗಡಿಸಿ ಬೇರೆ ಬೇರೆಯಾಗಿ ಸುದ್ಧಾರಣೆ ತರಲು ಪ್ರಯತ್ನಗಳ ಪ್ರಕ್ರಿಯೆ ನಡೆಯುತ್ತದೆ. ಮಗುವಿನ ಜೊತೆ ಪುನರ್ ಮಿಲನೆ ಮಾಡಿ ಪುನರ್ವಸತೆ ಮಾಡುವಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ೨೦೧೫ರ ಕಾಯಿದೆ ಬಂದಾಗ 'ಮಕ್ಕಳು' ಎಂಬ ಏಕ ಪದವನ್ನು ಬಳಸುವ ಪ್ರಕ್ರಿಯೆ ಮತ್ತು ತೀವ್ರತೆಯ ಆಧಾರದ ಮೇಲೆ ಕಾನೂನಿನ ಜೊತೆ ಸಂಘರ್ಷಕ್ಕೆ ಒಳಪಟ್ಟ ಮಕ್ಕಳಿಗೆ ಅವಕಾಶ ಮಾಡಿಕೊಟ್ಟಿದೆ,

**ಬಾಲನ್ಯಾಯ ಕಾಯಿದೆ ೨೦೧೫**

೨೦೧೫ರ ಕಾಯಿದೆಯಲ್ಲಿ ಏನಿದೆ?

೧. ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆಯ ಪರಿಧಿಯೊಳಗೆ ಬರುವ ೬೨ ಪದಗಳನ್ನು ವಿವರಿಸಿದ್ದಾರೆ. ಪ್ರಮುಖವಾಗಿ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳು ಎಂದರೆ ಯಾರು ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳು ಯಾರು ಎಂಬ ವಿಶಯವನ್ನು ಸ್ಪಷ್ಟಪಡಿಸಲಾಗಿದೆ.

೨. ಈ ಮಕ್ಕಳ ಜೊತೆಗೆ ಅಥವಾ ಮಕ್ಕಳಿಗೆ ಸಮಾನವಾದ್ ರಕ್ಷಣೆ ಒದಗಿಸುವಂತೆ ನ್ಯಾಯ ಕೊಡಬೇಕಾದ ಸಕ್ಷಮ ಪ್ರಾಧಿಕಾರ ಇದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

೩. ಈ ಮಕ್ಕಳಿಗೆ ಪುನರ್ವಸತಿಯನ್ನು ಕಲ್ಪಿಸಿ, ಮುಖ್ಯವಾಹಿನಿಗೆ ಯಾವ ಯಾವ ವಿಧಗಳಲ್ಲಿ ತರಬಹುದು ಎಂಬುದನ್ನು ವಿವರಿಸಲಾಗಿದೆ.

೪. ಮಕ್ಕಳನ್ನು ಸಂಕಷ್ಟ ಪರಿಸ್ಥಿತಿಗೆ ತಳ್ಳಲ್ಪಡುವವರಿಗೆ ಯಾವ ರೀತಿಯ ಶಿಕ್ಷೆ ಇದೆ ಎಂಬುದನ್ನು ವಿವರಿಸಲಾಗಿದೆ.

೫. ಮಕ್ಕಳನ್ನು ತಂದೆ ತಾಯಿ ಜೊತೆ ಪುನರ್ ಮಿಲನಗೊಳಿಸುವುದು ಮತ್ತು ಸಮಾಜದಲ್ಲಿ ಮುಖ್ಯವಾಹಿನಿಗೆ ತರುವುದು,

ಈ ಹಿಂದೆ ಚಾಲ್ತಿಯಲ್ಲಿದ್ದ ಮಕ್ಕಳ ಅಧಿನಿಯಮಗಳು ಹಾಗೂ ಇಂತಹ ಕಾನೂನುಗಳ ವೈವಿದ್ಯತೆಗಳನ್ನು ಹೋಗಲಾಡಿಸಲು ಮತ್ತು ಆರೈಕೆ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ

ಮಕ್ಕಳ ಅವಶ್ಯಕತೆಗಳನ್ನು ಕ್ರೋಡೀಕರಿಸಿ ಅಗತ್ಯ ತಿದ್ದುಪಡಿಗಳನ್ನು ತಂದು ಮಕ್ಕಳ ನ್ಯಾಯ(ಆರೈಕೆ ಮತ್ತು ರಕ್ಷಣೆ) ಕಾಯಿದೆ ೨೦೧೫ ಜಾರಿಗೊಳಿಸಲಾಗಿದೆ. ಅಲ್ಲದೇ ಬಾಲನ್ಯಾಯ ಕಾಯಿದೆ ೧೯೮೬ನ್ನು ರದ್ದುಗೊಳಿಸಲಾಗಿದ್ದು, ಈ ಕಾಯಿದೆ ಅಡಿಯಲ್ಲಿನ ಎಲ್ಲಾ ಪ್ರಕರಣಗಳನ್ನು ಪ್ರಸ್ತುತ ಕಾಯಿದೆಯಡಿಯಲ್ಲಿ ನೆರವೇರಿಸಲು ಕಾಯಿದೆಯ ಕಲಂ ೬೯ರಲ್ಲಿ ಉಲ್ಲೇಖಿಸಲಾಗಿದೆ.

೧೯೮೬ರ ಮೊದಲು ಎಲ್ಲಾ ರಾಜ್ಯಗಳೂ ಅವರವರ ಕಾಯಿದೆಗಳನ್ನು ಮಕ್ಕಳಿಗಾಗಿ ಇಟ್ಟುಕೊಂಡಿದ್ದರು. ಅವುಗಳೆಲ್ಲವನ್ನೂ ಒಟ್ಟುಗೂಡಿಸಿ ಸಮಗ್ರವಾದ ಇಡೀ ಭಾರತಕ್ಕೆ ಅನ್ವಯಿಸುವ ಮಕ್ಕಳ ನ್ಯಾಯ ಕಾಯಿದೆ ೧೯೮೬ನ್ನು ಜಾರಿಗೆ ತರಲಾಗಿತ್ತು. ೯೦ ದಶಕದಲ್ಲಿ ಆದ ಕೆಲವೊಂದು ಮಹತ್ತರ ಬೆಳವಣಿಗೆಗಳನ್ನು ಪರಿಗಣಿಸಿ ೨೦೦೦ ಡಿಸೆಂಬರ್ ತಿಂಗಳಲ್ಲಿ ಮಕ್ಕಳ ನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯಿದೆ ಜಾರಿಗೆ ಬಂದಿತು ಅದರನ್ವಯ ಹಳೆಯ ಕಾನೂನು ರದ್ದುಗೊಂಡಿತು. ಜಮ್ಮು ಕಾಶ್ಮೀರ ರಾಜ್ಯ ಮಾತ್ರ ಹೊರತುಪಡಿಸಿ ಇಡೀ ದೇಶಕ್ಕೆ ಅನ್ವಯಿಸುವಂತೆ ಮಾಡಲಾಯ್ತು. ಈ ಕಾಯಿದೆಯಡಿ ೧೮ ವರ್ಷದ ಒಳಗಿನವರು, ನ್ಯಾಯ ಮಂಡಳಿ ಜೊತೆ ಮಕ್ಕಳ ಕಲ್ಯಾಣ ಸಮಿತಿ ಎಂಬ ಅಂಗ ಸಂಸ್ಥೆ ಪುನರ್ವಸತಿಗಾಗಿ ಸ್ಥಾನಮಾನ ನೀಡಿ, ಕಾಯಿದೆ ಅನುಷ್ಠಾನಗೊಳಿಸಲು ಸೂಕ್ತ ವ್ಯವಸ್ಥೆ ನೀಡಲಾಗಿದೆ. ಈ ಕಾಯಿದೆಯ ಅನುಷ್ಠಾನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದಾಗಿದ್ದು ರಾಜ್ಯ ಸರಕಾರ ಹಾಗೂ ಉಚ್ಚ ನ್ಯಾಯಾಲಯದ ಜವಾಬ್ದಾರಿ ಮತ್ತು ಮೇಲುಸ್ತುವಾರಿಯೂ ಅವರದ್ದಾಗಿರುತ್ತದೆ.

**"ಮಗುವಿನ ರಕ್ಷಣೆ"**ಎಂದರೆ ಯಾವುದೇ ವ್ಯಕ್ತಿ, ಸಂಸ್ಥೆ, ವ್ಯವಸ್ಥೆ ಅಥವಾ ಪ್ರಾಧಿಕಾರದ ಪೋಷಣೆಯಲ್ಲಿರುವಾಗ ನಿರ್ಲಕ್ಷ್ಯ, ತಾರತಮ್ಯ ಹಾಗೂ ಎಲ್ಲಾ ರೀತಿಯ ಹಿಂಸೆ ಮತ್ತು ದುರುಪಯೋಗಗಳಿಂದ ಮಗುವಿನ ಮೂಲಭೂತ ಹಕ್ಕುಗಳನ್ನು ರಕ್ಷಿಸುವುದಾಗಿದೆ.

**"ರಕ್ಷಣಾತ್ಮಕ ಪರಿಸರ"** ಎಂದರೆ ಮಗುವಿನ ರಕ್ಷಣೆ ಮತ್ತು ಸುರಕ್ಷತೆಯನ್ನು ಖಾತರಿಪಡಿಸುವ ಕೆಳಕಂಡ ಅಂಶಗಳನ್ನೊಳಗೊಂಡ ಪರಿಸರವಾಗಿದೆ.

೧) ನಿರ್ಲಕ್ಷ್ಯ, ತಾರತಮ್ಯ ಹಾಗೂ ಎಲ್ಲಾ ರೀತಿಯ ಹಿಂಸೆ ಮತ್ತು ದುರುಪಯೋಗಗಳಿಂದ ಮುಕ್ತವಾದ ಸುರಕ್ಷಿತ ಪರಿಸರ.

೨) ಮಕ್ಕಳನ್ನು ಹಾನಿಕಾರಕ ಸನ್ನಿವೇಶಗಳಿಂದ ರಕ್ಷಿಸುವುದು.

೩) ಅಸಾಹಾಯಕ ಪರಿಸ್ಥಿತಿಗೆ ಒಳಗಾಗುವುದನ್ನು ಕಡಿಮೆ ಮಾಡುವುದು ಮತ್ತು ಹೋಗಲಾಡಿಸುವುದು.

೪) ರಕ್ಷಣೆ ಮತ್ತು ಪೂರಕ ಸೇವೆಗಳು ಮಕ್ಕಳಿಗೆ ಸುಲಭವಾಗಿ ದೊರಕುವಂತಿರುತ್ತದೆ.

೫) ಮಕ್ಕಳ ರಕ್ಷಣಾ ವ್ಯವಸ್ಥೆಯು ಮಕ್ಕಳು ಯಾವುದೇ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಮತ್ತು ಸುರಕ್ಷತೆಯಿಂದ ವಂಚಿತರಾಗದಂತೆ ಕ್ರಮವಹಿಸುತ್ತದೆ.

೬) ಸರ್ಕಾರವು ಮಕ್ಕಳ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿರುತ್ತದೆ.

೭) ಜನರು ಮತ್ತು ಸಮುದಾಯ ಮಕ್ಕಳ ಹೊಣೆಗಾರಿಕೆಯನ್ನು ಹೆಚ್ಚು ಮುತುವರ್ಜಿಯಿಂದ ವಹಿಸುತ್ತಾರೆ.

ಶೋಷಣೆಗೊಳಗಾದ ಅನೇಕ ಮಕ್ಕಳನ್ನು ನಾವು ದಿನನಿತ್ಯ ನೋಡುತ್ತೇವೆ. ಅವರಿಗೆ ವಿಶೇಷ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದೆ. ದುಡಿಮೆಯ ಅಥವಾ ಶೋಷಣೆಯ ಪರಿಸ್ಥಿತಿಯಲ್ಲಿರುವ ಮಕ್ಕಳನ್ನು ನೋಡಿದರೂ ಅವರಿಗೆ ರಕ್ಷಣೆ ಮತ್ತು ಪೋಷಣೆಯ ಅಗತ್ಯವಿದೆ ಎನ್ನುವ ಪರಿಕಲ್ಪನೆ ಕೆಲವೊಮ್ಮೆ ನಮ್ಮೊಳಗೆ ಬರುವುದೇ ಇಲ್ಲ.

**ಬೀದಿ ಮಕ್ಕಳು:** ಈ ಮಕ್ಕಳು ಬೀದಿಗಳಲ್ಲಿ ಗುಂಪಾಗಿ ಅಥವಾ ಒಂಟಿಯಾಗಿ ಸುತ್ತುತ್ತಿರುತ್ತಾರೆ. ಬೀದಿಗಳಲ್ಲಿ ಸಿಕ್ಕಿದ್ದನ್ನು ತಿಂದು ಅಲ್ಲಲ್ಲಿ ಮಲಗಿರುತ್ತಾರೆ. ಇವರಲ್ಲಿ ಬಹುತೇಕ ಮಂದಿ ಮಾದಕ ಪದಾರ್ಥಗಳ ವ್ಯಸನಿಗಳಾದವರು. ಸೈಕಲ್ ಪಂಕ್ಚರ್ ಹಾಕಲು ಉಪಯೋಗಿಸುವ 'ಸೊಲ್ಯೂಶನ್'ನ್ನು ಮಾದಕತೆಗೆ ಉಪಯೋಗಿಸುತ್ತಾರೆ. ಇದರ ವಾಸನೆಯ ನಶೆಯಲ್ಲಿ ಮಕ್ಕಳು ಹಸಿವು ಮರೆಯುತ್ತಾರೆ. ಕೆಲವೊಮ್ಮೆ ಕಳ್ಳತನಕ್ಕೂ ಇವರು ಮುಂದಾಗುತ್ತಾರೆ. ಇವರಿಗೆ ಪೋಷಕರು ಇರುತ್ತಾರೆ. ಆದರೆ, ನಿರ್ಲಕ್ಷ್ಯಕ್ಕೆ ಒಳಗಾಗಿ ಈ ಮಕ್ಕಳು ಬೀದಿ ಸೇರಿರುತ್ತಾರೆ. ಇವರು ಶಾಲೆಯಿಂದ ಹೊರಗುಳಿದಿರುತ್ತಾರೆ. ಕೆಲವು ಮಕ್ಕಳ ಹೆಸರುಗಳು ಶಾಲೆಗಳಲ್ಲಿ ದಾಖಲಾಗಿರುತ್ತದೆ. ಆದರೆ, ಅವರು ಎಂದಿಗೂ ಶಾಲೆಗೆ ಹೋಗಿರುವುದಿಲ್ಲ.

**ಅನಾಥ ಮಕ್ಕಳು:** ಪೋಷಕರು ಇಲ್ಲದ ಮಕ್ಕಳು ಇವರು ಹುಟ್ಟಿದಾಗಲೇ ಪೋಷಕರು ಬಿಟ್ಟು ಹೋಗಿರಬಹುದು ಅಥವಾ ನಂತರ ಮಾರಾಟ ಮಾಡಿರಬಹುದು. ಪೋಷಕರು ಮರಣ ಹೊಂದಿದಾಗ ಮಕ್ಕಳು ಅನಾಥರಾಗುವ ಸಾಧ್ಯತೆಗಳಿವೆ. ವಾರಸುದಾರರಿಲ್ಲದ ಈ ಮಕ್ಕಳನ್ನು ಸ್ವಯಂ ಪ್ರೇರಿತವಾಗಿ ಬಂದು ಸಾಕುವವರಿರುತ್ತಾರೆ. ಅದು ಕಾನೂನು

ಬಾಹಿರವೆಂದು, ಸಾಕಲು ಹೊರಟವವರಿಗೆ ತಿಳಿದಿರುವುದಿಲ್ಲ. ಆದರೆ ಈ ಮಕ್ಕಳಿಗೆ ಶಿಕ್ಷಣ, ಪೋಷಣೆ ಮತ್ತು ರಕ್ಷಣೆಯ ತಕ್ಷಣ ಅವಶ್ಯಕತೆ ಇದೆ.

**ಬಾಲ ಕಾರ್ಮಿಕರು:**

ಬಾಲನ್ಯಾಯ ಕಾಯ್ದೆ ಪ್ರಕಾರ ೧೮ ವರ್ಷದೊಳಗಿನ ಎಲ್ಲರೂ ಮಕ್ಕಳು ೧೮ ವರ್ಷದೊಳಗಿನ ದುಡಿಯುವಂತಹ ಮಕ್ಕಳೆಲ್ಲರೂ ಬಾಲಕಾರ್ಮಿಕರು ಎಂದು ಪರಿಗಣಿಸಲ್ಪಡುತ್ತಾರೆ.

**ಕಾನೂನಿನ ಅನ್ವಯಿಸುವಿಕೆ:**

ಮಕ್ಕಳನ್ನು ಇಂದು ಕೇವಲ "ರಕ್ಷಣೆಯ ವಸ್ತು"ವನ್ನಾಗಿ ಗುರುತಿಸದೆ, ಹಕ್ಕುಗಳ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತಿದೆ. ಕೆಳಕಂಡ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಕಾಯ್ದೆಗಳು, ನೀತಿಗಳು ಮತ್ತು ಮಾರ್ಗಸೂಚಿಗಳು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ನೀತಿಯನ್ನು ರೂಪಿಸಲು ತಳಹದಿಯಾಗಿವೆ.

**ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ (ಯುಎನ್‌ಸಿಆರ್‌ಸಿ),** ೧೯೮೯: ಭಾರತವು ಸಹಿ ಮಾಡಿ ಒಪ್ಪಿಕೊಂಡ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ, ೧೯೮೯ ರಂತೆ ಮಕ್ಕಳ ಹಿತದೃಷ್ಟಿಯಿಂದ ರೂಪಿಸಲಾದ ತತ್ವಗಳು ಮತ್ತು ಮಾನದಂಡಗಳ ಮೂಲಕ ಪ್ರತಿಯೊಂದು ಮಗುವಿಗೆ ರಕ್ಷಣಾತ್ಮಕ ಹಕ್ಕುಗಳನ್ನು ಮಾನ್ಯ ಮಾಡುತ್ತದೆ.

**ಭಾರತದ ಸಂವಿಧಾನ:** ಭಾರತ ಸಂವಿಧಾನವು ಅನುಚ್ಛೇದ ೧೪ (ಸಮಾನತೆಯ ಹಕ್ಕು ಮತ್ತು ಸಮಾನ ರಕ್ಷಣೆಯ ನ್ಯಾಯ) ಅನುಚ್ಛೇದ ೧೫ (೩) (ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸುವ ರಾಜ್ಯ ಸರ್ಕಾರದ ಮೂಲಭೂತ ಹಕ್ಕು, ಅನುಚ್ಛೇದ ೨೧ (ಜೀವಿಸುವ ಹಕ್ಕು ಮತ್ತು ವೈಯುಕ್ತಿಕ ಸ್ವಾತಂತ್ರ) ಅನುಚ್ಛೇದ ೨೧ಎ (ಶಿಕ್ಷಣದ ಹಕ್ಕು), ಅನುಚ್ಛೇದ ೨೩ ಮತ್ತು ೨೪ (ಶೋಷಣೆಯ ವಿರುದ್ಧದಹಕ್ಕುಗಳು), ಅನುಚ್ಛೇದ ೩೯ (ಇ) (ಆರೋಗ್ಯದ ಹಕ್ಕು ಮತ್ತು ಆರ್ಥಿಕ ಅವಶ್ಯಕತೆಗಾಗಿ ದುರುಪಯೋಗ ದಿಂದ ಸ್ವಾತಂತ್ರ್ಯ) ಮತ್ತು ೩೯ (ಎಫ್) (ಗೌರವದಿಂದ ಬದುಕುವ ಹಕ್ಕು) ಹಾಗೂ ಅನುಚ್ಛೇದ ೫೧ಎ(ಕೆ) (ಶಿಕ್ಷಣಕ್ಕೆ ಅವಕಾಶಗಳನ್ನು ಒದಗಿಸುವುದು ತಂದೆ ತಾಯಿ ಹಾಗೂ ಪೋಷಕರ ಜವಾಬ್ದಾರಿ) ಸೇರಿದಂತೆ ಅನೇಕ ಉಪಬಂಧಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಾಗಿದೆ.

ಯಾವುದೇ ಒಂದು ದೇಶದ ಪ್ರಜೆಗೆ ಆ ದೇಶದ ಸಂವಿಧಾನವು ನ್ಯಾಯಯುತವಾದ ಅತ್ಯುನ್ನತ ಮಾರ್ಗಸೂಚಿಯಾಗಿರುತ್ತದೆ. ಒಂದು ಮಗು ಈ ಮಗು ದೇಶದ ನೆಲದಲ್ಲಿ ಹುಟ್ಟಿದ ಕ್ಷಣದಲ್ಲಿ ಆ ದೇಶದ ಪ್ರಜೆಯಾಗುವ ಹಕ್ಕು ಮಗುವಿಗೆ ಲಭ್ಯವಿದೆ. ಮಕ್ಕಳಿಗೆ ಪೂರಕವಾಗಿರುವ ಸಂವಿಧಾನದ ಕೆಲವೊಂದು ಪರಿಚ್ಛೇದಗಳು/ನಿಯಮಗಳು ಒಡಂಬಡಿಕೆಗಳು

- ರಾಜ್ಯವು ಸಂವಿಧಾನದ ಅಡಿ ಮಕ್ಕಳ ಎಲ್ಲಾ ಅಗತ್ಯತೆಗಳನ್ನು ಪೂರೈಸಲಾಗಿದೆ ಮತ್ತು ಅವರ ಮಾನವಹಕ್ಕುಗಳನ್ನು ಸಂಪೂರ್ಣವಾಗಿ ಸಂರಕ್ಷಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಪ್ರಾಥಮಿಕ ಜವಾಬ್ದಾರಿಯನ್ನು ಹೊಂದಿದೆ.
- ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, ೨೦೦೦ (ಜೆ ಜೆ ಕಾಯ್ದೆ) ಮತ್ತು ಕರ್ನಾಟಕ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮ, ೨೦೧೦ (ಕರ್ನಾಟಕ ಜೆಜೆ ನಿಯಮಗಳು).
- ರಾಷ್ಟ್ರೀಯ ಮಕ್ಕಳ ಸನ್ನದು, ೨೦೦೩ (ಮಕ್ಕಳ ಸನ್ನದು).
- ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆ, ೨೦೦೫ (ಎನ್‌ಪಿಎ ೨೦೦೫)
- ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ, ೨೦೦೫
- ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಮಕ್ಕಳ ಹಕ್ಕು ಕಾಯ್ದೆ, ೨೦೦೯: ಸಮಗ್ರ ಶಿಶು ಸಂರಕ್ಷಣಾ ಯೋಜನೆ (ಐಸಿಪಿಎಸ್)
- ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ, ೨೦೧೨ (ಪೋಕ್ಸೋ)
- ರಾಷ್ಟ್ರೀಯ ಮಕ್ಕಳ ನೀತಿ, ೨೦೧೩:
- ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವ, ನಿಗ್ರಹಿಸುವುದು ಮತ್ತು ಪರಿಹಾರ)
- ಕಾಯ್ದೆ ೨೦೧೩: ಇದು ಕೇಂದ್ರ ಸರ್ಕಾರದ ಕಾಯ್ದೆಯಾಗಿದ್ದು, ಉದ್ಯೋಗದ ಸ್ಥಳಗಳಲ್ಲಿನ ಲೈಗಿಂಕ ಕಿರುಕುಳಗಳಿಂದ ಮಹಿಳೆಯರನ್ನು ರಕ್ಷಿಸುವುದಾಗಿದೆಯಲ್ಲದೆ ಇದರೊಂದಿಗೆ ಶಾಲೆ, ಕೆಲಸದ ಸ್ಥಳ ಅಥವಾ ಇತರೆ ಇದೇ ಬಗೆಯ ಪರಿಸರದಲ್ಲಿರುವ ಹೆಣ್ಣು ಮಕ್ಕಳಿಗೂ ರಕ್ಷಣೆಯನ್ನು ಒದಗಿಸುವ ಬಗ್ಗೆ ವಿವರಿಸಿದೆ.
- ಶಾಲೆಗಳಲ್ಲಿ ಕಠಿಣ ದೈಹಿಕ ಶಿಕ್ಷೆಯನ್ನು ಶೆಗೆದು ಹಾಕಲು ಸಲಹೆ ಅಪರಾಧ ಪ್ರಕರಣಗಳಲ್ಲಿ ದುರ್ಬಲ ಸಾಕ್ಷಿಗಳ ಧ್ವನಿ ಮುದ್ರಣ ಮಾಡಲು ಮಾರ್ಗಸೂಚಿಗಳು

- ರೈಲ್ವೆ ವಶದಲ್ಲಿರುವ ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಕಾರ್ಯ ವಿಧಾನಗಳು
- ಬಾಲಕಾರ್ಮಿಕತೆ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, ೧೯೮೬
- ಬಾಲಕಾರ್ಮಿಕತೆ (ತಿದ್ದುಪಡಿ) ಕಾಯ್ದೆ, ೨೦೦೬
- ಜೀತ ಪದ್ಧತಿ (ನಿರ್ಮೂಲನಾ) ಕಾಯ್ದೆ, ೧೯೭೬
- ಕಾರ್ಖಾನೆಗಳ ಕಾಯ್ದೆ, ೧೯೪೮
- ಶಿಶುವಿಗೆ ಹಾಲಿನ ಬದಲಿ ಆಹಾರಗಳು, ಹಾಲಿನ ಬಾಟಲಿಗಳು ಮತ್ತು ಶಿಶುವಿನ ಆಹಾರಗಳು
- ಪ್ರಸವ ಪೂರ್ವ ಪತ್ತೆಹಚ್ಚುವ ವಿಧಾನಗಳು ಅಧಿನಿಯಮ, ೧೯೯೪
- ದೈಹಿಕ ಅಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ಅಧಿನಿಯಮ. ೧೯೯೫
- ಬಾಲ್ಯ ವಿವಾಹ ನಿಷೇದ ಅಧಿನಿಯಮ, ೨೦೦೬
- ಅನೈತಿಕ ಕಳ್ಳಸಾಗಣೆ ತಡೆ ಕಾಯ್ದೆ, ೧೯೮೬
- ಗಾರ್ಡಿಯನ್ಸ್ ಮತ್ತು ವಾರ್ಡ್ಸ್ ಕಾಯ್ದೆ, ೧೮೯೦
- ಹಿಂದೂ ದತ್ತು ಮತ್ತು ನಿರ್ವಹಣೆ ಕಾಯ್ದೆ, ೧೯೫೬
- ಆಹಾರದ ಹಕ್ಕು ಕಾನೂನು ಮತ್ತು ಮಕ್ಕಳು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಯ್ದೆ, ೧೯೮೯
- ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ, ೨೦೦೫
- ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಾರ್ಗಸೂಚಿಗಳು: ಶಾಲಾ ಸುರಕ್ಷತಾ ನೀತಿ-೨೦೧೩
- ಕರ್ನಾಟಕ ವಿಕ್ಟಿಮ್(ಪೀಡಿತರ) ಪರಿಹಾರ ಯೋಜನೆ - ೨೦೧೧
- ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್)

ಯುಎನ್‌ಸಿಆರ್‌ಸಿ ಮೇರೆಗೆ ನಿರೂಪಿಸಲಾದ ತತ್ವಗಳು ಮತ್ತು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, ೨೦೦೦ದ ಮತ್ತು ೨೦೦೬ರ ತಿದ್ದುಪಡಿ ಮೇರೆಗಿನ ಮಾರ್ಗದರ್ಶಿ ತತ್ವಗಳು. ಯುಎನ್‌ಸಿಆರ್‌ಸಿ ಅನುಚ್ಛೇದ-೩

**ಹಕ್ಕುಗಳು**

ಪ್ರತಿಯೊಂದು ವ್ಯಕ್ತಿಗೂ ಅವರದ್ದೇ ಆದ ಅವಶ್ಯಕತೆಗಳಿವೆ. ಈ ಅಗತ್ಯಗಳಲ್ಲಿ ಯಾವುದು ಮೂಲಭೂತವೋ, ಯಾವುದು ಅವಶ್ಯಕತೆಯೋ, ಯಾವುದು ವ್ಯಕ್ತಿಯ ಘನತೆಗೆ ಪೂರಕವೋ ಅದು ಹಕ್ಕು ಎನಿಸಿಕೊಳ್ಳುತ್ತದೆ. ಮೊದಲನೆಯದಾಗಿ ಮಗು ಹಕ್ಕುಗಳನ್ನು ಖಾತ್ರಿಪಡಿಸಬೇಕು. ಇದನ್ನು ಖಾತ್ರಿಪಡಿಸಲು ಮಗುವನ್ನು ಸಬಲೀಕರಣ ಗೊಳಿಸುವುದು. ಎರಡನೆಯದಾಗಿ ಕುಟುಂಬ ಮಕ್ಕಳ ಹಕ್ಕುಗಳನ್ನು ಖಾತ್ರಿಪಡಿಸಬೇಕು. ಇದನ್ನು ಖಾತ್ರಿಪಡಿಸಿದಂತಹಾ ಕುಟುಂಬವನ್ನು ಬಲಪಡಿಸುವಲ್ಲಿ ಸಮುದಾಯಕ್ಕೆ ಬಹಳಷ್ಟು ಜವಾಬ್ದಾರಿ ಇದೆ. ಅಂದರೆ (ಮಗು ಆ ಹಕ್ಕನ್ನು ಪೂರೈಸುವಲ್ಲಿ ಸಮುದಾಯದ ಜವಾಬ್ದಾರಿಯಾಗಿ ಮಾರ್ಪಾಡು ಹೊಂದುತ್ತದೆ.) ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸುವಲ್ಲಿ ಸಮುದಾಯ ಪ್ರಮುಖ ಪಾತ್ರವಹಿಸುತ್ತದೆ.

**ಮಕ್ಕಳ ಹಕ್ಕುಗಳ ಪರಿಕಲ್ಪನೆ:**

ಮಕ್ಕಳು ಎಂದಾಕ್ಷಣ ನಮ್ಮ ಮನೋಭಾವನೆ ಹೇಗಿರುತ್ತದೆ? ಮಕ್ಕಳು ಮುಗ್ಧರು, ಏನೂ ಅರಿಯದವರು ಈ ರೀತಿಯ ಕಲ್ಪನೆ ನಮ್ಮಲ್ಲಿ ಇರುತ್ತದೆ. ಇದಕ್ಕಾಗಿ ಮಕ್ಕಳು ಅವಕಾಶಗಳಿಂದ ವಂಚಿತರಾಗುತ್ತಾರೆ. ನಾನಾ ಸಂದರ್ಭ ಮತ್ತು ಪರಿಸ್ಥಿತಿಯಲ್ಲಿ ಮಕ್ಕಳೇ ಹೆಚ್ಚಿನ ಸಂಕಷ್ಟಕ್ಕೆ ಒಳಪಡುವ ದುರ್ಬಲ ಸ್ಥಿತಿಯಲ್ಲಿರುತ್ತಾರೆ. ಯಾವುದೇ ಪ್ರದೇಶದಲ್ಲಿ ನಡೆಯುವ ಮತೀಯ ಗಲಭೆ, ನಾಗರಿಕ ಕ್ಷೋಭೆ, ನೈಸರ್ಗಿಕ ವಿಕೋಪ, ಯುದ್ಧ ಮುಂತಾದ ಪ್ರಸಂಗಗಳಲ್ಲಿ ಮಕ್ಕಳೇ ಹೆಚ್ಚು ಸಾವು ನೋವು ಸಂಕಷ್ಟ ಅನುಭವಿಸಿದ್ದಾರೆ. ಸಂಕಷ್ಟದ ಪರಿಸ್ಥಿತಿಯಿಂದ ಮಕ್ಕಳನ್ನು ರಕ್ಷಿಸಲು ಮಕ್ಕಳ ಹಕ್ಕುಗಳ ಪರಿಕಲ್ಪನೆಯನ್ನು ೧೯೧೯ರಲ್ಲಿ ರಚಿತವಾದ ಸಂಯುಕ್ತ ರಾಷ್ಟ್ರದ ಉಪಸಮಿತಿ ೧೯೨೪ರಲ್ಲಿ ಮಕ್ಕಳ ಹಕ್ಕುಗಳ ಸನ್ನದನ್ನು ಅಂಗೀಕರಿಸುವುದರೊಂದಿಗೆ ಕ್ರಮಬದ್ಧವಾಗಿ ಪ್ರಾರಂಭವಾಯಿತು. ಸೇವ್ ದ ಚಿಲ್ಡ್ರನ್ ಸಂಸ್ಥೆಯ ಸಂಸ್ಥಾಪಕಿ ಇಂಗ್ಲಟನ್ ಜೋಸ್ ಈ ಹಕ್ಕು ಪತ್ರದ ಮೊದಲ ಕರಡು ಪ್ರತಿಯನ್ನು ತಯಾರಿಸಿದರು.

೧೯೫೯ರಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಮಕ್ಕಳ ಹಕ್ಕುಗಳ ಘೋಷಣೆಯನ್ನು ಒಪ್ಪಿಕೊಂಡಿತು. ೧೯೭೯ ನ್ನು ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಘೋಷಿಸಿದ್ದು ಮಕ್ಕಳ ಹಕ್ಕುಗಳ ಚಳುವಳಿಗಳಿಗೆ ಹೊಸ ರೂಪ ನೀಡಿತು. ಮೊತ್ತ ಮೊದಲು ಪೋಲೆಂಡ್, ಮಕ್ಕಳ ಹಕ್ಕುಗಳ ಒಡಂಬಡಿಕೆ ರೂಪಿಸುವ ಸಮಿತಿಯನ್ನು

ಹುಟ್ಟುಹಾಕಲು ವಿಶ್ವಸಂಸ್ಥೆಗೆ ಸೂಚಿಸಿತು. ಇದರ ಪರಿಣಾಮ ಸತತ ೧೦ ವರ್ಷಗಳ ಸುದೀರ್ಘ ಕೆಲಸ ಅಂದರೆ ೧೯೮೯ ನವೆಂಬರ್ ೨೦ರಂದು ವಿಶ್ವಸಂಸ್ಥೆ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಅಂಗೀಕರಿಸಿತು. ವಿಶ್ವದ ೧೯೬ ರಾಷ್ಟ್ರಗಳು ಈ ಒಡಂಬಡಿಕೆಗೆ ಸಹಿ ಹಾಕುವುದರ ಮೂಲಕ ಮಕ್ಕಳ ಹಕ್ಕುಗಳನ್ನು ಖಾತ್ರಿ ಪಡಿಸುವಲ್ಲಿ ತಮ್ಮ ಬದ್ಧತೆಯನ್ನು ಸೂಚಿಸಿವೆ. ಭಾರತ ಸರ್ಕಾರ ೧೯೯೨ ಡಿಸೆಂಬರ್ ೧೧ರಂದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಿದೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ೫೪ ಪರಿಚ್ಛೇಧಗಳಿವೆ. ಮಕ್ಕಳ ಹಕ್ಕುಗಳನ್ನು ಮುಖ್ಯವಾಗಿ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ಒಡಂಬಡಿಕೆಯನ್ನು ಜಾರಿಗೆ ತರಬೇಕಾದ ಬದ್ಧತೆ ಸರ್ಕಾರಕ್ಕಿದೆ. ನೀತಿ ನಿಯಮಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಒಡಂಬಡಿಕೆಯ ಅಂಶಗಳನ್ನು ಕಾರ್ಯರೂಪಕ್ಕೆ ತಂದಾಗ ಮಕ್ಕಳಿಗೆ ನ್ಯಾಯ ಸಿಗುತ್ತದೆ ಎನ್ನುವ ಪರಿಕಲ್ಪನೆ ಇದರ ಹಿಂದಿನದು. ಮಕ್ಕಳ ನಾಗರೀಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಇದು ಒಳಗೊಂಡಿದೆ. ಮಗುವೆಂದರೆ ೧೮ ವರ್ಷದೊಳಗಿನ ವ್ಯಕ್ತಿ ಎಂಬ ತಳಹದಿ ಮೇಲೆ ಈ ಹಕ್ಕುಗಳನ್ನು ರಚಿಸಲಾಗಿದೆ.

**ಬದುಕುವ ಹಕ್ಕು:**

ಪ್ರತಿಯೊಂದು ಮಗುವಿಗೆ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ, ಪೌಷ್ಟಿಕ ಆಹಾರ ಪಡೆಯುವ, ಒಂದು ಹೆಸರು ಹೊಂದಿರುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು. ಈ ಹಕ್ಕುಗಳನ್ನು ಖಾತ್ರಿಪಡಿಸಲು ಸರ್ಕಾರ ಪೂರಕವಾದ ಕಾನೂನುಗಳನ್ನು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯಂತಹ ದೊಡ್ಡ ಯೋಜನೆಯನ್ನು ಮತ್ತು ಅವರ ಅನುಷ್ಠಾನಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಕುಟುಂಬ ಮತ್ತು ಆರೋಗ್ಯ ಇಲಾಖೆಯನ್ನು ನಿಯೋಜಿಸಿದೆ.

**ಬದುಕುವ ಹಕ್ಕು ಎಂದರೆ:**

- ಆರೋಗ್ಯದ ಉತ್ತಮ ಮಟ್ಟ
- ಪೌಷ್ಟಿಕತೆ
- ಸುಧಾರಿತ ಜೀವನ ಮಟ್ಟ
- ಬದುಕಲು ಪರ್ಯಾಪ್ತ ಸೌಕರ್ಯಗಳು, ವಸತಿ, ಪೌಷ್ಟಿಕ ಆಹಾರ

- ಆರೋಗ್ಯ ಸೇವೆ
- ಹೆಸರು ಮತ್ತು ರಾಷ್ಟ್ರೀಯತೆ

**ರಕ್ಷಣೆಯ ಹಕ್ಕು:**

ದಬ್ಬಾಳಿಕೆ, ತೊಂದರೆ ಕಿರುಕುಳ ಹಿಂಸೆಗಳ ವಿರುದ್ಧ ತುರ್ತು ಸಂದರ್ಭಗಳಲ್ಲಿ ಮತ್ತು ಸಶಸ್ತ್ರ ಘರ್ಷಣೆಗಳಾದಾಗ ರಕ್ಷಣೆಯನ್ನು ಪ್ರತಿಯೊಂದು ಕುಟುಂಬವು ನೀಡಬೇಕಾಗಿದೆ ಮತ್ತು ರಕ್ಷಣೆ ಹೊಂದುವ ಹಕ್ಕು ಮಕ್ಕಳಿಗಿದೆ. ಈ ಹಕ್ಕುಗಳನ್ನು ಖಾತ್ರಿಪಡಿಸಲು ಬಾಲನ್ಯಾಯ ಕಾಯಿದೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯಿದೆಯನ್ನು ಜಾರಿಗೊಳಿಸಿದೆ, ಅವುಗಳ ಅನುಷ್ಠಾನಕ್ಕೆ **ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು** ಜಾರಿಗೊಳಿಸಿದೆ.

**ರಕ್ಷಣೆಯ ಹಕ್ಕು ಎಂದರೆ:**

- ಶೋಷಣೆ, ದುರ್ಬಳಕೆ, ಅಮಾನವೀಯ ಅಥವಾ ಹೀನಾಯವಾಗಿ ನಡೆಸಿಕೊಳ್ಳುವಿಕೆ ಇವುಗಳಿಂದ ಸ್ವಾತಂತ್ರ್ಯ
- ತುರ್ತು ಪರಿಸ್ಥಿತಿ ಮತ್ತು ಶಸ್ತ್ರಾಸ್ತ್ರ ಸಂಘರ್ಷ ಮುಂತಾದ ವಿಶೇಷ ಸಂದರ್ಭಗಳಲ್ಲಿ, ವಿಕಲಾಂಗತೆ ಹೊಂದಿದಲ್ಲಿ ವಿಶೇಷ ರಕ್ಷಣೆ
- ಅವಮಾನ, ನಿರ್ಲಕ್ಷ್ಯ, ಶೋಷಣೆಯಿಂದ ರಕ್ಷಣೆ, ಲೈಂಗಿಕ ಶೋಷಣೆ, ದುಡಿಮೆ ದುರ್ಬಳಕೆಯಿಂದ ರಕ್ಷಣೆ ಇತ್ಯಾದಿ

**ವಿಕಾಸಹೊಂದುವ ಹಕ್ಕು:**

ಶಿಕ್ಷಣ, ಶೈಶವದಲ್ಲಿ ಬೆಳೆಯಲು ಅವಕಾಶ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ. ಈ ಹಕ್ಕುಗಳನ್ನು ಖಾತ್ರಿಪಡಿಸಲು ಮಗುವಿನ ವಿಕಾಸ ಹೊಂದುವಲ್ಲಿ ಶಿಕ್ಷಣವೂ ಮತ್ತು ಪೂರಕ ಸೇವೆಗಳನ್ನು ಒದಗಿಸಿದೆ. ಉದಾ: ಕಲೆ, ಆಟದ ವ್ಯವಸ್ಥೆಗೆ ಸರ್ವತೋಮುಖ ಅಭಿವೃದ್ಧಿಗಾಗಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕನ್ನು ೨೦೧೦ರಲ್ಲಿ ಜಾರಿಗೊಳಿಸಿದೆ, ಅಲ್ಲದೆ ಇದನ್ನು ಸಮಗ್ರವಾಗಿ ಜಾರಿಗೊಳಿಸಲು ಸರ್ವ ಶಿಕ್ಷಾ ಅಭಿಯಾನ, ಮಾಧ್ಯಮಿಕ ಶಿಕ್ಷಣ ಅಭಿಯಾನದಂತಹ ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆ ನಿಯೋಜಿಸಿದೆ.

**ವಿಕಾಸದ ಹಕ್ಕು ಎಂದರೆ:**

❖ ಶಿಕ್ಷಣದ ಹಕ್ಕು

❖ ಶೈಶವದ ಪೋಷಣೆ ಮತ್ತು ಅಭಿವೃದ್ಧಿಗೆ ಬೆಂಬಲ

❖ ಸಾಮಾಜಿಕ ಭದ್ರತೆ

❖ ವಿಶ್ರಾಂತಿ, ವಿನೋದ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು

❖ ಆಟ, ಸಾಂಸ್ಕೃತಿಕ ಚಟುವಟಿಕೆಗಳು, ಮಾಹಿತಿ ಹಕ್ಕು, ವಿಚಾರ ಸ್ವಾತಂತ್ರ್ಯ, ನಂಬಿಕೆ ಸ್ವಾತಂತ್ರ್ಯ, ಧರ್ಮದ ಸ್ವಾತಂತ್ರ್ಯ

**ಭಾಗವಹಿಸುವ ಹಕ್ಕು:**

ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿಯ ಲಭ್ಯತೆ, ಚಿಂತನೆಗೆ/ಬುದ್ಧಿ ಬೆಳವಣಿಗೆಗೆ ಅವಕಾಶ, ಸಂಘಟಿತರಾಗಿರುವುದು ಮತ್ತು ಧಾರ್ಮಿಕ ಹಕ್ಕುಗಳು. (ಕರ್ನಾಟಕದಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆ, ವಿಧಾನ ಸೌಧದಲ್ಲಿ ಮಕ್ಕಳು ಎಂಬ ವಿನೂತನ ಕಾರ್ಯಕ್ರಮಗಳಿಗೆ ಅವಕಾಶ ಮಾಡಿದೆ.) ಈ ಹಕ್ಕಿನಲ್ಲಿ ಮಗುವನ್ನು ತಾರತಮ್ಯದಿಂದ ಮುಕ್ತಗೊಳಿಸುವ ಮತ್ತು ಮಗುವಿನ ಜೀವನವನ್ನು ತಾನೇ ನಿರ್ವಹಿಸುವ ಅವಕಾಶ ನೀಡಬೇಕು ಎನ್ನುವ ತತ್ವದ ಹಿನ್ನೆಲೆ ಇದೆ. ಕರ್ನಾಟಕದಲ್ಲಿ ಅನೇಕ ಪ್ರಯತ್ನಗಳು ನಡೆದಿದ್ದು ದೇಶದಾದ್ಯಂತ ಮಕ್ಕಳಿಗೆ ವೇದಿಕೆ ಇನ್ನೂ ಸಿಗಬೇಕಿದೆ. ಉದಾ: ಮಕ್ಕಳ ಗ್ರಾಮ ಸಭೆ ಇತ್ಯಾದಿ.

**ಭಾಗವಹಿಸುವ ಹಕ್ಕು ಎಂದರೆ:**

- ಮಕ್ಕಳ ಅಭಿಪ್ರಾಯಕ್ಕೆ ಗೌರವ
- ಅಭಿವ್ಯಕ್ತಿ ಸ್ವಾತಂತ್ರ್ಯ
- ಸೂಕ್ತವಾದ ಮಾಹಿತಿ ಪಡೆಯಲು ಅವಕಾಶ
- ವಿಚಾರಗಳ, ಪ್ರಜ್ಞೆಯ ಮತ್ತು ಧರ್ಮದ ಸ್ವಾತಂತ್ರ್ಯ
- ಸಂಘಟನೆ, ಸಭೆ ಸೇರುವ ಹಕ್ಕು

ಹಕ್ಕುಗಳನ್ನು ಅವುಗಳ ಸ್ವಭಾವಕ್ಕೆ ತಕ್ಕಂತೆ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ತುರ್ತು ಹಕ್ಕುಗಳು ಮತ್ತು ಪ್ರಗತಿಪರ ಹಕ್ಕುಗಳು. ರಕ್ಷಣೆಗೆ ಸಂಬಂಧಪಟ್ಟ ಎಲ್ಲಾ

ಹಕ್ಕುಗಳು ತುರ್ತಾದವು. ಇನ್ನುಳಿದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು ಪ್ರಗತಿಪರವಾಗಿ ಜಾರಿಗೊಳಿಸಬೇಕಾಗುತ್ತದೆ.

**ಮಕ್ಕಳ ರಕ್ಷಣಾ ವ್ಯವಸ್ಥೆ**

**ಮಕ್ಕಳ ರಕ್ಷಣಾ ವ್ಯವಸ್ಥೆ ಅಂದರೆ ಮಕ್ಕಳ ರಕ್ಷಣೆಗಾಗಿ ಮತ್ತು ಮಕ್ಕಳು ಹಾಗೂ ಚಿಕ್ಕ ವಯಸ್ಸಿನ ಜನರಿಗಾಗಿ ಸರಕಾರ ರಚಿಸಿರುವ ಸೇವಾ ವ್ಯವಸ್ಥೆ ಆಗಿರುತ್ತದೆ.**

**ಮಕ್ಕಳ ರಕ್ಷಣಾ ವ್ಯವಸ್ಥೆಯ ಪುನರ್ ಸಂಘಟನೆ:**

ವ್ಯವಸ್ಥೆಗಳು ತಮ್ಮ ಕ್ಷೇತ್ರದಲ್ಲಿ ಇರುತ್ತಲೂ ಬಹಳಷ್ಟು ರಾಜ್ಯಗಳಲ್ಲಿ ಮಕ್ಕಳ ಪರಿಸ್ಥಿತಿಯಲ್ಲಿ ಯಾವುದೇ ಪ್ರಗತಿ ಆಗಿಲ್ಲ ಎನ್ನುವ ಅಂಶಗಳನ್ನು ಮನಗಂಡು, ಮಹಿಳಾ ಮತ್ತು ಮಕ್ಕಳ ಮಂತ್ರಾಲಯ ಮಕ್ಕಳಿಗೆ ರಕ್ಷಣಾತ್ಮಕ ವಾತಾವರಣಕ್ಕೆ ದೃಡ ತಳಪಾಯ ಹಾಕಲು ಬದ್ಧವಾಗಿದೆ. ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ಮಕ್ಕಳ ನೈಜ ಪರಿಸ್ಥಿತಿ ಕುರಿತು ಅಧ್ಯಯನದಿಂದ ಅವಶ್ಯಕತೆ ಆಧಾರಿತ ಅಧ್ಯಯನದ ಅವಶ್ಯಕತೆ ಕಾಣುತ್ತದೆ. ಹಾಗಾಗಿ, ರಾಜ್ಯವು ಪ್ರಸ್ತುತ ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿರುವ, ಮಾರ್ಗೋಪಾಯಗಳು, ಚಟುವಟಿಕೆಗಳು, ಮಕ್ಕಳ ರಕ್ಷಣೆಗಾಗಿ ಇರುವ ತಂತ್ರಾಂಶಗಳನ್ನು ಗುರುತಿಸಲು, ಇಲಾಖೆ ಹಾಗೂ ಸರಕಾರೇತರ ಸಂಸ್ಥೆಗಳ ಪಾತ್ರ ಹಾಗೂ ಚಾಲ್ತಿಯಲ್ಲಿರುವ ಮಕ್ಕಳ ರಕ್ಷಣಾ ಕಾರ್ಯವಿಧಾನದ ಅಧ್ಯಯನ ಕೈಗೊಳ್ಳಲಾಗಿದೆ.

ಸಮಗ್ರ ಮಕ್ಕಳ ರಕ್ಷಣಾ ವ್ಯವಸ್ಥೆಯ ಉದ್ದೇಶ ಭಾರತದಾದ್ಯಂತ ಮಕ್ಕಳ ರಕ್ಷಣಾ ಸೇವೆಗಳ ಪ್ರಮುಖ ಪ್ರಕ್ರಿಯೆ ಹಾಗೂ ಕಾರ್ಯವಿಧಾನಗಳ ವಿವರಣೆ ನೀಡುವುದೇ ಆಗಿದೆ. ಮಕ್ಕಳ ರಕ್ಷಣೆ ಅಂದರೆ ಮಕ್ಕಳನ್ನು ಎದುರು ನೋಡಲಾದ ಅಥವಾ ನೈಜ್ಯ ಅಪಾಯ ಅಥವಾ ಬದುಕಿನ ಕಂಠಕಗಳ ಬಗ್ಗೆ ಆಗಿರುತ್ತದೆ. ತನ್ಮೂಲಕ ಆಕೆ/ಆತನ ಒಟ್ಟು ರಕ್ಷಣೆಯ ಖಾತ್ರಿಯೊಂದಿಗೆ ಮಕ್ಕಳಿಗೆ ಸೂಕ್ತ ವಾತಾವರಣ ನಿರ್ಮಿಸುವುದು ಮತ್ತು ಅವರ ವ್ಯಕ್ತಿತ್ವ, ಬಾಲ್ಯಕ್ಕೆ ಸೂಕ್ತ ವಾತಾವರಣ ನಿರ್ಮಿಸುವುದು ಮುಖ್ಯವಾಗುತ್ತದೆ. ಸರಕಾರ ಈ ಮಕ್ಕಳನ್ನು "ಸಮಸ್ಯೆಯಲ್ಲಿರುವಮಕ್ಕಳು" ಎಂದು ಗುರುತಿಸುತ್ತದೆ ಮತ್ತು ಅದು ನಿರ್ದಿಷ್ಟ ಸಾಮಾಜಿಕ, ಆರ್ಥಿಕ ಹಾಗೂ ಭೂ-ರಾಜಕೀಯ ಗುಣಗಳನ್ನು ಹೊಂದಿದೆ.

ಮಕ್ಕಳ ರಕ್ಷಣೆ ಹಾಗೂ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಲಭ್ಯವಿರುವ ಸಾಹಿತ್ಯವನ್ನು ವಿಶ್ಲೇಷಿಸಿದಾಗ ಈ ಪರಿಕಲ್ಪನೆಯು ೧೯೮೯ರ ನಂತರ ಜಾಗತಿಕ ಮಟ್ಟದಲ್ಲಿ ಹೆಚ್ಚು

ಚರ್ಚೆಗೆ ಒಳಪಟ್ಟ ವಿಷಯಗಳಲ್ಲೊಂದಾಗಿದೆ ಎಂದು ಹೇಳಬಹುದು. ವೇಗವಾಗಿ ಬದಲಾವಣೆಗೊಳ್ಳುತ್ತಿರುವ ಸಮಾಜ, ರಾಜಕೀಯ ವ್ಯವಸ್ಥೆಯಲ್ಲಿ "ರಕ್ಷಣೆ ಮತ್ತು ಅಭಿವೃದ್ಧಿಯ ಪರಿಕಲ್ಪನೆ" ವಿಶೇಷವಾದ ಮತ್ತು ಆಕರ್ಷಕವಾದ ಪದವೆನಿಸಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಲಭ್ಯವಿರುವ ಸಾಹಿತ್ಯವನ್ನು ಗಮನಿಸಿದಾಗ ವಿಶೇಷವಾದ ಆಶ್ಚರ್ಯಪಡುವ ಮತ್ತು ಇತರರನ್ನು ಒಪ್ಪಿಕೊಳ್ಳುವಂತೆ ಮಾಡುವ ದೃಷ್ಟಿಕೋನಗಳು ಮತ್ತು ಗೊಂದಲ ಮೂಡಿಸುವಂತಹ ಸಕಾರಾತ್ಮಕ ಅಭಿಪ್ರಾಯಗಳನ್ನು ಕಂಡುಕೊಳ್ಳಲಾಗಿದೆ.

**ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ**

**ಗುರಿಗಳು ಮತ್ತು ಮಕ್ಕಳ ರಕ್ಷಣೆ**

ಪ್ರಸ್ತುತ ದಿನಮಾನಗಳಲ್ಲಿ ವಿಶ್ವಸಂಸ್ಥೆಯ ಸಲಹೆಗಳಂತೆ ಸುಸ್ಥಿರ ಅಭಿವೃದ್ಧಿ ಗುರಿಗಳು ೨೦೧೬ರಿಂದ ಜಾರಿಗೆ ಬಂದಿದೆ. ೨೦೩೦ರೊಳಗೆ ಜನ, ಈ ಭೂಮಿ ಮತ್ತು ಎಲ್ಲರ ಸಮೃದ್ಧಿಗಾಗಿ ಸಮಾನವಾದ, ನ್ಯಾಯಯುತವಾದ ಮತ್ತು ಸುರಕ್ಷಿತವಾದ ಜಗತ್ತನ್ನು ನಿರ್ಮಿಸುವುದು ಇದರ ಗುರಿ. ಈ ಗುರಿಗಳನ್ನು ಜಗತ್ತಿನೆಲ್ಲೆಡೆಯ ಸರ್ಕಾರಗಳು, ನಾಗರೀಕರ ಸಲಹೆಗಳಿಂದ ವಿಶ್ವಸಂಸ್ಥೆ ಅಭಿವೃದ್ಧಿಪಡಿಸಿದೆ. ಇವುಗಳಲ್ಲಿ ಶಿಕ್ಷಣ, ಲಿಂಗಸಮಾನತೆ, ಮೂಲಭೂತ ಸೌಲಭ್ಯಗಳು ಇತ್ಯಾದಿ ವಿಚಾರಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯ ದೃಷ್ಟಿಕೋನವನ್ನು ನೀಡಲಾಗಿದೆ.

ಜಾಗತಿಕವಾಗಿ ಎಲ್ಲರನ್ನೂ ಒಳಗೊಂಡು ಅಭಿವೃದ್ಧಿ ಸಾಧಿಸಲು ಉದ್ದೇಶಿಸಿರುವ ಸುಸ್ಥಿರ ಅಭಿವೃದ್ಧಿ ಗುರಿಗಳು ಮಕ್ಕಳ ನ್ಯಾಯವನ್ನು ಕುರಿತು ಕೂಡಾ ಯೋಚಿಸಿದೆ. – ಈ ೧೭ ಗುರಿಗಳಲ್ಲಿ ಕೆಲವು ಗುರಿಗಳು ನೇರವಾಗಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಗೆ ಸಂಬಂಧಿಸಿವೆ. ಕೆಲವನ್ನು ಇಲ್ಲಿ ತಿಳಿಸಲಾಗಿದೆ.

**ಗುರಿ ೩: ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ:**

ಎಲ್ಲರಿಗೂ ಎಲ್ಲ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸಿ. ಅದರಲ್ಲಿ ಲಕ್ಷ್ಯ(೩.೫): ಭ್ರಮಾಕಾರಕ ಹಾಗೂ ಮಾದಕ ವಸ್ತುಗಳ ದುರುಪಯೋಗ ಮತ್ತು ಅಪಾಯಕಾರಿ ಪ್ರಮಾಣದ ಮದ್ಯ ಬಳಕೆಯೂ ಸೇರಿದಂತೆ ಮಾದಕ ವಸ್ತುಗಳ ದುರುಪಯೋಗ ತಡೆ ಚಿಕಿತ್ಸಾ ಕ್ರಮಗಳನ್ನು ಬಲಪಡಿಸಿ. ಇದು ನೇರವಾಗಿ ಮಕ್ಕಳಿಗೇ ಸಂಬಂಧಿಸಿದ್ದು.

**ಗುರಿ ೪. ಗುಣಮಟ್ಟದ ಶಿಕ್ಷಣ**

ಎಲ್ಲರಿಗೂ ಸಮನ್ವಯ ಮತ್ತು ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸಿ ಎಂದು ಈ ಗುರಿ ತಿಳಿಸಿದೆ. ಲಕ್ಷ್ಯ ೪:೧:೨೦೩೦ರೊಳಗೆ, ಎಲ್ಲಾ ಬಾಲಕರು ಮತ್ತು ಬಾಲಕಿಯರು ಸೂಕ್ತ ಪರಿಣಾಮಕಾರಿ ಕಲಿಕೆಯ ಫಲಿತಾಂಶಗಳನ್ನು ನೀಡಬಲ್ಲ ಉಚಿತ, ಸಮಾನ ಮತ್ತು ಗುಣಮಟ್ಟದ ಪ್ರಾಥಮಿಕ ಹಾಗೂ ಪೌಢಶಿಕ್ಷಣವನ್ನು ಪೂರೈಸುವದನ್ನು ಖಾತ್ರಿಪಡಿಸಿ, ಲಕ್ಷ್ಯ ೪.೨: ೨೦೩೦ರೊಳಗೆ, ಎಲ್ಲಾ ಬಾಲಕರು ಮತ್ತು ಬಾಲಕಿಯರಿಗೆ ಗುಣಮಟ್ಟದ ಬಾಲ್ಯಾರಂಭದ ಅಭಿವೃದ್ಧಿ, ಪೋಷಣೆ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಜ್ಜುಗೊಳಿಸುವ ಪ್ರಾಥಮಿಕ ಪೂರ್ವ ಶಿಕ್ಷಣ ಲಭ್ಯವಾಗುವುದನ್ನು ಖಾತ್ರಿಗೊಳಿಸಿ. ೪.೭ಎ: ಮಕ್ಕಳು, ಅಂಗವಿಕಲರು ಮತ್ತು ಎಲ್ಲ ಲಿಂಗಿಗಳನ್ನು ಕುರಿತು ಸಂವೇದನೆಯುಳ್ಳ ಶೈಕ್ಷಣಿಕ ಸೌಲಭ್ಯಗಳನ್ನು ನಿರ್ಮಿಸುವುದು ಮತ್ತು ಉನ್ನತೀಕರಣಗೊಳಸುವುದು ಹಾಗೂ ಎಲ್ಲರಿಗೂ ಸುರಕ್ಷಿತ, ಅಹಿಂಸಾಪರ, ಸಮನ್ವಯ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಒದಗಿಸುವುದು.

**ಗುರಿ ೫. ಲಿಂಗ ಸಮಾನತೆ:**

ಲಿಂಗ ಸಮಾನತೆಯನ್ನು ಸಾಧಿಸಿ ಮತ್ತು ಮಹಿಳೆಯರು ಹಾಗೂ ಹೆಣ್ಣುಮಕ್ಕಳನ್ನು ಸಶಕ್ತರನ್ನಾಗಿಸಿ, ಅದರಲ್ಲಿನ ಲಕ್ಷ್ಯ(೫.೧) ಎಲ್ಲಾ ಮಹಿಳೆಯರು ಮತ್ತು ಹೆಣ್ಣಮಕ್ಕಳ ವಿರುದ್ಧದ ಎಲ್ಲಾ ವಿಧವಾದ ತಾರತಮ್ಯವನ್ನು ಎಲ್ಲೇಡೆ ಕೊನೆಗೊಳಿಸಿ ಮತ್ತು (೫.೨) ಮಾನವ ಕಳ್ಳಸಾಗಣೆ ಮತ್ತು ಲೈಂಗಿಕ ಹಾಗೂ ಇತರ ಎಲ್ಲ ರೀತಿಯ ಶೋಷಣೆಗಳೂ ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಎಲ್ಲಾ ಮಹಿಳೆಯರು ಮತ್ತು ಹೆಣ್ಣುಮಕ್ಕಳ ವಿರುದ್ಧದ ಎಲ್ಲಾ ವಿಧವಾದ ದೌರ್ಜನ್ಯಗಳನ್ನು ತೊಡೆದುಹಾಕಿ. ಹೆಣ್ಣುಮಕ್ಕಳ ವಿರುದ್ಧ ನಡೆಯುವ ಅಪರಾಧಗಳನ್ನು ತೊಡೆದು ಹಾಕಲು ಲಿಂಗಸಮಾನತೆಯ ವಿಚಾರ ಬಹಳ ಮುಖ್ಯವಾಗಿದ್ದು ಈ ಕುರಿತು ಗುರಿ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ.

**ಗುರಿ ೧೧. ಸುಸ್ಥಿರ ನಗರಗಳು ಮತ್ತು ಸಮುದಾಯಗಳು:**

ನಗರಗಳನ್ನು ಮತ್ತು ಜನವಸತಿ ಪ್ರದೇಶಗಳನ್ನು ಸಮನ್ವಯ ಸುರಕ್ಷಿತ, ಸದೃಢ ಮತ್ತು ಸುಸ್ಥಿರಗೊಳಿಸಿ. ಇದು ನಗರಗಳು ಎಂದಿದ್ದರೂ ಎಲ್ಲ ಜನವಸತಿಗಳು ಎಂಬ ಅರ್ಥದಲ್ಲಿ ನೋಡಬೇಕಿದೆ. ಬಹಳ ಮುಖ್ಯವಾಗಿ ಬಹುತೇಕ ಎಲ್ಲ ನಗರಗಳಲ್ಲಿ ಈಗ ವಸತಿ ಇಲ್ಲದ ಲಕ್ಷಾಂತರ ಜನ ಕೊಳೆಗೇರಿಗಳಲ್ಲಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ

ವಾಸಿಸುತ್ತಿದ್ದಾರೆ. ಇಂತಹ ಸನ್ನಿವೇಶಗಳಲ್ಲಿ ಮಕ್ಕಳು ಬಹಳ ಸುಲಭವಾಗಿ ಕಾನೂನು ಸಂಘರ್ಷಕ್ಕೆ ಬೀಳುವುದು ಅಥವಾ ವಿವಿಧ ರೀತಿಯ ಶೋಷಣೆ, ಹಿಂಸೆ, ತೊಂದರೆಗಳಿಗೆ ಒಳಗಾಗುವುದು ಸಹಜವೇ ಅನ್ನುವಷ್ಟು ಸಾಮಾನ್ಯವಾಗಿಬಿಟ್ಟಿದೆ. ಇವುಗಳನ್ನು ತಪ್ಪಿಸಲೇಬೇಕಿದೆ. ವಲಸೆ, ಉದ್ಯೋಗ ಅರಸಿ ಬಂದಂತಹ ಕುಟುಂಬಗಳ ಜೊತೆ ಮಕ್ಕಳು ಬರುವುದರಿಂದ ಅನೇಕ ಮೂಲಭೂತ ಅವಶ್ಯಕತೆಗಳು ಇಲ್ಲದ ಪರಿಸ್ಥಿತಿಯಲ್ಲಿ ಮಕ್ಕಳು ಇರುತ್ತಾರೆ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಗುರಿ ವಿಚಾರ ನಡೆಸಿದೆ.

**ಗುರಿ ೧೬. ಶಾಂತಿ, ನ್ಯಾಯ ದೃಢ ಸಂಸ್ಥೆಗಳು:**

ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಸಮನ್ವಯ ಸಮಾಜಗಳನ್ನು ಉತ್ತೇಜಿಸಿ, ಎಲ್ಲರಿಗೂ ನ್ಯಾಯದ ಲಭ್ಯತೆಯನ್ನು ಒದಗಿಸಿ, ಎಲ್ಲಾ ಹಂತಗಳಲ್ಲೂ ಪರಿಣಾಮಕಾರಿ, ಉತ್ತರದಾಯಿತ್ವ ಮತ್ತು ಸಮನ್ವಯತೆಯಿರುವ ಸಂಸ್ಥೆಗಳನ್ನು ನಿರ್ಮಿಸಿ ಎಂದು ಹೇಳಿದೆ. ಮುಂದುವರೆದು ೧೬.೩ರಲ್ಲಿರುವ

ಲಕ್ಷ್ಯ: ರಾಷ್ಟ್ರೀಯ ಮತ್ತು ಅಂತಾರಷ್ಟ್ರೀಯ ಮಟ್ಟಗಳಲ್ಲಿ ನ್ಯಾಯ ಪರಿಪಾಲನೆಯನ್ನು ಉತ್ತೇಜಿಸಿ ಮತ್ತು ಎಲ್ಲರಿಗೂ ನ್ಯಾಯದ ಲಭ್ಯತೆಯು ಸಮಾನವಾಗಿರುವುದನ್ನು ಖಾತ್ರಿಪಡಿಸಿ: ಮಕ್ಕಳಿಗೆ ಅವರ ಹಕ್ಕುಗಳು ನ್ಯಾಯಯುತವಾಗಿ ದೊರಕಬೇಕೆಂದರೆ, ಅದಕ್ಕೆ ಅರ್ಥ ಇರಬೇಕೆಂದರೆ, ಬಹಳ ಮುಖ್ಯವಾಗಿ ಮಕ್ಕಳ ಮೇಲೆ ಯಾವುದೇ ರೀತಿಯ ಅನ್ಯಾಯ, ಹಕ್ಕುಗಳ ಉಲ್ಲಂಘನೆ ಆಗಬಾರದು. ೧೬.೨ರಲ್ಲಿರುವ ಲಕ್ಷ್ಯ: ಮಕ್ಕಳ ದುರುಪಯೋಗ, ಶೋಷಣೆ, ಕಳ್ಳಸಾಗಣೆ ಮತ್ತು ಎಲ್ಲಾ ವಿಧವಾದ ದೌರ್ಜನ್ಯ ಮತ್ತು ಹಿಂಸೆಯನ್ನು ಕೊನೆಗಾಣಿಸಿ, ಇದನ್ನು ಗಮನಿಸಲು ನೀಡಿರುವ ಸೂಚಕ ಈ ಮುಂದಿನಂತಿದೆ: (೧೬.೨.೧) ೧ ರಿಂದ ೧೭ ವರ್ಷದ ಮಕ್ಕಳು ಕಳೆದ ೧೨ ತಿಂಗಳಲ್ಲಿ ತಮ್ಮ ಶೋಷಣೆ ಮಾಡುವ ಜವಾಬುದಾರಿಯಿರುವವರಿಂದ ಯಾವುದೇ ರೀತಿಯ ದೈಹಿಕ ಶಿಕ್ಷೆ ಮತ್ತು ಮಾನಸಿಕ ಆಕ್ರಮಣ. ಕ್ಷೋಭೆ ಅನುಭವಿಸಿದ ಪ್ರಮಾಣ ೧೬.೨.೨) ಲಿಂಗ, ವಯಸ್ಸು ಮತ್ತು ಅವರು ಅನುಭವಿಸಿದ ಶೋಷಣೆಯ ರೀತಿಯಂತೆ, ಪ್ರತಿ ೧ ಲಕ್ಷ ಜನಸಂಖ್ಯೆಯಲ್ಲಿ ಮಾನವ ಕಳ್ಳಸಾಗಣಿಕೆಗೆ ಗುರಿಯಾದ ಜನಸಂಖ್ಯೆ ಈ ಪ್ರಮಾಣ ಗಮನಿಸಿ ಶೋಷಣೆ ತಪ್ಪಿಸಲು ಇರುವ ಸೂಕ್ತ ಕ್ರಮಗಳನ್ನು ಅನುಷ್ಠಾನ ಸೂಕ್ತವಾಗಿ ಆಗಲೇಬೇಕು.

ಸ್ವಾತಂತ್ರ್ಯಹಿತವಾದ ಮಕ್ಕಳು(ಅದರಲ್ಲೂ ಕಾನೂನಿನ ನಿರ್ದೇಶನದಂತೆ ಅರ್ಹ ಸಂಸ್ಥೆಗಳಲ್ಲಿ ಇರಬೇಕಾದ ಮಕ್ಕಳು) ಹೆಚ್ಚು ಹೆಚ್ಚು ದುರುಪಯೋಗ, ಹಿಂಸೆ, ಸಾಮಾಜಿಕ

ತಾರತಮ್ಯ ಎದುರಿಸುತ್ತಾರೆ ಮತ್ತು ಅವರ ಸ್ವಾತಂತ್ರ್ಯ ಹರಣವಾಗುತ್ತಿರುತ್ತದೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ ಅಲ್ಲಿನ ಸಿಬ್ಬಂದಿಗೆ ಸೂಕ್ತ ಶೈಕ್ಷಣಿಕ ಅರ್ಹತೆ, ತರಬೇತಿ, ಮಕ್ಕಳ ಹಕ್ಕುಗಳ ಸೂಕ್ಷ್ಮತೆ ಇಲ್ಲದಿರುವುದರಿಂದ ಬಹಳಷ್ಟು ಬಾರಿ ಬೇರೆ ರಾಜ್ಯ/ದೇಶಗಳಿಗೆ ಸೇರಿದ ಮಕ್ಕಳನ್ನು ನಿಲಯಗಳಲ್ಲಿ ದೀರ್ಘಕಾಲ ಇರಿಸಿಕೊಳ್ಳುವುದು ಕೂಡಾ ಮಕ್ಕಳ ಮೇಲೆ ದೌರ್ಜನ್ಯವೆಸಗಿದಂತೆಯೇ ಆಗುತ್ತದೆ. ಸಂಸ್ಥೆಗಳು ತಮ್ಮ ಹಿತಾಸಕ್ತಿಗೆ ಮಕ್ಕಳನ್ನು ಅವರ ಮೂಲನೆಲೆಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಲೇಬೇಕು. ಮಕ್ಕಳ ಅಧ್ಯಯನ, ಮಕ್ಕಳ ಕೌಟುಂಬಿಕ ಅಧ್ಯಯನ ಮಾಡಲು ತರಬೇತಿ ಹೊಂದಿರುವ ಜನರಿಲ್ಲದಿರುವುದು, ಮಕ್ಕಳ ಹಕ್ಕುಗಳು, ಮಕ್ಕಳ ನ್ಯಾಯ ಕುರಿತು ಕಾನೂನು ಅರಿವು ಕೊಡುವವರಿಲ್ಲದಿರುವುದು ಹಾಗೂ ಮಕ್ಕಳನ್ನು ಅವರವರ ಸ್ಥಳಗಳಿಗೆ ಒಯ್ಯಲು ಬೇಕಾದ ಸಿಬ್ಬಂದಿ ಮತ್ತು ಪೋಲೀಸ್ ಬೆಂಗಾವಲು ಇಲ್ಲದಿರುವುದರಿಂದ ಮಕ್ಕಳು ದೀರ್ಘಕಾಲ ನಿಲಯಗಳಲ್ಲೇ ಕೊಳೆಯುವಂತಹ ಪರಿಸ್ಥಿತಿ ಉಂಟಾಗದಂತೆ ಸರ್ಕಾರಿ ಮತ್ತು ಸರ್ಕಾರೇತರ ಅರ್ಹ ಸಂಸ್ಥೆಗಳ ನಿರ್ವಾಹಕರು ಎಚ್ಚರಿಕೆ ವಹಿಸಬೇಕಾಗಿದೆ.

**ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳು**

ಶೋಷಣೆಗೊಳಗಾದ ಬಹಳಷ್ಟು ಮಕ್ಕಳು ನಮ್ಮ ಸುತ್ತ ಮುತ್ತಲಿದ್ದಾರೆ. ಅವರಿಗೆ ರಕ್ಷಣೆ ಮತ್ತು ಪೋಷಣೆಯ ತೀರಾ ಅವಶ್ಯಕತೆ ಇದೆ. ಅಂತಹ ಮಕ್ಕಳು ನಮ್ಮ ಆಸುಪಾಸಲ್ಲಿ ಇದ್ದರೂ ನಾವು ಆ ಕಡೆಯಲ್ಲಿ ಗಮನ ಕೇಂದ್ರೀಕರಿಸಿಲ್ಲ. ಈ ಮಕ್ಕಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ,

**ಬಾಲ ಕಾರ್ಮಿಕರು:** ಬಾಲನ್ಯಾಯ ಕಾಯ್ದೆ ಪ್ರಕಾರ ೧೮ ವರ್ಷದೊಳಗಿನ ಎಲ್ಲರೂ ಮಕ್ಕಳು ಎಂದು ಪರಿಗಣಿಸಲ್ಪಟ್ಟಿದ್ದಾರೆ. ಹಾಗಾಗಿ ೧೮ ವರ್ಷದೊಳಗಿನ ಎಲ್ಲಾ ದುಡಿಯುವ ಮಕ್ಕಳು ಬಾಲಕಾರ್ಮಿಕರೆನಿಸಿಕೊಳ್ಳುತ್ತಾರೆ. ೧೯೮೬ರ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ೧೪ ವರ್ಷದೊಳಗಿನ ಮಕ್ಕಳಿಗೆ ಸೀಮಿತವಾಗಿತ್ತು. ಕಟ್ಟಡ ನಿರ್ಮಾಣ, ಕಲ್ಲು ಕೋರೆ, ಹೋಟೇಲ್, ಇಟ್ಟಿಗೆ ತಯಾರಿಕೆ, ಬೀಡಿ, ಅಗರಬತ್ತಿ, ಬೀದಿ ಬದಿಯ ಅಂಗಡಿಗಳು, ಗ್ಯಾರೇಜ್, ಮೀನುಗಾರಿಕೆ ತೋಟದ ಕೆಲಸ, ಕೃಷಿಕೆಲಸ ಇತ್ಯಾದಿ. ಕೃಷಿಸಂಬಂಧಿ ಕೆಲಸದಲ್ಲಿ ಹಾಗೂ ಮನೆಕೆಲಸದಲ್ಲಿರುವ ಮಕ್ಕಳ ಸಂಖ್ಯೆ ದಾಖಲಾಗಿಲ್ಲ. ಏಕೆಂದರೆ ಹೆಸರು ಮಾತ್ರಕ್ಕೆ ಅವರು ಶಾಲೆಗಳಲ್ಲಿ ದಾಖಲಿಸಲ್ಪಟ್ಟಿದ್ದಾರೆ. ನಿಗದಿತ ಕಾಲದಲ್ಲಿ ಮಾತ್ರವಿರುವ ಈ ಕೆಲಸಗಳಲ್ಲಿ ಇರುವ ಮಕ್ಕಳು ಶೋಷಣೆಗೆ ಒಳಗಾಗುತ್ತಾರೆ. ಮನೆಕೆಲಸ

ಹಾಗೂ ಹೊಲ-ಗದ್ದೆಗಳಲ್ಲಿ ದುಡಿಯುವ ಮಕ್ಕಳಲ್ಲಿ ಹೆಣ್ಣುಮಕ್ಕಳ ಸಂಖ್ಯೆಯೇ ಹೆಚ್ಚು. ಮನೆಕೆಲಸದಲ್ಲಿ ದುಡಿಯುವ ಮಕ್ಕಳ ದುಡಿಮೆಯನ್ನು ೨೦೦೬ ಅಕ್ಟೋಬರ್‌ನಿಂದ ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿದೆ.

**ಬೀದಿ ಮಕ್ಕಳು:** ಸಾಕಷ್ಟು ಬಾರಿ ಬೀದಿಗಳಲ್ಲಿ ಗುಂಪು ಗುಂಪಾಗಿ ಸುತ್ತುವ ಮಕ್ಕಳನ್ನು ನಾವು ನೋಡುತ್ತಿರುತ್ತೇವೆ. ನಿರ್ಲಕ್ಷಕ್ಕೊಳಗಾದ ಈ ಮಕ್ಕಳು ಎಲ್ಲೆಂದರಲ್ಲಿ ತಿನ್ನುವುದು, ಮಲಗುವುದು, ನೋಡುತ್ತೇವೆ. ಇಂತಹ ಬಹಳಷ್ಟು ಮಕ್ಕಳು ಮಾದಕ ದ್ರವ್ಯಕ್ಕೆ ಮಾರುಹೋಗಿರುತ್ತಾರೆ. ಸೈಕಲ್ ಪಂಕ್ಚರ್, ಇರೇಸೆಕ್ಸ್ ನಂತಹ ರಾಸಾಯನಿಕ ಸೊಲ್ಯುಷನ್ ಗಳ ವಾಸನೆಯಿಂದ ನಶೆಯಲ್ಲಿರುತ್ತಾರೆ. ಕೆಲವೊಮ್ಮೆ ದುಡಿತಕ್ಕೆ ಅಡಚಣೆಯಿದ್ದಾಗ ಕಳ್ಳತನಕ್ಕೂ ಮುಂದಾಗುತ್ತಾರೆ. ಬೇರೆ ಬೇರೆ ಕಾರಣಗಳಿಗೆ ಮನೆಯಿಂದ ಹೊರಬಂದು ದೂರದ ಪಟ್ಟಣ ಪ್ರದೇಶಗಳಲ್ಲಿ ಇವರು ಬದುಕು ಕಳೆದುಕೊಳ್ಳುತ್ತಿರುತ್ತಾರೆ. ತಂದೆ ತಾಯಿ ಗಳಿದ್ದರೂ ನಿರ್ಲಕ್ಷಕ್ಕೊಳಗಾಗಿ ಶಾಲೆ ತೊರೆದು ಎಳವೆಯಲ್ಲಿಯೇ ನೋವಿನ ಬದುಕಿಗೆ ಬಾಜನರಾಗುತ್ತಾರೆ.

**ಅನಾಥ ಮಕ್ಕಳು:** ಬಹಳಷ್ಟು ಮಕ್ಕಳು ಹುಟ್ಟುತ್ತಲೇ ತಂದೆ-ತಾಯಿಯರ ಭದ್ರ ರಕ್ಷೆಯಿಂದ ಹೊರಬಿದ್ದಿರುತ್ತಾರೆ. ಕೆಲವು ಮಕ್ಕಳು ಸಾಗಣೆ ಮತ್ತು ಮಾರಾಟಕ್ಕೆ ಒಳಗಾಗುತ್ತಾರೆ. ತಂದೆ-ತಾಯಿಯ ಮರಣದಿಂದಲೂ ಮಕ್ಕಳು ಅನಾಥರಾಗಿರಬಹುದು. ಸೂಕ್ತ ಮಾರ್ಗದರ್ಶನವಿಲ್ಲದೆ ಯದ್ವಾತದ್ವ ಬದುಕಿ ಅನಾಥರೆನಿಸಿಕೊಳ್ಳುತ್ತಾರೆ. ಶಿಕ್ಷಣ ಹಾಗೂ ರಕ್ಷಣೆಯಿಂದ ವಂಚಿತರಾಗುತ್ತಾರೆ. ಇಂತಹ ಮಕ್ಕಳಿಗೆ ಪೋಷಣೆ ಮತ್ತು ರಕ್ಷಣೆಯ ತೀರಾ ಅವಶ್ಯಕತೆ ಇದೆ.

**ಅವಮಾನ / ಕಿರುಕುಳ ಅನುಭವಿಸಿದ ಮಕ್ಕಳು:** ಕೆಲವು ಮಕ್ಕಳು ಸಮಾಜದಲ್ಲಿ ಬಹುಮುಖ್ಯವಾಗಿ ಮನೆ ಶಾಲೆ ಹಾಗೂ ಸಮುದಾಯದಲ್ಲಿ ನಿರಂತರ ಅವಮಾನಕ್ಕೆ ಒಳಗಾಗುತ್ತಾರೆ. ತಮ್ಮದಲ್ಲದ ತಪ್ಪಿಗೆ ಕಿರುಕುಳಕ್ಕೆ ಒಳಗಾಗುತ್ತಾರೆ. ತಮ್ಮವರಿಂದಲೇ ಕಿರುಕುಳಕ್ಕೊಳಗಾಗಿ ಅಂತರ್ಮುಖಿಗಳಾಗುತ್ತಾರೆ. ಇವರು ಎಲ್ಲಾ ಮಕ್ಕಳಿಗಿಂತ ಬಿನ್ನವಾಗಿ ಆಲೋಚಿಸುತ್ತಾರೆ. ಇಂತಹ ಮಕ್ಕಳಿಗೆ ರಕ್ಷಣೆ ಹಾಗೂ ಪೋಷಣೆಯ ಅವಶ್ಯಕತೆ ಇರುತ್ತದೆ.

**ಕಾಣೆಯಾದ / ತಪ್ಪಿಸಿಕೊಂಡ ಮಕ್ಕಳು:** ಕೆಲವೊಮ್ಮೆ ಮಕ್ಕಳು ತಮಗೆ ಬೇಕಾದ ಗಮನ, ಆರೈಕೆ ಮನೆಯಲ್ಲಿ ಸಿಗದಾಗ ನಿರಾಸೆಗೊಂಡು ಮನೆಯಿಂದ ಓಡಿಹೋಗುತ್ತಾರೆ.

ಹಬ್ಬ ಜಾತ್ರೆಗಳಲ್ಲಿ, ರೈಲು ನಿಲ್ದಾಣ ಬಸ್ ನಿಲ್ದಾಣಗಳಲ್ಲಿ ಕೈತಪ್ಪಿಸಿಕೊಂಡಿರುತ್ತಾರೆ. ವ್ಯವಸ್ಥೆಗಳ ಅರಿವು ಇಲ್ಲದೆ ಪೋಷಕರು ಅಲ್ಲಿಲ್ಲಿ ಹುಡುಕಿ ಸಿಗದಾಗ ನಿರಾಶರಾಗುತ್ತಾರೆ. ಇಂತಹ ಮಕ್ಕಳು ಶೋಷಣೆಗೆ ಒಳಗಾಗುವ ಸಾಧ್ಯತೆಗಳಿವೆ.

**ಲೈಂಗಿಕ ದೌರ್ಜನ್ಯ ಮತ್ತು ಸಾಗಾಣಿಕೆಗೆ ಒಳಗಾದ ಮಕ್ಕಳು:** ಕೆಲವು ಮಕ್ಕಳು ಅಸಹಾಯಕ ಪರಿಸ್ಥಿತಿಯಲ್ಲಿ ಇರುವುದನ್ನು ಗಮನಿಸುವವರು ತಮ್ಮ ಲೈಂಗಿಕ ತೃಷೆ ತೀರಿಸಿಕೊಳ್ಳಲು ಉಪಯೋಗಿಸುವುದನ್ನು ಕಾಣುತ್ತೇವೆ. ಬೇರೆ ಬೇರೆ ಕಾರಣಗಳಿಂದಾಗಿ ಕುಟುಂಬ ವ್ಯವಸ್ಥೆಯಿಂದ ಹೊರಗುಳಿಯುವ ಮಕ್ಕಳು ಬೇರೆ ಊರುಗಳಿಗೆ ಕಳಿಸಲ್ಪಟ್ಟು ಈ ಬೇರ್ಪಡುವಿಕೆ ಅವರನ್ನು ಅತಂತ್ರವಾಗಿಸುತ್ತದೆ. ತಮ್ಮ ಹಕ್ಕುಗಳ ಅರಿವಿರದ ಇಂತಹ ಮಕ್ಕಳು ನೋವಿನಬದುಕು ಒಪ್ಪಿಕೊಂಡು ಬದುಕಬೇಕಾದ ಪರಿಸ್ಥಿತಿ ಉಂಟಾಗುತ್ತದೆ.

**ಮಾದಕ ದ್ರವ್ಯ ವ್ಯಸನಿಗಳು:** ಚಿಕ್ಕ ವಯಸ್ಸಿನಲ್ಲೇ ನಿರ್ಲಕ್ಷಕ್ಕೆ ಒಳಪಟ್ಟು ಮಕ್ಕಳು ಕೆಟ್ಟ ಸಹವಾಸಗಳಿಂದಾಗಿ ಮಾದಕ ವ್ಯಸನಿಗಳಾಗುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಮಾದಕ ವಸ್ತುಗಳ ಸಾಗಣೆಗೂ ಈ ಮುಗ್ದ ಮಕ್ಕಳನ್ನು ಬಳಸಿಕೊಳ್ಳಲಾಗುತ್ತದೆ. ತಮಗೇ ಅರಿವಿಲ್ಲದಂತೆ ಅವರು ತಪ್ಪು ಕೆಲಸಮಾಡಿ ಕಾನೂನಿನ ಸಂಘರ್ಷಕ್ಕೆ ಒಳಗಾಗುತ್ತಾರೆ. ಮಾದಕತೆಯ ನಂಟಿನಿಂದ ದೂರವಾಗುವ ಯಾವುದೇ ಸಹಾಯ ಒದಗಿಬರದೆ ಬದುಕು ದುಸ್ತರವಾಗುತ್ತದೆ. ಇಂತಹ ಮಕ್ಕಳಿಗೆ ರಕ್ಷಣೆ ಮತ್ತು ಪುನರ್ಬಸತಿಯ ಅವಶ್ಯಕತೆ ಇದೆ.

**ಸಂಘರ್ಷ ಮತ್ತು ದುರಂತಗಳಲ್ಲಿ ಸಿಲುಕಿದವರು:** ಒಟ್ಟು ಸಮಾಜದಲ್ಲಿ ಹೆಚ್ಚುತ್ತಿರುವ ಜಾತಿ, ಧರ್ಮಗಳ ಅಂತರದಿಂದಾಗಿ ವಿವಿಧ ಕೋಮುಗಳ ನಡುವೆ ಜಾತಿಗಳ ಮದ್ಯೆ, ಸಮುದಾಯಗಳ ನಡುವೆ ಸಂಘರ್ಷಗಳು, ಹೊಡೆದಾಟದ ಪರಿಸ್ಥಿತಿಗಳು ಆಗಾಗ ಒದಗಿ ಬರುತ್ತವೆ. ವೈಚಾರಿಕತೆಯ ಕೊರತೆಯಿಂದ ತಪ್ಪು ತಿಳುವಳಿಕೆಯಿಂದ ಉಂಟಾಗುವ ಗಲಭೆಗಳಿಂದ ಮಕ್ಕಳು ಸಂಕಷ್ಟಕ್ಕೆ ಬೀಳುತ್ತಾರೆ. ಬಹಳಷ್ಟು ಬಾರಿ ನೈಸರ್ಗಿಕ ಅನಾಹುತಗಳಾದ ಬರ, ಪ್ರವಾಹ, ಭೂಕಂಪ, ಸ್ಫೋಟ, ಅನಿಲ ಸೋರುವಿಕೆಯಂತಹಾ ದುರಂತಗಳಲ್ಲಿ ಕುಟುಂಬಗಳು ನಲುಗುತ್ತವೆ, ಸಾವು ನೋವುಗಳು ಸಂಭವಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ತೊಂದರೆ ಅನುಭವಿಸುವುದು ಹೆಚ್ಚಾಗಿ ಮಕ್ಕಳು. ಇಂತಹ ಭಯಂಕರ ಪರಿಸ್ಥಿತಿಗಳಿಗೆ ಪ್ರತ್ಯಕ್ಷ ಸಾಕ್ಷಿಗಳಾಗುವ ಮಕ್ಕಳು ಆತಂಕದಿಂದ ಮಾನಸಿಕ ಆಘಾತಗಳಿಗೆ ಒಳಗಾಗುತ್ತಾರೆ. ಇಂತಹ ಮಕ್ಕಳಿಗೆ ಸುರಕ್ಷತೆ ಮತ್ತು ಪೋಷಣೆಯ ಅವಶ್ಯಕತೆ ಇರುತ್ತದೆ.

**ಸಂಕಷ್ಟಕ್ಕೆ ಸಿಲುಕಿದ ಕುಟುಂಬದ ಮಕ್ಕಳು:** ಬಹಳಷ್ಟು ಕುಟುಂಬದ ಜವಾಬ್ದಾರಿಯುತ ಸದಸ್ಯರು ಮಾರಣಾಂತಿಕ ಕಾಯಿಲೆಗಳಿಗೆ ಬಲಿಯಾಗಿ ತಮ್ಮ ಕುಟುಂಬಕ್ಕೆ ಸೂಕ್ತ ಗಮನ ನೀಡಲಾಗದೆ ಇರುತ್ತಾರೆ. ಉದಾಹರಣೆಗೆ ಎಚ್.ಐ.ವಿ. ಪೀಡಿತರ ಕುಟುಂಬ. ಇಂತಹ ಮಕ್ಕಳಿಗೆ ತಮ್ಮ ಹಕ್ಕುಗಳನ್ನು ಅನುಭವಿಸಲು ತಾತ್ಸಾರವಾಗುತ್ತದೆ. ಇಂತಹ ಕುಟುಂಬಗಳಲ್ಲಿರುವ ಮಕ್ಕಳಿಗೆ ವಿಶೇಷವಾದ ಪುನರ್ವಸತಿಯ ಅವಶ್ಯಕತೆ ಇದೆ.

**ವಿಶೇಷ ಸಾಮರ್ಥ್ಯವಿರುವ ಮಕ್ಕಳು:** ಕೆಲವೊಂದು ಮಕ್ಕಳು ದೈಹಿಕ ಮಾನಸಿಕ ಹಾಗೂ ಭಾವನಾತ್ಮಕವಾಗಿ ಸಾಮಾನ್ಯ ಮಕ್ಕಳಂತಿರುವುದಿಲ್ಲ. ಅವರು ವಿಶೇಷ ಸಾಮರ್ಥ್ಯವನ್ನು ಹೊಂದಿರುತ್ತಾರಾದರೂ ವಿಶೇಷವಾದ ಗಮನ ಅವರಿಗಿ ನೀಡುವುದು ಅವಶ್ಯವಿರುತ್ತದೆ. ಸೂಕ್ತವಾದ ಸಮಯದಲ್ಲಿ ಸರಿಯಾದ ಪುನರ್ವಸತಿ ದೊರೆತರೆ ಅವರು ತಮ್ಮ ವಿಶೇಷ ಸಾಮರ್ಥ್ಯವನ್ನು ಹೊರತರಲು ಸಾಧ್ಯವಾಗುತ್ತದೆ. ಈ ರೀತಿಯ ನ್ಯೂನತೆ ಅವರಿಗೆ ಶಾಪವಲ್ಲ ಅವರಿಗೆ ನಿಂದಿಸಿ ಹೀಯಾಳಿಸುವುದನ್ನು ಬಿಟ್ಟು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಅವರಿಗೆ ಸಹಕರಿಸುವ ಅವಶ್ಯಕತೆ ಇದೆ.

**ಮಾನಸಿಕ ತೊಂದರೆಗೊಳಗಾದ ಮಕ್ಕಳು:** ಬಾಲ್ಯದಿಂದಲೇ ನಿಂದನೆ ಜಗಳ ಮನಸ್ತಾಪದ ವಾತಾವರಣದಲ್ಲಿ ಬೆಳೆಯುವ ಮಕ್ಕಳು ಮಾನಸಿಕವಾಗಿ ಖಿನ್ನತೆಯಂತಹಾ ಸಮಸ್ಯೆಗಳಿಗೆ ಒಳಗಾಗಿರುತ್ತಾರೆ, ಕೆಲವೊಮ್ಮೆ ಕೊಲೆ, ಅತ್ಯಾಚಾರದಂತಹಾ ವಾತಾವರಣದಲ್ಲಿ ಆಘಾತಕ್ಕೆ ಒಳಗಾಗಬೇಕಾಗಿಬಂದಾಗ ಮಕ್ಕಳು ಸಹಾಯ ರಕ್ಷಣೆ ಪೋಷಣೆಯ ಅವಶ್ಯಕತೆಗೆ ಬೀಳುತ್ತಾರೆ.

**ಎಚ್.ಐ.ವಿ ಸೋಂಕಿತ ಮತ್ತು ಬಾಧಿತ ಮಕ್ಕಳು:** ಸುಮಾರು ಕಳೆದ ೨೫ ವರ್ಷ ಗಳಿಂದೀಚೆಗೆ ಎಚ್.ಐ.ವಿ. ಸೋಕಿಗೆ ಬಲಿಯಾದ ವ್ಯಕ್ತಿಗಳ ಸಂಖ್ಯೆ ಬಹಳಷ್ಟು ಹೆಚ್ಚಾಗಿದೆ. ತಮ್ಮದಲ್ಲದ ತಪ್ಪಿಗೆ ಈ ಮಾರಕ ರೋಗಕ್ಕೆ ಬಲಿಯಾದ ಮಕ್ಕಳು ಸೋಂಕಿನಿಂದಾಗಿ ತಮ್ಮ ಸ್ವಾಸ್ಥ್ಯ ಕಳಕೊಂಡು ಸಮಸ್ಯೆಗೆ ಬೀಳುತ್ತಾರೆ. ಈ ಪೀಡೆಗೆ ಒಳಗಾದ ಕುಟುಂಬಗಳು ತಮ್ಮ ಮಕ್ಕಳಿಗೆ ಅವರ ಮೂಲ ಅವಶ್ಯಕತೆಗಳನ್ನು, ಪೂರೈಸಲು ಸೋಲುತ್ತಾರೆ ಹಾಗಾಗಿ ಇಂತಹಮಕ್ಕಳಿಗೆ ರಕ್ಷಣೆ ಪೋಷಣೆಯ ಅವಶ್ಯಕತೆ ಇದೆ.

**ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳು:** ಕೆಲವೊಮ್ಮೆ ಮಕ್ಕಳು ತಮ್ಮ ಅರಿವಿಗೆ ಬಾರದೆ ಜಗಳ ದೊಂಬಿ, ಕೊಲೆ, ಅತ್ಯಾಚಾರದಂತಹ ಕ್ರೌರ್ಯ ಎಸಗಿ ಸಮಸ್ಯೆಗೆ ಬೀಳುತ್ತಾರೆ. ಇಂತಹ ಮಕ್ಕಳು ಕಾನೂನಿನೊಡನೆ ಸಂಘರ್ಷಕ್ಕೆ ಬೀಳುತ್ತಾರೆ. ಇಂತಹ ಮಕ್ಕಳು ಮತ್ತೆ ಸಮಾಜೋಪಯೋಗಿ ಆಗಿಸಬೇಕಾದರೆ ಅವರಿಗೆ ಸಂರಕ್ಷಣೆ ಪೋಷಣೆಯ ಅವಶ್ಯಕತೆ ಇದೆ.

# ಅಧ್ಯಾಯ ಎರಡು

# ಭಾರತದಲ್ಲಿ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿ ಬಗೆಗಿನ ಪರಿಕಲ್ಪನಾತ್ಮಕ ವಿವರಣೆ

## ಅಧ್ಯಾಯ ಎರಡು

# ಭಾರತದಲ್ಲಿ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿ ಬಗೆಗಿನ ಪರಿಕಲ್ಪನಾತ್ಮಕ ವಿವರಣೆ

ರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಜನಮನ್ನಣೆ ಗಳಿಸಿದ ವ್ಯಾಖ್ಯಾನಗಳು, ಇಂದು ಪ್ರಶ್ನಾರ್ಥಕವಾಗಿದ್ದು, ಚರ್ಚೆಗೊಳಪಡುತ್ತಿವೆ. ಹಿಂದಿನ ಒಪ್ಪಿತ ವಾದಗಳು ಚಿಂತಕರ ಟೀಕೆಗಳಿಗೆ ಒಳಪಡುತ್ತಿವೆ. ಹೀಗಾಗಿ ಅಭಿವೃದ್ಧಿಯ ಬಗ್ಗೆ ನಿರ್ದಿಷ್ಟವಾಗಿ ಒಮ್ಮತದ ಅಭಿಪ್ರಾಯವನ್ನು ನೀಡುವುದು ಕಷ್ಟದಾಯಕವಾಗಿದೆ.

ಒಪ್ಪಿತ ಮಾನವ ಸಂಪನ್ಮೂಲ ಅಭಿವೃದ್ಧಿಯ ಮಾದರಿಗಳು ಇಂದು ತಪ್ಪಾಗಿ ಗ್ರಹಿಸಲ್ಪಟ್ಟಿರುವ, ಅರ್ಥೈಸಿಕೊಂಡಿರುವ, ನಂಬಿಕೆ ಎಂದು ಪರಿಗಣಿಸಲ್ಪಟ್ಟಿರುವ ಈ ಸಂದರ್ಭದಲ್ಲಿ ಚರ್ಚೆಯ ಕೇಂದ್ರ ಒಂದು ಅಭಿವೃದ್ಧಿಯ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಮುದಾಯಿಕ ಪರಿಸರದ ಮೇಲಿನ ಪ್ರಭಾವದ ಮೇಲೆ ತನ್ನದೇ ಆದ ವೈಚಾರಿಕ ಮತ್ತು ತತ್ವಗಳ ಆಧಾರದಲ್ಲಿ ನಡೆಯುತ್ತಿವೆ. ಹಾಗಾಗಿಯೇ ಪ್ರಸ್ತುತ ವ್ಯವಸ್ಥೆಗೆ ಸೂಕ್ತವಾಗಿ ಹೊಂದಿಕೆಯಾಗುವ ಮತ್ತು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಗೆ ಪೂರಕವಾಗುವಂತಹಾ ಆಶ್ಚರ್ಯ ಹುಟ್ಟಿಸುವ ಸಿದ್ಧಾಂತಗಳು ಪೂರಕವಾಗಿ ಹುಟ್ಟಿಕೊಳ್ಳುತ್ತಿವೆ. ಆಧುನಿಕ ಮಾನವ ಅಭಿವೃದ್ಧಿ ಸಿದ್ಧಾಂತಗಳ ಮೇಲಿನ ಟೀಕೆಗಳು ಪರ್ಯಾಯ ವ್ಯವಸ್ಥೆಗಳ ನಷ್ಟ ಪ್ರತಿಪಾದಿಸದೆ ಹೆಚ್ಚು ಪರಿಣಾಮಕಾರಿಯಾಗಿ, ವಸ್ತುನಿಷ್ಟವಾದ ಹಾಗೂ ತೃಪ್ತಿಕರವಾಗಿರುವಂತಹ ಸ್ಥಳೀಯ ವ್ಯವಸ್ಥೆಗಳ ಬಗ್ಗೆ ಪ್ರತಿಪಾದಿಸುತ್ತದೆ.

ಒಂದು ರಾಷ್ಟ್ರದ ಎಲ್ಲಾ ಸಂಪನ್ಮೂಲಗಳಲ್ಲಿ ಮಾನವ ಸಂಪನ್ಮೂಲ ಅತೀ ಪ್ರಮುಖವೆನಿಸಿಕೊಂಡಿದೆ. ಪ್ರತೀ ವ್ಯಕ್ತಿಯ ಸ್ಪರ್ಧಾತ್ಮಕತೆ ಹೆಚ್ಚಿಸಿ ತನ್ಮೂಲಕ ಒಟ್ಟು ಸಮಾಜದ ಕಲ್ಯಾಣವನ್ನು ಸಾಧಿಸಿ ರಾಷ್ಟ್ರೀಯ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಕ್ರಿಯೆಯನ್ನು ಮಾನವ ಅಭಿವೃದ್ಧಿ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ಸಮಾಜ ಕಾರ್ಯ ವಲಯದಲ್ಲಿ ವ್ಯವಸ್ಥೆ ಸಂಬಂಧಿ ಚಿಂತನೆಯ ದೀರ್ಘ ಚರಿತ್ರೆ ಇದೆ. ೧೯೨೦ರ ದಶಕದಲ್ಲಿ ಆರಂಭಗೊಂಡು ೧೯೬೦ರ ದಶಕದ ವರೆಗೂ ವಿಸ್ತೃತವಾದ ಬರ್ಟಾ ಲ್ಯಾಫ್ಲಿಯವರ ಕೃತಿಯಲ್ಲಿ ಬೇರೂರಿದೆ, ಸಮಾಜ ಕಾರ್ಯದಲ್ಲಿ ವ್ಯವಸ್ಥೆಯ ದೃಷ್ಟಿಕೋನ ಸಾಂಪ್ರದಾಯಕತೆಯಲ್ಲಿ ಕೇಂದ್ರೀಕೃತವಾಗಿದೆ. ಅದು ಸೂಕ್ಷ್ಮ (ತಳಮಟ್ಟದ) ಹಾಗೂ ವಿಶಾಲ(ಕುಟುಂಬ ಹಾಗೂ ಒಟ್ಟು ವ್ಯವಸ್ಥೆ) “ವ್ಯವಸ್ಥೆ”ಯ ಚಿಂತನೆ.

ಕೊಹೆನ್, ಬಿ.ಜೆ. (೨೦೦೨) ಆಲ್ಟರ್ನೆಟಿವ್ ಆರ್ಗನೈಸಿಂಗ್ ಪ್ರಿನ್ಸಿಪಲ್ಸ್ ಫಾರ್ ದ ಡಿಸೈನ್ ಆಫ್ ಸರ್ವಿಸ್ ಡೆಲಿವರಿ ಸಿಸ್ಟಮ್ಸ್, ಅಡ್ಮಿನಿಸ್ಟ್ರೇಶನ್ ಇನ್ ಸೋಷಿಯಲ್ ವರ್ಕ್ ೨೬(೨) ಪುಟ–೧೭

ಕೋಹೆನ್ ಮೂರು ಉದಾಹರಣೆಗಳ ಮೂಲಕ (ಶಾಲಾ ವ್ಯವಸ್ಥೆ, ಮಕ್ಕಳ ಕಲ್ಯಾಣ ವ್ಯವಸ್ಥೆ ಹಾಗೂ ಬಾಲನ್ಯಾಯವ್ಯವಸ್ಥೆಯ ಮೂಲಕ ತನ್ನ ಚಿಂತನೆಗಳನ್ನು, ಇಂದಿನ ಮಾನವ ಸೇವಾ ವ್ಯವಸ್ಥೆ ಹಾಗೂ ಬದಲಾವಣೆಯ ಅವಶ್ಯಕತೆ ಕುರಿತು ನೀಡುತ್ತಾರೆ. ತನ್ನ ಕ್ರಿಯೆ ಸಂಬಂಧಿ ಗುಂಪು ರಚನೆ(ಫಂಕ್ಷನಲ್ ಸ್ಟ್ರಕ್ಚರ್ ಆಫ್ ಹ್ಯೂಮನ್ ಸರ್ವಿಸ್ ಸಿಸ್ಟಮ್ಸ್)ಯು ವರ್ಗೀಕೃತ ಹಣಕಾಸು ಒದಗಣೆ ಹಾಗೂ ಸಂಪ್ರದಾಯಿಕ ವಿಧಾನದ ಮೂಲಕ ಮೇಲುಸ್ತುವಾರಿ ಹಾಗೂ ಗುಣಮಟ್ಟ ಖಾತ್ರಿ ಬಗ್ಗೆ ಚರ್ಚಿಸುತ್ತಾರೆ. ಬದಲಿಗೆ ಅವರು ಮಾರುಕಟ್ಟೆ ಕೇಂದ್ರಿತ ವರ್ಗೀಕರಣದ ಬಗ್ಗೆ ಮಾತನಾಡುತ್ತಾ ವ್ಯವಸ್ಥೆಗಳು ಸಮಾನ ಅವಶ್ಯಕತೆಯುಳ್ಳ ವ್ಯಕ್ತಿಗಳ ಸೇವೆಗಾಗಿ ವ್ಯವಸ್ಥೆಗಳು ಹುಟ್ಟಿಕೊಳ್ಳುತ್ತವೆ, ವಿವಿಧ ಸೇವಾ ವಿಷಯಗಳು ಸಂಘಟಿತವಾಗಿ ದುಡಿದು ನಿರ್ಧಿಷ್ಟ ಸೇವಾ ಕಾರ್ಯಗಳ ಮೂಲಕ ಫಲಾನುಭವಿ ಅಥವಾ ಸ್ಥಳದ ಕಾರ್ಯಗಳನ್ನು ನಡೆಸುತ್ತವೆ(ಪುಟ ೨೯)

ಗ್ಲಿಸ್ಸನ್ ಸಿ. (೨೦೦೭) ಅಸ್ಸೆಸ್ಸಿಂಗ್ ಆಂಡ್ ಚೇಂಜಿಂಗ್ ಆರ್ಗನೈಸೇಶನಲ್ ಕಲ್ಚರ್ ಕ್ಲೈಮೇಟ್ ಫಾರ್ ಇಫೆಕ್ಟಿವ್ ಸರ್ವಿಸಸ್ ರಿಸರ್ಚ್ ಇನ್ ಸೋಶಿಯಲ್ ವರ್ಕ್ ಪ್ರಾಕ್ಟಿಸಸ್ ೧೭(೬), ಪು ೭೩೬ಸೇವಾ ಮಧ್ಯಪ್ರವೇಶದ ಪರಿಣಾಮಕಾರಿತನವು ಬಹುತೇಕ ಸಂಸ್ಥೆಗಳು ಕಾರ್ಯನಿರ್ವಹಿಸುವ ಸಾಮಾಜಿಕ ಹಿನ್ನೆಲೆ, ತಾಂತ್ರಿಕ ಕೌಶಲ್ಯ, ಮೇಲುಸ್ತುವಾರಿ ಸಾಮರ್ಥ್ಯ ಸಾಂಸ್ಥಿಕ ಹವಾಮಾನಕ್ಕೆ ಸಂಬಂಧಿಸಿದೆ, ಬಳಕೆದಾರರ ನಡತೆ ಅನುಷ್ಠಾನ ಹಾಗೂ ಸೇವೆಯ ಗುಣಮಟ್ಟ ಹಾಗೂ ಕೊನೆಯದಾಗಿ ಹೊರಹೊಮ್ಮುವಿಕೆಗೆ ಸೇವಾ ವ್ಯವಸ್ಥೆಯ ಈ ಚಿಂತನೆಯೊಂದಿಗೆ ಸೇವಾನಿರತರು ಮುಂದುವರಿದಾಗ ಮಾತ್ರ ಮಕ್ಕಳು ಮತ್ತು ಕುಟುಂಬಗಳ ಹೊರಹೊಮ್ಮುವಿಕೆ ಅತೀ ಹೆಚ್ಚು ಆಗುತ್ತದೆ.

ಐವರಿ ಜೆ.ಎಮ್. (೨೦೦೭) ಆರ್ಗನೈಸೇಷನಲ್ ಇಕಾಲಜಿ. ಎ ತಿಯಾರೆಟಿಕಲ್ ಫ್ರೇಮ್ ವರ್ಕ್ ಫಾರ್ ಎಕ್ಸಾಮಿನಿಂಗ್ ಕೊಲಾಬೋರೇಟಿವ್ ಪಾರ್ಟ್ನರ್‌ಶಿಪ್ಸ್ ಅಡ್ಮಿನಿಸ್ಟ್ರೇಶನ್ ಇನ್ ಸೋಷಿಯಲ್ ವರ್ಕ್ ೩೧(೪)

ವ್ಯವಸ್ಥಾ ತತ್ವದ ಬೆಳವಣಿಗೆಯಾದ ಸಾಂಸ್ಥಿಕ ವ್ಯವಸ್ಥೆಯಂತೆ (ಸಂಸ್ಥೆಗಳ ಗುಂಪು) ಅವುಗಳ ಕಾರ್ಯ, ಸಂರಚನೆ, ಗುರಿ ಹಾಗೂ ಚಟುವಟಿಕೆಗಳು, ವಿಸ್ತೃತ ಸಮುದಾಯಕ್ಕೆ ಪ್ರತಿಕ್ರಿಯೆಯಾಗಿ ಮತ್ತು ಇರುವ ಇತರ ಸಂಸ್ಥೆಗಳಿಂದಾಗಿ ಆಗಿರುತ್ತದೆ. ಸಹಕಾರ, ಸಹವರ್ತನೆ, ಸಹಯೋಗದ ಪ್ರಾಮುಖ್ಯತೆ ಅಂತರ್ ಬದಲಾವಣೆಯಾಗಬಲ್ಲದಾಗಿ ಉಪಯೋಗವಾಗುತ್ತದೆ. ಆದರೆ ಪ್ರತಿಯೊಂದು ಬೇರೆ ಬೇರೆ ನಡತೆಯೊಂದಿಗೆ ಸಂಘಟಿತ ವಾಗಿರುತ್ತದೆ. ಸಂಸ್ಥೆಗಳು ಸಮಾನ ಗುರಿ ಸಾಧನೆಗೆ ಹೇಗೆ ಜೊತೆಯಾಗಿ ಕೆಲಸ ಮಾಡಬಹುದು ಎಂಬ ವಿಷಯವನ್ನು ಆಧರಿಸಿರುತ್ತದೆ.

ಮುಲ್ರಾಯ್ ಇ.ಎ. (೨೦೦೪) ತಿಯಾರೆಟಿವ್ ಪರ್ಸ್ಪೆಕ್ಟಿವ್ ಆನ್ ದ ಸೋಷಿಯಲ್ ಎನ್ವಿರಾನ್‌ಮೆಂಟ್ ಟು ಗೈಡ್ ಮೇನೇಜ್ಮೆಂಟ್ ಆಂಡ್ ಕಮ್ಯೂನಿಟಿ ಪ್ರಾಕ್ಟಿಸಸ್ ಎಪ್ರೋಚ್, ಅಡ್ಮಿನಿಸ್ಟ್ರೇಶನ್ ಇನ್ ಸೋಷಿಯಲ್ ವರ್ಕ್ ೨೮(೧) ಪು ೭೭

ಆರ್ಗನೈಸೇಶನ್-ಇನ್-ಎನ್ವಾಯರ್ನ್ಮೆಂಟ್ ಚೌಕಟ್ಟಿನ ಮೂಲಕ ಸಂಸ್ಥೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಮತ್ತು ಪರಿಸರದಲ್ಲಿ ವಿವಿಧ ಹಂತಗಳಿಗೆ ಹೇಗೆ ಪ್ರತಿಕ್ರಿಯಿಸುತ್ತದೆ (ಉದಾ: ಸ್ಥಳೀಯ ಸಮುದಾಯ, ಸಾಮಾಜಿಕ/ನೀತಿ, ಸಾಮಾಜಿಕ ನ್ಯಾಯಕ್ಕಾಗಿ ಬೇಡಿಕೆ) ಅವರ ಮಾದರಿಯ ಚರ್ಚೆಯಲ್ಲಿ ಮುಲ್ರಾಯ್ ಅವರು ಪರಿಸರದ ಸ್ವಯಂ ಪ್ರೇರಿತ ಗುಣಕ್ಕೆ ಉಲ್ಲೇಖಿಸುವಾಗ ವ್ಯವಸ್ಥೆ ಭಾಷೆ ಉಪಯೋಗಿಸುತ್ತಾರೆ. ಮುಲ್ರಾಯ್ ಸಾಂಸ್ಥಿಕ ಬದಲಾವಣೆಯ ಮೇಲೆ ಪರಿಣಾಮ ಬೀರುವ ಭಾಹ್ಯ ವಾತಾವರಣದ ಆರು ಪ್ರಮುಖ ಮಜಲುಗಳನ್ನು ಉಲ್ಲೇಖಿಸುತ್ತಾರೆ. ಸಾಮಾಜಿಕ ನ್ಯಾಯದ ಕಾಳಜಿ ಹೇಗೆ ಸಂಸ್ಥೆಗಳು ಮತ್ತು ಸಾಂಸ್ಥಿಕ ಬದಲಾವಣೆ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ಉಲ್ಲೇಖಿಸುತ್ತಾರೆ.

ಸ್ಟೀವನ್ಸ್ ಐ. ಆಂಡ್ ಕಾಕ್ಸ್ (೨೦೦೮) ಕಾಂಪ್ಲೆಕ್ಸಿಟಿ ಥಿಯರಿ, ಡೆವಲಪಿಂಗ್ ನಿವ್ ಅಂಡರ್ಸ್ಟ್ಯಾಂಡಿಂಗ್ ಆಫ್ ಚೈಲ್ಡ್ ಪ್ರೊಟೆಕ್ಶನ್ ಇನ್ ಫೀಲ್ಡ್ ಸೆಟ್ಟಿಂಗ್ಸ್ ಆಂಡ್ ಇನ್ ರೆಸಿಡೆನ್ಶಿಯಲ್ ಚೈಲ್ಡ್ ಕೇರ್ ಬ್ರಿಟಿಷ್ ಜರ್ನಲ್ ಆಫ್ ಸೋಷಿಯಲ್ ವರ್ಕ್ ೩೮. ಪುಟ ೧೩೨೦

ಸ್ಟೀವನ್ಸ್ ಐ. ಆಂಡ್ ಕಾಕ್ಸ್ ಕ್ಲಿಷ್ಟ ಸಿದ್ಧಾಂತದ ಸಂಕ್ಷಿಪ್ತ ಪರಿವೀಕ್ಷಣೆ ಮಾಡುತ್ತಾರೆ. ತನ್ಮೂಲಕ ಸಾಂಪ್ರದಾಯಿಕ ಸಿದ್ಧಾಂತಕಿಂತ ಕ್ಲಿಷ್ಟ ಸಿದ್ಧಾಂತ ಹೇಗೆ ಬಿನ್ನವಾಗಿದೆ ಎಂದು ಪ್ರತಿಪಾದಿಸುತ್ತಾರೆ. ಕ್ಲಿಷ್ಟ ಸಿದ್ಧಾಂತದ ಹಿನ್ನೋಟದಂತೆ ಒಂದನ್ನೊಂದರ ಮೇಲೆ ಪರಿಣಾಮ ಬೀರುವ ವ್ಯವಸ್ಥೆಯ ಮದ್ಯವರ್ತಿಗಳಿರುತ್ತಾರೆ. ಇವೆಲ್ಲವೂ ಪರಿಸರದ ಹಿನ್ನೆಲೆಯಲ್ಲಿ ಘಟಿಸುತ್ತದೆ. ವ್ಯವಸ್ಥೆಯು ಸ್ಥಳಾಂತರಗೊಳ್ಳುವ ಘಟನೆಗಳೊಂದಿಗೆ ಮಾಡಿ ಸಂರಚನೆ ಚೌಕಟ್ಟ(ಡಿಸ್ಸಿಪೇಟಿವ್ ಸ್ಟ್ರಕ್ಚರ್ಸ್)ನ ಮೇಲೆ ನೆಲೆನಿಂತಿರುತ್ತದೆ. ಯಾಕೆಂದರೆ ಮಕ್ಕಳ ರಕ್ಷಣಾ ವ್ಯವಸ್ಥೆಯ ಸೇವೆಯು ಅವಶ್ಯಕತೆ ಇರುವ ಮಕ್ಕಳು ಮತ್ತು ಕುಟುಂಬಗಳು ಕ್ಲಿಷ್ಟ ಹೊಂದಾಣಿಕಾ ವ್ಯವಸ್ಥೆಗೆ ಉದಾಹರಣೆಗಳಾಗಿರುತ್ತವೆ. ಈ ವ್ಯಕ್ತಿಗಳೊಂದಿಗೆ ಕೆಲಸ ಮಾಡಲಿಕ್ಕಾಗಿ ವಿನ್ಯಾಸಗೊಂಡಿರುವ ಸಂಸ್ಥೆಗಳು ಈ ಬದಲಾವಣೆಯನ್ನು ಪ್ರಶಂಸಿಸುತ್ತಿರಬೇಕು.

**ಶಿಕ್ಷಣ**

'ವ್ಯವಸ್ಥೆ'ಯ ಚಿಂತನೆ, ಶಿಕ್ಷಣರಂಗದಲ್ಲಿ ಜೀವಂತವಾಗಿರುತ್ತದೆ. "ಕ್ಲಿಷ್ಟ ವ್ಯವಸ್ಥೆ ಸಿದ್ಧಾಂತ"ದಲ್ಲಿ ಸಾಮಾನ್ಯವಾಗಿ ಉಲ್ಲೇಖಿಸುವಂತೆ ಈ ವಿಷಯದಲ್ಲಿ ಪ್ರಾಜ್ಞರ ವ್ಯವಸ್ಥೆ ನಡೆಸುವ ಅಸಕ್ತಿಯ ವಿಷಯದಲ್ಲಿ (ಸ್ಥಳೀಯ ಹಾಗೂ ರಾಜ್ಯ ನಿಯಮಾವಳಿಗಳು) ಶೈಕ್ಷಣಿಕ ವಿದ್ಯಮಾನಗಳು, ಸಮುದಾಯ ಗುಣಲಕ್ಷಣಗಳು ಇತ್ಯಾದಿ) ಕೆಲಸಮಾಡುತ್ತವೆ. ನಿರ್ಧಿಷ್ಟ ಸಮಾಜದ ವಿಸ್ತೃತ ವಲಯವು ಸೂಪರ್ ಸಿಸ್ಟಂ ಎಂದು ಕರೆಯಲ್ಪಡುವ ಶೈಕ್ಷಣಿಕ ವ್ಯವಸ್ಥೆಯ ಚರ್ಚೆ ಬಹಳಷ್ಟು ಸಾಧ್ಯತೆಗಳ ನೆಲೆಕಟ್ಟಿನಲ್ಲಿ ನಿಂತಿರುತ್ತದೆ. ಆದರೆ ಶಿಕ್ಷಣ ವ್ಯವಸ್ಥೆ (ವಿದ್ಯಾರ್ಥಿಗಳು, ಶಿಕ್ಷಕರು, ಶಾಲೆ ಪುಸ್ತಕ, ಪಠ್ಯ ವಿಷಯ ಇತ್ಯಾದಿ) ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾತನಾಡಲು ಉಪಯೋಗಿಸುವ ಭಾಷೆಯ ಮೇಲಿದೆ.

ಈ ಕೆಳಗಿನ ಸೈಟೇಶನ್ ಪೂರ್ವ ನೋಟಗಳು ಶೈಕ್ಷಣಿಕ ರಂಗದಲ್ಲಿ ಉಪಯೋಗಿಸುವ ಚಿಂತನೆಯ ಮೇಲೆ ಬೆಳಕು ಚೆಲ್ಲುತ್ತವೆ.

ಬೋವನ್ ಜಿ. ಎಲ್(೨೦೦೪) ಸೋಷಿಯಲ್ ಆರ್ಗನೈಸೇಷನ್ ಆಂಡ್ ಸ್ಕೂಲ್ಸ್: ಎ ಜೆನರಲ್ ಸಿಸ್ಟಂ ಥಿಯರಿ ಪರ್ಸ್ಪೆಕ್ಟಿವ್ ಇನ್ ಪಿ. ಆಲನ್ಮಿಯರ್ಸ್, ಸೋಷಿಯಲ್ ವರ್ಕ್ ಸರ್ವಿಸಸ್ ಇನ್ ಸ್ಕೂಲ್ಸ್ (೪ನೇ ಸಂಚಿಕೆ) ಲೇಖಕರು ಸಾಂಸ್ಥಿಕ ಶಾಲೆಗಳ ಚೌಕಟ್ಟಿನಲ್ಲೆ ಸಾಮಾನ್ಯ ವ್ಯವಸ್ಥೆ ಸಿದ್ಧಾಂತ ವರ್ಣಿಸುತ್ತಾರೆ.ಈ ಪ್ರತಿಪಾದನೆಯಂತೆ ಒಂದು ಶಾಲೆ ಒಂದು ನಿಗದಿತ ಸ್ಥಳೀಯ ಸಮುದಾಯದ ಜಿಲ್ಲೆಯಲ್ಲಿ ನೆಲೆಸಿರುತ್ತದೆ. ತನ್ಮೂಲಕ ಒಟ್ಟು ಶೈಕ್ಷಣಿಕ ವ್ಯವಸ್ಥೆಯ ಭಾಗವಾಗಿರುತ್ತದೆ. ಹೀಗೆ ವಿವರಿಸುತ್ತಾ ಲೇಖಕರು ವಿದ್ಯಾರ್ಥಿಯ

ಸಾಧನೆ, ಸಾಮಾಜಿಕ ಸಂಘಟನೆಯ ಭಾಗವಾಗಿರುತ್ತದೆ ಎಂದು ಪ್ರತಿಪಾದಿಸುತ್ತಾರೆ ಮತ್ತು ಹೇಗೆ ಸಾಮುದಾಯಿಕ, ಸಂಘಟಿತ ಸೇವೆಗಳು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಭಾಗವಾಗಿರುತ್ತದೆ ಎಂದು ಪ್ರತಿಪಾದಿಸುತ್ತದೆ.

**ಆರೋಗ್ಯ**

ಆರೋಗ್ಯ ಹಾಗೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಪರಿಕಲ್ಪನೆ ಹೆಚ್ಚುತ್ತಿದೆ. ಲೇಖನಗಳು ಸಾಮಾಜಿಕ ಹಾಗೂ ರಾಜಕೀಯ ಒತ್ತಡದಿಂದ ಹೇಗೆ ವ್ಯವಸ್ಥಿತ ಹಾಗೂ ವಿಶೇಷ ವಿಧಾನಗಳು ರೂಪಿತವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಪ್ರತಿಪಾದಿಸುತ್ತದೆ.

**ಅಂತರಾಷ್ಟ್ರೀಯ ಅಭಿವೃದ್ಧಿ:**

ವ್ಯವಸ್ಥಿಕ ಚಿಂತನೆ, ಅಂತರಾಷ್ಟ್ರೀಯ ಅಭಿವೃದ್ಧಿಯಲ್ಲಿ ವಿಶ್ಲೇಷಣೆಯ ವಿವಿಧ ಹಂತಗಳನ್ನು ವಿವಿಧ ಆಯಾಮಗಳಿಂದ ಸಂಶೋಧಿಸಲು ಉಪಯೋಗಿಸಲ್ಪಡುತ್ತದೆ. ಅಭಿವೃದ್ಧಿ ಲೇಖನಗಳು ಕ್ಲಿಷ್ಟ ವ್ಯವಸ್ಥೆಯ ಕೆಲವು ಸಮಾನ ತತ್ವಗಳನ್ನು ಹೊರತರುತ್ತದೆ. ಈ ತತ್ವಗಳು

೧) ವ್ಯವಸ್ಥೆಗಳು ಉಪ ವ್ಯವಸ್ಥೆಗಳಿಂದ ಮಾಡಲ್ಪಟ್ಟಿದೆ ಮತ್ತು ಅದು ಕ್ರಿಯೆ ಹಾಗೂ ನಡತೆಯ ವಿನ್ಯಾಸಕ್ಕೆ ಹೊಂದಿಕೊಂಡಿದೆ.

೨) ವ್ಯವಸ್ಥೆಗಳು ಸ್ವ-ಸಂಘಟಿತವಾಗಿರುತ್ತವೆ.

೩) ವ್ಯವಸ್ಥೆಗಳು ನೇರವಲ್ಲದ ಮಾಹಿತಿ ಹೊಂದಿರುತ್ತವೆ.

೪) ವ್ಯವಸ್ಥೆಗೆ ಪರಿಮಿತಿಗಳಿವೆ ಎಂಬ ಸಲಹೆ ನೀಡುತ್ತದೆ.

ಬರ್ನರ್ ಎಚ್. (೨೦೦೭), ಅಪ್ಲಿಕೇಶನ್ ಆಫ್ ಕಾಂಪ್ಲೆಕ್ಸ್ ಸಿಸ್ಟಮ್ಸ್ ರಿಸರ್ಚ್ ಟು ಎಫೋರ್ಟ್ಸ್ ಆಫ್ ಇಂಟರ್ನ್ಯಾಷನಲ್ ಡೆವೆಲೊಪ್‌ಮೆಂಟ್ ಏಶಿಯನ್ ಡೆವೆಲೊಪ್‌ಮೆಂಟ್ ಅವೇಯ್ಲೆಬಲ್ ಅಟ್ ಎಸ್.ಎಸ್.ಆರ್.ಎನ್. ಬರ್ನರ್ ನ ವಾದದ ಪ್ರಕಾರ ಸಾಂಪ್ರದಾಯಿಕ ಅಭಿವೃದ್ಧಿ ಪ್ರಯತ್ನಗಳು ಮಾಹಿತಿ ಒಳಹರಿವು ಹಾಗೂ ಸಂಪೂರ್ಣ ಸಮಾನವಾಗಿ ಹಂಚಲ್ಪಟ್ಟ ಜಾಲ, ಒಂದೇ ಮಟ್ಟದ ಅಭಿವೃದ್ಧಿ ಮಧ್ಯ ಪ್ರವೇಶದಿಂದ ಘಟಿಸುತ್ತದೆ ಎಂಬ ನೆಲೆಯಲ್ಲಿ ರೂಪಿತವಾಗಿರುತ್ತದೆ. ಪರಿಣಾಮಕಾರಿ ಅಭಿವೃದ್ಧಿ ಮಧ್ಯಸ್ಥಿಕೆಗಳ ವ್ಯವಸ್ಥೆಯ ಬದಲಾವಣೆಯ ಕಡೆ ನಿರ್ದೇಶಿತವಾಗಿರುತ್ತವೆ. ಗುರಿ ಕೇಂದ್ರಿತ ಮಧ್ಯಪ್ರವೇಶ ಒಟ್ಟು ವ್ಯವಸ್ಥೆಯಕಡೆ ಸರಿದು ಇಡೀ ವ್ಯವಸ್ಥೆಯು ಸಂಚಲಿತಗೊಂಡು ಬದಲಾವಣೆಗಿರುವ ತಡೆಯನ್ನು ಕಿತ್ತೆಸೆಯುವಂತಿರಬೇಕು.

ಫ್ರೈಮಂಡ್ ಎನ್ ಆಂಡ್ ಕಮೆರಾನ್, ಜಿ.(ಇಡಿಎಸ್) ೨೦೦೬. ಟುವರ್ಡ್ಸ್ ಪಾಸಿಟಿವ್ ಸಿಸ್ಟಮ್ ಆಫ್ ಚೈಲ್ಡ್ ಆಂಡ್ ಫ್ಯಾಮಿಲಿ ವೆಲ್ಫೇರ್ ಇಂಟರ್ ನ್ಯಾಷನಲ್ ಕಂಪೇರಿಸನ್ ಆಫ್ ಚೈಲ್ಡ್ ಪ್ರೊಟೆಕ್ಷನ್, ಫ್ಯಾಮಿಲಿ ಸರ್ವಿಸಸ್ ಆಂಡ್ ಕಮ್ಯೂನಿಟಿ ಕೇರಿಂಗ್ ಸಿಸ್ಟಮ್ಸ್ ಟೊರಾಂಟೋ

ಎಲ್ಲಾ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸೇವೆಯ ಅವಶ್ಯಕತೆಗಳು, ಮಕ್ಕಳ ದುರುಪಚಾರ ಕುಟುಂಬಗಳ ಹೋರಾಟಗಳನ್ನು ಕೇಂದ್ರೀಕರಿಸಿರುತ್ತದೆ. ಈ ಮಕ್ಕಳು ಮತ್ತು ಕುಟುಂಬ ಕಲ್ಯಾಣ ವ್ಯವಸ್ಥೆ ಸಮಾನ ಸಮಸ್ಯೆಗಳು ಹಾಗೂ ಸೇವಾ ವ್ಯವಸ್ಥೆಯ ಸಮಾನ ಅಂಶಗಳು, ಹೊಂದಿದ್ದು ತತ್ವ, ಸಿದ್ಧಾಂತ, ಸಂಘಟನೆ ಹಾಗೂ ಅಂತರಾಷ್ಟ್ರೀಯ ಚೌಕಟ್ಟು ಮತ್ತು ಮಾದರಿಗಳಲ್ಲಿ ವೆತ್ಯಾಸಗಳನ್ನು ಹೊಂದಿದೆ. ಈ ಹೊಸ ಪ್ರಬಂಧಗಳಲ್ಲಿ ನ್ಯಾನ್ಸಿ ಫ್ರೇಮೊಂಡ್ ಆಂಡ್ಗ್ರೇ ಕಮೆರಾನ್ ಸೂಕ್ಷ್ಮ ಅಂತರಾಷ್ಟ್ರೀಯ ಮಕ್ಕಳ ರಕ್ಷಣೆ, ಕುಟುಂಬ ಸೇವೆ ಹಾಗೂ ಸಮುದಾಯ ಚಿಂತಕನ ಮೂಲಕ ಪೋಷಣೆ ಮಾದರಿಯ ಮೂಲ ಹಾಗೂ ಸಮಗ್ರ ಚರ್ಚೆಗಳನ್ನು ಪುಷ್ಟೀಕರಿಸುತ್ತದೆ. ಇದು ಮಕ್ಕಳ ರಕ್ಷಣೆ ಹಾಗೂ ಕೌಟುಂಬಿಕ ಸೇವಾ ವಿಧಾನದ ಹಿನ್ನೆಲೆಯಲ್ಲಿ ಕೆನಡಾ, ಸಂಯುಕ್ತ ರಾಷ್ಟ್ರಗಳು ಇಂಗ್ಲೆಂಡ್, ನೆದರ್ಲ್ಯಾಂಡ್, ಫ್ರಾನ್ಸ್ ಹಾಗೂ ಸ್ವೀಡನ್‌ಗಳ ಮೇಲೆ ಬೆಳಕು ಚೆಲ್ಲುವುದಷ್ಟೇ ಅಲ್ಲದೆ ಕೆನಡಾ ಹಾಗೂ ನ್ಯೂಜಿಲ್ಯಾಂಡ್‌ಗಳ ಮೂಲನಿವಾಸಿ ಸಮುದಾಯದ ಪೋಷಣಾ ವ್ಯವಸ್ಥೆಯನ್ನು ಹೋಲಿಸುತ್ತಾ ಅಧ್ಯಯನಕ್ಕೆ ತೊಡಗುತ್ತದೆ. ಈ ಪ್ರಬಂಧಗಳಲ್ಲಿನ ಹೋಲಿಕೆಗಳು. ಪ್ರಬಲ ಸಂಶೋದನೆಗಳ ಮೂಲಕ ಮಕ್ಕಳು ಮತ್ತು ಕುಟುಂಬ ಕಲ್ಯಾಣ ಮಾಡುತ್ತದೆ ಮತ್ತು ಪ್ರತೀ ವ್ಯವಸ್ಥೆಯ ಮತ್ತು ಪ್ರತಿ ವ್ಯವಸ್ಥೆಯ ಮತ್ತು ಉದ್ದೀಕೃತ ಚರ್ಚೆಯನ್ನು ನಡೆಸುತ್ತದೆ.

ವ್ಯವಸ್ಥೆಗಳನ್ನು ಚರ್ಚಿಸುತ್ತಾ, ಎಲ್ಲಾ ವ್ಯವಸ್ಥೆಗಳು ಸೂಕ್ತ ಸಮತೋಲನವನ್ನು ಸಾಧಿಸಲು ಸವಾಲುಗಳು ಹಾಗೂ ಆಯ್ಕೆಗಳ ನಡುವೆ ಹೆಣಗಾಡುತ್ತವೆ. ಈ ಸವಾಲುಗಳೆಂದರೆ.

- ಮಕ್ಕಳು, ಕುಟುಂಬ, ಸಮುದಾಯ ಹಾಗೂ ಸಮಾಜಗಳಲ್ಲಿ ಯಾವುದು ಅತೀ ಪ್ರಮುಖ ಪಾತ್ರವಹಿಸುತ್ತದೆ ಹಾಗೂ ಇತರ ಯಾವ ಅವಶ್ಯಕತೆಗಳಿವೆ.
- ಅನುಕರಿಸಬೇಕಾದ ವ್ಯವಸ್ಥಿತ ವ್ಯಾಪ್ತಿ
- ಸ್ಥಳೀಯ ಅವಶ್ಯಕತೆ ಹಾಗೂ ಅಧಿಕಾರಿಶಾಹಿತ್ವ ಹಿಡಿತದ ನಡುವಿನ ಸಮತೋಲನ

- ಮಕ್ಕಳ ರಕ್ಷಣಾ ವ್ಯವಸ್ಥೆ ಸಾಮಾನ್ಯ ಕಲ್ಯಾಣ ವ್ಯವಸ್ಥೆಯಿಂದ ಹೇಗೆ ಭಿನ್ನವಾಗಿದೆ ಎಂಬುದನ್ನು ಗುರುತಿಸುವುದು.
- ಮಕ್ಕಳೊಂದಿಗೆ ಕೆಲಸಮಾಡುವಾಗ ಉಪಯೋಗಿಸುವ ಪ್ರಾಧಿಕಾರಗಳ ವಿಧಾನ ಹಾಗೂ ವ್ಯಾಪ್ತಿ.
- ಮಕ್ಕಳ ಕಲ್ಯಾಣ ಮತ್ತು ನ್ಯಾಯ/ಪೋಲೀಸ್ ವ್ಯವಸ್ಥೆಗಳ ನಡುವಿನಕೊಂಡಿ ಹಾಗೂ ಸೂಕ್ತ ಸಂಬಂಧ.
- ವೈಯಕ್ತಿಕ ಬದಲಾವಣೆ ಮತ್ತು ಸಂಘಟಿತ ಸಬಲೀಕರಣಕ್ಕೆ ಸೂಕ್ತ ಒತ್ತು ನೀಡುವುದು.

**ಮಕ್ಕಳ ರಕ್ಷಣೆ:**

ಮಕ್ಕಳ ರಕ್ಷಣೆಗೆ ಇರುವ ವ್ಯವಸ್ಥಿಕ ದೃಷ್ಟಿಕೋನಕ್ಕೆ ಸಂಬಂಧಿತ ಲೇಖನ ಹಾಗೂ ಅಧ್ಯಯನಾತ್ಮಕ ಸಾಹಿತ್ಯವನ್ನು ಹುಡುಕಿದರೆ ಕಳೆದ ಎರಡು ದಶಕಗಳಲ್ಲಿ ಛೇದಿಸುವ ವ್ಯವಸ್ಥೆಯನ್ನು ಬಿಂಬಿಸುತ್ತದೆ. ಔಪಚಾರಿಕ ಕೊಂಡಿಗಳಾಗಿ (ಕೆಲವೊಮ್ಮೆ ಆದರೆ ಯಾವಾಗಲೂ ಅಲ್ಲ, ಈ ವ್ಯವಸ್ಥೆ "ಪೋಷಣೆಯ ವ್ಯವಸ್ಥೆ" ಎಂದು ಕರೆಯಲ್ಪಡುತ್ತದೆ.) ಮಕ್ಕಳ ರಕ್ಷಣೆ, ಕೌಟುಂಬಿಕ ದೌರ್ಜನ್ಯ, ಅಮಲು ದೌರ್ಜನ್ಯ ಹಾಗೂ ಮಕ್ಕಳ ನ್ಯಾಯದ ಸುತ್ತಲು ಹೆಣೆದುಕೊಂಡಿರುತ್ತದೆ.

ಕೊಹೆನ್ ಇ (೨೦೦೮) ಬ್ರೇಕಿಂಗ್ ದ ಸೈಕಲ್ ಅಡ್ರೆಸ್ಸಿನ್‌ಂಗ್ ಚಿಲ್ಡ್ರನ್ಸ್ ಎಕ್ಸ್ಪೋಶರ್ ಟು ವೊಯ್ಲೆನ್ಸ್, ಪಬ್ಲಿಕ್ ಹೆಲ್ತ್ ವಿದೌಟ್ ಬಾರ್ಡರ್ಸ್; ಅಮೇರಿಕನ್ ಪಬ್ಲಿಕ್ ಹೆಲ್ತ್ ಎಸೋಸಿಯೇಷನ್ ಆನುವಲ್ ಮೀಟೀಂಗ್ ಆಂಡ್ ಎಕ್ಸ್ಪೋ ಅಕ್ಟೋಬರ್ ೨೫–೨೮ ೨೦೦೮, ಸ್ಯಾನ್ ಡಿಯೆಗೊ ಸಿ.ಎ. ಕೋಹೆನ್ ಅವರು ಸೇಫ್ ಸ್ಟಾರ್ಟ್ ಸೆಂಟರ್‌ನ ನಿರ್ಧೇಶಕರಾಗಿದ್ದಾರೆ. ಇದರ ಪ್ರಯತ್ನಗಳು ದೌರ್ಜನ್ಯಕ್ಕೆ ಎದುರಾಗುವ ಮಕ್ಕಳ ಮೇಲಿನ ಪರಿಣಾಮ ತಡೆಯಲು ಸಾಕ್ಷಿ ಆಧಾರಿತ ಆಚರಣೆಗಳನ್ನು ಉತ್ತಮೀಕರಿಸುವುದು ಸೇಫ್ ಸ್ಟಾರ್ಟ್ ಸಮುದಾಯಗಳು ಮಕ್ಕಳು ವಿವಿಧ ದೌರ್ಜನ್ಯದ ಸಂದರ್ಭಗಳಿಗೆ ಎದುರಾಗುವುದನ್ನು ತಡೆಯುವುದು ಮತ್ತು ಕಡಿಮೆಮಾಡುವುದಕ್ಕೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುತ್ತದೆ. ಸೇವಾ ವಲಯಗಳಾದ ಸಾಮಾಜಿಕ ಸೇವೆಗಳು ಔಷಧಿ ಕೇಂದ್ರಗಳು, ಮಾನಸಿಕ ಆರೋಗ್ಯ ಕೇಂದ್ರ ಕೌಟುಂಬಿಕ ದೌರ್ಜನ್ಯ ಸೇವಾ ಕೇಂದ್ರಗಳು, ನ್ಯಾಯಾಲಯ ಹಾಗೂ

ಇನ್ನಿತರ ಯುವ ವಕಾಲತು ಕಾರ್ಯಕ್ರಮಗಳಿಗೆ ಸಮಾನವಾಗಿದೆ. ಕಲಿತ ಪಾಠಗಳನ್ನು ವಿವರಿಸಲಾಗಿದೆ.

ಡೇಲ್ ಪಿ ಆಂಡ್ ಡೇವಿಸ್ ಎಮ್ (೧೯೮೫) ಎ ಮಾಡೆಲ್ ಆಫ್ ಇಂಟರ್ವೆನ್ಶನ್ ಇನ್ ಚೈಲ್ಡ್ ಅಬ್ಯುಸಿಂಗ್ ಫ್ಯಾಮಿಲೀಸ್ ಈ ಲೇಖನದಲ್ಲಿ ರೋಷಾಡೇಲೆ ನ್ಯಾಷನಲ್ ಸೊಸೈಟಿ ಫಾರ್ ದಿ ಪ್ರೆವೆನ್ಶನ್ ಆಫ್ ಕ್ರೂರ್ಯೆಲ್ಟಿ ಟು ಚಿಲ್ಡ್ರನ್ (ಎನ್ ಎಸ್ ಪಿ ಸಿ ಸಿ) ವ್ಯವಸ್ಥೆ ಸಿದ್ಧಾಂತ ಹಾಗೂ ಆಧುನಿಕ ಮಾನಸಿಕ ಚಿಕಿತ್ಸಾ ತಂತ್ರಗಳ ತೀವ್ರತರದ ಮಕ್ಕಳ ಮೇಲಿನ ದೌರ್ಜನ್ಯದ ವಿಮರ್ಶೆ ಮಾಡುತ್ತದೆ. ಡೇಲ್‌ಹಾಗೂ ಡೇವಿಸ್ ಚರ್ಚೆಯಂತೆ ದೌರ್ಜನ್ಯವೆಸಗುವ ಕುಟುಂಬಗಳ ಸಾಮಾಜಿಕ ಪರಿಮಿತಿಯೊಳಗಿನ ವಿವಿಧ ತಾತ್ಕಾಲಿಕ ಔದ್ಯೋಗಿಕ ಹಾಗೂ ಸಾಮುದಾಯಿಕ ಸಂಸ್ಥೆಗಳ ಮೂಲಕ ಮಕ್ಕಳ ಸೂಕ್ಷ್ಮ ವಿಷಯಗಳ ವಟಾಯಿಸುವ ಬಗ್ಗೆ ಚರ್ಚಿಸುತ್ತಾರೆ.

ಈ ಲೇಖನವು ವಿಸ್ತೃತವಾದ ಮಕ್ಕಳ ರಕ್ಷಣಾ ವ್ಯವಸ್ಥೆ, ಚಿಕಿತ್ಸಾ ವ್ಯವಸ್ಥೆ ತಂಡ ವ್ಯವಸ್ಥೆ ಅಂತರ್ ಸಾಂಸ್ಥಿಕ ವ್ಯವಸ್ಥೆ ಹಾಗೂ ಕೌಟುಂಬಿಕ ಮಧ್ಯಸ್ಥಿಕೆ ವ್ಯವಸ್ಥೆ ಬಗ್ಗೆ ಚರ್ಚಿಸುತ್ತಾ ನಿರ್ಲಕ್ಷ್ಯಕ್ಕೊಳಗಾಗುವ ಅಂತರ್ ಸಾಂಸ್ಥಿಕ ವ್ಯವಸ್ಥೆ ಬಗ್ಗೆ ಕೌಟುಂಬಿಕ ಸಾಂಸ್ಥಿಕ ವ್ಯವಸ್ಥೆ ಬಗ್ಗೆ ಮಾತನಾಡುತ್ತದೆ.

ಹಾರ್ವರ್ತ್ ಜೆ ಆಂಡ್ ಮೊರಿಸನ್ ಟಿ (೨೦೦೭) ಕೊಲಾಬೊರೇಷನ್, ಇಂಟಿಗ್ರೇಶನ್ ಆಂಡ್ ಚೇಂಜ್ ಇನ್ ಚಿಲ್ಡ್ರನ್ಸ್ ಸರ್ವಿಸಸ್. ಕ್ರಿಟಿಕಲ್ ಇಸ್ಸ್ಯೂಸ್ ಆಂಡ್ ಕೀ ಇನ್ಗ್ರೇಡಿಎಂಟ್ಸ್ ಚೈಲ್ಡ್ ಅಬ್ಯೂಸ್ ಆಂಡ್ ನೆಗ್ಲೆಕ್ಟ್, ವಾಲ್ಯೂಮ್ ೩೧ ಪುಟ ೫೫–೬೯,

ಹಾರ್ವರ್ತ್ ಜೆ ಆಂಡ್ ಮೊರಿಸನ್ ಮಕ್ಕಳ ಸೇವೆಯಲ್ಲಿ ನಿರಂತರವಾಗಿರುವ ಸಹಯೋಗ ಅಂತರ್ ಸಂಬಂಧ ಸೌಹಾರ್ಧತೆ ಸೇವೆಯನ್ನು ಪರೀಕ್ಷಿಸುತ್ತದೆ. ಈ ಲೇಖನವು ಅವಿರತ ಸೇವೆ ಹೇಗೆ ಅತೀ ಕೆಳಮಟ್ಟ ಸಹಯೋಗದಿಂದ ಸಂಸ್ಥೆಗಳ ಏಕಸಾಮ್ಯತೆ ಹಾಗೂ ಕಡಿಮೆ ಎಣಿಸುವ ಔಪಚಾರಿಕ ನಿಬಂಧನೆಗಳ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ಅತೀ ಉನ್ನತ ಮಟ್ಟದ ಸಾಂಸ್ಥಿಕ ಸಂರಚನೆಯೊಳಗಿನ ಸಂಬಂಧದ ಮೇಲೆಯೂ ಚರ್ಚಿಸುತ್ತದೆ. ಕೊನೆಯಲ್ಲಿ ಲಿಖಿತರೂಪದ ಕರಾರುಗಳು ಉನ್ನತಮಟ್ಟದಲ್ಲಿ ಹೆಚ್ಚುತ್ತಿದೆ ಎನ್ನುತ್ತಾರೆ. ಇಲ್ಲಿ ಸಂಬಂಧಗಳನ್ನು ಪೋಷಿಸುವುದು ಮತ್ತು ನಂಬಿಕೆಯ ಜಾಲಗಳನ್ನು ನಿರ್ಮಿಸುವ ಬಗ್ಗೆ ಮಾತನಾಡುತ್ತಾರೆ. ಈ ಥರದ ಸಹಯೋಗದ ಸಂಬಂಧಗಳಲ್ಲಿ ಕೇಂದ್ರೀಕೃತ ಗಮನ ಹಾಗೂ ಹೊರಹೊಮ್ಮುವಿಕೆಯ ಕಡೆಯೂ ಗಮನಹರಿಸಲಾಗಿದೆ.

ಲೀ ಎ.ಸಿ ಡಬ್ಲ್ಯು.ಎಟ್ ಅಲ್ (೨೦೦೬) ದ ಇಂಪ್ಯಾಕ್ಟ್ ಆಫ್ ಎ ಮ್ಯಾನೇಜ್ಮೆಂಟ್ ಪ್ರೊಟೋಕಾಲ್ ಆನ್ ದ ಔಟ್ಕಮ್ಸ್ ಆಫ್ ಚೈಲ್ಡ್ ಅಬ್ಯುಸ್ ಆಂಡ್ ನೆಗ್ಲೆಕ್ಟ್ ೩೦(೮)

ಹಾಂಕಾಂಗಿನಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ವರದಿಯಾಗುವುದು ಕಡ್ಡಾಯವಾಗಿರುವುದರಿಂದ, ದೌರ್ಜನ್ಯಕ್ಕೊಳಗಾದ ಮಕ್ಕಳನ್ನು ಇತರ ಹರಡುವ ರೋಗಗಳನ್ನು ಹೊಂದಿರುವ ಮಕ್ಕಳೊಂದಿಗೆ ಇಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಹಾಂಕಾಂಗಿನ ವೈದ್ಯಕೀಯ ರಂಗದಲ್ಲಿರುವವರು ಮೂರು ವಿಶೇಷವಾದ ರೀತಿಯಲ್ಲಿ ದೌರ್ಜನ್ಯಕ್ಕೊಳಗಾದ ಮಕ್ಕಳ ಸಬಲೀಕರಣಕ್ಕಾಗಿ ಆಡಳಿತಾತ್ಮಕ ಬದಲಾವಣೆಗಳನ್ನು ತನಿಖೆಗೆ ವಿಶೇಷವಾದಆಡಳಿತ ವ್ಯವಸ್ಥೆಗಳಿಗಾಗಿಸೂಚಿಸಿರುತ್ತಾರೆ. ಇದು ಮೂರು ಪ್ರಮುಖ ಅಂಶಗಳನ್ನು ಹೊಂದಿರುತ್ತದೆ.

ನಮೂದಿತ ವೈದ್ಯರು ಹಾಗೂ ಆಸ್ಪತ್ರೆಗಳಲ್ಲಿ ಬರುವ ಎಲ್ಲಾ ಮಕ್ಕಳ ದೌರ್ಜನ್ಯ ಪ್ರಕರಣಗಳ ಬಗ್ಗೆ ವ್ಯವಸ್ಥಾಪನೆಗಾಗಿ ಸಮಾಜಕಾರ್ಯ. ವೈದ್ಯಕೀಯ ಸಿಬ್ಬಂಧಿ ಹಾಗೂ ಸಮುದಾಯಿಕ ಕಾರ್ಯಕರ್ತರು ಉದಾಹರಣೆಗೆ ಮಕ್ಕಳ ರಕ್ಷಣಾ ಕಾರ್ಯಕರ್ತರು ಮತ್ತು ದೌರ್ಜನ್ಯ ಪ್ರಕರಣಗಳ ತನಿಖೆ ನಡೆಸುವ ಪೋಲೀಸ್ ಅಧಿಕಾರಿಗಳು ದೈಹಿಕ ಹಾಗೂ ವೈದ್ಯಕೀಯ ಚರಿತ್ರೆ ಮತ್ತು ಮನೋವೈಜ್ಞಾನಿಕ ಮಧ್ಯಪ್ರವೇಶದ ಬಗ್ಗೆ ಚರ್ಚಿಸುತ್ತದೆ.

ಸ್ಟೀವನ್ಸ್, ಐ ಆಂಡ್ ಹಸ್ಸೆಟ್ ಪಿ (೨೦೦೭) ಅಪ್ಲಾಯಿಂಫ್ ಕಾಂಪ್ಲೆಕ್ಸಿಟಿ ಥಿಯರಿ ಟು ರಿಸ್ಕ್ ಇನ್ ಚೈಲ್ಡ್ ಪ್ರೊಟೆಕ್ಷನ್ ಪ್ರಾಕ್ಟಿಸಸ್ ಚೈಲ್ಡ್‌ಹುಡ್ ೧೪(೧) ಪು ೧೨೮.

ಲೇಖಕರು ಕ್ಲಿಷ್ಟ ಸಿದ್ಧಾಂತದ ಬಗ್ಗೆ ಉಪಯುಕ್ತ ವಿಮರ್ಶೆಯನ್ನು ನೀಡುತ್ತಾರೆ. ಕ್ಲಿಷ್ಟ ಸಿದ್ಧಾಂತದ ಪ್ರಮುಖ ವಿಷಯಗಳನ್ನು ಮಕ್ಕಳ ರಕ್ಷಣೆಯ ಚೌಕಟ್ಟಿನೊಳಗೆ ನೋಡಲಾಗಿದೆ. ಲೇಖಕರು ಕ್ಲಿಷ್ಟ ಸಿದ್ಧಾಂತದ ಮೂಲಕ ಸವಾಲುಯುಕ್ತ ಚಟುವಟಿಕೆಗಳ ವಿಮರ್ಶೆಯನ್ನು ಅರ್ಥಮಾಡಿಕೊಳ್ಳುವ ಬಗ್ಗೆ ಮಾತನಾಡುತ್ತಾರೆ. ಲೇಖಕರ ಪ್ರಕಾರ ಮಕ್ಕಳ ರಕ್ಷಣಾ ವ್ಯವಸ್ಥೆಯ, "ಪ್ರಕ್ರಿಯೆ ಹಾಗೂ ವ್ಯವಸ್ಥೆ ಕಡೆ ಕೇಂದ್ರೀಕರಿಸಿರಬೇಕೇ ಹೊರತು ವಿಧಾನ ಅಥವಾ ಕ್ರಿಯೆಗಳ ಮೂಲಕವಲ್ಲ" (ಪು.೧೪೩)

ವಿಲ್ಸನ್ ಎಸ್ (೨೦೦೯) ಪ್ರೊಆಕ್ಟಿವ್ಲಿ ಮ್ಯಾನೇಜಿಂಗ್ ಫಾರ್‌ಔಟ್ ಕಮ್ಸ್ ಇನ್ ಸ್ಟ್ಯಾಟುಟರಿ ಚೈಲ್ಡ್ ಪ್ರೊಟೆಕ್ಷನ್: ದ ಡೆವೆಲಪ್‌ಮೆಂಟ್ ಆಫ್ ಎ ಮ್ಯಾನೇಜ್ಮೆಂಟ್ ಮಾಡೆಲ್, ಆಡ್ಮಿನಿಸ್ಟ್ರೇಶನ್ ಇನ್ ಸೋಷಿಯಲ್ ವರ್ಕ್ ೩೩. ಪು.೧೩೬.

ವಿಲ್ಸನ್ ಅವರು ವಾದ ವಿಧಾನದ ಮೂಲಕ ಅಭಿವೃದ್ಧಿಯನ್ನು ಅಥವಾ ಮಕ್ಕಳ ರಕ್ಷಣಾ ವಿಧಾನವನ್ನು ಉತ್ತಮೀಕರಿಸುವ ಬಗ್ಗೆ ವಾದಿಸುತ್ತಾರೆ. ವ್ಯವಸ್ಥೆ ನಿರ್ವಹಣೆಯ

ನಿರ್ದಿಷ್ಠ ಮಾದರಿಯಲ್ಲಿರುವ ಈ ಮಾದರಿ, ಮಕ್ಕಳ ಸುರಕ್ಷತೆಯ ಮೇಲೆ ಕೇಂದ್ರೀತವಾದ ಮಕ್ಕಳ ರಕ್ಷಣಾವ್ಯವಸ್ಥೆಯನ್ನು ಮೂಲವಾಗಿಸಿದೆ. ಮಕ್ಕಳ ಒಳಿತು ಹಾಗೂ ಕೌಟುಂಬಿಕ ಕ್ರಿಯೆಯ ಬಗೆಗೆ ಚರ್ಚಿಸುತ್ತದೆ. ವ್ಯವಸ್ಥೆ ಸಂಬಂಧಿ ಪರಿಭಾಷೆಯ ಮೂಲಕ ವಿಲ್ಸನ್ ತರ್ಕಬದ್ದ ಯೋಜನೆಗೆ ಅವಶ್ಯವಿರುವ ಉತ್ತಮ ಕೊಂಡಿವ್ಯವಸ್ಥೆ "ಒಳಹರಿವು" "ಚಟುವಟಿಕೆ", "ಹೊರಹೊಮ್ಮುವಿಕೆ"ಯ ಕುರಿತು ಚರ್ಚಿಸಲಾಗಿದೆ. ಈ ಮಾದರಿಯ ಅನುಷ್ಠಾನಕ್ಕೆ ವ್ಯವಸ್ಥೆ ಮಾದರಿಗೆ ತೀರಾ ಸಾಮ್ಯತೆ ಇರುವ ಕೊಂಡಿ ಬೆಸೆಯುವಿಕೆಯ ಸಿದ್ಧಾಂತದ ದೃಷ್ಟಿ ದರ್ಪಣದ ಮೂಲಕ ತುಲನೆ ಮಾಡುತ್ತಾ ವ್ಯವಸ್ಥೆಯ ಒಂದು ವಸ್ತುವಿನಲ್ಲಾಗುವ ಬದಲಾವಣೆ ಹೇಗೆ ಒಟ್ಟು ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಎಂಬ ಅಂಶದ ಮೇಲೆ ಬೆಳಕು ಚೆಲ್ಲುತ್ತದೆ ಎಂಬ ಬಗ್ಗೆ ಮಕ್ಕಳ ರಕ್ಷಣಾ ವಿಧಾನದ ವ್ಯವಸ್ಥಾಪನೆಯ ಕೋನದಿಂದ ನೋಡಲಾಗಿದೆ.

ಕೀಪಿಂಗ್ ಚಿಲ್ಡ್ರನ್ ಸೇಫ್ ಕೊಎಲಿಶನ್ (೨೦೦೬) ಸ್ಟ್ಯಾಂಡರ್ಡ್ಸ್ ಫಾರ್ ಚೈಲ್ಡ್ ಪ್ರೊಟೆಕ್ಶನ್ ಟೂಲ್–೧ (ಬ್ರೋಚರ್) ಕೀಪಿಂಗ್ ಚಿಲ್ಡ್ರನ್ ಸೇಫ್ ಕೊಎಲಿಶನ್ ಕೀಪಿಂಗ್ ಚಿಲ್ಡ್ರನ್ ಸೇಫ್ ಸಂಯುಕ್ತತೆಯ ಸದಸ್ಯರು ಮಕ್ಕಳ ರಕ್ಷಣೆಯ ಕನಿಷ್ಟ ಗುಣಮಟ್ಟವನ್ನು ಅಭಿವೃದ್ಧಿಪಡಿಸಿದ್ದಾರೆ. ಅವು ಮಕ್ಕಳ ಹಕ್ಕುಗಳ ತತ್ವಗಳ ಮೇಲೆ ಸಡಿಲವಾಗಿ ನಿಂತಿವೆ. ಈ ಅಸ್ತ್ರವನ್ನು ಮಕ್ಕಳ ಮತ್ತು ಕುಟುಂಬಗಳಲ್ಲಿ ಮಧ್ಯ ಪ್ರವೇಶಿಸಿ ಕೆಲಸಮಾಡುವ ವ್ಯಕ್ತಿಗಳಿಗೆ ಮಾರ್ಗದರ್ಶನವಾಗಿ ರಚಿಸಲಾಗಿದೆ.

ಸೇವ್ ದ ಚಿಲ್ಡ್ರನ್. ಎ ರಫ್ ಗೈಡ್ ಟು ಚೈಲ್ಡ್ ಪ್ರೊಟೆಕ್ಷನ್ ಸಿಸ್ಟಮ್ಸ್ (ಬ್ರೋಚರ್) ಯುನೈಟೆಡ್ ಕಿಂಗ್ಡಮ್: ಸೇವ್ ದ ಚಿಲ್ಡ್ರನ್. ಈ ವರದಿ ಪ್ರಕರಣ ಕೇಂದ್ರಿತ ವಿಧಾನದಿಂದ ಮಕ್ಕಳ ರಕ್ಷಣೆಯ ವಿಸ್ತ್ರತ ವ್ಯವಸ್ಥೆ ವಿಧಾನದ ಕಡೆಗೆ ಚಲಿಸುವ ಅವಶ್ಯಕತೆ ಕುರಿತು ಮಾತನಾಡುತ್ತದೆ. ಸೇವಾ ಸಂಯೋಜನೆಯ ಸಮಸ್ಯೆಗಳು ಹಾಗೂ ಸಂಸ್ಥೆ ಸಂವಹನದಲ್ಲಿ ಹಾಯುವ ಹಾಗೂ ಸರಕಾರ ತಮ್ಮ ರಾಷ್ಟ್ರದ ಮಕ್ಕಳ ರಕ್ಷಣಾ ಅವಶ್ಯಕತೆಯೆಡೆಗೆ ಪ್ರತಿಕ್ರಿಯಿಸುವ ಬಗ್ಗೆ ಸೇವ್ ದ ಚಿಲ್ಡ್ರನ್ ದಾಖಲೆಗಳ ಮೂಲಕ ವ್ಯವಸ್ಥೆ ವಿಧಾನದಲ್ಲಿ ಮಕ್ಕಳ ರಕ್ಷಣೆಯಕಡೆ ಬೆಳಕು ಚೆಲ್ಲುತ್ತದೆ. ಈ ಕೆಳಗಿನ ಅಂಶಗಳನ್ನು (ಸಂಪೂರ್ಣ ಅಲ್ಲದಿದ್ದರೂ) ಹೊಂದಿಕೊಂಡಿದೆ:

- ಮಕ್ಕಳು ಎದುರಿಸುತ್ತಿರುವ ಕಂಟಕಗಳನ್ನು ಅರ್ಥೈಸಿಕೊಳ್ಳಲು ಇರುವ ಪ್ರತಿಬಂಧಕ ಮತ್ತು ಪ್ರತಿಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಲಭ್ಯವಾಗಿಸುವುದನ್ನು ಖಾತ್ರಿ ಪಡಿಸುವುದು.

- ವಿಶ್ವದ ವಿವಿಧ ಪ್ರದೇಶಗಳಲ್ಲಿ ಬಹುವ್ಯಾಪಿ, ಅನುಕೂಲಗೊಳಿಸಲು ಅರ್ಹವಾದ ಸುಸ್ಥಿರ ಅನುಷ್ಠಾನ ವಿಧಾನಗಳನ್ನು ಅಳವಡಿಸುವುದು.
- ಮಕ್ಕಳ ರಕ್ಷಣೆ ಹಾಗೂ ಇತರ ವ್ಯವಸ್ಥೆಗಳ ನಡುವೆ ಸಹಯೋಗವನ್ನು ಬಲಪಡಿಸುವುದು.
- ದೇಶದಲ್ಲು ಪೂರ್ವಭಾವಿಯಾಗಿ ಇರುವ ಮಕ್ಕಳ ರಕ್ಷಣಾ ವ್ಯವಸ್ಥೆಯನ್ನು, ವಿಕೋಪಗಳು ಹಾಗೂ ತುರ್ತು ಪರಿಸ್ಥಿತಿಗೆ ಉತ್ತಮ ಪೂರ್ವ ತಯಾರಿ ಹೊಂದುವಂತೆ ಮಾಡುವುದು.

ಈ ಲೇಖನವು ಮಕ್ಕಳ ರಕ್ಷಣೆಗೆ ಸಾಮಾಜಿಕ ರಕ್ಷಣಾ ವಿಧಾನದ ಹಿನ್ನೆಲೆಯಲ್ಲಿ ಚರ್ಚಿಸುತ್ತದೆ. ಇದನ್ನು ಭೇಧ್ಯ ಕಂಟಕ (ವಲ್ನರೆಬಿಲಿಟಿ ರಿಸ್ಕ್ಸ್) ವಿಶೇಷವಾದ ಬೆಳಕು ಚೆಲ್ಲುವ ಮೂಲಕ ಮಾಡಲಾಗಿದೆ. ಈ ಪತ್ರಿಕೆಯು ಮಕ್ಕಳಿಗಿರುವ ಅಪಾಯದ ಸೂಕ್ಷ್ಮತೆಗೆ ಆರು ಪ್ರಮುಖ ಅಂಶಗಳನ್ನು ಗುರುತಿಸುತ್ತದೆ. ಬಡತನ ಹಾಗೂ ಇತರ ಆರ್ಥಿಕ ಆಘಾತಗಳು ಬೆಳೆಯುತ್ತಿರುವ ನಗರೀಕರಣ ಮತ್ತು ಆರ್ಥಿಕ ಭೌಗೋಳಿಕರಣ ತಾರತಮ್ಯದ ಸಾಮಾಜೋ ಸಾಂಸ್ಕೃತಿಕ ನಡತೆಗಳು, ಹಿಂಸಾತ್ಮಕ ಧಾರ್ಮಿಕ ನಡತೆಗಳು ಹಾಗೂ ಆಚರಣೆಗಳು, ಸಶಸ್ತ್ರ ಜಗಳಗಳು ಹಾಗೂ ಸಾಂಸ್ಥಿಕ ದೌರ್ಬಲ್ಯಗಳು. ಈ ಚಿಂತನೆ ಇತರ ಚಿಂತನೆಗಳಿಗಿಂತ ಭಿನ್ನತೆ ಹೊಂದಿದ್ದು, ಇದು ಮಕ್ಕಳ ರಕ್ಷಣಾ ವ್ಯವಸ್ಥೆಯನ್ನು ಹೆಚ್ಚು ವಿಸ್ತೃತವಾಗಿ ಚರ್ಚಿಸುತ್ತದೆ ಮತ್ತು ಇದು ತಡೆ ಹಾಗೂ ಅರಿವು ಹೆಚ್ಚಿಸುವ ನಿಟ್ಟಿನಲ್ಲಿದೆ.

ಎಂಜ್ಕ ಜೆ ಎಂ (೨೦೦೮) ಎಕ್ಸಲರೇಟಿಂಗ್ ವರ್ಕ್ ವಿದ್ ಚಿಲ್ಡ್ರನ್ ಇನ್ ಕೀನ್ಯಾ ಟುವರ್ಡ್ಸ್ ದ ಫಾರ್ಮ್ಯುಲೇಶನ್ ಆಫ್ ಎ ನ್ಯಾಶನಲ್ ಚೈಲ್ಡ್ ಪ್ರೊಟೆಕ್ಷನ್ ಸಿಸ್ಟಮ್ ಈ ಲೇಖನದಲ್ಲಿ ಪ್ರಾಥಮಿಕವಾಗಿ, ಮಕ್ಕಳ ರಕ್ಷಣಾ ವ್ಯವಸ್ಥೆಯ ಅಂಶಗಳನ್ನು ಅವುಗಳ ಅನುಷ್ಠಾನ ಪ್ರಕ್ರಿಯೆಯಲ್ಲಿನ ಪ್ರಗತಿ ಹಾಗೂ ಸವಾಲುಗಳನ್ನು ದಾಖಲಿಸುವ ಬಗ್ಗೆ ಚರ್ಚಿಸಲಾಗಿದೆ.

ಲೇಖಕರು ಹೇಳುವಂತೆ ಮಕ್ಕಳ ರಕ್ಷಣಾ ವ್ಯವಸ್ಥೆಯ ಮುಖ್ಯ ಮೂರು ಹಂತಗಳ ಸೇವೆಯನ್ನು ಚರ್ಚಿಸುತ್ತದೆ.

- ಪ್ರಾಥಮಿಕ ಸೇವೆಗಳು, ಉದಾ: ಶಿಕ್ಷಣ ಹಾಗೂ ಆರೋಗ್ಯ ಸೇವೆಗಳು
- ಎರಡನೆಯದಾಗಿ ವಂಚಿತ ವರ್ಗಗಳ ಮಕ್ಕಳು ಎದುರಿಸುತ್ತಿರುವ ಮಕ್ಕಳ

ಮೇಲಿನ ದೌರ್ಜನ್ಯವನ್ನು ತಡೆದು ವಂಚಿತ ಕುಟುಂಬ ಹಾಗೂ ಸಮುದಾಯದ ವ್ಯವಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ತನ್ಮೂಲಕ ವಿವಿಧ ರೀತಿಯ ಮಕ್ಕಳ ದೌರ್ಜನ್ಯ ಗುರುತಿಸುವುದು.

- ಮೂರನೆಯದಾಗಿ ಮಕ್ಕಳ ವಿಶೇಷ ಅಗತ್ಯತೆಗೆ, ಮುಖ್ಯವಾಗಿ ಮಕ್ಕಳ ದೌರ್ಜನ್ಯ ಹಾಗೂ ಹಿಂಸೆ ಮತ್ತು ನಿರ್ಲಕ್ಷಮಯ ವಾತಾವರಣ ತಡೆಯುವುದು. ಇದೊಂದು ಅಪೂರ್ವ ಪ್ರಯತ್ನವಾಗಿದ್ದು ಅದು ಮಕ್ಕಳ ರಕ್ಷಣೆಯನ್ನು ಅವರ ಹಿತದೃಷ್ಟಿಯಿಂದ ಮಕ್ಕಳ ಶಿಕ್ಷಣ ಹಾಗೂ ಆರೋಗ್ಯದಕಡೆ ಗಮನಹರಿಸುತ್ತದೆ.

ಈ ಪತ್ರಿಕೆಯಲ್ಲಿ ಸರಕಾರದ ವಿವಿಧ ಸ್ಥರಗಳಲ್ಲಿ ನಿಯಮಾವಳಿಗಳನ್ನು ಹಾಗೂ ಅನುಷ್ಠಾನದಲ್ಲಿ ಪ್ರಕರಣಗಳನ್ನು ನಿರ್ವಹಿಸುವ ಪ್ರಕ್ರಿಯೆಯನ್ನು ಒಳಗೊಂಡಿದೆ. ಅಲ್ಲದೆ ಇದು ಅನೌಪಚಾರಿಕ ವಲಯವಾಗಿದ್ದು, ಸಮಾಜದ ವಿಭಾಗ ಹೇಗೆ ಮಕ್ಕಳ ರಕ್ಷಣಾ ವ್ಯವಸ್ಥೆಯ ಸಶಕ್ತ ಅಥವಾ ದುರ್ಭಲಗೊಳಿಸುವ ಕೆಲಸ ಮಾಡಬಹುದು ಎಂಬುದಾಗಿ ಚರ್ಚಿಸುತ್ತದೆ.

ಲ್ಯಾಂಡ್‌ಗ್ರೆನ್ ಕೆ (೨೦೦೪) ಕ್ರಿಯೇಟಿಂಗ್ ಎ ಪ್ರೊಟೆಕ್ಟಿವ್ ಎನ್ವಾಯರ್ನ್‌ಮೆಂಟ್ ಫಾರ್ ಚಿಲ್ಡ್ರನ್; ಎ ಫ್ರೇಮ್‌ವರ್ಕ್ ಫಾರ್ ಆಕ್ಷನ್, ನ್ಯೂಯಾರ್ಕ್, ಎನ್ ವಯ್: ಯುನಿಸೆಫ್ ಈ ವರದಿಯು ಮಕ್ಕಳ ರಕ್ಷಣೆಕಡೆ ಯುನಿಸೆಫ್‌ನ ವಿಧಾನದ ಮೇಲೆ ಬೆಳಕು ಚೆಲ್ಲುತ್ತದೆ. ಹೇಗೆ ಸಂಘಟನೆಗಳು ತಮ್ಮ ಗಮನವನ್ನು ಘಟನೆ ಅಥವಾ ದೌರ್ಜನ್ಯ ಪ್ರಕರಣಗಳಿಂದ, ಮಕ್ಕಳ ಸಮಗ್ರ ರಕ್ಷಣಾತ್ಮಕ ವಾತಾವರಣ ನಿರ್ಮಿಸುವ ಕಡೆ ಗಮನಹರಿಸಬೇಕಾಗುತ್ತದೆ ಎಂದು ಚರ್ಚಿಸುತ್ತದೆ. ಮಕ್ಕಳನ್ನು ಹಿಂಸೆ, ದೌರ್ಜನ್ಯ ಹಾಗೂ ಶೋಷಣೆಯಿಂದ ವ್ಯಕ್ತಿಗತವಾಗಿ ಹಾಗೂ ಸಂಘಟಿತವಾಗಿ ಪಾಠ ಮಾಡುವ ಎಂಟು ವಿಷಯಗಳ ಬಗ್ಗೆ ಚರ್ಚಿಸಲಾಗಿದೆ

೧. ಮಕ್ಕಳ ಹಕ್ಕುಗಳನು ತುಂಬಿಸಿಕೊಡಲು ಸರಕಾರದ ಬದ್ಧತೆ

೨. ಕಾನೂನು ಹಾಗೂ ಅನುಷ್ಠಾನ

೩. ನಡತೆ ಹಾಗೂ ಆಚರಣೆಗಳು

೪. ಮುಕ್ತ ಚರ್ಚೆಗಳು ಮಾಧ್ಯಮ ಹಾಗೂ ನಾಗರಿಕ ಸಮಾಜ ಒಳಪಟ್ಟಂತೆ

೫. ಮಕ್ಕಳ ಜೀವನ ಕೌಶಲ್ಯಗಳು ಇಞಾನ ಹಾಗೂ ಭಾಗವಹಿಸುವಿಕೆ

೬. ಮಕ್ಕಳ ಸಂಪರ್ಕದಲ್ಲಿರುವವರ ಸಾಮರ್ಥ್ಯ

೭. ತಡೆ, ಹಿಂಪಡೆಯುವಿಕೆ ಹಾಗೂ ಪುನರ್ ಸಂಘಟನೆ ಮತ್ತು

೮. ಮೇಲುಸ್ತುವಾರಿ ಹಾಗೂ ಕಣ್ಣಾಕಪುವಿಕೆಯನ್ನು ಮಕ್ಕಳ ರಕ್ಷಣಾ ಸೇವೆಗಳ ಯಶಸ್ಸಿಗೆ ಸಾಕ್ಷ್ಯಾಧಾರಗಳಾಗಿ ನೀಡಲಾಗಿದೆ.

ಯುನಿಸೆಫ್ (೨೦೦೭) ಮಕ್ಕಳ ರಕ್ಷಣಾ ಕಾರ್ಯಕ್ರಮ ವಿಧಾನ ಎರಡು ಪ್ರಮುಖ ಮಕ್ಕಳ ರಕ್ಷಣಾ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

೧) ಸಮಾಜ ಹಾಗೂ ಸಂಸ್ಕೃತಿಗೆ ಸಾಕಷ್ಟು ಸಾಪೇಕ್ಷತೆ ನೀಡುವುದು ಯಾಕೆಂದರೆ ಅವು ಅಂತರಿಕ ಹಾಗೂ ಅಂತಹ ಪ್ರಚೋದನೆಗಳಿಗೆ ಸ್ಪಂಧಿಸುತ್ತದೆ.

೨) ಮಕ್ಕಳಲ್ಲಿನ ವೈವಿಧ್ಯಮಯ ಪರಿಬೇಧಗಳು (ವಯಸ್ಸು, ಲಿಂಗ, ಸಾಂಪ್ರದಾಯಿಕತೆ, ಸಾಮಾಜಿಕ ಪ್ರಕರಣಗಳು ಇತ್ಯಾದಿ). ಅದು ಮೂರು ಪ್ರಾಕಾರಗಳ ಮಕ್ಕಳ ರಕ್ಷಣಾ ಚೌಕಟ್ಟು, ಸಾಮಾಜೋ–ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ದೃಷ್ಟಿ: ಮಕ್ಕಳ ತಕ್ಷಣ ವಾತಾವರಣ ಹಾಗೂ ವ್ಯವಸ್ಥೆ, ಸಾಮಾಜಿಕ ಕಲ್ಯಾಣ ವ್ಯವಸ್ಥೆ ಹಾಗೂ ಕಾನೂನುಬದ್ಧ ನಿಯಂತ್ರಣ ವ್ಯವಸ್ಥೆ. ಮಗುವನ್ನು ಕೇಂದ್ರ ಸ್ಥಾನದಲ್ಲಿ ಕುಟುಂಬ, ಸಮುದಾಯ ಹಾಗೂ ಸಮಾನ ವಯಸ್ಕರೊಂದಿಗೆ ಸ್ಥಾಪಿಸಲಾಗಿದೆ ಹಾಗೂ ಸಮಾನ ವಯಸ್ಸಿನವರೊಂದಿಗೆ ರಕ್ಷಣಾ ಜಾಲ, ಇದು ಉಪಯೋಗಿಸುವವರ ಪರ ಲೇಖನವಾಗಿದ್ದು ಸ್ವಂತ ಆಲೋಚನೆಯ ಪ್ರಾಯೋಗಿಕ ದೃಷ್ಟಿಯ ಅಳವಡಿಕೆಯ ಕಡೆ ಕೇಂದ್ರೀಕರಿಸಿದೆ.

**ಮಕ್ಕಳ ಅಭಿವೃದ್ಧಿ ಸಿದ್ಧಾಂತಗಳು** ಮಕ್ಕಳ ಅಭಿವೃದ್ಧಿ ಸಿದ್ಧಾಂತಗಳು ಮಕ್ಕಳ ಬಾಲ್ಯದಲ್ಲಾಗುವ ಬದಲಾವಣೆ ಹಾಗೂ ಸಿದ್ಧ ಜ್ಞಾನ ಬೆಳವಣಿಗೆಯಂತಹಾ, ಅಭಿವೃದ್ಧಿ ಸಂಬಂಧಿ ವಿವಿಧ ವಿಷಯಗಳನ್ನು ಕೇಂದ್ರೀಕರಿಸುತ್ತದೆ.

ಮಾನವ ಅಭಿವೃದ್ಧಿಯ ಬಗ್ಗೆ ವೈಯಕ್ತಿಕ ಅನುಭವಗಳಿವೆ. ಆದರೆ ಯಾಕೆ ಬೆಳೆಯುತ್ತಾರೆ, ಕಲಿಯುತ್ತಾರೆ ಹಾಗೂ ನಡಕೊಳ್ಳುತ್ತಾರೆ ಎಂಬುದನ್ನು ಕಲಿಯಲು ಕೆಲವೊಮ್ಮೆ ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಮಕ್ಕಳು ಯಾಕೆ ನಿರ್ಧಿಷ್ಟ ರೀತಿಯಲ್ಲಿ ನಡೆದುಕೊಳ್ಳುತ್ತಾರೆ? ಅವರ ನಡತೆ ಅವರ ವಯಸ್ಸು ಕೌಟುಂಬಿಕ ಸಂಬಂಧಕ್ಕೆ ಸಂಬಂಧಿತವಾಗಿದೆಯೇ? ಅಥವಾ ವೈಯಕ್ತಿಕ ಸ್ವಭಾವವೇ ಇಂತಹ ಪ್ರಶ್ನೆಗಳಿಗೆ ಉತ್ತರಿಸುವುದು ಅರ್ಥೈಸಿಕೊಳ್ಳುವುದು, ವಿವರಿಸುವುದು ಹಾಗೂ ಭವಿಷ್ಯ ನುಡಿಯುವುದಕ್ಕೆ, ಅಭಿವೃದ್ಧಿ

ಮನಶಾಸ್ತ್ರಜ್ಞರು ಕಷ್ಟಪಡುತ್ತಾರೆ. ಮಾನವ ಅಭಿವೃದ್ಧಿಯನ್ನು ಅರ್ಥೈಸಿಕೊಳ್ಳುವುದು, ವಿವರಿಸುವುದು ಹಾಗೂ ಬದುಕಿನುದ್ದಕ್ಕೂ ಸಂಭವಿಸುವ ನಡತೆಯ ಭವಿಷ್ಯ ನುಡಿಯುವುದಕ್ಕೆ ಅಭಿವೃದ್ಧಿಶಾಸ್ತ್ರಜ್ಞರು ಹಿಂಜರಿಯುತ್ತಾರೆ. ಮಾನವ ಅಭಿವೃದ್ಧಿಯನ್ನು ಅರ್ಥೈಸಿಕೊಳ್ಳಲು ಹಲವಾರು ಮಕ್ಕಳ ಅಭಿವೃದ್ಧಿ ಸಿದ್ಧಾಂತಗಳು ಉದಯವಾಗಿದ್ದು ಮಾನವ ಅಭಿವೃದ್ಧಿಯ ವಿವಿಧ ಮಜಲುಗಳನ್ನು ವಿವರಿಸುತ್ತದೆ.

## ಮಕ್ಕಳ ಅಭಿವೃದ್ಧಿ ಸಿದ್ಧಾಂತಗಳು

**ಹಿನ್ನೆಲೆ:** ಅಭಿವೃದ್ಧಿ ಸಿದ್ಧಾಂತಗಳು ಮಾನವ ಬೆಳವಣಿಗೆ ಹಾಗೂ ಕಲಿಕೆಯ ಚಿಂತನೆಗೆ ಚೌಕಟ್ಟನ್ನು ಒದಗಿಸುತ್ತದೆ. ತೀರಾ ಇತ್ತೀಚಿನವರೆಗೂ ಬಾಲ್ಯದಿಂದ ಹಿರಿವಯಸ್ಸಿನ ವರೆಗೂ ಮುಂದುವರಿಯುವ ಮಕ್ಕಳ ಬೆಳವಣಿಗೆಯನ್ನು ಕಡೆಗಣಿಸಲಾಗುತ್ತಿತ್ತು.

ಮಕ್ಕಳನ್ನು ವಯಸ್ಕರ ಚಿಕ್ಕ ಅಂಶವಾಗಿ ಪರಿಗಣಿಸಲಾಗುತ್ತದೆ ಮತ್ತು ಭಾಷಾ ಬಳಕೆ, ತಿಳಿದುಕೊಳ್ಳುವ ಸಾಮರ್ಥ್ಯ ಮತ್ತು ಬಾಲ್ಯ ಹಾಗೂ ವಯಸ್ಕತನದಲ್ಲಾಗುವ ದೈಹಿಕ ಬೆಳವಣಿಗೆಯ ಬಗ್ಗೆ ಕನಿಷ್ಟ ಗಮನ ನೀಡಲಾಗುತಿತ್ತು.

೨೦ನೇ ಶತಮಾನದ ಆರಂಭದಲ್ಲಿ ಕೊನೆಗೂ ಮಕ್ಕಳ ಅಭಿವೃದ್ಧಿಯ ಸಮಯದಲ್ಲಿ ಆಸಕ್ತಿ ಮೂಡಿತ್ತು ಆದರೂ ಅದರ ಗಮನ ಅಸ್ವಾಭಾವಿಕ ನಡತೆಗಳ ಬಗ್ಗೆ ಕೇಂದ್ರೀಕೃತವಾಗಿತ್ತು. ಬರ ಬರುತ್ತಾ ಸಂಶೋಧಕರು ಮಕ್ಕಳ ಅಭಿವೃದ್ಧಿಯ ಹಾಗೂ ಅಭಿವೃದ್ಧಿಯಲ್ಲಿ ಅದರ ಪರಿಣಾಮದ ಕುರಿತು ಸಂಶೋಧನೆ ನಡೆಸಿರುತ್ತಾರೆ.

ಮಕ್ಕಳ ಬೆಳವಣಿಗೆ, ಕಲಿಕೆ ಹಾಗೂ ಬದಲಾವಣೆ ಯಾಕೆ ಮುಖ್ಯವಾಗುತ್ತದೆ ಎಂದರೆ, ಇದರಿಂದಾಗಿ ಅವರ ಕಾಗ್ನೆಟಿವ್, ಭಾವನಾತ್ಮಕ, ದೈಹಿಕ ಸಾಮಾಜಿಕ ಶೈಕ್ಷಣಿಕ ಬೆಳವಣಿಗೆ ಅವರ ಮುಂದಿನ ಹಂತದ ಜೀವನದ ಮೇಲೆ ನೇರ ಪರಿಣಾಮ ಬೀರುತ್ತದೆ.

ಮಕ್ಕಳ ಅಭಿವೃದ್ಧಿಯ ಕೆಲವು ಪ್ರಮುಖ ಸಿದ್ಧಾಂತಗಳು "ಗ್ರ್ಯಾಂಡ್ ಥಿಯರಿ" "ವೈಭವೀ ಸಿದ್ಧಾಂತಗಳೆಂದು ಕರೆಯಲ್ಪಡುತ್ತವೆ. ಅವು ಬೆಳವಣಿಗೆಯ ಪ್ರತೀ ರೂಪವನ್ನು ವಿವರಿಸುತ್ತದೆ. ಉಳಿದವು ಕಿರಿ ಸಿದ್ಧಾಂತಗಳೆಂದು ಗುರುತಿಸಲ್ಪಟ್ಟಿವೆ. ಅವು ನಿಯಮಿತ ಚೌಕಟ್ಟಿನೊಳಗೆ ಬೆಳವಣಿಗೆಯನ್ನು ನೋಡುತ್ತವೆ. ಉದಾ: ಸಾಮಾಜಿಕ ಬೆಳವಣಿಗೆ.

ಈ ಕೆಳಗಿನವು ಸಂಶೋಧಕರು ಹಾಗೂ ತತ್ವಶಾಸ್ತ್ರಜ್ಞರು ಮಂಡಿಸಿದ ಮಕ್ಕಳ ಅಭಿವೃದ್ಧಿ ಸಿದ್ಧಾಂತಗಳಾಗಿವೆ. ಇತ್ತೀಚಿನ ಸಿದ್ಧಾಂತಗಳಲ್ಲಿ ಮಕ್ಕಳ ಅಭಿವೃದ್ಧಿಯ ಹಂತಗಳನ್ನು

ಪ್ರಸ್ತಾಪಿಸಲಾಗಿದೆ ಮತ್ತು ಯಾವ ನಿರ್ದಿಷ್ಟ ವಯೋಮಾನದಲ್ಲಿ ಬೆಳವಣಿಗೆಯ ಮೈಲಿಗಲ್ಲುಗಳು ಘಟಿಸುತ್ತವೆ ಎಂಬ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಫ್ರಾಯ್ಡ್ಸ್ ಸೈಕೋ ಸೆಕ್ಸುವಲ್ ಡೆವೆಲಪ್ಮೆಂಟ್ ಥಿಯರಿ ಈ ಸಿದ್ಧಾಂತ ಸಿಗ್ಮಂಡ್ ಫ್ರಾಯ್ಡ್ ಅವರ ಕಾರ್ಯದೊಡನೆ ಉದಯಿಸಿತು. ತನ್ನ ವೈದ್ಯಕೀಯ ಕ್ಲಿನಿಕ್‌ನಲ್ಲಿನ ಮಾನಸಿಕ ಕಾಯಿಲೆಗಳಿಂದ ಪಾಡು ಪಡುವ ರೋಗಿಗಳ ಮೂಲಕ ಫ್ರಾಯ್ಡರು ಬಾಲ್ಯದ ಅನುಭವಗಳು ಹಾಗೂ ಸುಪ್ತ ಮನಸ್ಸಿನ ಆಕಾಂಕ್ಷೆಗಳು ನಡತೆಯ ಮೇಲೆ ಪರಿಣಾಮ ಬೀರುತ್ತವೆ ಎಂಬ ಅಂಶವನ್ನು ನಿರೂಪಿಸುತ್ತಾರೆ.

ಫ್ರಾಯ್ಡರ ಪ್ರಕಾರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಘಟಿಸುವ ತೊಳಲಾಟ, ತಿಕ್ಕಾಟ ಘರ್ಷಣೆಗಳು ವ್ಯಕ್ತಿತ್ವ ಹಾಗೂ ಸುಪ್ತಮನಸ್ಸಿನ ಆಕಾಂಕ್ಷೆಗಳು ನಡತೆಯ ಮೇಲೆ ಜೀವನದುದ್ದಕ್ಕೂ ಮುಂದುವರಿಯುವ ಪರಿಣಾಮ ಬೀರುತ್ತವೆ.

ಫ್ರಾಯ್ಡ್ ಅವರ ಪ್ರಕಾರ ಮಕ್ಕಳ ಅಭಿವೃದ್ಧಿಯ ಮಹತ್ವದ ಶ್ರೇಷ್ಠ ಸಿದ್ಧಾಂತಗಳ ಸಾಧರ ಪಡಿಸುತ್ತಾರೆ. ಮಕ್ಕಳ ಅಭಿವೃದ್ಧಿ ದೇಹದ ಪ್ರಮುಖ ತೃಪ್ತಿ ವಲಯಗಳನ್ನು ಕೇಂದ್ರೀಕರಿಸಿ ವಿವಿಧ ಹಂತಗಳಲ್ಲಿ ಸಂಭವಿಸುತ್ತದೆ ಎಂದು ಫ್ರಾಯ್ಡ್‌ನ ಮನೋಲೈಂಗಿಕ ಸಿದ್ಧಾಂತ (ಸೈಕೋ ಸೆಕ್ಸುವಲ್ ಥಿಯರಿ) ಪ್ರತಿಪಾದಿಸುತ್ತದೆ. ಈ ಹಂತದಲ್ಲಿ ಮಗು ವಿವಿಧ ಘರ್ಷಣೆಗಳಿಗೆ ಒಳಗಾಗುತ್ತದೆ ಮತ್ತು ಇದು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅವರ ಸಿದ್ಧಾಂತಗಳ ಪ್ರಕಾರ ಮಾನಸಿಕ ಪ್ರಚೋಧನೆಯು ಶೃಂಗಾರರಸದ ವಲಯದ ನಿರ್ಧಿಷ್ಠ ಹಂತಗಳ ಮೇಲೆ ಕೇಂದ್ರಿತವಾಗಿರುತ್ತದೆ. ಇದರ ಪ್ರಗತಿಯಲ್ಲಿ ಸೋಲನುಭವಿಸಿದರೆ ಅಭಿವೃದ್ಧಿಯ ಕೇಂದ್ರಗಳನ್ನು ಸ್ಥಿರೀಕರಿಸಲು ಅಥವಾ ಸ್ಥಾಪಿಸಲು ಸಮಸ್ಯೆಯಾಗಿ ಪ್ರೌಡಾವಸ್ಥೆಯ ನಡತೆಯ ಮೇಲೆ ಪ್ರಭಾವ ಬೀರುತ್ತದೆ.

ಹಾಗಾಗಿ ಮಕ್ಕಳು ಪ್ರತೀ ಹಂತ ಸಾಧಿಸುವಾಗ ಏನಾಗುತ್ತದೆ ಮತ್ತು ಮಗು ನಿರ್ದಿಷ್ಟ ಅಭಿವೃದ್ಧಿ ಹಂತದಲ್ಲಿ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸದಿದ್ದಲ್ಲಿ ಸರಿಯಾಗಿ ಪ್ರತಿಕ್ರಿಯಿಸದಿದ್ದರೆ ಏನಾಗುತ್ತದೆ, ಪ್ರತೀ ಹಂತದ ಯಶಸ್ವೀ ಪೂರೈಕೆ ಆರೋಗ್ಯವಂತ ವ್ಯಕ್ತಿತ್ವ ಬದುಕಿನುದ್ದಾಕ್ಕೂ ಬದಲಾಗುತ್ತದೆ ಹಾಗೂ ಬೆಳವಣಿಗೆಯಾಗುತ್ತದೆ ಎಂಬುವುದು ವೇಧ್ಯವಾಗುತ್ತದೆ.

ಎರಿಕ್ಸನ್ಸ್ ಸೈಕೋಲಾಜಿಕಲ್ ಡೆವೆಲಪ್ಮೆಂಟ್ ಥಿಯರಿ(ಎರಿಕ್ಸನ್‌ನ ಮನೋವೈಜ್ಞಾನಿಕ ಅಭಿವೃದ್ಧಿ ಸಿದ್ಧಾಂತ)೨೦ನೇ ಶತಮಾನದ ಪ್ರಥಮಾರ್ಧದಲ್ಲಿ ಮನೋವಿಶ್ಲೇಷಣಾ ಸಿದ್ಧಾಂತ

ಬಹುತೇಕ ಪರಿಣಾಮಕಾರಿ ಸಿದ್ಧಾಂತವೆನಿಸಿತು. ಫ್ರಾಯ್ಡ್‌ನಿಂದ ಉತ್ತೇಜಿತರಾಗಿ ಸ್ಫೂರ್ತಿಗೊಂಡವರು ಫ್ರಾಯ್ಡನ ವಿಚಾರಗಳನ್ನು ವಿಸ್ತರಿಸತೊಡಗಿದರು ಮತ್ತು ತಮ್ಮದೇ ಸಿದ್ಧಾಂತಗಳನ್ನು ಬೆಳೆಸಿದರು, ಅದರಲ್ಲಿ ನಿಯೋ ಫ್ರಾಯ್ಡಿಯನ್ಸ್ ಹಾಗೂ ಎರಿಕ್ ಎರಿಕ್ಸನ್‌ನ ಚಿಂತನೆಗಳು ಅತೀ ಹೆಚ್ಚು ಸ್ವೀಕೃತವಾಗಿವೆ. ಎರಿಕ್ಸನ್‌ನ ಮನೋ ಸಮಾಜಿಕ ಅಭಿವೃದ್ಧಿ ಅಷ್ಟ ಹಂತದ ಸಿದ್ಧಾಂತ ಜೀವನಪರ್ಯಂತ ನಡೆಯುವ ಬೆಳವಣಿಗೆ ಹಾಗೂ ಬದಲಾವಣೆಯನ್ನು ವಿವರಿಸುತ್ತದೆ ಮತ್ತು ಅದು ಸಾಮಾಜಿಕ ಕೊಡುಕೊಳ್ಳುವಿಕೆಗೆ ಮತ್ತು ವಿವಿಧ ಅಭಿವೃದ್ಧಿ ಹಂತಕ್ಕೆ ಸಂಘರ್ಷ ಕೇಂದ್ರೀಕರಿಸುತ್ತದೆ.

ಎರಿಕ್‌ಸನ್‌ನ ಮನೋ-ಸಾಮಾಜಿಕ ಅಭಿವೃದ್ಧಿ ಸಿದ್ಧಾಂತ, ಫ್ರಾಯ್ಡನ ಸಿದ್ಧಾಂತದೊಂದಿಗೆ ಬಹಳಮಟ್ಟಿಗೆ ಸಾಮ್ಯತೆ ಹೊಂದಿದೆಯಾದರೂ ತನ್ನದೇ ಆದ ವೈವಿಧ್ಯವನ್ನು ಹೊಂದಿದೆ. ಅಭಿವೃದ್ಧಿಗೆ ಲೈಂಗಿಕ ಆಸಕ್ತಿಯು ಚಲನಾಶಕ್ತಿಯೇ ಕೇಂದ್ರ ಎನ್ನುವ ಅಂಶಕ್ಕೆ ಬದಲಾಗಿ ಎರಿಕ್ಸನ್ ಸಾಮಾಜಿಕ ಸಂವಾದ ಹಾಗೂ ಅನುಭವಗಳು ನಿರ್ಣಾಯಕ ಪಾತ್ರವಹಿಸುತ್ತವೆ ಎಂದಿದ್ದಾರೆ. ಆತನ ಅಷ್ಟ ಹಂತದ ಮಾನವ ಅಭಿವೃದ್ಧಿ ಸಿದ್ಧಾಂತ, ಶೈಶವ್ಯದಿಂದ ಸಾವಿನವರೆಗಿನ ಪ್ರಕ್ರಿಯೆಯನ್ನು ಕೇಂದ್ರೀಕರಿಸುತ್ತದೆ. ಪ್ರತೀ ಹಂತದಲ್ಲಿ ಜನರು ಅಭಿವೃದ್ಧಿ ಸಂಘರ್ಷಗಳ ಪರಿಣಾಮವನ್ನು ಹೊಂದಿ ನಂತರದ ಬೆಳವಣಿಗೆ ಹಾಗೂ ಕಾರ್ಯವೈಖರಿಯ ಮೇಲೆ ಪರಿಣಮಿಸುತ್ತದೆ.

ಇತರ ಅಭಿವೃದ್ಧಿ ಸಿದ್ಧಾಂತಗಳಿಗಿಂತ ಭಿನ್ನವಾಗಿ ಎರಿಕ್ ಎರಿಕ್ಸನ್‌ನ ಮನೋ-ಸಾಮಾಜಿಕ ಸಿದ್ಧಾಂತದ ಪ್ರಕಾರ ಅಭಿವೃದ್ಧಿ ಜೀವನದುದ್ದಕ್ಕೂ ಪರಿಣಮಿಸುತ್ತದೆ ಎಂದು ಪ್ರತಿಪಾದಿಸುತ್ತದೆ. ಪ್ರತಿ ಹಂತದಲ್ಲಿ ಮಕ್ಕಳು ಹಾಗೂ ಪ್ರೌಢ ವ್ಯಕ್ತಿಗಳ ಬಿಕ್ಕಟ್ಟು ಅಥವಾ ಸಂದಿಗ್ಧ ಪರಿಸ್ಥಿತಿಗೆ ಒಳಗಾಗುತ್ತಾರೆ ಮತ್ತು ಜೀವನದ ತಿರುವು ಕೇಂದ್ರಕ್ಕೆ ಬಂದು ನಿಲ್ಲುತ್ತಾರೆ. ಈ ಸವಾಲುಗಳನ್ನು ಯಶಸ್ವಿಯಾಗಿ ಪೂರೈಸಿದವರು ಜೀವನ ಪರ್ಯಂತ ಮನೋವೈಜ್ಞಾನಿಕ ಬಲ ಹೊಂದುತ್ತಾರೆ.

**ಬಿಹೇವಿಯರಲ್ ಚೈಲ್ಡ್ ಡೆವೆಲ್ಪ್‌ಮೆಂಟ್** (ಮಕ್ಕಳ ಅಭಿವೃದ್ಧಿ ವರ್ತನಾ ಸಿದ್ಧಾಂತಗಳು)

೨೦ನೇ ಶತಮಾನದ ಪ್ರಥಮಾರ್ಧದ ಕಾಲದಲ್ಲಿ ವರ್ತನಾತ್ಮಕತೆ ಎನ್ನುವ ಚಿಂತನಾ ಶಾಲೆ ತೆರೆದುಕೊಂಡಿತು. ವರ್ತನಾಶಾಸ್ತ್ರಜ್ಞರು ಶಿಸ್ತುಬದ್ಧ ವಿಜ್ಞಾನಕ್ಕಾಗಿ ಗಮನಿಸಬಹುದಾದ ಹಾಗೂ ಪರಿಮಾಣಾತ್ಮಕ ನಡತೆಯ ಮೇಲೆ ಗಮನ ಕೇಂದ್ರೀಕರಿಸಬೇಕು ಎಂಬುದು ಅದರ ವಾದವಾಗಿತ್ತು. ವರ್ತನಾ ದೃಷ್ಟಿಕೋನದ ಪ್ರಕಾರ ಎಲ್ಲಾ ಮಾನವ ವರ್ತನೆಗಳು

ವಾತಾವರಣದಿಂದ ಪ್ರಭಾವಿಸಿರುತ್ತವೆ. ಜಾನ್ ಬಿ ವಾಟ್ಸನ್ ಹಾಗೂ ಬಿ.ಎಫ್ ಸ್ಕಿನ್ನರ್‌ರಂತಹಾ ವರ್ತನಾ ಸಿದ್ಧಾಂತಿಗಳ ಪ್ರಕಾರ ಕಲಿಕೆಯು ಸಂಘ ಹಾಗೂ ಬೆಂಬಲದಿಂದ ಘಟಿಸುತ್ತದೆ.

ಮಕ್ಕಳ ಅಭಿವೃದ್ಧಿಯ ವರ್ತನಾ ಸಿದ್ಧಾಂತ ವಾತಾವರಣದ ಸಂಚಲನದ ಪರಿಣಾಮದಿಂದ ವರ್ತನೆ ರೂಪುಗೊಳ್ಳುತ್ತದೆ ಮತ್ತು ಜಾನ್ ಬಿ ವಾಟ್ಸನ್, ಐವನ್ ಪಾವ್ಲೋವ್ ಹಾಗೂ ಬಿ.ಎಫ್ ಸ್ಕಿನ್ನರ್ ಅವರ ಸಿದ್ಧಾಂತಗಳ ಶಿಕ್ಷೆ ಅಥವಾ ದಂಡನೆ, ಬೆಂಬಲ, ಪ್ರೇರೇಪಣೆ ಬೆಳವಣಿಗೆಯು ಪ್ರತಿಫಲಕ್ಕೆ ಸಿಗುವ ಪ್ರತಿಕ್ರಿಯೆ ಆಗಿರುತ್ತದೆ ಈ ಸಿದ್ಧಾಂತವು ಇಂತಹ ಅಭಿವೃದ್ಧಿ ಸಿದ್ಧಾಂತಗಳಿಗಿಂತ ಗಣನೀಯವಾಗಿ ಭಿನ್ನವಾಗಿದೆ. ಯಾಕೆಂದರೆ ಅದು ಆಂತರಿಕ ಚಿಂತನೆ ಅಥವಾ ಭಾವನೆಗೆ ಬೆಲೆಕೊಡುವುದಿಲ್ಲ ಆದರೆ ನಾವು ನಮ್ಮ ಅನುಭವಗಳಿಂದ ರೂಪುಗೊಂಡಿರುತ್ತೇವೆ ಎಂಬ ಅಂಶದ ಮೇಲೆ ಕೇಂದ್ರೀಕರಿಸುತ್ತದೆ. ಈ ಅಭಿವೃದ್ಧಿ ದೃಷ್ಟಿಕೋನದಿಂದ ಹೊರಹೊಮ್ಮಿದ ಎರಡು ಪ್ರಮುಖ ಕಲಿಕಾ ವಿಧಾನಗಳೆಂದರೆ ಶಾಸ್ತ್ರೀಯ ವಿದ್ಯಾಮಾನ(ಕ್ಲಾಸಿಕಲ್ ಕಂಡೀಷನಿಂಗ್) ಹಾಗೂ ವರ್ತಮಾನ ವಿಧ್ಯಮಾನ (ಒಪೆರಂಟ್ ಕಂಡೀಷನಿಂಗ್) .

**ಪಿಯಾಜಿಯೆಟ್ಸ್ ಕಾಗ್ನಿಟಿವ್ ಡೆವೆಲೊಪ್ಮೆಂಟಲ್ ಥಿಯರಿ**

ಸಂಬಂಧಿ ಸಿದ್ಧಾಂತ ವ್ಯಕ್ತಿಯ ಚಿಂತನಾ ಪ್ರಕ್ರಿಯಯ ಅಭಿವೃದ್ಧಿಗೆ ಸಂಬಂಧಿಸಿದ್ದಾಗಿದೆ. ಅಷ್ಟೇ ಅಲ್ಲದೆ ಹೇಗೆ ಈ ಚಿಂತನಾ ಪ್ರಕ್ರಿಯ ಪ್ರಪಂಚವನ್ನು ಅರ್ಥೈಸಿಕೊಳ್ಳುವ ಹಾಗೂ ಸಂವಹಿಸುವ ಕ್ರಮದ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳ ಅಭಿವೃದ್ಧಿಯ ಬಗ್ಗೆ ಕ್ರಾಂತಿಕಾರಿ ಚಿಂತನೆಗೆ ಪಿಯಾಜೆಟ್‌ನ ಚಿಂತನೆ ಎಡೆಮಾಡಿಕೊಡುತ್ತದೆ. ಮಕ್ಕಳು ವಯಸ್ಕರಿಗಿಂತ ಭಿನ್ನವಾಗಿ ಯೋಚಿಸುತ್ತಾರೆ. ಸಿದ್ಧಾಂತಿ ಜೀನ್ ಪಿಯಾಜೆಟ್ ಸಂಬಂಧಿ ಅಭಿವೃದ್ಧಿ ಸಿದ್ಧಾಂತ(ಥಿಯರಿಸ್ ಆಫ್ ಕಾಗ್ನೆಟಿವ್ ಡೆವೆಲಪ್ಮೆಂಟ್)ಗಳಲ್ಲಿ ಅತೀ ಪರಿಣಾಮಕಾರಿ ಅನಿಸಿರುವ ಸಿದ್ಧಾಂತ ಮಂಡಿಸುತ್ತಾರೆ. ಇದರಲ್ಲಿ ಆತ ಚಿಂತನೆಯ ಅಭಿವೃದ್ಧಿ ಮತ್ತು ಮಾನಸಿಕ ಸ್ಥಿತಿಗತಿ ಬಗ್ಗೆ ವಿವರಿಸುತ್ತಾರೆ ಮತ್ತು ಹೇಗೆ ಈ ಚಿಂತನಾ ಪ್ರಕ್ರಿಯೆ ನಾವು ಹೇಗೆ ಅರ್ಥಮಾಡಿಕೊಳ್ಳುತ್ತೇವೆ ಹಾಗೂ ಪ್ರಪಂಚದೊಂದಿಗೆ ಸಂವಹಿಸುತ್ತೇವೆ ಎನ್ನುವುದರ ಮೇಲೆ ಬೀರುವ ಪರಿಣಾಮದ ಬಗ್ಗೆ ಪ್ರತಿಪಾದಿಸುತ್ತದೆ. ನಂತರದಲ್ಲಿ ಪಿಯಾಜೆಟ್ ಮಕ್ಕಳ ಬೌದ್ಧಿಕ ಅಭಿವೃದ್ಧಿಯ ಹಂತಗಳ ಬಗ್ಗೆ ಸಂಬಂಧಿ ಸಿದ್ಧಾಂತದಲ್ಲಿ ಮಾತನಾಡುತ್ತಾರೆ.

**ದ ಸೆನ್ಸರಿ ಮೋಟರ್ ಸ್ಟೇಜ್: ಇಂದ್ರಿಯ ಚಲನೆಯ ಹಂತ(ಇಂದ್ರಿಯ ಚಲನೆಯ ಹಂತ):** ಈ ಹಂತ ಹುಟ್ಟಿನಿಂದ ಎರಡು ವರ್ಷ ಪ್ರಾಯದವರೆಗೆ ಮುಂದುವರಿಯುತ್ತದೆ.

ಈ ಸಮಯದಲ್ಲಿ ಮಗುವಿನ, ಜ್ಞಾನೇಂದ್ರಿಯಗಳು ಮತ್ತು ಚಲನೆಯು ನಿಯಮಿತವಾಗಿದ್ದು, ಮಗುವಿನ ಪ್ರಾಪಂಚಿಕ ಜ್ಞಾನ ಕಡಿಮೆ ಇರುತ್ತದೆ.

ದ ಪ್ರಿ ಅಪರೇಶನಲ್ ಸ್ಟೇಜ್‌ಕಾರ್ಯರೂಪಕತೆ ಪೂರ್ವಹಂತ ೨-೬ ವರ್ಷದ ವಯಸ್ಸಿನಲ್ಲಿ ಮಗು ಭಾಷೆಯ ಪ್ರಯೋಗ ಮಾಡಲು ಆರಂಭಿಸುತ್ತದೆ. ಈ ಅವಧಿಯಲ್ಲಿ ಮಕ್ಕಳು ಮೂಲತರ್ಕವನ್ನು ಇನ್ನೂ ಅರ್ಥಮಾಡಿಕೊಳ್ಳಲಾರರು. ಮನಸ್ಸಿನೊಳಗೆ ಮಾಹಿತಿಯನ್ನು ಪರೀಕ್ಷಿಸಲಾರರು ಹಾಗಾಗಿ ಇನ್ನೊಬ್ಬರ ದೃಷ್ಟಿಕೋನ ಅವರಿಗೆ ನಿಲುಕಲಾರದು.

ದ ಕಾಂಕ್ರೀಟ್ ಅಪರೇಶನಲ್ ಥಿಯರಿ ೧೧ ವರ್ಷಗಳ ನಡುವಿನ ವಯಸ್ಸು ಈ ಅವಧಿಯಲ್ಲಿ ಮಕ್ಕಳು ಉತ್ತಮ ಮಾನಸಿಕ ಕ್ರಿಯೆಯ ಅರ್ಥೈಸಿಕೊಳ್ಳುವಿಕೆ ಹೊಂದಿರುತ್ತಾರೆ. ಮಕ್ಕಳು ಆಳವಾದ ವಿಷಯಗಳನ್ನು ತಾರ್ಕಿಕವಾಗಿ ಆಲೋಚಿಸಬಲ್ಲವರಾಗಿರುತ್ತಾರೆ ಆದರೆ ಅರ್ಥೈಸುವಿಕೆ ಛಿದ್ರವಾಗಿ ಅಥವಾ ಊಹನಾತ್ಮಕ ಪರಿಕಲ್ಪನೆಯ ರೂಪದಲ್ಲಿರುತ್ತವೆ.

ದಿ ಓಪರೇಶನಲ್ ಸ್ಟೇಜ್‌ಔಪಚಾರಿಕ ಸಾಕಾರ ಹಂತ ಈ ಅವದಿ ೧೨ ರಿಂದ ಪ್ರೌಢಪೂರ್ವ ಅವಸ್ಥೆವರೆಗೂ ಮುಂದುವರಿಯುತ್ತದೆ ಮತ್ತು ಜನರು ಛಿಧ್ರ ಪರಿಕಲ್ಪನೆಗಳನ್ನು ಆಲೋಚಿಸುವ ಸಾಮರ್ಥ್ಯ ಹೊಂದಿರುತ್ತಾ ತಾರ್ಕಿಕ ಚಿಂತನೆ, ನಿಗಮನ ನ್ಯಾಯ ಮತ್ತು ವ್ಯವಸ್ಥಿತ ಯೋಚನೆ ಈ ಹಂತದಲ್ಲಿ ಉದ್ಭವಿಸುತ್ತದೆ.

**ಬೌಲ್‌ಬೀಸ್‌ಅಡ್ಜಸ್ಟೇಬಿಲಿಟಿ ಥಿಯರಿ, ಬೌಲ್ಬಿಯ ಹೊಂದಿಕೆ ಸಿದ್ಧಾಂತ:**

ಮಕ್ಕಳ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಬಹಳಷ್ಟು ಸಂಶೋಧನೆಗಳಿವೆ. ಜಾನ್ ಬೌಲ್ಬಿ ಪೂರ್ವಿಕ ಸಾಮಾಜಿಕ ಅಭಿವೃದ್ಧಿ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೆ. ಅವರ ಪ್ರಕಾರ ಪಾಲನೆ ನೀಡುವವರೊಂದಿಗಿನ ಸಂಬಂಧ, ಮಗುವಿನ ಅಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ ಮತ್ತು ಅದರ ಪ್ರಭಾವ ಸಾಮಾಜಿಕ ಸಂಬಂಧಗಳ ಮೇಲೆ ಜಿವನದುದ್ದಕ್ಕೂ ಮುಂದುವರೆಯುತ್ತದೆ. ಬೌಲ್ಬಿಯ ಹೊಂದಿಕೆ ಸಿದ್ಧಾಂತದ ಪ್ರಕಾರ ಮಕ್ಕಳ ಹೊಂದಿಕೆಯ ಅಧಮ್ಯ ಅವಶ್ಯಕತೆಯೊಂದಿಗೆ ಹುಟ್ಟುತ್ತಾರೆ. ಅಂತಹಾ ಹೊಂದಿಕೆ ಬದುಕನ್ನು ಮಕ್ಕಳು ಪೋಷಣೆ ಹಾಗೂ ರಕ್ಷಣೆ ಪಡೆಯುವುದನ್ನು ಖಾತ್ರಿಪಡಿಸುತ್ತದೆ. ಅಷ್ಟೇ ಅಲ್ಲದೆ ಈ ಹೊಂದಿಕೆ ಶುದ್ದ ವರ್ತನೆ ಮತ್ತು ಪ್ರಚೋದಕ ವಿನ್ಯಾಸದ ಗುಣಗಳನ್ನು ಹೊಂದಿರುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪೋಷಕರು ಮತ್ತು ಮಕ್ಕಳು ಸಾನಿಧ್ಯ ಖಾತ್ರಿಪಡಿಸುವ ವಿನ್ಯಾಸದಲ್ಲಿ ತೊಡಗಿರುತ್ತಾರೆ. ಮಕ್ಕಳು ಪೋಷಕರೊಂದಿಗೆ ಸಮೀಪದಿಂದ ಸಂಪರ್ಕದಲ್ಲಿದ್ದು ಸುಭದ್ರ ಸ್ವರ್ಗ ಮತ್ತು ಹುಡುಕಾಟಕ್ಕೆ ಭದ್ರ ಬುನಾದಿ ಅನುಭವಿಸುತ್ತಾರೆ.

ವಿಸ್ತರಿಸುತ್ತಾ ಸಂಶೋಧಕರು ಇದನ್ನು ಬೌಲ್ಬಿಯ ಮೂಲ ಕಾರ್ಯವನ್ನು ಉಲ್ಲೇಖಿಸಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಹೊಂದಿಕೆ ವಿಧಾನಗಳು ಹೊಂದಿವೆ ಎಂದು ಸೂಚಿಸಿದ್ದಾರೆ. ಸಮಂಜಸ ಬೆಂಬಲ ಹಾಗೂ ಪೋಷಣೆಗಳು ಭದ್ರ ಹೊಂದಿಕೆ ವಿಧಾನ ಹೊಂದಿರುವ ಸಾಧ್ಯತೆ ಹೆಚ್ಚು ಕಡಿಮೆಯಾದಲ್ಲಿ ಭಾವನೆಗಳ ಅಸ್ಥಿರತೆ, ತಪ್ಪಿಸಿಕೊಳ್ಳುವಿಕೆ ಹಾಗೂ ಅಸಂಘಟಿತ ಶೈಲಿ ಹೊಂದುತ್ತಾರೆ.

ಬಂಡುರಾಸ್ ಸೋಷಿಯಲ್ ಲರ್ನಿಂಗ್ ಬಂಡುರಾ ಅವರ ಸಾಮಾಜಿಕ ಕಲಿಕಾ ಸಿದ್ಧಾಂತ: ಸಾಮಾಜಿಕ ಕಲಿಕಾ ಸಿದ್ಧಾಂತ ಮನಶಾಸ್ತ್ರಜ್ಞ ಆಲ್ಬರ್ಟ್ ಬಂದೂರಾ ಅವರ ಕೆಲಸದ ಮೇಲೆ ಹೊಂದಿಕೊಂಡಿದೆ. ನಿಬಂಧಿಸುವುದು ಹಾಗೂ ಬೆಂಬಲಿಸುವ ಪ್ರಕ್ರಿಯೆ ಕಲಿತ ವರ್ತನೆಯ ಮೇಲೆ ಪರಿಣಾಮ ಬೀರುತ್ತದೆ. ಸಾಮಾಜಿಕ ಕಲಿಕಾ ಸಿದ್ಧಾಂತದ ಪ್ರಕಾರ ವರ್ತನೆಗಳು ವೀಕ್ಷಿಸುವುದರಿಂದ ಮತ್ತು ಮಾದರಿಯಿಂದ ರೂಪುಗೊಳ್ಳಬಹುದು. ತಂದೆ ತಾಯಿ ಸಮಾನವಯಸ್ಕರನ್ನೊಳಗೊಂಡಂತೆ ಇತರ ಪ್ರಕ್ರಿಯೆಗಳಿಂದ ಮಕ್ಕಳು ಹೊಸ ತಂತ್ರ ಮತ್ತು ಹೊಸ ಮಾಹಿತಿ ಪಡೆಯುತ್ತಾರೆ. ಬಂದೂರಾ, ಮಕ್ಕಳ ಅಭಿವೃದ್ಧಿ ಸಿದ್ಧಾಂತ ಸೂಚಿಸುವಂತೆ ವೀಕ್ಷಣೆ ಕಲಿಕೆಯಲ್ಲಿ ವಿಮರ್ಶಾತ್ಮಕ ಪಾತ್ರ ವಹಿಸುತ್ತದೆ. ಆದರೆ ಈ ವೀಕ್ಷಣೆ, ಜೀವಂತ ಮಾದರಿಗಳನ್ನು ನೋಡುವುದೇ ಆಗಿರಬೇಕೆಂದಿಲ್ಲ. ಆದರೆ ಮೌಖಿಕ ಸೂಚನೆಗಳನ್ನು ಕೇಳುವುದರಿಂದ ಹಾಗೂ ನೈಜ್ಯ ಇಲ್ಲವೇ ಕೃತಕ ವರ್ತನಾ ಮಾದರಿಗಳ ವೀಕ್ಷಣೆಯಿಂದಲೂ ದೊರೆಯಬಹುದು.

**ವೈಗೋಟ್ಸ್ಕಿ ಸ್ ಸೋಷಿಯೋ-ಕಲ್ಚರಲ್ ಥಿಯರಿ:**

ಲೆವ್ ವೈಗೋಟ್ಸ್ಕಿ ಎನ್ನುವ ಮನೋಶಾಸ್ತ್ರ ಸೋಷಿಯಲ್ ಲರ್ನಿಂಗ್ ಥಿಯರಿ ಎನ್ನುವ ಪರಿಣಾಮಕಾರಿ ಸಿದ್ಧಾಂತವನ್ನು ಮುಂದಿಟ್ಟಿದ್ದಾರೆ. ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಪಿಯಾಜೆಟ್ ನಂತೆ ವೈಗೊಟ್ಸ್ಕಿ ಮಕ್ಕಳು ಕ್ರಿಯಾತ್ಮಕವಾಗಿ ಮತ್ತು ಅನುಭವಿಸಿ ಕಲಿಯುತ್ತಾರೆ. ಆತನ ಸಮಾಜೋ-ಸಾಂಸ್ಕೃತಿಕ ಸಿದ್ಧಾಂತದ ಪ್ರಕಾರ ಹೆತ್ತವರು, ಪೋಷಕರು ಸಮ-ವಯಸ್ಕರು ಮತ್ತು ಸಂಸ್ಕೃತಿ ಮಕ್ಕಳಲ್ಲಿ ಉನ್ನತ ಮಟ್ಟದ ಕಾರ್ಯಕ್ಕೆ ಕಾರಣವಾಗುತ್ತದೆ. ಅವರ ಪ್ರಕಾರ ಕಲಿಕೆ ಮೂಲಭೂತವಾಗಿ ಸಾಮಾಜಿಕ ಪ್ರಕ್ರಿಯೆ ಆಗಿರುತ್ತದೆ. ಇತರರೊಂದಿಗೆ ಸಂವಹನ ಮಾಡುವುದರಿಂದ ಕಲಿಕೆ ವ್ಯಕ್ತಿಗಳ ವಿಶ್ವವನ್ನು ಅರ್ಥೈಸಿಕೊಳ್ಳುವಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ.

ಮಕ್ಕಳ ಅಭಿವೃದ್ಧಿ ಸಿದ್ಧಾಂತ ಸಾನಿಧ್ಯ ಅಭಿವೃದ್ಧಿ ವಲಯ ಪರಿಕಲ್ಪನೆಯನ್ನು ಪರಿಚಯಿಸುತ್ತದೆ. ಅದು ಒಬ್ಬ ವ್ಯಕ್ತಿ ಸ್ವಂತವಾಗಿ ಮತ್ತು ಇತರರ ಸಹಾಯದೊಂದಿಗೆ ಮಾಡಬಹುದಾದ ಕೆಲಸಗಳ ನಡುವಿನ ವ್ಯತ್ಯಾಸದ ಬಗ್ಗೆ ತಿಳಿಸುತ್ತದೆ. ಒಟ್ಟಾರೆ ಇತರ

ವ್ಯಕ್ತಿಗಳ ಜ್ಞಾನದಿಂದ ಜನರು ಪ್ರಗತಿಪರವಾಗಿ ಕಲಿಯುತ್ತಾರೆ ಮತ್ತು ತಮ್ಮ ಕೌಶಲ್ಯ ಹಾಗೂ ಅರ್ಥೈಸಿಕೊಳ್ಳುವಿಕೆಯನ್ನು ಹೆಚ್ಚಿಸಿಕೊಳ್ಳುತ್ತಾರೆ.

ಕೆಲವು ಮನಶಾಸ್ತ್ರಜ್ಞರು ಮಕ್ಕಳ ಅಭಿವೃದ್ಧಿಯ ವಿವಿಧ ವಿಷಯಗಳನ್ನು ವಿವರಿಸಲು ಮತ್ತು ಸಂಶೋಧಿಸಲು ಪ್ರಯತ್ನಿಸುತ್ತಾರೆ. ಈ ಸಿದ್ಧಾಂತಗಳು ಮಕ್ಕಳ ಅಭಿವೃದ್ಧಿ ಬಗೆಗಿನ ನಮ್ಮ ಜ್ಞಾನವನ್ನು ವಿಸ್ತರಿಸಿ ನಮ್ಮ ಮನಸ್ಸಿನಮೇಲೆ ಪರಿಣಾಮ ಬೀರುತ್ತದೆ.

ಸಿದ್ಧಾಂತಗಳು ಮಕ್ಕಳ ಅಭಿವೃದ್ಧಿ ಬಗ್ಗೆ ಬೇರೆ ಬೇರೆಯವರು ಹೇಗೆ ಭಿನ್ನ ಭಿನ್ನವಾಗಿ ಯೋಚಿಸುತ್ತಾರೆ ಎನ್ನುವುದನ್ನು ವಿವರಿಸುತ್ತದೆ. ವಾಸ್ತವದಲ್ಲಿ ಮಕ್ಕಳ ಅಭಿವೃದ್ಧಿಯ ಮೇಲೆ ನೇರ ಹಾಗೂ ಪರೋಕ್ಷವಾಗಿ ಪರಿಣಾಮಬೀರುವ ವಿವಿಧ ಅಂಶಗಳು ಮಾತ್ರ ನಮಗೆ ವಿವರಿಸುತ್ತವೆ.

**ಮಾನಸಿಕ ಅಭಿವೃದ್ಧಿ:**

ಅಭಿವೃದ್ಧಿ ಮನಶಾಸ್ತ್ರದ ಚರಿತ್ರೆಯಲ್ಲಿ ಬಹಳಷ್ಟು ಪ್ರಮುಖ ವಿಚಾರಗಳ ಮೇಲೆ ಚರ್ಚಿಸುತ್ತದೆ. ಅದರಲ್ಲಿ ಪ್ರಮುಖ ವಿಷಯ ಅಭಿವೃದ್ಧಿ ತಳಿಯಿಂದ ಅಥವಾ ಪರಿಸರದಿಂದ ಪರಿಣಮಿಸುತ್ತದೆ? ಅಭಿವೃದ್ಧಿ ನಿಧಾನಗತಿಯಲ್ಲಿ ಮತ್ತು ನಯವಾಗಿರುತ್ತದೆಯೇ?ಅಥವಾ ಬದಲಾವಣೆ ಹಂತಗಳಲ್ಲಿ ನಡೆಯುತ್ತವೆಯೇ? ಜೀವನದ ಪ್ರಥಮ ಹಂತದ ಬೆಳವಣಿಗೆಯಲ್ಲಿ ಅನುಭವಗಳು ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆಯೇ ಅಥವಾ ನಂತರದ ಬದುಕಿನ ಹಂತದಲ್ಲಿ ಹೆಚ್ಚು ಪರಿಣಾಮಕಾರಿಯೇ?

**ಪರಿಸರ ಮತ್ತು ಪಾಲನೆ:**

ವಂಶಾವಳಿ ಹಾಗೂ ವಾತಾವರಣ ಮತ್ತು ಪರಿಸರ ಹಾಗೂ ಪಾಲನೆ ಯ ಚರ್ಚೆ ಒಂದು ಹಳೆಯ ವಿಷಯವಾಗಿದ್ದು ತಾತ್ವಿಕ ಹಾಗೂ ಮನೋವೈಜ್ಞಾನಿಕ ಎರಡರಲ್ಲೂ ಗುರುತಿಸಲ್ಪಟ್ಟಿದೆ. ಸಿದ್ಧಾಂತಿಳಾದ ಪ್ಲೇಟೋ ಹಾಗೂ ಡೆಸ್ಕಾರ್ತಸ್ ಚಿಂತನೆಗಳು ಹುಟ್ಟಿನಿಂದ ಬಂದಿರುತ್ತವೆ ಎಂದರೆ ಜಾನ್ ಲಾಕ್ಸ್ ವಾದಿಸುವಂತೆ ಮನಸ್ಸು ಹುಟ್ಟುವಾಗ ಶುಭ್ರ ಸ್ಲೇಟಿನಂತಿದ್ದು ಅನುಭವದೊಂದಿಗೆ ನಮ್ಮ ಜ್ಞಾನವನ್ನು ನಿರ್ಧರಿಸುತ್ತದೆ. ಇಂದಿನ ಹೆಚ್ಚಿನ ಮನಶಾಸ್ತ್ರದ ನಂಬಿಕೆಯಂತೆ ಈ ಎರಡು ಪ್ರಮುಖ ಶಕ್ತಿಗಳು ಅಭಿವೃದ್ಧಿಗೆ ಕಾರಣವಾಗುತ್ತವೆ.

**ಆರಂಭಿಕ ಅನುಭವಗಳು ಹಾಗೂ ನಂತರದ ಅನುಭವಗಳು:**

ಮನಶಾಸ್ತ್ರದ ಎರಡನೇ ಪ್ರಮುಖ ಅಧ್ಯಯನದಂತೆ ಅಭಿವೃದ್ಧಿಯಲ್ಲಿ ಬದುಕಿನ ಆರಂಭಿಕ ಅನುಭವಗಳು ಮತ್ತು ಬದುಕಿನ ಮುಂದಿನ ಹಂತದಲ್ಲಿ ಘಟಿಸುವ

ಅನುಭವಗಳೆರಡು ಪರಿಗಣಿಸಲ್ಪಡುತ್ತವೆ. ಮನಶಾಸ್ತ್ರದ ಪ್ರಕಾರ ಬಾಲ್ಯದಲ್ಲಿನ ಘಟನೆಗಳು ಬದುಕಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಫ್ರಾಯ್ಡನ ಪ್ರಕಾರ ಮಗುವಿನ ವ್ಯಕ್ತಿತ್ವ ಐದು ವರ್ಷ ವಯಸ್ಸು ತುಂಬುವುದರೊಳಗಾಗಿ ಸಂಪೂರ್ಣವಾಗಿ ಸ್ಥಾಪಿತವಾಗುತ್ತದೆ. ಹೀಗಿರುವುದಾದರೆ ಯಾರು ದೌರ್ಜನ್ಯ ನಿರ್ಲಕ್ಷಮಯ ಬಾಲ್ಯವನ್ನು ಅನುಭವಿಸುತ್ತಾರೋ ಅವರು ಎಂದಿಗೂ ಹೊಂದಿಕೊಳ್ಳಲಾರರು ಅಥವಾ ಸ್ವಾಭಾವಿಕವಾಗಿ ಅಭಿವೃದ್ಧಿ ಹೊಂದಲಾರರು.

ಈ ದೃಷ್ಟಿಕೋನಕ್ಕೆ ವ್ಯತಿರಿಕ್ತವಾಗಿ ಸಂಶೋಧಕರು ಕಂಡುಕೊಂಡಂತೆ ಬಾಲ್ಯದ ಘಟನೆಗಳು ನಂತರದ ಬದುಕಿನುದ್ದಕ್ಕೂ ಪ್ರಭಾವ ಬೀರುವ ಪರಿಣಾಮ ಬೀರಬೇಕೆಂದಿಲ್ಲ. ಬಹಳಷ್ಟುಮಂದಿ ಕಡಿಮೆ ಪರಿಪೂರ್ಣತೆಯ ಬಾಲ್ಯ ಅನುಭಾವಿಸಿಯೂ ಕೂಡಾ ಸಾಮಾನ್ಯ ಬದುಕು ನಡೆಸಿ ಪ್ರೌಡಾವಸ್ಥೆಯಲ್ಲಿ ಹೊಂದಾಣಿಕೆಯಿಂದ ಬದುಕುತ್ತಾರೆ.

**ನಿರಂತರತೆ ಮತ್ತು ಮುಂದುವರಿಯದಿರುವಿಕೆ**

ಮುಂದುವರಿಕೆಯು ಅಭಿವೃದ್ಧಿ ಮನಶಾಸ್ತ್ರದ ಮೂರನೇ ಪ್ರಮುಖ ಪ್ರಕರಣವಾಗಿದೆ. ಬದಲಾವಣೆ ಕಾಲಕ್ರಮೇಣ ಸಲೀಸಾಗಿ ಸಂಭವಿಸುತ್ತದೆಯೇ ಅಥವಾ ಪೂರ್ವ ನಿಯೋಜಿತ ಹೆಜ್ಜೆಗಳಿಂದವೇ? ಕೆಲವು ಅಭಿವೃದ್ಧಿ ಸಿದ್ಧಾಂತಗಳ ಪ್ರಕಾರ ಬದಲಾವಣೆ ಪರಿಮಾಣಾತ್ಮಕ ವಿಷಯವಾಗಿದೆ. ಮಕ್ಕಳು ಬೆಳೆಯುತ್ತಲೇ ತಮ್ಮ ಹೆಚ್ಚಿನ ಕೌಶಲ್ಯ ತೋರ್ಪಡಿಸುತ್ತಾರೆ.

ಡಿಪಾರ್ಟ್‌ಮೆಂಟ್ ಆಫ್ ಹೆಲ್ತ್, ಯು.ಕೆ. (೧೯೯೧:೧೧೫) ಚಿಲ್ಡ್ರನ್ ಆಕ್ಟ್, ೧೯೮೯ ಅಡಿಯಲ್ಲಿ ಸಂಘಟಿತವಾಗಿ ಕೆಲಸಮಾಡುವ ಅವಶ್ಯಕತೆ ಬಗ್ಗೆ ಪರೀಕ್ಷಿಸುತ್ತದೆ ಮತ್ತು ಮಕ್ಕಳನ್ನು ದೌರ್ಜನ್ಯದಿಂದ ರಕ್ಷಿಸಲು ಅಂತರ್ ಸಾಂಸ್ಥಿಕ ಸಹಕಾರಕ್ಕೆ ಮಾರ್ಗದರ್ಶಕವಾಗಿದೆ. ಈ ಅಧ್ಯಯನ, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಟಿ.ವಿ ಸಹಿತವಾಗಿ ಮಾಧ್ಯಮಗಳು ಜನರ ಮೇಲೆ ಬೀರುವ ಪರಿಣಾಮದ ಬಗ್ಗೆ ತಿಳಿಸುತ್ತದೆ. ಟಿ.ವಿ ಮಾಧ್ಯಮಗಳು ಜಮ್ಮು, ಕಾಶ್ಮೀರ, ಭಾರತ ಹಾಗೂ ವಿಶ್ವದ ಇತರ ಭಾಗಗಳಲ್ಲಿ ಮಾಧ್ಯಮ ಮಾಡಿರುವ ಗಮನಾರ್ಹ ವಿಷಯಗಳ ಬಗ್ಗೆ ಮಾತನಾಡುತ್ತದೆ. ಅದು ಮಕ್ಕಳ ಮೇಲಿನ ಕ್ರೌರ್ಯದ ಪ್ರಚಾರದ ಬಗ್ಗೆ ಬೆಳಕು ಚೆಲ್ಲುತ್ತದೆ.

ಆಲ್ಸನ್ ಮತ್ತು ಪಾರ್ಕರ್(೧೯೯೭:೧೦) ಮಕ್ಕಳ ಹಕ್ಕುಗಳು ಮತ್ತು ಕಾನೂನಿನ ಮೇಲೆ ಮಕ್ಕಳ ಹಕ್ಕುಗಳ ಸಮಾವೇಶ ೧೯೮೯ ಬೀರಿರುವ ಪ್ರಚೋಧಕ ಪರಿಣಾಮ ವಿವರಿಸುತ್ತಾ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿ ಚಾಲ್ತಿಗೊಳಿಸಬೇಕಾದ ಕಾನೂನು ಕ್ರಮಗಳ

ಬಗ್ಗೆ ಮಾತನಾಡುತ್ತದೆ. ಪ್ರಾಚಾರ್ಯರು ರಾಷ್ಟ್ರದ ಮಕ್ಕಳ ಹಕ್ಕು ಸಂಬಂಧಿ ವಿಷಯಗಳನ್ನು ಮತ್ತು ಸಂಯುಕ್ತ ರಾಷ್ಟ್ರಗಳ ಸಮಾವೇಶದಿಂದಾಗಿ ರೂಪಿಸಲಾದ ಪ್ರಗತಿಪರ ರಕ್ಷಣಾ ಕಾರ್ಯಗಳ ಹೋಲಿಕೆಯನ್ನು ಮಾಡಲಾಗಿದೆ.

ರೇಯ್ನರ್(೧೯೯೨:೩೧೧) ಕಾನೂನು ಪ್ರತಿನಿಧಿತ್ವದ ಮೂಲಕ ಮಕ್ಕಳ ಹಕ್ಕುಗಳ ಬಗ್ಗೆ ಪರೀಕ್ಷಿಸುತ್ತಾರೆ. ಅವರ ಪ್ರಕಾರ ಮಕ್ಕಳ ನ್ಯಾಯದ ಗುರಿ ಮಕ್ಕಳಿಗೆ ಯೋಗ್ಯ ಸೇವೆ ಹಾಗೂ ರಕ್ಷಣೆ ಖಾತ್ರಿಪಡಿಸುತ್ತದೇ ಆಗಿದೆ. ಪ್ರಾಜ್ಞರು ಮಕ್ಕಳ ನ್ಯಾಯದ ಹೊರಗೆ ಚಿಂತಿಸಿ ಮಕ್ಕಳಿಗೆ ನ್ಯಾಯ ವ್ಯವಸ್ಥೆ ಎಟುಕುವಂತೆ ಮಾಡಬೇಕೆಂದು ಸಲಹೆ ನೀಡಿತ್ತಾರೆ.

ಮರ್ಚ್ ಎಟ್ ಎಲ್(೧೯೯೮:೨೬೫) ಮಕ್ಕಳ ಕಲ್ಯಾಣದ ಸುರಕ್ಷತೆಗಾಗಿ ಮ್ಯಾಟ್ರಿಮೋನಿಯಲ್ ಕಾಸಸ್ ಆಕ್ಟ್ ೧೯೭೩ಯ ಸೆಕ್ಷನ್ ೪೧, ವಿಚ್ಛೇಧನದ ಕುರಿತು ಪರೀಕ್ಷಿಸುತ್ತದೆ. ಅಧ್ಯಯನವು ಕುಟುಂಬದ ಮಧ್ಯವರ್ತಿ ಸೇವೆಗಳನ್ನು ವಿಶ್ಲೇಷಿಸುತ್ತದೆ. ಅಧ್ಯಯನದ ಫಲಿತಾಂಶದ ಪ್ರಕಾರ ೮೩% ಜನರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಒತ್ತಿಹೇಳುತ್ತಾರೆ.

ಅಟ್ಕಿನ್ ಮತ್ತು ಭಾಲ್ (೧೯೯೯:೩೪) ಪ್ರಕಾರ ಮಕ್ಕಳು ಅಭಿಪ್ರಾಯ ಮತ್ತು ಕೌಟುಂಬಿಕ ಕಾನೂನು ಪರಿವೀಕ್ಷಿಸಿ ಮಕ್ಕಳ ಚೈಲ್ಡ್ ಸಪೋರ್ಟ್ ಆಕ್ಟ್ ೧೯೯೧ ನೈಜ್ಯ ಕೌಟುಂಬಿಕ ಬದುಕಿಗೆ ಪೂರಕವಾಗಿಲ್ಲ ಮತ್ತು ಹೆತ್ತವರು ಪುನರ್ ನಿರ್ಮಿತ ಕೌಟುಂಬಿಕ ಚೌಕಟ್ಟುಗಳ ಕುರಿತು ಬೆಳಕು ಚೆಲ್ಲುತ್ತದೆ. ಕೌಟುಂಬಿಕ ಚೌಕಟ್ಟನ್ನು ಹೋಲಿಸ್ಟಿಕ್ ಅಪ್ರೋಚ್‌ನಲ್ಲಿ ರಚಿಸಬೇಕು ಎಂದು ತಿಳಿಸುತ್ತಾರೆ.

ಲ್ಯಾನ್ಸ್ ಡೌನ್ (೨೦೦೫-೨೨೭) ಪರೀಕ್ಷಿಸುವಂತೆ ಸಿ.ಆರ್.ಸಿ.ಯ ಆರ್ಟಿಕಲ್ ೫ನ್ನು ವಿಶೇಷವಾಗಿ ಉಲ್ಲೇಖಿಸುತ್ತಾ ಮಗು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಹಕ್ಕನ್ನು ಆನಂದಿಸಲು ವ್ಯವಸ್ಥೆ ಮಾಡಬೇಕಾಗಿರುವುದು ಸರಕಾರದ ಆಧ್ಯ ಜವಾಬ್ದಾರಿಯಾಗುತ್ತದೆ ಮತ್ತು ಚಾಲ್ತಿಗೊಳಿಸಬೇಕಿರುವ ದೃಷ್ಟಿಕೋನ ಹೇಗೆ ತೌಲಿಕ ದೃಷ್ಟಿಕೋನಕ್ಕೆ ವ್ಯತಿರಕ್ತವಾಗಿದೆ ಎಂದು ತಿಳಿಸುತ್ತಾರೆ. ಅದು, ಮಕ್ಕಳ ವಯಸ್ಸು ಹಾಗೂ ಪ್ರಭುದ್ಧತೆಗೆ ತಕ್ಕುದಾಗಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಅರೋರಾ(೧೯೮೯:೩೩) ಜಮ್ಮು ಕಾಶ್ಮೀರದಲ್ಲಿ ಪ್ರಚಲಿತವಾಗಿರುವ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯದ ಸಂಕೀರ್ಣತೆಗಳು ಹೇಗೆ ಹಿಂದೂ ಅಲ್ಪಸಂಖ್ಯಾತರು, ದುರ್ಬಲ ವರ್ಗದವರು ಅಭದ್ರವಾಗಿದ್ದಾರೆ ಮತ್ತು ಅಸಂಘಟಿತವಾಗಿ ಪರಿಸ್ಥಿತಿಯ

ಬಲಿಪಶುಗಳಾಗಿದ್ದಾರೆ ಎಂದು ವಿಮರ್ಶಿಸುತ್ತಾರೆ. ಮುಂದುವರೆಸಿ ಅವರ ಅವಲೋಕನದಂತೆ ರಾಜ್ಯದ ಮಧ್ಯಪ್ರವೇಶದ ಪರಿಣಾಮಕಾರಿಯಾಗುವಲ್ಲಿರುವ ಕೊರತೆಗಳನ್ನು ಗುರುತಿಸುತ್ತಾರೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯನ್ನು ರಾಜ್ಯ ತೀವ್ರವಾಗಿ ಪರಿಗಣಿಸಬೇಕೆಂದು ಸಲಹೆ ನೀಡುತ್ತಾರೆ.

**ಹಾರ್ಟ್ ಆಂಡ್ ಪೌಲೋವಿಕ್** (೧೯೯೧ : ೧೮೬)

ಶಿಕ್ಷಣದಲ್ಲಿ ಮಕ್ಕಳ ಹಕ್ಕುಗಳ ಚಾರಿತ್ರಿಕ ದೃಷ್ಟಿಕೋನವನ್ನು ಪರೀಕ್ಷಿಸಿ ಶಿಕ್ಷಣಕ್ಕೆ ಸವಾಲೆಸೆಯುವ ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಸಮಾವೇಶವನ್ನು ಉಲ್ಲೇಖಿಸುತ್ತಾರೆ. ಅಧ್ಯಯನದ ಪ್ರಕಾರ ಮಕ್ಕಳ ಹಕ್ಕುಗಳ ಪ್ರತಿಪಾದಕರ ಮಧ್ಯೆ ಆಸಕ್ತಿಯ ತರ್ಕ ಇರುವುದನ್ನು ವ್ಯಕ್ತಪಡಿಸುತ್ತದೆ. ಇದು ಮಕ್ಕಳು ನೇರವಾಗಿ ಹೊಂದಿಕೊಳ್ಳುವ ದ್ವಂದ್ವ ಗಣನೀಯವಾಗಿದೆ. ಎಂದು ಪ್ರಾಜ್ಞರು ವ್ಯಕ್ತಪಡಿಸುತ್ತಾರೆ.

ಹಾರ್ಟ್(೧೯೯೧:೧೮೫) ಪರೀಕ್ಷಿಸಿ ಮಕ್ಕಳ ಹಕ್ಕುಗಳ ದೃಷ್ಟಿಕೋನವನ್ನು ವ್ಯಕ್ತಿಯ ಸ್ಥಿತಿ ಮತ್ತು ಹೇಗೆ ನಾಗರಿಕ ಸಮಾಜದಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಿಸಲಾಗುತ್ತದೆ ಮತ್ತು ಮಕ್ಕಳನ್ನು ಆಸ್ತಿಯಾಗಿ ಗುರುತಿಸದೆ ವ್ಯಕ್ತಿಯಾಗಿ ಪರಿಗಣಿಸುತ್ತದೆ. ಆರು ಮಕ್ಕಳ ಹಕ್ಕುಗಳ ದೃಷ್ಟಿಯ ಚಾರಿತ್ರಿಕ ಬೆಳವಣಿಗೆಯನ್ನು ಮಕ್ಕಳ ಘನತೆಯ ಸ್ಥಿತಿಯು ಹೇಗೆ ವ್ಯಕ್ತಿಯ ಸ್ಥಿತಿಯಿಂದ ಮುಂದುವರಿಯುತ್ತದೆ ಎಂದು ತಿಳಿಸುತ್ತದೆ.

ವೇಯ್ನರ್(೧೯೯೧:೩೮೨) ಭಾರತದ ಮಕ್ಕಳ ಸ್ಥಾನಮಾನವನ್ನು ಪರೀಕ್ಷಿಸುತ್ತಾ ಮಕ್ಕಳು ಭಾರತದ ಒಟ್ಟು ಜನಸಂಖ್ಯೆಯ ೧/೩ ನಷ್ಟಿದ್ದಾರೆ ಮತ್ತು ಒಟ್ಟು ಮಕ್ಕಳಲ್ಲಿ೪೦% ಮಕ್ಕಳು ಆಹಾರ ಅಭದ್ರತೆಯಿಂದ, ಅಸ್ವಸ್ಥತೆ, ಅಪೌಷ್ಟಿಕತೆ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ ನರಳುತ್ತಿದ್ದಾರೆ ಅನ್ನುತ್ತಾರೆ. ಅವರು ಉಲ್ಲೇಖಿಸುತ್ತಾ ವಿಶ್ವದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಭಾರತದಲ್ಲಿದ್ದಾರೆ ಎಂಬ ಅಂಶದ ಮೇಲೆ ಬೆಳಕು ಚೆಲ್ಲುತ್ತಾ, ವಿಶೇಷ ಕಾನೂನು, ಪ್ರಾಧಿಕಾರಗಳು ಹಾಗೂ ಕಾರ್ಯಕ್ರಮಗಳು ರಚಿತವಾಗಬೇಕು ಹಾಗಾದಾಗ ಮಾತ್ರ ಸೂಕ್ಷ್ಮತೆಯಲ್ಲಿರುವ ಮಕ್ಕಳ ಒಳಿತಿಗಾಗಿರೂಪಿಸಬೇಕಾಗಿದೆ ಎಂದು ಸೂಚಿಸುತ್ತಾರೆ.

ಆಂಡರ್ಸನ್ (೧೯೯೭:೭೩) ಮಕ್ಕಳ ಹಾಗೂ ಯುವಜನತೆಯ ಹಕ್ಕುಗಳ ಪ್ರಾಚೀನ ಹಾಗೂ ಆಧುನಿಕ ಸನ್ನಿವೇಶ ಹಾಗೂ ಒದಗಣೆಯ ತೌಲನಿಕ ವಿಮರ್ಶೆಯನ್ನು ಪರೀಕ್ಷಿಸುತ್ತಾರೆ. ಅವರು ಯುರೋಪ್ ಹಾಗೂ ಅಮೇರಿಕಾದಲ್ಲಿನ ಅಂತರಾಷ್ಟ್ರೀಯ

ಸಮಸ್ಯೆಗಳು ಹಾಗೂ ನೀತಿಗಳು ವಿಶ್ವಾದ್ಯಂತ ಪ್ರಮುಖ ಹಾಗೂ ಸಮಯೋಚಿತ ಕಾನೂನಾತ್ಮಕ ಹಾಗೂ ಅಭಿವೃದ್ಧಿಯ ಉಪಕರಣಗಳ ಮೂಲಕ ವಿಶ್ವದಾದ್ಯಂತ ಮಕ್ಕಳ ಹಕ್ಕುಗಳ ಸಂರಕ್ಷಣೆ ಮಾಡಿವೆ ಎಂದು ನಿರೂಪಿಸುತ್ತಾರೆ.

**ಬೆನ್ ಹಾಗೂ ಗಾರ್ಬರಿನೋ** (೧೯೯೨ : ೫೪) 

ಬದಲಾಗುತ್ತಿರುವ ವಾತಾವರಣದಲ್ಲಿಮಕ್ಕಳ ಅಭಿವೃದ್ಧಿ ಪರೀಕ್ಷಿಸುತ್ತಾ, ಸಮರ್ಪಕ ಮಕ್ಕಳರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ವಿಶ್ವದ ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ಚಾಲನೆಗೊಳಿಸಿಲ್ಲ. ಅಧ್ಯಯನ ಹೊರಹೊಮ್ಮಿರುವ ಇನ್ನೊಂದು ಅಂಶವೆಂದರೆ ಮಕ್ಕಳ ರಕ್ಷಣಾ ವ್ಯವಸ್ಥೆ ಚಾರಿತ್ರಿಕ ದೃಷ್ಟಿಕೋನದಿಂದ ಆಧುನಿಕ ಸಮಾಜದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಅವರ ಪ್ರಕಾರ ಮಗುವಿನ ಕಸ್ಟಡಿಯ ವಿಚಾರ ಬಂದಾಗ ಸಂಸ್ಥೆಗಳು ಬದಲಿ ವ್ಯವಸ್ಥೆಯಾಗಿ ಹಿಂದೆ ಪರಿಗಣಿಸಲಾಗಿತ್ತು. ಆದರೆ ಅದನ್ನ ಬದಲಿಸಿ ಬಲವಾದ ಬದ್ದತೆ ಇರುವ ಕೌಟುಂಬಿಕ ಆರೈಕೆಗೆ ಪ್ರಸ್ಥುತ ಫ್ರೀಮನ್(೧೯೯೨:೧೪೮) ಇವರು ಮಕ್ಕಳ ಹಕ್ಕುಗಳನ್ನು ಭೌತಿಕ, ದೈಹಿಕ ಸಾಮಾಜಿಕ, ಭಾವನಾತ್ಮಕ, ಶೈಕ್ಷಣಿಕ, ಆರೋಗ್ಯ ಸುರಕ್ಷತೆ ಹಾಗೂ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಪರೀಕ್ಷಿಸುತ್ತಾ ಕುಟುಂಬಗಳ ಅ ಸಮಗ್ರ ಹಾಗೂ ಸಾಮಾಜಿಕ ವ್ಯವಸ್ಥೆ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಸಮಸ್ಯೆಯನ್ನು ಹೆಚ್ಚಿಸಿದೆ. ಅಧ್ಯಯನದ ಪ್ರಕಾರ ಸಾಂಸ್ಥಿಕ ಆರೈಕೆಯ ಔನತ್ಯ, ಕುಟುಂಬಗಳು ಸಾಂಸ್ಥಿಕತೆಯನ್ನು ಆಯ್ಕೆಯಾಗಿ ಪಡೆದು ಮಕ್ಕಳ ಸಂಕಷ್ಟದ ಸಮಯದಲ್ಲಿ ಉಪಯೋಗಿಸುವಂತೆ ಪ್ರೇರೇಪಿಸಿದೆ. ಅಧ್ಯಯನಕಾರರ ಸಲಹೆಯಂತೆ ಬಹಳಷ್ಟು ಮಕ್ಕಳು ಅನುಭವಿಸಿರುವಂತೆ ಮಕ್ಕಳ ಹಕ್ಕುಗಳನ್ನು ತೀವ್ರವಾಗಿ ತೆಗೆದುಕೊಳ್ಳುವ ಅವಶ್ಯಕತೆ ಆಧುನಿಕ ಸಮಾಜಕ್ಕಿದೆ ಎಂಬುದನ್ನು ಯು.ಎನ್. ಸಮಾವೇಶದ ಹಿನ್ನೆಲೆಯಲ್ಲಿ ಹೇಳಿರುತ್ತಾರೆ.

ಓಸ್ಲೆನ್(೧೯೯೨;೨೮೬) ಪರೀಕ್ಷಿಸಿದಂತೆ ಮಹಿಳಾವಾದದ ಹಿನ್ನೆಲೆಯಲ್ಲಿ ನೋಡಿದಾಗ ಮಹಿಳೆ/ಪುರುಷ ಅನುಪಾತ ಕಳೆದ ೦-೬ ವರ್ಷಗಳಲ್ಲಿ ವಿಶ್ವದಲ್ಲಿ ಅತೀ ಹೆಚ್ಚಿರುವುದು ಕಾಣುತ್ತೇವೆ ಅಧ್ಯಯನದ ಪ್ರಕಾರ ಶಾಲೆಗಳಲ್ಲಿ ಹೆಣ್ಣುಮಕ್ಕಳ ದಾಖಲಾತಿ ಕಡಿಮೆ ಹಾಗೂ ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳ ಸಂಖ್ಯೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗಂಡು ಮಕ್ಕಳಿಗಿಂತ ಹೆಚ್ಚಿದೆ. ಗಂಡುಮಕ್ಕಳಿಗೆ ಹೋಲಿಸಿದಾಗ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಆದುನಿಕ ಸಮಾಜದಲ್ಲಿ ಕಾಣುತ್ತೇವೆ. ಅಧ್ಯಯನಕಾರರ ಪ್ರಕಾರ ಮಕ್ಕಳ ಅದರಲ್ಲೂ ಹೆಣ್ಣುಮಕ್ಕಳನ್ನು ಕುಟುಂಬಗಳು ಸಮುದಾಯ ಹಾಗೂ ಸರಕಾರ ಅಹಿತಕರ ಶಕ್ತಿಗಳಿಂದ ರಕ್ಷಿಸಬೇಕಿದೆ.

ಫೋಡರ್ಡ್ ಮತ್ತು ಕಾರಿವೆ(೧೯೯೩:೧೫೬) ಅಧ್ಯಯನದ ಪ್ರಕಾರ ಮಕ್ಕಳ ದೃಷ್ಟಿಕೋನದಿಂದ ನೋಡಿದಾಗ ವಿಕ್ಟೋರಿಯದಲ್ಲಿ "ಡ್ಯುಯಲ್ ಟ್ರಾಕ ಸಿಸ್ಟಮ್" ಎಂಬ ವಿಶಿಷ್ಟ ಮಕ್ಕಳ ರಕ್ಷಣಾ ವ್ಯವಸ್ಥೆಯಡಿಯಲ್ಲಿ ಪೋಲೀಸ್ ಹಾಗೂ ರಕ್ಷಣಾ ಸೇವೆಗಳು ಮಕ್ಕಳ ದೌರ್ಜನ್ಯ ಪ್ರಕರಣಗಳು ದಾಖಲಿಸಿಕೊಳ್ಳುವ ಪ್ರಾಧಿಕಾರಗಳಗಿದ್ದವು. ಅಧ್ಯಯನಕಾರರ ಪ್ರಕಾರ ಮಕ್ಕಳ ರಕ್ಷಣೆಯ ಕಾರ್ಯಾಚರಣೆಗಳಲ್ಲಿ ಮಕ್ಕಳ ಹಕ್ಕುಗಳ ವಿವಿಧ ಪಾಲುದಾರರನ್ನು ಸಂವೇದನಾಶೀಲರಾಗಿಸಬೇಕು ಹಾಗೂ ಆಂಧೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು.

ಹಾರ್ಟ್ ಮತ್ತು ಜೈಡ್ನರ್(೧೯೯೩:೧೮೮) ಅಧ್ಯಯನ ಮಾಡಿದಂತೆ ಶಿಕ್ಷಕರು ಹಾಗೂ ಯುವಕರ ದೃಷಿಕೋನದಲ್ಲಿ ದೇಶಾಧ್ಯಂತ ಕಾರ್ಯಯೋಜನೆಗಳ ಫಲಿತಗಳಲ್ಲಿ ಮಕ್ಕಳ ಸ್ಥಿತಿಗತಿ ಗಮನಿಸಿದಾಗ ಮಾಹಿತಿಗಳನ್ನು ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳಿಂದ ಪಡೆಯಲಾಗಿದೆ. ಅಧ್ಯಯನಕಾರರ ಸಲಹೆಗಳ ಪ್ರಕಾರ ಮಕ್ಕಳ ಕೇಂದ್ರಿತ ಪ್ರಯತ್ನಗಳು ನೀತಿಗಳು ಹಾಗೂ ಕಾರ್ಯಕ್ರಮಗಳು, ಪ್ರಾಯೋಗಿಕವಾಗಿ ಪ್ರಸ್ಥುತ ಹಾಗೂ ಸಾಮಾಜಿಕವಾಗಿ ಉಪಯುಕ್ತ.

ರೋಚ್ (೧೯೯೫:೩೧೫) ಅಧ್ಯಯನದಂತೆ ಮಕ್ಕಳ ಹಕ್ಕುಗಳ ಸಾಹಿತ್ಯದ ವಿಮರ್ಶೆಯ ಪ್ರಕಾರ ಸಾಮಾಜಿಕ ಆಚರಣೆಗಳಲ್ಲಿ ಮಕ್ಕಳಗಿಂತ ಮಕ್ಕಳ ಹಕ್ಕುಗಳಿಗೆ ಅತಿ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು ಅವರ ಸಲಹೆಯಂತೆ ಮಕ್ಕಳ ಹಕ್ಕುಗಳ ರಕ್ಷಣೆಗೆ ಒಳಗೊಳಿಸುವ ವಿಧಾನದ ಅತ್ಯುತ್ತಮ ಬಳಕೆ ಬಗ್ಗೆ ಸಲಹೆ ನೀಡುತ್ತಾರೆ.

ಸ್ಕಾಟ್(೧೯೯೫:೩೭೮) ಅಧ್ಯಯನದಂತೆ ಮಕ್ಕಳ ರಕ್ಷಣೆ, ನೀತಿ, ಪ್ರಚಾರ ಹಾಗೂ ಆಚರಣೆ ಗಮನಿಸಿದಂತೆ ಸಮಾಜ ಕಾರ್ಯಕರ್ತರ ಅಂಬೋಣದಂತೆ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಮಾಧ್ಯಮಗಳಲ್ಲಿ ಪ್ರಸರಿಸುವುದನ್ನು ಪ್ರೇರಕರನ್ನು ತಡೆಯಲಾಗಿದೆ. ಅಧ್ಯಯನಕಾರರು ನಿರ್ದಿಷ್ಟ ವ್ಯವಸ್ಥೆಯ ಸೋಲು ಹಾಗೂ ಮಕ್ಕಳ ಮೇಲಿನ ದೌರ್ಜನ್ಯದಂತಹಾ ವಿಶಾಲ ಪ್ರಕರಣಗಳ ನಡುವೆ ಸಂಬಂಧ ಕಲ್ಪಿಸಿದ್ದಾರೆ.

ಸ್ಕಾಟ್ಟ್ (೧೯೯೫:೩೭೭) ಮಕ್ಕಳ ಭಾಗವಹಿಸುವಿಕೆ ಹಾಗೂ ಸಬಲೀಕರಣಕ್ಕೆ ಸಂಬಂಧಿತ ವಕಾಲತ್ತಿಗೆ ಸಂಬಂಧಿಸಿದಂತೆ ಮಕ್ಕಳ ರಕ್ಷಣೆಯಲ್ಲಿ ಸಂಭವಿಸುವ ತತ್ವಗಳಿಂದ ಸಾರ್ವಜನಿಕ ಪರಿಶೋಧನೆಯಿಂದ ರಕ್ಷಿಸಬೇಕು. ಅಧ್ಯಯನಕಾರರು ಮಕ್ಕಳ ಮೇಲಿನ ದೌರ್ಜನ್ಯದ ವಿರುದ್ಧ ಹೋರಾಡಿರುವ ಸಮಾಜ ಕಾರ್ಯಕರ್ತರ ಕಡೆ ವಿವಿಧ ಅಭಿವೃದ್ಧಿ ಪಾಲುದಾರರ ಗಮನ ಸೆಳೆದಿರುತ್ತಾರೆ.

ಟಾಮಿಸನ್(೧೯೯೫:೩೬೦) ಕಂಡಂತೆ ಆಸ್ಟ್ರೇಲಿಯಾದ ಮಕ್ಕಳ ಹಕ್ಕುಗಳ ಉಲ್ಲಂಘನೆ ಗಮನಿಸಿ ಆಸ್ಟ್ರೇಲಿಯಾದ ಮಕ್ಕಳು ಹಾಗೂ ಯುವ ಜನತೆ ಹೊಸ ಸಂವಹನ ತಂತ್ರಜ್ಞಾನ ಮಕ್ಕಳ ದುರ್ಬಳಕೆ ಲೈಂಗಿಕ ಹಾಗೂ ಭಾವನಾತ್ಮಕ ದೌರ್ಜನ್ಯವನ್ನು ಸಾಮಾನ್ಯವಾಗಿ ಗುರುತಿಸಿದೆ. ಅವರು ಮಕ್ಕಳಿಗೆ ಅಹಿತವಾದ ಅಂತರ್ಜಾಲ ಮಾಧ್ಯಮ ಹಾಗೂ ಹೊಸ ಮಾಧ್ಯಮಗಳ ಮೇಲೆ ಕಡಿವಾಣ ಹಾಕಬೇಕೆಂದು ಶಿಫಾರಸ್ಸು ಮಾಡುತ್ತಾರೆ.

ಕೆಟ್ಸೆಲಾ ಟಿ ಮತ್ತು ಕೆಡೆಬೆಡಿ(೧೯೯೭) ಹೆತ್ತವರಿಂದ ಶಿಕ್ಷೆಯ ಬಗ್ಗೆ ತಿಳಿಸುತ್ತಾ ೨೧% ನಗರ ಶಾಲೆಗಳ ಮಕ್ಕಳು ಮತ್ತು ೬೪% ಗ್ರಾಮೀಣ ಶಾಲೆಯ ಮಕ್ಕಳ ದೇಹದಲ್ಲಿ ತರಚುವಿಕೆ ಮತ್ತು ಬಾತುಕೊಳ್ಳುವಿಕೆ ಕಂಡುಕೊಳ್ಳಲಾಗಿದ್ದು ಇದಕ್ಕೆ ಅವರ ಹೆತ್ತವರಿಂದ ಶಿಕ್ಷೆ ಅನುಭವಿಸಿದ್ದೇ ಕಾರಣ ಎಂಬ ಅಂಶವನ್ನು ಕಲಿತುಕೊಂಡಿದ್ದಾರೆ.

ಕಿಮ್ ಡಿ.ಎಚ್ ಏತೆಲ್(೨೦೦೦) ಚೈನಾದ ಹಾಗೂ ಕೊರಿಯಾದ ಪ್ರಾಥಮಿಕ ಶಾಲಾ ಮಕ್ಕಳಲ್ಲಿ ದೌರ್ಜನ್ಯ ದ ದರವನ್ನು ಹೋಲಿಸಿದ್ದಾರೆ ಆದರೆ ಪ್ರಶ್ನೆಗಳನ್ನು ಹೆತ್ತವರಿಗಿಂತ ಮಕ್ಕಳ ಕಡೆ ತಿರುಗಿಸಿದ್ದಾರೆ.

ಕ್ಯಾಥರಿನ್ ಎಫ್ ಕಾಕ್ಸ್(೨೦೦೦) ಅಭಿವೃದ್ಧಿ ಪ್ರಕರಣಗಳನ್ನು ಪರೀಕ್ಷಿಸುತ್ತಾ ಬಾಲಕಾರ್ಮಿಕತೆ ಸಂಬಂಧಿಸಿ, ಅಂತರಾಷ್ಟ್ರಿಯ ಮಾನವ ಹಕ್ಕುಗಳ ಕಾನೂನು ವಿಮರ್ಶೆ ಮಾಡುತ್ತಾರೆ. ಹಾಗೆ ಮಾಡುತ್ತಾ ಅವರು ಪ್ರಸ್ತುತ ಸಮಸ್ಯೆಗಳ ಕಾನೂನು ವಿಧಾನಗಳ ನ್ಯೂನತೆಗಳ ಮೇಲೆ ಬೆಳಕು ಚೆಲ್ಲುತ್ತಾರೆ. ಭಾರತವನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿನ ಅಭಿವೃದ್ಧಿ ಪ್ರಕರಣಗಳನ್ನು ಕಾನೂನಿನ ಹಿನ್ನೆಲೆಯಲ್ಲಿ ವಿಮರ್ಶಿಸುತ್ತಾರೆ. ಕಾಕ್ಸ್ ಅವರ ಪತ್ರಿಕೆಯ ಎರಡನೇ ಭಾಗದಲ್ಲಿ ಬಾಲಕಾರ್ಮಿಕರ ಪರಿಕಲ್ಪನೆಯನ್ನು ವ್ಯಾಖ್ಯಾನಿಸಲಾಗಿದೆ ಮತ್ತು ಬಾಲಕಾರ್ಮಿಕತೆ ಮತ್ತು ಶಿಕ್ಷಣ ಹಕ್ಕುಗಳ ನಡುವಿನ ಸಂಬಂಧದ ಮೇಲೆ ಬೆಳಕುಚೆಲ್ಲುತ್ತದೆ. ಮೂರನೇ ಭಾಗ ಬಾಲಕಾರ್ಮಿಕತೆಯ ಕಾರಣವಾಗಿ ಆರ್ಥಿಕ ಬೆಳವಣಿಗೆಯ ಮೇಲೆ ಕೇಂದ್ರೀಕರಿಸದೆ ಇತರ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಐದನೇ ಭಾಗದಲ್ಲಿ ಹೇಗೆ ಭಾರತದಲ್ಲಿ ಚಾಲ್ತಿಗೊಳಿಸಿರುವ ಪ್ರಗತಿಪರ ಕಾಯಿದೆಗಳು, ನಿಯಮಗಳು, ಬಾಲ ಕಾರ್ಮಿಕತೆಯನ್ನು ನಿರ್ಮೂಲನ ಮಾಡಲು ಸೋತಿವೆ ಎಂದು ಚರ್ಚಿಸುತ್ತಾರೆ.

ಹಾಹ್ಮ್ ಮತ್ತು ಗಟರ್ಮನ್(೨೦೦೧) ಮಕ್ಕಳ ಮೇಲೆ ಹೆತ್ತವರ ದೈಹಿಕ ಶಿಕ್ಷೆ ಬಗ್ಗೆ ಬೆಳಕು ಚೆಲ್ಲುತ್ತಾರೆ. ಅವರು ರಿಪಬ್ಲಿಕ್ ಆಫ್ ಕೊರಿಯಾದಲ್ಲಿ ಅಧ್ಯಯನ ನಡೆಸಿ ಅದರ

ಪ್ರಕಾರ ಹೆತ್ತವರನ್ನು ಮಕ್ಕಳ ನಡತೆ ಬಗ್ಗೆ ಪ್ರಶ್ನಿಸಿದಾಗ ೨/೩ ಹೆತ್ತವರು ತಾವು ಮಕ್ಕಳಿಗೆ ಹೆದರಿಸಿರುವುದು ಮತ್ತು ೪೫% ಮಕ್ಕಳಿಗೆ ಹೊಡೆದದ್ದು, ಒದ್ದದ್ದು ಹಾಗೂ ಬಡಿದ ಬಗ್ಗೆ ವರದಿ ನೀಡಿರುತ್ತಾರೆ.

ಈ ಗೋಲ್ಡ್ಮನ್, ಎಂ.ಕೆ. ಸಾಲಸ್, ಡಿ. ವೋಲ್ಕೋಟ್ ಹಾಗೂ ಕೆ.ವಿ. ದೆನಡಿ,(೨೦೦೩) ವಿವರಿಸಿ ದೈಹಿಕ ದೌರ್ಜನ್ಯ ಎಂದರೆ ದೈಹಿಕ ಗಾಯಗಳು ತರಚುವಿಕೆ, ಮುರಿತಗಳು, ಗುದ್ದುವುದು, ಥಳಿಸುವುದು, ಒದೆಯುವುದು ಕಚ್ಚುವುದು, ಅಲ್ಲಾಡಿಸುವುದು, ಎಸೆಯುವುದು, ಚುಚ್ಚುವುದು, ಉಸಿರುಕಟ್ಟಿಸುವುದು, ಕೈ, ಬೆತ್ತ, ಬೆಲ್ಟ್ ಅಥವಾ ಇತರ ಪರಿಕರಗಳಿಂದ ಹೊಡೆಯುವುದು ಮತ್ತು ಸುಡುವುದು ಎಂಬುದಾಗಿ ಒಪ್ಪುತ್ತಾರೆ. ಗಾಯ ಒಂದೇ ಬಾರಿ ಶಿಕ್ಷಿಸುವುದರ ಫಲವಾಗಿ ಆಗಿರಬಹುದು. ಆದರೆ ಸಾಕಷ್ಟು ಬಾರಿ ಶಿಕ್ಷೆಯ ತೀವ್ರತೆ ಮಾರಣಾಂತಿಕವಾಗಿದೆ ಎನ್ನುತ್ತಾರೆ.

ಬಾರ್ಡಿ ಎಂ, ಬೊರ್ಗೊಗ್ನಿನಿ, ಟಾರಿ ಎಸ್.ಎಂ.(೨೦೦೧) ಮಕ್ಕಳ ಮೇಲೆ ಹೆತ್ತವರ ದೈಹಿಕ ದಂಡನೆಯನ್ನು ಪರೀಕ್ಷಿಸುತ್ತಾರೆ. ಅವರ ಪ್ರಕಾರ ಇತರ ದೇಶಗಳ ಹೆತ್ತವರಿಂದ ಪಡೆಯಲಾದ ವರದಿಗಳಿಂದ ತಿಳಿದು ಬರುವುದೇನೆಂದರೆ ಮಕ್ಕಳ ಮೇಲೆ ಹೆತ್ತವರಿಂದ ನಡೆಯುತ್ತಿರುವ ದೈಹಿಕ ದಂಡನೆ ತೀವ್ರವಾದ ಸಮಸ್ಯೆಯಾಗಿದೆ. ಇಟಲಿಯಲ್ಲಿ ತೀವ್ರತರನಾದ ಗಾಯಗೊಳಿಸುವಿಕೆ ೮% ಆಗಿರುತ್ತದೆ.

ಟಾಂಗ್ ಸಿ.ಎಸ್ (೨೦೦೩) ಚೈನಾದ ಹೆತ್ತವರು ಮಕ್ಕಳ ಮೇಲೆ ನಡೆಸಿದ ತೀವ್ರವಾದ ಶಿಕ್ಷೆ ೧೦೦೦ದಲ್ಲಿ ೪೬೧ ಆಗಿರುತ್ತದೆ.ಚೈನಾದ ಮಕ್ಕಳಿಂದ ದಾಖಲಿಸಿದ ತೀವ್ರ ರೂಪದ ದೌರ್ಜನ್ಯ ೨೨.೬% ರಿಪಬ್ಲಿಕ್ ಆಫ್ ಕೊರಿಯ ಹಾಂಕಾಂಗಿನಲ್ಲಿ ಅದು ೫೧.೩% ಆಗಿದೆ.

ರಖ್ ಎಟ್.ಅಲ್ (೧೯೯೮:೩೨೦): ಬಾಲ್ಯದಿಂದ ಹದಿಹರೆಯದವರೆಗೆ ಹಕ್ಕುಗಳ ಜ್ಞಾನದ ಬಗ್ಗೆ ಪರೀಕ್ಷಿಸುತ್ತಾರೆ. ಅಧ್ಯಯನ ಹೊರಗೆಡಹಿದ ವಿಚಾರವೆಂದರೆ ೧೦ ವರ್ಷ ಕ್ಕಿಂತಲೂ ಮೇಲ್ಪಟ್ಟು ವಯಸ್ಸಿನ ಮಕ್ಕಳು ತಮ್ಮ ಜೀವನ ಅನುಭವದಿಂದ ಹಕ್ಕುಗಳ ಬಗ್ಗೆ ತಿಳುವಳಿಕೆ ಹೊಂದಿದ್ದರೇ ವಿನಹ ಉಳಿದಂತೆ ಅವರಿಗೆ ಹಕ್ಕುಗಳ ಜ್ಞಾನವಿರಲಿಲ್ಲ. ಅಧ್ಯಯನಕಾರರು ಫಲಿತಗಳನ್ನು ಅಭಿವೃದ್ಧಿ ಸಿದ್ಧಾಂತ ಹಾಗೂ ಮಕ್ಕಳ ಹಕ್ಕುಗಳ ಪ್ರಾಯೋಗಿಕ ಪರಿಣಾಮಗಳನ್ನಾಧರಿಸಿ ಚರ್ಚಿಸುತ್ತಾರೆ.

ಕೊವೆಲ್ ಮತ್ತು ಹೋವೆ(೧೯೯:೧೧೩ ಕೆನಡಾದಲ್ಲಿ ಮಕ್ಕಳ ಹಕ್ಕುಗಳ ಶಿಕ್ಷಣದ ಪರಿಣಾಮದ ಬಗ್ಗೆ ಚರ್ಚಿಸುತ್ತಾರೆ. ಮಕ್ಕಳ ಹಕ್ಕುಗಳ ವಿಚಾರದಲ್ಲಿ ಶಿಕ್ಷಕರು ಹೆಚ್ಚಿದ್ದಲ್ಲಿ ಮಕ್ಕಳು ಹಿರಿಯರ ಹಕ್ಕುಗಳನ್ನು ಗೌರವಿಸುವುದು ಹೆಚ್ಚಾಗಿರುತ್ತದೆ. ಕಾರ್ಯಾಗಾರಗಳಲ್ಲಿ ಪಠ್ಯಕ್ರಮ/ಪಠ್ಯ ವಿಶಯದಲ್ಲಿ ಶಿಕ್ಷಕರ ಭಾಗವಹಿಸುವಿಕೆ ಹೆಚ್ಚಾದಲ್ಲಿ ಅವರು ಮಕ್ಕಳ ಹಕ್ಕುಗಳನ್ನು ಪ್ರಚುರ ಪಡಿಸುವಲ್ಲಿ ಶಿಕ್ಷಕರು ಹೆಚ್ಚು ಪ್ರಯತ್ನ ಸಹಕಾರ ನೀಡುತ್ತಾರೆ. ಅವರ ಸಲಹೆಯಂತೆ ಶಿಕ್ಷಕರ ಸಹಕಾರವನ್ನು ಗಳಿಸುವುದರಿಂದ ಅವರು ಹೊಸ ಪಠ್ಯಕ್ರಮದ ಸಹಾಯದಿಂದ ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಕೈಗೊಳ್ಳುತ್ತಾರೆ.

**ಸಂಯುಕ್ತ ರಾಷ್ಟ್ರಗಳ ಸಮಾವೇಶ:**

**ಯುನಿಸೆಫ್** (೧೯೯:೩೬೫) ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಸಮಾವೇಶದ ದಶಮಾನೋತ್ಸನದ ಸಂದರ್ಭದಲ್ಲಿ ಕಾರ್ಯೋನ್ಮುಖ ಪತ್ರಕರ್ತರ ಅನುಭವಗಳನ್ನು ಪರೀಕ್ಷಿಸಲಾಯ್ತು. ಈ ಕೈಪಿಡಿಯಲ್ಲಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿ ವಿಕಲಚೇತನ ಮಕ್ಕಳು ಮತ್ತು ತಾರತಮ್ಯ, ಮಕ್ಕಳು ಮತ್ತು ಕುಟುಂಬ ವ್ಯವಸ್ಥೆ, ಬಾಲಕಾರ್ಮಿಕತೆ, ಶಸ್ತ್ರಯುದ್ಧ ಮತ್ತು ಮಕ್ಕಳು, ಮಕ್ಕಳ ಆರೋಗ್ಯ ಹಾಗೂ ಕಲ್ಯಾಣ, ಮಕ್ಕಳು ಮತ್ತು ಮಾಧ್ಯಮ ಮುಂತಾದ ಬಹಳಷ್ಟು ಪ್ರಮುಖ ವಿಷಯಗಳ ಮೇಲೆ ಬೆಳಕುಚೆಲ್ಲುತ್ತದೆ. ಈ ಕೈಪಿಡಿಯನ್ನು ಪತ್ರಕರ್ತರಲ್ಲಿ ಮಕ್ಕಳ ಹಕ್ಕುಗಳ ಅರ್ಥೈಸುವಿಕೆ ಬಲಗೊಳಿಸುವ ಉದ್ದೇಶ ದಿಂದಲೇ ರೂಪಿಸಲಾಗಿದೆ.

**ಚೀಡ್ಲ್** (೧೯೯:೮೨) ಅವರು ಮಕ್ಕಳ ಹಕ್ಕು ಹಾಗೂ ಸೆನ್ಸಾರ್‌ಶಿಪ್‌ನ್ನು ಪರೀಕ್ಷಿಸಿ ಮಕ್ಕಳ ಹಕ್ಕುಗಳ ಅರ್ಥೈಸಿಕೊಳ್ಳುವ ಹಾಗೂ ಮಕ್ಕಳ ದುರುಪಯೋಗದ ಪರಿಕಲ್ಪನೆ ಬಹಳಷ್ಟು ಬದಲಾವಣೆಗೆ ಗುರಿಯಾಗಿದ್ದು ಮೌಲ್ಯಗಳ ಮೇಲೆ ಅದರ ಪರಿಣಾಮ, ಸಾಂಸ್ಕೃತಿಕ ನಡತೆ ಮತ್ತು ಜ್ಞಾನ ಮಟ್ಟ ರಾಜಕೀಯ, ಆರ್ಥಿಕತೆ ಮತ್ತು ಇತರ ವಿಷಯಗಳಲ್ಲೂ ಬದಲಾವಣೆ ಗಮನಿಸಲಾಗಿದೆ. ಅಧ್ಯಯನಕಾರರ ಪ್ರಕಾರ ಅಂತರ್ಜಾಲದಲ್ಲಿ ಮಕ್ಕಳ ರಕ್ಷಣೆ ಪ್ರಮುಖ ವಿಷಯವಾಗಿರದೆ ಹಾನಿಕಾರಕ ಹಾಗೂ ಅನೈತಿಕ ವಸ್ತುಗಳಿಂದ, ಅವರ ಮೂಲಭೂತ ಸ್ವಾತಂತ್ರ್ಯದೊಂದಿಗೆ ರಾಜಿ ಮಾಡದೆ ಸಮಾಜದ ಮೇಲೆ ಪರೋಕ್ಷ ದುಷ್ಪರಿಣಾಮ ಬೀರುವಂತಹಾ, ಗಣನೆಗೆ ತೆಗೆದುಕೊಳ್ಳುವ ಅವಶ್ಯಕತೆ ಇದೆ.

**ರೋಚ್** (೧೯೯:೩೧೬) ಅವರು ಮಕ್ಕಳ ಹಕ್ಕುಗಳ ಪ್ರಜಾತಾಂತ್ರಿಕತೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ ಪಾಲುದಾರರು ಹಕ್ಕುಗಳ ಪರಿಭಾಷೆಯ ಮೌಲ್ಯ ಅರ್ಥೈಸಿಕೊಳ್ಳದಿರುವ

ಬಗ್ಗೆ ಅದರ ಅರ್ಥೈಸಿಕೊಳ್ಳುವಿಕೆಗೆ ಇರುವ ಅವಶ್ಯಕತೆಯನ್ನು ಪರೀಕ್ಷಿಸುತ್ತಾರೆ ಮತ್ತು ಪ್ರಾಧಿಕಾರಿಗಳಿಗೆ ಮಕ್ಕಳ ಹಕ್ಕುಗಳನ್ನು ಮರುವ್ಯಾಖ್ಯಾನಿಸಲು ಕರೆನೀಡುತ್ತಾರೆ.

**ಟ್ರಾಂಬೂ** (೧೯೯೯:೩೬೧) ಅವರು ಅಧ್ಯಯನ ನಡೆಸಿದಂತೆ ಜಮ್ಮು ಕಾಶ್ಮೀರದಲ್ಲಿ ಮಕ್ಕಳ ಸ್ಥಿತಿಗತಿಯನ್ನು ಗಮನಿಸಿದಾಗ ಮಕ್ಕಳ ಕಾರಣಗಳಿಗೆ ಭಾರತದ ಬದ್ಧತೆ ಬಹಳ ಕಡಿಮೆ ಎಣಿಸುತ್ತದೆ. ಅಧ್ಯಯನದ ಒಳಹುಗಳಂತೆ ಅವಿರತ ದೊಂಬಿ, ಗಲಾಟೆಗಳು ಜನರ ಜೀವನ ಪದ್ಧತಿಯನ್ನೇ ಬದಲಾಯಿಸಿದೆ. ಮುಖ್ಯವಾಗಿ ಮಕ್ಕಳು ಪರಿಸ್ಥಿತಿಯ ಬಲಿಪಶುಗಳಾಗಿದ್ದಾರೆ, ಬಹಳಷ್ಟು ದೈಹಿಕ, ಭಾವನಾತ್ಮಕ ದೌರ್ಜನ್ಯ ಮತ್ತು ಕ್ರೌರ್ಯ ಮತ್ತು ನಿರ್ವಸತಿಯಂತಹಾ ತೊಂದರೆಗಳಿಗೆ ಬಲಿಯಾಗುತ್ತಾರೆ. ಈ ಹಿನ್ನೆಲೆಯಲ್ಲಿ ಅಧ್ಯಯನಕಾರರು ಭಾರತ ಸರ್ಕಾರ, ಸಂಯುಕ್ತ ರಾಷ್ಟ್ರಗಳ ಸಮಾವೇಶದ ಮಾರ್ಗದರ್ಶನವನ್ನು ಕಟ್ಟುನಿಟ್ಟಾಗಿ ಪಾಲಿಸಲು ಸಲಹೆ ನೀಡುತ್ತಾರೆ.

**ಅಸ್ತಾಭ್** (೨೦೦೦-೦೫) ಅವರು ಅಧ್ಯಯನ ನಡೆಸಿ ಮಕ್ಕಳು ಕುಟುಂಬ ಕಾನೂನು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಹೆತ್ತವರ ಪಾತ್ರದ ಬಗ್ಗೆ ಚರ್ಚಿಸುತ್ತಾರೆ ಸರಕಾರ, ಕಾನೂನು ಪ್ರತಿಪಾದಕ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳು, ಮತ್ತು ಇತರ ಮಕ್ಕಳ ಹಕ್ಕುಗಳ ಪಾಲುದಾರರು ಸೇರಿ ವ್ಯವಸ್ಥೆಗಳನ್ನು ಬಲಪಡಿಸಬೇಕಾಗಿದೆ ಎಂದು ಸಲಹೆ ನೀಡುತ್ತಾರೆ.

**ಟೈಲರ್, ಸ್ಮಿತ್ ಹಾಗೂ ಥಾಪ್** (೨೦೦೦-೩೫೪) ಅವರು ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಕೌಟುಂಬಿಕ ಕಾನೂನು ಹಾಗೂ ಕೌಟುಂಬಿಕ ಜಗಳಗಳು ಮಕ್ಕಳು ಧ್ವನಿ ರಹಿತ ಸಮುದಾಯ ಎನ್ನುವ ದೃಷ್ಟಿಕೋನದಿಂದ ಸ್ಥಿತ್ಯಂತರಗೊಂಡಿರುವ ಬಗ್ಗೆ ತಿಳಿಸುತ್ತಾರೆ ಅವರ ಪ್ರಕಾರ ಹಳೆಯ ಸಾಂಪ್ರದಾಯಿಕ ಮನಸ್ಥಿತಿಯಂತೆ ಮಕ್ಕಳಿಗೆ ಕೌಟುಂಬಿಕ ನಿರ್ಧಾರಗಳಲ್ಲಿ ಪಾಲು ಇರುವುದಿಲ್ಲ ಅಧ್ಯಯನಕಾರರ ಪ್ರಕಾರ ಕೌಟುಂಬಿಕ ಜಗಳಗಳ ಇತ್ಯರ್ಥದಲ್ಲಿ ಮಕ್ಕಳ ಅಭಿಪ್ರಾಯವನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು, ಯಾಕೆಂದರೆ ಮಕ್ಕಳ ಬದುಕೂ ಸಮಾಜದಲ್ಲಿ ಸಮಾನವಾಗಿ ಪ್ರಮುಖವಾಗಿರುತ್ತದೆ.

**ರಾಯ್** (೨೦೦೦:೩೭೯) ಅವರು ಮಾನವ ಹಕ್ಕುಗಳ ಗುಣಲಕ್ಷಣ, ವ್ಯಾಪ್ತಿಯನ್ನು ಸಂಯುಕ್ತ ರಾಷ್ಟ್ರಗಳು ಮಾಡಿದ ಮಕ್ಕಳ ಹಕ್ಕುಗಳ ರಕ್ಷಣೆಗೆ ಸಹಿ ಹಾಕಿದ ಭಾರತದ ಬದ್ಧತೆ ಬಗ್ಗೆ ಮಾತನಾಡುತ್ತಾರೆ. ಅಧ್ಯಯನಕಾರರ ವೀಕ್ಷಣೆಯಂತೆ ಭಾರತವು ಮಕ್ಕಳ ಕಲ್ಯಾಣಕ್ಕಾಗಿ ಸಾಕಷ್ಟು ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ತನ್ಮೂಲಕ ಮಕ್ಕಳಿಗೆ

ಸಹಕರಿಸಿದೆ, ಅವರ ಸಲಹೆಯಂತೆ ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳು ಜೊತೆಯಾಗಿ ಕೆಲಸಮಾಡಿ ಸಾಂವಿಧಾನಿಕ ಹಾಗೂ ಕಾನೂನುಗಳನ್ನು ಭಾಷಾಂತರಿಸಿ ಮಕ್ಕಳ ರಕ್ಷಣಾ ವ್ಯವಸ್ಥೆಯನ್ನು ಖಾತ್ರಿಪಡಿಸುವಲ್ಲಿ ಉಪಯೋಗಿಸಬೇಕು ಎಂದಿದ್ದಾರೆ.

**ಶರ್ಮಾ ಮತ್ತು ಅಹ್ಲುವಾಲಿಯಾ** (೨೦೦೦:೩೩೨) ಅವರು ಮಾನವ ಹಕ್ಕುಗಳ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ಚರ್ಚಿಸುತ್ತಾ ಭಾರತದ ಮಕ್ಕಳು ಭೌಗೋಳಿಕರಣದ ಸಂದರ್ಭದಲ್ಲಿ ಹೊಂದಬೇಕಾದ ಮೌಲ್ಯ ಹಾಗೂ ತಂತ್ರಗಳನ್ನು ಮಕ್ಕಳಲ್ಲಿ ಹಾಕಲು ಶಿಕ್ಷಣ ವ್ಯವಸ್ಥೆ ಸೇರಿದೆ ಈ ಹೇಳಿಕೆಯಲ್ಲಿ ಅಧ್ಯಯನಕಾರರು ಪ್ರಸ್ತುತ ಇರುವ ದಾಖಲೆಗಳನ್ನು ಉಲ್ಲೇಖಿಸಿ ಮಾನವ ಹಕ್ಕುಗಳು ಹಾಗೂ ಮಕ್ಕಳ ಹಕ್ಕುಗಳ ಖಾತ್ರಿಯಲ್ಲಿ ಆದುನಿಕ ಸಮಾಜದ ಶಿಕ್ಷಣ ಹೇಗೆ ಪ್ರಮುಖವಾಗಿದೆ ಎಂದು ಚರ್ಚಿಸುತ್ತಾರೆ.

**ಇಂಡಿಯನ್ ಪೀಪಲ್ಸ್ ಟ್ರಿಬ್ಯೂನಲ್** (೨೦೦೦:೨೦೪) ಪರೀಕ್ಷಿಸುತ್ತಾ ಕಾಶ್ಮೀರದ ಮಕ್ಕಳ ಸಂಪೂರ್ಣ ಪರಿಕಲ್ಪನೆ ಹೇಗೆ ಅಲ್ಲಿನ ಮಕ್ಕಳಿಗೆ ಹೇಗೆ ಮೃದುವಾದ, ನಯವಾದ ಲಾಲನೆ–ಪಾಲನೆ ದೊರಕಿಲ್ಲ, ಅದು ಹೇಗೆ ಮಕ್ಕಳಲ್ಲಿ ಸಹಜವಾದ ಮೃದುತ್ವ ನಾಶವಾಗಿದೆ ಎಂದು ತೋರಿಸುತ್ತದೆ. ಭಯ, ಕ್ರೌರ್ಯ, ಹಿಂಸೆಯ ವಾತಾವರಣ ಹೇಗೆ ಮಕ್ಕಳಲ್ಲಿ ಅಭದ್ರತೆ, ಅಸಮಾದಾನ ಮೂಡಿಸಿದೆ ಎಂದು ಚರ್ಚಿಸಲಾಗಿದೆ. ಈ ವರದಿಯ ಪ್ರಕಾರ ಸರಕಾರ ಮಿಲಿಟರಿ ಹಾಗೂ ಪ್ಯಾರಾಮಿಲಿಟರಿ ಪಡೆಗಳು ನೇರ ಮತ್ತು ಪರೋಕ್ಷವಾಗಿ ಕಾಶ್ಮೀರಿ ಮಕ್ಕಳು ಮತ್ತು ದೌರ್ಜನ್ಯಕ್ಕೊಳಪಡಿಸುವುದನ್ನು ನಿಲ್ಲಿಸಿ ಗೌರವಯುತವಾಗಿ ನೋಡಿಕೊಳ್ಳಬೇಕು ಎನ್ನುವ ಬಗ್ಗೆ ಚರ್ಚಿಸುತ್ತಾರೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** (೨೦೦೧:೧೧೬) ಭಾರತದಲ್ಲಿ ಸಂಯುಕ್ತ ರಾಷ್ಟ್ರಗಳ ಸಮಾವೇಶದಂತೆ ಅನುಷ್ಠಾನಗೊಳ್ಳಬೇಕಾಗಿರುವ ಮಕ್ಕಳ ಹಕ್ಕುಗಳಿಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಮಾಡಿರುವ ತಳಮಟ್ಟದ ತಯಾರಿ ಬಗ್ಗೆ ತಿಳಿಸುತ್ತದೆ. ಮತ್ತು ಅವಶ್ಯವಿರುವ ಸಾಂವಿಧಾನಿಕ ಕಾನೂನು ಹಾಗೂ ಕಲ್ಯಾಣ ಪೂರೈಕೆಗಳ ಬಗ್ಗೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಅವುಗಳ ಪಾತ್ರದ ಬಗ್ಗೆ ಸಲಹೆಗಳನ್ನು ನೀಡಲಾಗಿದೆ.

**ಪಾಟೀಲ್** (೨೦೦೧:೨೯೩) ಅವರು ಅಧ್ಯಯನದಲ್ಲಿ ಮಕ್ಕಳು ಹಾಗೂ ಮಾನವ ಹಕ್ಕುಗಳು ಸಹಸ್ರಮಾನದ ದೃಷ್ಟಿಕೋನದ ಬಗ್ಗೆ ತಾತ್ವಿಕ ವಿಷಯಗಳನ್ನಾಧರಿಸಿ ವಿವಿಧ ಅಧ್ಯಯನಕಾರರು ಪ್ರಸ್ತುತ ಪಡಿಸಿದ ಅಧ್ಯಯನಗಳನ್ನು ಹೊಂದಿತ್ತು, ಮತ್ತು ಈ

ಅಧ್ಯಯನ ಮಕ್ಕಳಿಗೆ ದೊರಕಬೇಕಾದ ಔಪಚಾರಿಕ, ಔದ್ಯಮಿಕ, ತಾಂತ್ರಿಕ ತರಬೇತಿ, ದೂರಶಿಕ್ಷಣ ಅವಕಾಶಗಳ ಬಗ್ಗೆ ಚರ್ಚಿಸುತ್ತದೆ, ಭಾರತದಂತಹಾ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಕ್ಕಳ ಸಭಲೀಕರಣದ ಬಗ್ಗೆ ಇದು ತಿಳಿಸುತ್ತದೆ.

**ಶರ್ಮಾ** (೨೨೦:೩೩೪) ಅವರು ಭಾರತದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯನ್ನು ಪರೀಕ್ಷಿಸುತ್ತಾರೆ ಇದಕ್ಕೆ ಕಾರಣ ಸೂಕ್ತ ಕಾನೂನು ನೀತಿಗಳ ಕೊರತೆ ಮತ್ತು ಅಭಿವೃದ್ಧಿ ತಂತ್ರಗಾರಿಕೆಗಳ ಕೊರತೆ ಎಂಬುದನ್ನು ತಿಳಿಸುತ್ತಾರೆ. ಅಧ್ಯಯನಕಾರರ ವೀಕ್ಷಣೆಯಂತೆ ಭಾರತದಲ್ಲಿ ಮಕ್ಕಳ ರಕ್ಷಣಾ ಪಾಲುದಾರರಿಂದ ಸಾಕಷ್ಟು ಸಮಗ್ರ ಪ್ರಯತ್ನ ಮತ್ತು ಉತ್ತೇಜಿತ ಆರೋಗ್ಯದಾಯಕ ಜೀವನಕ್ರಮ ಮತ್ತು ಒಳ್ಳೆಯ ವ್ಯಕ್ತಿತ್ವ ಅಭಿವೃದ್ಧಿಯ ಅವಶ್ಯಕತೆ ಇರುವುದನ್ನು ಉಲ್ಲೇಖಿಸುತ್ತಾರೆ.

**ಇಂಡಿಯಾ ಅಲೈಯನ್ಸ್ ಫಾರ್ ಚೈಲ್ಡ್ ರೈಟ್ಸ್** (೨೦೦೪:೨೦೩) ಇದರಲ್ಲಿ ಭಾರತೀಯ ಹೆಣ್ಣುಮಕ್ಕಳು ತಮ್ಮ ಅರ್ಥಪೂರ್ಣ ಆರಂಭಿಕ ಬಾಲ್ಯದಿಂದ ವಂಚಿತರಾಗಿದ್ದಾರೆ ಅವರು ಸಾಮಾಜಿಕ ಬದ್ಧತೆಯ ಕೊರತೆಯಿಂದಾಗಿ ನಿರಂತರ ಅನ್ಯಾಯ ಹಾಗೂ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಸಲಹೆ ನೀಡುತ್ತಾ ರಾಜ್ಯ ಹಾಗೂ ಕೇಂದ್ರ ಸರಕಾರ ಅರ್ಥಪೂರ್ಣ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಬಾಲಕಾರ್ಮಿಕತೆಯನ್ನು ದೇಶದಿಂದಲೇ ನಿರ್ಮೂಲನೆ ಮಾಡಬೇಕು.

**ಗೋಪಾಲಕೃಷ್ಣನ್** (೨೦೦೪:೧೬೨) ಭಾರತದ ಮಕ್ಕಳ ಹಕ್ಕುಗಳನ್ನು ಅಧ್ಯಯನಕ್ಕೊಳ ಪಡಿಸುತ್ತಾ ಮಕ್ಕಳ ಹಕ್ಕುಗಳ ವಿವಿಧ ವಿಚಾರಗಳನ್ನು ಹೊಂದಿದ ಪುಸ್ತಕವೊಂದರ ಸಂಪಾದಕತ್ವ ಮಾಡುತ್ತಾರೆ. ಅದರಲ್ಲಿ ಸಂಯುಕ್ತ ರಾಷ್ಟ್ರಗಳ ಸಮಾವೇಶ ಬದಲಾಗುತ್ತಿರುವ ಪ್ರಪಂಚದಲ್ಲಿ ಮಕ್ಕಳ ಹಕ್ಕುಗಳು, ಶಿಕ್ಷಣ ಹಕ್ಕು, ಆರೋಗ್ಯ ಹಕ್ಕು, ಕಲ್ಯಾಣ ಹಕ್ಕು ಮಕ್ಕಳ ಮಾನವ ಹಕ್ಕುಗಳು ಇತ್ಯಾದಿಗಳು ನಮೂದಿತವಾಗಿದೆ. ಅಧ್ಯಯನಕಾರರು ಗಮನಿಸಿದಂತೆ ಭಾರತದ ಮಕ್ಕಳಿಗೆ ತಮ್ಮ ಹಕ್ಕುಗಳ ಅರಿವು ಕಡಿಮೆ. ಹಲವಾರು ಅಡೆತಡೆಗಳಿಂದಾಗಿ ಹಕ್ಕು ಪ್ರತಿಪಾದನೆಯ ಪಾಲುದಾರರೂ ಕೂಡಾ ತಮ್ಮ ದೇವದೂತರ ಪಾತ್ರವಹಿಸಿಲ್ಲ. ಈ ಕಾರ್ಯದಲ್ಲಿ ಭಾರತದ ವಾತಾವರಣದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ ಮಾರ್ಗೋಪಾಯಗಳನ್ನು ವಿವರಿಸಿದ್ದಾರೆ.

**ಸತ್ಯರತಿ ಅಂಡ್ ಬುಪಿಂದರ್** (೨೦೦೬:೩೨೪) ಅವರು ಜಾಗತೀಕರಣದ ಪ್ರಕರಣಗಳನ್ನು ಪರೀಕ್ಷಿಸಿ ಭಾರತದಲ್ಲಿ ಅಭಿವೃದ್ಧಿ ಮತ್ತು ಮಕ್ಕಳ ಹಕ್ಕುಗಳ ಪ್ರತಿಪಾದನೆ, ಸಂಘಟಿತ

ಹಾಗೂ ಅಸಂಘಟಿತ ಆರ್ಥಿಕ ಕ್ಷೇತ್ರಗಳಲ್ಲಿ ಹೇಗೆ ಬೆಳೆಯುತ್ತಿವೆ, ಎನ್ನುವ ಬಗ್ಗೆ ಮತ್ತು ಮಕ್ಕಳ ಹಕ್ಕುಗಳು ಹೇಗೆ ಉಲ್ಲಂಘನೆಯಾಗುತ್ತಿವೆ ಎನ್ನುವ ಬಗ್ಗೆ ಚರ್ಚಿಸಿತ್ತಾರೆ.

**ಪ್ರೇಮ್ ಕುಮಾರ್** (೨೦೦೮:೩೦೫) ಭಾರತದಲ್ಲಿ ಮಾಧ್ಯಮ ಮತ್ತು ಮಕ್ಕಳ ಹಕ್ಕುಗಳ ನಡುವೆ ಇರುವ ಸಂಬಂಧವನ್ನು ಪರಿವೀಕ್ಷಿಸುತ್ತಾರೆ. ಅಧ್ಯಯನಕಾರರು ಸಾಕ್ಷೀಕರಿಸಿ ಭಾರತದ ಮಕ್ಕಳ ಹಕ್ಕು ಉಲ್ಲಂಘನೆಯ ಪ್ರಕರಣಗಳಲ್ಲಿ ಮಾಧ್ಯಮದ ಪಾತ್ರದ ಬಗ್ಗೆ ಉಲ್ಲೇಖಿಸುತ್ತಾರೆ. ಮಾಧ್ಯಮ ತಮ್ಮ ಮಿತಿಗಳನ್ನು ಮೀರುವುದರಿಂದ ಹೇಗೆ ಮಕ್ಕಳ ಪ್ರಗತಿ, ಭದ್ರತೆಗೆ ಮಾರಕವಾಗಿ ಪರಿಣಮಿಸುತ್ತದೆ ಎಂದು ತಿಳಿಸುತ್ತಾರೆ. ಅಧ್ಯಯನಕಾರರ ಸಲಹೆಯಂತೆ ಮಾಧ್ಯಮ ಹೇಗೆ ಸೂಕ್ಷ್ಮತೆಯೊಂದಿಗೆ (ಮಕ್ಕಳ ಪ್ರಕರಣಗಳನ್ನು ಪ್ರಚಾರ ಪಡಿಸುವ ಸಂದರ್ಭದಲ್ಲಿ) ಮಕ್ಕಳೊಂದಿಗೆ ಹಾಗೂ ಪ್ರಕರಣಗಳೊಂದಿಗೆ ವ್ಯವಹರಿಸಬೇಕು ಎಂದು ಸಲಹೆ ನೀಡುತ್ತಾರೆ.

**ಯುನಿಸೆಫ್** (೨೦೧೦:೩೬೯) ವಿಶ್ವಾದ್ಯಂತ ಮಕ್ಕಳ ಸ್ಥಿತಿಗತಿಯನ್ನು ಪರಿವೀಕ್ಷಿಸಿ ಮಕ್ಕಳ ಹಾಗೂ ಯುವಜನರ ಸಂತಾನೋತ್ಪತ್ತಿ ಹಕ್ಕುಗಳು, ಸಾಗಣೆ ಮತ್ತು ವಲಸೆಗೆ ಸಂಬಂಧಿಸಿ ಅಧ್ಯಯನ ನಡೆಸಿದ್ದಾರೆ. ಅಧ್ಯಯನದ ಪ್ರಕಾರ ಬಡತನ ಸರಕಾರೇತರ ಹೋರಾಟದ ಫಲಶ್ರುತಿ ಪಡೆದಿದೆ. ಈ ವರದಿಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ರಾಜ್ಯ ಸರಕಾರಗಳು ವಹಿಸಬೇಕಾಗಿದೆ. ಇದಕ್ಕಾಗಿ ಸರಕಾರ ರಾಜಕೀಯ ಆರ್ಥಿಕ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಯನ್ನು ಕಂಡುಕೊಂಡಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ.

**ನ್ಯಾಶನಲ್ ಕಮೀಷನ್ ಫಾರ್ ಪ್ರೊಟೆಕ್ಷನ್ ಆಫ್ ಚೈಲ್ಡ್ ರೈಟ್ಸ್** (೨೦೧೦:೨೭೨) ಟೆಲಿವಿಷನ್‌ನಲ್ಲಿ ಮಕ್ಕಳ ಭಾಗವಹಿಸುವಿಕೆ ಬಗ್ಗೆ ಅಧ್ಯಯನ ಕೈಗೊಂಡಿರುತ್ತಾರೆ. ಮಕ್ಕಳು ರಿಯಾಲಿಟಿ ಶೋ ಮತ್ತು ಜಾಹಿರಾತುಗಳಲ್ಲಿ ಭಾಗವಹಿಸಿದ ಬಗ್ಗೆ ಅಧ್ಯಯನ ನಡೆಸುತ್ತಾ ಪ್ರಮುಖ ಅಂಶಗಳಾದ ದೃಕ್-ಶ್ರವಣ ಉದ್ದಿಮೆ, ಮಾರ್ಗದರ್ಶಿ ಸೂತ್ರಗಳು ಮಕ್ಕಳ ಪರಿಸ್ಥಿತಿಯನ್ನು ನಿಯಂತ್ರಿಸುತ್ತಿವೆ ಎನ್ನುವ ಬಗ್ಗೆ ಅಧ್ಯಯನ ನಡೆಸಿದ್ದಾರೆ. ದಾಖಲೆಗಳು ಮತ್ತು ಪಬ್ಲಿಕೇಶನ್‌ಗಳು ತೋರಿಸುವ ಹಾಗೆ ಮುಂದಿನ ೫ ವರ್ಷಗಳಲ್ಲಿ ಮಾಧ್ಯಮ ಮತ್ತು ಮನರಂಜನಾ ಉದ್ದಿಮೆ ೧೨.೫% ರಷ್ಟು ವಾರ್ಷಿಕ ಅಭಿವೃದ್ಧಿ ಹೊಂದುವ ಸಾಧ್ಯತೆ ಇದೆ ಎನ್ನುತ್ತದೆ. ಭಾರತದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗೆ ಔದ್ಯೋಗಿಕ ಪತ್ರಿಕೋದ್ಯಮದಲ್ಲಿ ಮಾಹಿತಿಯಿರುವ ಸೂಕ್ಷ್ಮತೆ ಬೆಳೆಸುವ ಅವಶ್ಯಕತೆಯನ್ನು ಎತ್ತಿ ಹಿಡಿಯಲಾಗಿದೆ.

**ಫಾರ್ಖಿಲ್** (೨೦೧೨:೧೩೫) ಇವರು ತಮ್ಮ ಅಧ್ಯಯನದಲ್ಲಿ ಮಕ್ಕಳ ಹಕುಗಳ ರಕ್ಷಣೆಯಲ್ಲಿ ಬಂದ ಸಮಸ್ಯೆಗಳು ಮತ್ತು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸ್ಥಾಪನೆ ಮತ್ತು ಮಕ್ಕಳ ಬಗೆಗಿನ ಹಿತದೃಷ್ಟಿಯ ಬಗ್ಗೆ ಮಾತನಾಡುತ್ತಾರೆ. ಹಲವು ಸೂಕ್ಷ್ಮ ಅವಶ್ಯಕತೆಯ ರಾಜ್ಯಗಳಲ್ಲಿ ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗಗಳ ಸ್ಥಾಪನೆ ಆಗಿಲ್ಲ ಮತ್ತು ಇದಕ್ಕೆ ರಾಜಕೀಯ ಹಿತಾಸಕ್ತಿಯ ಕೊರತೆ ಕಾರಣ ಎನ್ನಲಾಗಿದೆ. ಅಧ್ಯಯನಕಾರರು ವಿಶ್ಲೇಷಿಸುತ್ತಾ ಮಕ್ಕಳ ಹಕ್ಕುಗಳ ಉಲ್ಲಂಘನೆಯ ವಿವಿಧ ಮುಖಗಳನ್ನು ಗಮನಿಸಿರುತ್ತಾರೆ. ಉದಾ: ಬಾಲಕಾರ್ಮಿಕತೆ ಬಾಲ–ವೇಶ್ಯಾವಾಟಿಕೆ, ಸಾಗಣೆ, ಅನರಕ್ಷರಸ್ಥತೆ, ಬೇದಭಾವ ಅಪರಾದ, ಮಕ್ಕಳ ಮೇಲಿನ ದೌರ್ಜನ್ಯ, ಅಪೌಷ್ಟಿಕತೆ ಮತ್ತು ಮಾರಣಾಂತಿಕ ಕಾಯಿಲೆಗಳ ಬಗ್ಗೆ ಉಲ್ಲೇಖಿಸುತ್ತಾರೆ. ಅವರು ಜಮ್ಮು ಕಾಶ್ಮೀರದ ಮಕ್ಕಳ ಪ್ರಾದೇಶಿಕ ಕಮಿಷನ್‌ಗಳ ಸ್ಥಾಪನೆ ಮತ್ತು ಮಕ್ಕಳ ಹಕ್ಕುಗಳನ್ನು ಕಾಪಿಡಲು ಅವಶ್ಯವೆಣಿಸಿರುವ ಆರೋಗ್ಯಕರ ಆಚರಣೆಗಳ ಬಗ್ಗೆ ಚರ್ಚಿಸಿರುತ್ತಾರೆ.

**ಯು.ಎನ್.ಚಿಲ್ಡ್ರನ್ ಫಂಡ್** (೨೦೧೨:೩೬೪) ಪ್ರಸ್ತುತವಾಗಿ ಕಾರ್ಮಿಕರ ಸಮುದಾಯ ಗಳು, ಸಮುದಾಯದೊಳಗಿನ ಮಕ್ಕಳ ಸಮಸ್ಯೆಗಳನ್ನು ಸೂಕ್ತವಾಗಿ ಗುರುತಿಸದ ಬಗ್ಗೆ ತಮ್ಮ ಕಾಳಜಿ ವ್ಯಕ್ತಪಡಿಸುತ್ತಾರೆ. ಅವರ ಅಭಿಪ್ರಾಯದಂತೆ ಮತ್ತು ಸಲಹೆಯಂತೆ ನಂಬಿಕೆ, ಪರಸ್ಪರ ಗೌರವ, ಕಾಣ್ಕೆ ಹಾಗೂ ಸಂಯೋಜಿತ ಪ್ರಯತ್ನ ಆಧುನಿಕ(Morden) ಸಮಾಜದಲ್ಲಿ ಮಕ್ಕಳಿಗೆ ಹಕ್ಕುಗಳನ್ನು ಕಾಪಿಡಲು ಬಹಳ ನೀಳವಾದ ದಾರಿಯನ್ನು ಸವೆಸಬೇಕಿದೆ.

**ರಾಬಿನ್ಸ್‌ನ್ ಹಾಗೂ ಹಾನ್ಮರ್** (೨೦೧೪:೩೧೪) ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಧರ್ಮದ ಪಾತ್ರವನ್ನು ವರದಿಮಾಡುತ್ತಾರೆ. ಮುಂದುವರಿದು ಮಕ್ಕಳ ಮೇಲಿನ ದೌರ್ಜನ್ಯ ನಿರ್ಲಕ್ಷ ಹಾಗೂ ದುರುಪಯೋಗ ಹೇಗೆ ಸಮುದಾಯ ಕೌಟುಂಬಿಕ ಪರಿಸರ ಮತ್ತು ಸಂಸ್ಥೆಗಳಲ್ಲಿ ಹೇಗೆ ಹಾಸುಹೊಕ್ಕಾಗಿದೆ, ಮಕ್ಕಳ ಪ್ರಕರಣಗಳನ್ನು ಮಾಧ್ಯಮ ಹೇಗೆ ಸೂಕ್ಷ್ಮತೆಯಿಂದ ನೋಡಬೇಕು. ಅದು ಹೇಗೆ ಸಕಾರಾತ್ಮಕ ಪರಿಣಾಮ ಬೀರಬಲ್ಲದು ಎಂದು ವಿವರಿಸುತ್ತಾರೆ.

**ಬ್ಯಾನರ್ಜಿ** (೧೯೯೭:೪೬) ಇವರು ಭಾರತದಲ್ಲಿನ ಬಾಲಕಾರ್ಮಿಕತೆ ಸಮಸ್ಯೆಯನ್ನು ಅಧ್ಯಯನ ಮಾಡಿರುತ್ತಾರೆ ಅವರು ಇಟ್ಟಿಗೆ ತಯಾರಿ ಹಾಗೂ ಝರಿ ಎಂಬ್ರಾಯ್ಡರಿ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಮಕ್ಕಳು ಅನುಭವಿಸುತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಾರೆ, ಅಧ್ಯಯನದಲ್ಲಿ ಅವರು ಹೇಗೆ ಮಕ್ಕಳು ಅನ್ಯಾಯ ಮತ್ತು ವಂಚನೆಗೆ

ಒಳಗಾಗುತ್ತಿದ್ದಾರೆ ಮತ್ತು ನಿರ್ಲಕ್ಷಕ್ಕೊಳಪಡುತ್ತಿದ್ದಾರೆ ಎನ್ನುವ ಅಂಶದ ಮೇಲೆ ಬೆಳಕು ಚೆಲ್ಲುತ್ತಾರೆ. ಅವರ ಸಲಹೆಯಂತೆ ದುಡಿಯುತ್ತಿರುವ ಮಕ್ಕಳಿಗೆ ಶಿಕ್ಷಣ, ಆರೋಗ್ಯ ಪೋಷಣೆ, ಭಾವನಾತ್ಮಕ ಬೆಂಬಲ ಹಾಗೂ ಹಣಕಾಸಿನ ಸಹಾಯ ನೀಡುವ ಮೂಲಕ ಅವರ ಸಮಗ್ರ ಅಭಿವೃದ್ಧಿ ಹಾಗೂ ಮಕ್ಕಳ ರಕ್ಷಣಾ ಅಭಿವೃದ್ಧಿಗಾಗಿ ಸರಕಾರ ಹಾಗೂ ಇತರ ಪಾಲುದಾರರು ಶ್ರಮಿಸಬೇಕಿದೆ.

**ಗುಪ್ತಾ** (೧೯೮೯:೧೭೦) ಅವರು ಭಾರತದಲ್ಲಿ ಅಪಾಯಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಕ್ಕಳ ಬಗ್ಗೆ ಬೆಳಕು ಚೆಲ್ಲುತ್ತಾರೆ. ಬಾಲಕಾರ್ಮಿಕತೆ ಸಾಮಾಜಿಕ ಸಮಸ್ಯೆಯಾಗಿದ್ದು ಅದರಲ್ಲಿ ದೊಡ್ಡ ಸಂಖ್ಯೆ ಮಕ್ಕಳು ಬಲಿಯಾಗುತ್ತಿದ್ದಾರೆ ಎನ್ನುತ್ತಾರೆ. ಅಧ್ಯಯನದ ಪ್ರಕಾರ ಬಾಲಕಾರ್ಮಿಕತೆ ಭಾರತದ ಹಲವಾರು ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಕಾರಣವಾಗಿದೆ. ಮತ್ತು ಮಕ್ಕಳನ್ನು ಎಳವೆಯಲ್ಲಿ ಅಮಾನವೀಯ ಸಂದರ್ಭಗಳಿಗೆ ತಳ್ಳಲಾಗುತ್ತಿದೆ ಎನ್ನುತ್ತಾರೆ. ಅಧ್ಯಯನಕಾರರ ಸಲಹೆಯಂತೆ ಸರಕಾರ ಕಾನೂನಿನಲ್ಲಿ ಸೂಕ್ತ ಬದಲಾವಣೆಗಳನ್ನು ತಂದುಕೊಂಡು ಕಾನೂನು ತೊಡಕುಗಳನ್ನು ಸರಿಪಡಿಸುವ ಮೂಲಕ ಭಾರತದ ಸಮಾಜದಲ್ಲಿ ಮಕ್ಕಳ ಹಕ್ಕಗಳನ್ನು ಸಂರಕ್ಷಿಸಬೇಕಿದೆ ಎನ್ನುತ್ತಾರೆ.

**ಸಿಂಘ್** (೧೯೯೦:೩೪೦) ಅವರ ಅಧ್ಯಯನದಲ್ಲಿ ಭಾರತದಲ್ಲಿನ ಬಾಲಕಾರ್ಮಿಕತೆಯನ್ನು ಸಮಾಜೋ–ಆರ್ಥಿಕ ದೃಷ್ಠಿಯಿಂದ ಗಮನಿಸಿದಂತೆ ಹೆಚ್ಚಾಗಿ ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ವರ್ಗದ ಮಕ್ಕಳು ಹೆಚ್ಚುತ್ತಿರುವ ಬಾಲಕಾರ್ಮಿಕತೆಗೆ ಬಲಿಯಾಗುತ್ತಾರೆ. ಇದಕ್ಕೆ ರಾಜಕೀಯ ಹಿತಾಸಕ್ತಿಯ ಕೊರತೆ, ಸಾಮಾಜಿಕ ಹೋರಾಟ ಮತ್ತು ಪೂರಕ ವಿಷಯಗಳು ಕಾರಣವಾಗಿದೆ. ಭಾರತದಲ್ಲಿ ಸೂಕ್ತ ಸಮಾಜ ಕಲ್ಯಾಣ ಕ್ರಮಗಳ ಮೂಲಕ ಬಾಲ ಕಾರ್ಮಿಕ ಮಕ್ಕಳ ಪುನರ್ವಸತಿಗೆ ಶ್ರಮಿಸಬೇಕಾಗಿದೆ.

**ಯು.ಎಸ್.ಚಿಲ್ಡ್ರನ್ ಫಂಡ್** (೨೦೧೨:೩೬೪) ಅವರು ತಮ್ಮ ಅಧ್ಯಯನದಲ್ಲಿ ಧಾರ್ಮಿಕ ಸಮುದಾಯಗಳು ಕ್ರಿಯಾತ್ಮಕವಾಗಿ ಮಕ್ಕಳ ಸಮಸ್ಯೆಗಳೆಡೆ ಸ್ಪಂದಿಸುತ್ತಿಲ್ಲ ಮತ್ತು ತಮ್ಮ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಮಕ್ಕಳ ಪ್ರಕರಣಗಳನ್ನು ಗುರುತಿಸುತ್ತಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಅವರು ತಮ್ಮ ಅಧ್ಯಯನದಲ್ಲಿ ನಂಬಿಕೆ, ಪರಸ್ಪರ ಗೌರವ, ಸೂಕ್ತ ದೃಷ್ಠಿಕೋನ ಹಾಗೂ ಸಂಯೋಜಿತ ಪ್ರಯತ್ನದಿಂದ ಆಧುನಿಕ ಸಮಾಜದಲ್ಲಿ ಮಕ್ಕಳ ರಕ್ಷಣೆ ಸಾಂಗವಾಗಿ ನೆರವೇರಲು ಸಾಧ್ಯ ಎಂದು ಸಲಹೆ ನೀಡುತ್ತಾರೆ.

**ಸೆಕ್ಕರ್** (೨೦೧೩:೩೨೯) ಅಧ್ಯಯನದಲ್ಲಿ ಗುರುತಿಸಿರುಂತೆ ಮಕ್ಕಳ ಹಕ್ಕುಗಳ ಅನುಷ್ಠಾನದ ಸಾಧನೆಯಲ್ಲಿ ಮಕ್ಕಳನ್ನು ಕ್ರೂರತೆಯಿಂದ ನೋಡಿರುವುದು ಕಾರಣವಾಗಿರುತ್ತದೆ, ಮಕ್ಕಳ ಹಕ್ಕುಗಳ ಸಾಧನೆಗೆ ಹಿತಾಸಕ್ತಿ ಹೊಂದುವುದು ತುಂಬಾ ಮುಖ್ಯವಾಗಿರುತ್ತದೆ ಎನ್ನುತ್ತಾರೆ.

**ನಿಕ್ಕು** (೨೦೧೩:೨೮೦) ಅಧ್ಯಯನದಲ್ಲಿ ಗುರುತಿಸಿರುವಂತೆ ಮಿಲಿಯಗಟ್ಟಲೆ ಜನರಿಗೆ ಮಕ್ಕಳ ಹಕ್ಕುಗಳು ವಿಕೋಪದ ಸಮಯದಲ್ಲಿ ಹಾಳುಗೆಡವಿರುವುದನ್ನು ತಿಳಿಸಿರುತ್ತಾರೆ. ಪ್ರಾಕೃತಿಕ ವಿಕೋಪ ಬಹಳಷ್ಟು ಮಕ್ಕಳನ್ನು ಸಶಸ್ತ್ರ ಯುದ್ಧ, ವೇಶ್ಯಾವಾಟಿಕೆ, ಅಮಲು ಸಾಗಣೆ ಮತ್ತು ಇತರ ಅಪಾಯಕಾರಿ ಸಂದರ್ಭ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗುತ್ತದೆ.

ಅಧ್ಯಯನಕಾರರು ಸಲಹೆ ನೀಡುತ್ತಾ ಸಮುದಾಯ ಸಂವಹನ ಭಾಗವಹಿಸುವಿಕೆ ಮತ್ತು ವಿಕೋಪ ನಿರ್ವಹಣೆಯಲ್ಲಿ ಪಾಲುದಾರರನ್ನು ತೊಡಗಿಸಿ ಮಾನವ ಹಕ್ಕುಗಳ ಉಲ್ಲಂಗನೆಯನ್ನು ಜಾಗತಿಕವಾಗಿ ತಡೆಗಟ್ಟಬೇಕು ಎನ್ನುತ್ತಾರೆ.

**ಹಾರ್ಕೋರ್ಟ್ ಮತ್ತು ಹಗ್ಲುಂಡ್** (೨೦೧೩:೧೭೯) ಅಧ್ಯಯನ ನಡೆಸಿ ಮಕ್ಕಳ ಹಕ್ಕುಗಳ ತಳದಿಂದ ಮೇಲ್ಮುಖವಾಗಿ ಅನುಷ್ಠಾನದ ಅವಶ್ಯಕತೆ ಬಗ್ಗೆ ಬೆಳಕು ಚೆಲ್ಲುತ್ತಾರೆ, ಹಿಂದಿನ ಅಧ್ಯಯನಗಳಲ್ಲಿ ಈ ಕುರಿತು ಸಾಕಷ್ಟು ಚರ್ಚೆಗಳನ್ನು ನಡೆಸಲಾಗಿದೆ, ಯುನೈಟೆಡ್ ನೇಶನ್ಸ್ ಕನ್ವೆನ್ಷನ್ ಪ್ರಕಾರವಾಗಿ ಮಕ್ಕಳ ಹಕ್ಕುಗಳ ಅನುಷ್ಠಾನಕ್ಕಿಂತ ತಳದಿಂದ ಮೇಲಕ್ಕೆ ಅನುಷ್ಠಾನಗೊಳಿಸಿದರೆ ಹೆಚ್ಚಿನ ಪ್ರತಿಫಲ ದೊರಕುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

**ಮೆಹ್ತಾ ಆಂಡ್ ಜಸ್ವಾಲ್** (೧೯೯೬:೨೪೭) ಅಧ್ಯಯನದಲ್ಲಿ ಬಾಲಕಾರ್ಮಿಕತೆ ಮತ್ತು ಕಾನೂನಿನ ನಡುವಿನ ಸಂಬಂಧವನ್ನು ಪರೀಕ್ಷಿಸಲಾಗಿದೆ ಇದರಂತೆ ರಾಷ್ಟ್ರವು ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಸಾಂವಿಧಾನಿಕವಾಗಿ ಇರುವ ಕಾನೂನಾತ್ಮಕ ಅನುಕೂಲತೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿಲ್ಲ. ಅವರ ಪ್ರಕಾರ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ ಮಕ್ಕಳ ಕಲ್ಯಾಣಕ್ಕೆ ಸೂಕ್ತ ಕಾರ್ಯಕ್ರಮಗಳು ಅನುಷ್ಠಾನ ಗೊಳ್ಳುವಂತೆ ನೀತಿಗಳನ್ನು ರಚಿಸಬೇಕು.

**ಗನಿ ಮತ್ತು ಶಾಹ** (೧೯೯೮:೧೫೧) ಅಧ್ಯಯನದಲ್ಲಿ ಕಾಶ್ಮೀರದ ಕಾರ್ಪೆಟ್ ಉದ್ದಿಮೆಯಲ್ಲಿ ಬಾಲಕಾರ್ಮಿಕರ ಸಮಸ್ಯೆಗಳನ್ನು ವಿಶ್ಲೇಷಿಸುತ್ತಾ ಅವರಲ್ಲಿ ದೊಡ್ಡ ಮಟ್ಟದ

ಬಡತನ, ಅನಕ್ಷರಸ್ಥತೆ ಹಾಗೂ ಹೆತ್ತವರ ಅಸಹಾಯಕತೆ ಕಾರಣವಾಗುತ್ತದೆ ಎನ್ನುತ್ತಾರೆ. ಅಧ್ಯಯನಕಾರರು ಸಲಹೆ ನೀಡುತ್ತಾ ಮಕ್ಕಳನ್ನು ಕಾರ್ಖಾನೆಗಳ ದೌರ್ಜನ್ಯದಿಂದ ಬಚಾವಾಗಿಸಬೇಕು ಎನ್ನುತ್ತಾರೆ. ಅವರು ನೀತಿ ನಿರೂಪಕರು, ಉಧ್ಯೋಗಿಗಳು ಹೆತ್ತವರನ್ನು ಉದ್ದೇಶಿಸಿ ಮಕ್ಕಳ ಹಕ್ಕುಗಳ ಉಲ್ಲಂಘನೆಯನ್ನು ತೀವ್ರವಾಗಿ ಪರಿಗಣಿಸುವಂತೆ ಸಲಹೆ ನೀಡುತ್ತಾರೆ.

**ಮಿಶ್ರಾ** (೨೦೦೦:೨೫೭) ಅವರು ತಮ್ಮ ಅಧ್ಯಯನದಲ್ಲಿ ಭಾರತದಲ್ಲಿನ ಬಾಲಕಾರ್ಮಿಕತೆಯ ಪ್ರಕರಣವನ್ನು ಗಮನಿಸಿ ಭಾರತದಲ್ಲಿನ ಬಹುದೊಡ್ಡ ಸಂಖ್ಯೆಯ ಬಾಲಕಾರ್ಮಿಕರು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಾಗಿರುತ್ತಾರೆ ಎನ್ನುತ್ತಾರೆ. ಸಂಶೋಧಕರು ಸೂಚಿಸುತ್ತಾ ಹೆತ್ತವರು ಅತೀ ನಿರ್ಧಯಿಗಳಾಗಿ ಭಾರತದ ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಕಾರಣವಾಗಿದ್ದಾರೆ ಎನ್ನುತ್ತಾರೆ. ಅವರು ಸಲಹೆ ನೀಡುತ್ತಾ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಕ್ಕಳನ್ನು ಗುರುತಿಸಿ ಸರಕಾರವೇ ಅವರಿಗೆ ಮಾನವೀಯ ನೆಲೆಯಲ್ಲಿ ಪುನರ್ವಸತಿ ಕಲ್ಪಿಸಬೇಕು ಎಂದು ಹೇಳುತ್ತಾರೆ.

**ಸಕ್ಸೆನಾ** (೨೦೦೦:೩೨೧) ಅವರು ಹಕ್ಕುಗಳು ಮತ್ತು ಭಾರತದ ಉದ್ದಿಮೆಯಲ್ಲಿ ದುಡಿಯುತ್ತಿರುವ ಮಕ್ಕಳ ನಡುವಿನ ಸಂಬಂಧವನ್ನು ಪರೀಕ್ಷಿಸಿ ವಿವಿಧ ಹಂತಗಳಲ್ಲಿ ಮಕ್ಕಳ ಮೇಲಿನ ಭಾರವೆನಿಸುವ ಹೆಚ್ಚು ಕಾಲಾವಧಿಯ ದುಡಿಯುವ ವಾತಾವರಣದಲ್ಲಿ ಮಕ್ಕಳ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಅಧ್ಯಯನ ತೋರಿಸುವಂತೆ ದೊಡ್ಡ ಸಂಖ್ಯೆಯಲ್ಲಿ ಮಕ್ಕಳು ಅರ್ಥಪೂರ್ಣ ಶೈಕ್ಷಣಿಕ ಸೌಲಭ್ಯಗಳಿಂದ ಹಾಗೂ ಸಮಾಜ ಕಲ್ಯಾಣದಿಂದ ಭಾರತದ ಮಕ್ಕಳನ್ನು ವಂಚಿತರನ್ನಾಗಿಸಿದೆ ಎನ್ನುತ್ತಾರೆ. ಈ ಅಧ್ಯಯನಕಾರರ ಸಲಹೆಯಂತೆ ರಕ್ಷಕರು ಶಿಕ್ಷಕರು ಹಾಗೂ ಇತರ ಮಕ್ಕಳ ಹಕ್ಕುಗಳ ಪಾಲುದಾರರು ಜೊತೆಯಾಗಿ ಶ್ರಮಿಸಿ ಭಾರತೀಯ ಸಮಾಜದಲ್ಲಿ ಮಕ್ಕಳ ಹಿತಾಸಕ್ತಿಯನ್ನು ಕಾಪಾಡಬೇಕಿದೆ ಎಂದಿರುತ್ತಾರೆ.

**ಸ್ಯಾಂಡ್** (೨೦೦೩:೩೨೨) ಅವರ ಅಧ್ಯಯನದಲ್ಲಿ, ಉದ್ದಿಮೆಯಲ್ಲಿ ವಿಶ್ವದಾದ್ಯಂತ ದುಡಿಯುತ್ತಿರುವ ಮಕ್ಕಳ ಬಗ್ಗೆ ಅರ್ಥಪೂರ್ಣ ಚರ್ಚೆ ಮಕ್ಕಳ ಹಕ್ಕು ರಕ್ಷಣೆಯ ಪಾಲುದಾರರಲ್ಲಿ ನಡೆಯುವ ಸ್ಫೂರ್ತಿ ನೀಡುತ್ತದೆ ಈ ಅಧ್ಯಯನದಲ್ಲಿ ಅಂತರಾಷ್ಟ್ರೀಯ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ಮಕ್ಕಳು ಎದುರಿಸುತ್ತಿರುವ ಉಪಯುಕ್ತ ಮಾಹಿತಿಗಳನ್ನು ನೀಡಲಾಗಿದೆ, ಮುಖ್ಯವಾಗಿ ಬಾಲಕಲಾವಿದರ ಬಗ್ಗೆ ಅಧ್ಯಯನಕಾರರು ಬಾಲಕಲಾವಿದರಿಗೆ

ರಕ್ಷಣೆ ನೀಡಬಹುದಾದಂತಹಾ ಪ್ರಮುಖ ಕ್ರಮಗಳ ಬಗ್ಗೆ ಸಂಶೋಧಕರು ಸಲಹೆ ನೀಡುತ್ತಾರೆ.

**ಭಾರ್ಗವ** (೨೦೦೩:೬೧) ಈ ಅಧ್ಯಯನದ ಮೂಲಕ ಅಧ್ಯಯನಕಾರರು ಭಾರತದಲ್ಲಿ ಬಾಲಕಾರ್ಮಿಕತೆ ನಿರ್ಮೂಲನೆಯ ಪ್ರಕರಣಗಳನ್ನು ಚರ್ಚಿಸುತ್ತಾರೆ. ಮುಂದುವರಿದು ಪೋಷಕರು ಶಿಕ್ಷಕರು ಹಾಗೂ ಇತರ ಪಾಲುದಾರರು ಹೇಗೆ ಬಾಲಕಾರ್ಮಿಕತೆ ಎಂಬ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂದು ವಿವರಿಸುತ್ತಾರೆ. ಅಧ್ಯಯನದ ಪ್ರಕಾರ ಶೈಕ್ಷಣಿಕ ಸೌಕರ್ಯಗಳ ಕೊರತೆಯಿಂದಾಗಿ ಮಕ್ಕಳು ಭಾರತದ ಸಮಾಜದಲ್ಲಿ ಬಾಲಕಾರ್ಮಿಕತೆಗೆ ಬಲಿಯಾಗುವ ಅನಿವಾರ್ಯತೆಯಲ್ಲಿದ್ದಾರೆ ಎಂದು ಅಭಿಪ್ರಾಯ ಪಡುತ್ತಾರೆ. ಒಂದು ಸಮಗ್ರ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನವಾಗಬೇಕು ಇದರಿಂದ ಕುಟುಂಬಗಳನ್ನು ಪ್ರತಿನಿಧಿಸುತ್ತಿರುವ ಮಕ್ಕಳಿಗೆ ಪ್ರಯೋಜನಕಾರಿಯಾಗುತ್ತದೆ.

**ಆನಂದರಾಜ್‌ಕುಮಾರ್** (೨೦೦೪:೧೯) ಭಾರತದಲ್ಲಿ ಹೆಣ್ಣು ಬಾಲಕಾರ್ಮಿಕರ ಸಮಸ್ಯೆಗಳನ್ನು ಗಮನಿಸಿ ಭಾರತದಲ್ಲಿ ಬಹು ಸಂಖ್ಯೆಯ ಯುವತಿಯರು ಆರೋಗ್ಯ, ಪೌಷ್ಠಿಕತೆ, ಶಿಕ್ಷಣ ಹಾಗೂ ಅಭಿವೃದ್ಧಿಯಿಂದ ವಂಚಿತರಾಗಿದ್ದಾರೆ. ಈ ಅಧ್ಯಯನ ಹೊರಗೆಡಹಿದಂತೆ ಭಾರತದಲ್ಲಿ ಹೆಣ್ಣುಮಕ್ಕಳ ಸಂದರ್ಭಗಳ ಬಲಿಪಶುವಾಗಿದ್ದಾರೆ ಮತ್ತು ಇದಕ್ಕೆ ಮೂಡನಂಬಿಕೆ, ಆಚರಣೆ ಲಿಂಗ ತಾರತಮ್ಯ ಮತ್ತು ಭಾರತದ ಇತರ ಸಂಕೀರ್ಣತೆಗಳು ಕಾರಣವಾಗಿವೆ, ಅಧ್ಯಯನಕಾರರ ಅಭಿಪ್ರಾಯದಂತೆ ಬಾಲಕಾರ್ಮಿಕ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಕಾನೂನು ನಿರೂಪಕರು ಮತ್ತು ಮಕ್ಕಳ ಹಕ್ಕುಗಳ ಇತರ ಪಾಲುದಾರರು ತೀವ್ರವೆಂದು ಪರಿಗಣಿಸುವ ಅವಶ್ಯಕತೆ ಇದೆ ಎಂದು ತಿಳಿಸಿರುತ್ತಾರೆ.

**ಜೇಯ್ನ್** (೨೦೦೬:೨೧) ಅಧ್ಯಯನದಲ್ಲಿ ಬಾಲಕಾರ್ಮಿಕ ಸಮಸ್ಯೆಗಳನ್ನು ಒಂದು ಭಿನ್ನವಾದ ದೃಷ್ಠಿಕೋನದಲ್ಲಿ ನೋಡುತ್ತಾರೆ. ಅವರ ಪ್ರಕಾರ ಬಾಲಕಾರ್ಮಿಕತೆಯನ್ನು ದಿವ್ಯತನವೆಂಬ ಗೋಡೆಯಿಂದ ಭಾರತೀಯ ಸಮಾಜದಲ್ಲಿ ಮುಚ್ಚಲಾಗಿದೆ, ಅಧಯಯನದ ಒಳಹುಗಳಲ್ಲಿ ಉಲ್ಲೇಖಿಸುತ್ತಾ ರಾಷ್ಟ್ರದಲ್ಲಿ ಬಾಲಕಾರ್ಮಿಕತೆ ನಿರ್ಮೂಲನಕ್ಕಾಗಿ ಹಲವಾರು ಕಾರ್ಯಕ್ರಮಗಳು ಜಾರಿಯಲ್ಲಿವೆಯಾದರೂ ಬಾಲಕಾರ್ಮಿಕತೆ ಇನ್ನೂ ಚಾಲ್ತಿಯಲ್ಲಿದೆ, ಅಧ್ಯಯನಕಾರರ ಸಲಹೆಯ ಪ್ರಕಾರ ಮಕ್ಕಳ ಹಕ್ಕುಗಳ ರಕ್ಷಣೆಯ ಪಾಲುದಾರರೆಲ್ಲರೂ ಒಗ್ಗೂಡಿ ಮಕ್ಕಳ ಹಿತಾಸಕ್ತಿಯನ್ನು ಮಾನವೀಯ ವಿಧಾನಗಳಲ್ಲಿ ರಕ್ಷಿಸಬೇಕಿದೆ.

**ರಾವ್** (೨೦೦೬:೩೧೦) ಪರೀಕ್ಷಿತ ಭಾರತದ ಸಮಾಜದಲ್ಲಿ ಬಾಲಕಾರ್ಮಿಕತೆಯ ಸಮಸ್ಯೆಗಳನ್ನು ಹೋಗಲಾಡಿಸಲು ಹಲವಾರು ಸಾಂವಿಧಾನಿಕ ಮತ್ತು ಕಾನೂನುಗಳು ಇವೆಯಾದರೂ ಸಾಮಾಜಿಕ ಅರಿವಿನ ಕೊರತೆ ಮತ್ತು ರಾಜಕೀಯ ಹೋರಾಟಗಳಿಂದಾಗಿ ನೆನಗುದಿಗೆ ಬಿದ್ದಿವೆ. ಅಧ್ಯಯನ ಫಲಿತಗಳು ತಿಳಿಸಿದಂತೆ ಮಾಧ್ಯಮ ಸಂಸ್ಥೆಗಳು ಮತ್ತು ನ್ಯಾಯಾಂಗ ಸಂಸ್ಥೆಗಳು ಕಾನೂನು ನಿರೂಪಕರಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯ ಅರಿವು ಮೂಡಿಸಲಿಕ್ಕಾಗಿ ಬಹು ಮುಖ್ಯ ಪಾತ್ರ ವಹಿಸಿವೆ. ಅಧ್ಯಯನಕಾರರ ಸಲಹೆಯಂತೆ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಜೊತೆಗೂಡಿ ಭಾರತದ ಬಾಲಕಾರ್ಮಿಕತೆಯ ಸಮಸ್ಯೆಯನ್ನು ನಿರ್ಮೂಲನೆ ಮಾಡಬೇಕಿದೆ.

**ಶಾಂಡಿಲ್ಯ** (೨೦೦೬:೩೩೧) ಬಾಲಕಾರ್ಮಿಕತೆಯ ಮೇಲೆ ಬೆಳಕು ಚೆಲ್ಲುತ್ತಾ, ಅಧ್ಯಯನಕಾರರು ಮುಂದುವರಿದಿರುವ ಬಾಲಕಾರ್ಮಿಕತೆಯು ಜಾಗತಿಕ ಸಮುದಾಯದ, ಅಂತರಾಷ್ಟ್ರಕ್ಕೆ ಸವಾಲು ಹಾಕುತ್ತಾರೆ. ಅವರ ಪ್ರಕಾರ ಸದಸ್ಯ ರಾಷ್ಟ್ರಗಳು ಈ ನಿಟ್ಟಿನಲ್ಲಿ ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿಲ್ಲ, ಬಾಲಕಾರ್ಮಿಕತೆ ನಿರ್ಮೂಲನೆಯ ಬಗ್ಗೆ ಅಂತರಾಷ್ಟ್ರೀಯ ಸಂಸ್ಥೆಗಳಾದ ಯುನೆಸ್ಕೋ, ಯು.ಎನ್.ಡಿ.ಪಿ ಮತ್ತು ಇತರ ಸಂಘ ಸಂಸ್ಥೆಗಳು ಹಣಕಾಸನ್ನು ಮತ್ತು ಇತರ ಸೌಲಭ್ಯಗಳನ್ನು ಒದಗಿಸುತ್ತಿವೆಯಾದರೂ, ಇನ್ನೂ ಫಲಕಾರಿಯಾಗಲಿಲ್ಲ ಎನ್ನುತ್ತಾರೆ.

**೨.೪. ಅಧ್ಯಯನದ ಸಮಸ್ಯೀಕರಣ**

ಮಕ್ಕಳ ರಕ್ಷಣೆಗೆ ಸಂಬಂಧಪಟ್ಟಂತೆ ಲಭ್ಯವಿರುವ ಸಾಹಿತ್ಯವನ್ನು ವಿಶ್ಲೇಷಿಸಿದಾಗ ಈ ಪರಿಕಲ್ಪನೆಯು ೧೯೮೦ರ ನಂತರ ಜಾಗತಿಕ ಮಟ್ಟದಲ್ಲಿ ಹೆಚ್ಚು ಚರ್ಚೆಗೊಳಪಟ್ಟ ವಿಷಯಗಳಲ್ಲೊಂದಾಗಿದೆ ಎಂದು ಹೇಳಬಹುದು. ಆದುನಿಕತೆ, ಆ–ಜಾಗತೀಕರಣ ಮತ್ತು ಬದಲಾಗುತ್ತಿರುವ ಸಾಮಾಜಿಕ, ವ್ಯವಸ್ಥೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿ ಆಕರ್ಷಕ ಪದವೆನಿಸಿದೆ. ಈ ಕುರಿತಂತೆ ಲಭ್ಯವಿರುವ ಸಾಹಿತ್ಯವನ್ನು ಗಮನಿಸಿದಾಗ ವಿಶೇಷ, ಆಶ್ಚರ್ಯಕರ ಎಲ್ಲರೂ ಒಪ್ಪಿಕೊಳ್ಳುವಂತೆ ಮಾಡುವ ದೃಷ್ಟಿಕೋನಗಳು ಮತ್ತು ಗೊಂದಲ ಮೂಡಿಸುವಂತಹಾ ಅಭಿಪ್ರಾಯಗಳನ್ನು ನೀಡುತ್ತವೆ. ಪ್ರಚಲಿತದಲ್ಲಿದ್ದ ಈ ಹಿಂದೆ ಆಕರ್ಷಕವೆನಿಸಿದ ರಕ್ಷಣೆ ಅಭಿವೃದ್ಧಿಯ ವ್ಯಾಖ್ಯಾನಗಳು ಇಂದು ವ್ಯಾಪಕವಾಗಿ ಪ್ರಶ್ನಾರ್ಹವಾಗಿದ್ದು, ಸಾಂಪ್ರದಾಯಿಕ ಮಾದರಿಗಳು ಕೂಡಾ ತೀವ್ರವಾಗಿ ಚರ್ಚೆಗೊಳಪಡುತ್ತಿವೆ ಎನ್ನುವ ಅಂಶ ಗೋಚರಿಸುತ್ತದೆ. ಸಾಂಪ್ರದಾಯಿಕ ಮಾದರಿಗಳು ಕೂಡಾ ತೀವ್ರವಾಗಿ

ಚರ್ಚೆಗೊಳಪಡುತ್ತಿವೆ. ಹೀಗಾಗಿ ರಕ್ಷಣೆ ಮತ್ತು ಅಭಿವೃದ್ಧಿ ಕುರಿತಂತೆ ನಿರ್ಧಿಷ್ಟವಾಗಿ ಒಂದು ಒಮ್ಮತದ ಅಭಿಪ್ರಾಯ ನೀಡುವುದು ಕಷ್ಟದಾಯಕವೂ ಹೌದು.

ಒಪ್ಪಿತ ಸಾಮಾಜಿಕ ಭದ್ರತೆ ಮತ್ತು ಅಭಿವೃದ್ಧಿಯ ಮಾಹಿತಿಗಳು ಇಂದು ಅಸಹಜ ಹಾಗೂ ತಪ್ಪಾಗಿ ಅರ್ಥೈಸಿಕೊಂಡಿರುವ ನಂಬಿಕೆ ಎಂದು ಪರಿಗಣಿಸಲ್ಪಟ್ಟ ಸಂದರ್ಭದಲ್ಲಿ ಚರ್ಚೆಯ ಕೇಂದ್ರಬಿಂದು ರಕ್ಷಣೆ ಮತ್ತು ಅಭಿವೃದ್ಧಿಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕಿನ ಮೇಲೆ ತನ್ನದೇ ಆದ ಸೂಕ್ಷ್ಮ ವೈಚಾರಿಕತೆ ಮತ್ತು ತತ್ವಗಳ ಆಧಾರದಲ್ಲಿ ನಡೆಯುತ್ತಿದೆ. ಇದರಿಂದಾಗಿಯೇ ಪ್ರಸ್ತುತ ಸಾಮಾಜಿಕ ವ್ಯವಸ್ಥೆಗೆ ಸೂಕ್ತವಾಗಿ ಹೊಂದಿಕೆಯಾಗುವ ಮತ್ತು ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಗೆ ಪೂರಕವಾಗುವಂತಹಾ ಹೊಸ ಸಿದ್ಧಾಂತಗಳು ಪೂರಕವಾಗಿ ಹುಟ್ಟಿಕೊಳ್ಳುತ್ತಿವೆ.

ಮಕ್ಕಳ ಅಭಿವೃದ್ಧಿ ಒಟ್ಟು ಅಭಿವೃದ್ಧಿಯ ಪ್ರಮುಖ ಅಂಗವಾಗಿದೆ. ವಿಶ್ವದಾದ್ಯಂತ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿ ಅತಿ ಚರ್ಚಿತ ವಿಷಯವಾಗಿದೆ ಎಂಬುದು ಒಪ್ಪಿತ ಸತ್ಯ. ಮಕ್ಕಳ ರಕ್ಷಣೆಗಾಗಿ ಇತ್ತೀಚಿನ ವರ್ಷಗಳಲ್ಲಿ ಕಂಡುಕೊಳ್ಳಲಾಗಿರುವ ಪರಿಹಾರೋಪಾಯಗಳ ಕುರಿತು ವೈಜ್ಞಾನಿಕವಾಗಿ ಚರ್ಚೆಯಾಗಬೇಕಿರುವುದು ಇಂದಿನ ಅವಶ್ಯಕತೆಯಾಗಿದೆ. ಮಕ್ಕಳ ಅಭಿವೃದ್ಧಿಯ ಪರಿಕಲ್ಪನೆಯೇನು? ಮಕ್ಕಳ ರಕ್ಷಣೆ ಮತ್ತು ಮಕ್ಕಳ ಅಭಿವೃದ್ಧಿಗಿರುವ ಸೈದ್ಧಾಂತಿಕ ಸಂಬಂಧಗಳೇನು ಎಂಬ ಕುರಿತು ಖಾತರಿಪಡಿಸಿಕೊಳ್ಳುವುದು ಅವಶ್ಯವಾಗಿದೆ. ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಮಕ್ಕಳ ಸ್ಥಿತಿಗತಿಯ ಬಗ್ಗೆ ಅವಲೋಕನ ಅನಿವಾರ್ಯವಾಗುತ್ತದೆ. ಮಕ್ಕಳ ರಕ್ಷಣೆ ಎಂದರೇನು? ಮಕ್ಕಳ ಹಕ್ಕುಗಳ ಮತ್ತು ರಕ್ಷಣಾ ವ್ಯವಸ್ಥೆಗಳು ಹೇಗೆ ಮಕ್ಕಳಿಗೆ ಪೂರಕಾವಾದ ವಾತಾವರಣ ಕಲ್ಪಿಸುತ್ತಿವೆಯೇ ಎಂಬ ಕುರಿತು ಗಮನಹರಿಸಬೇಕಾಗಿದೆ. ಜಾಗತೀಕರಣದ ಪರಿಣಾಮವಾಗಿ ಕೌಟುಂಬಿಕ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಗಳು ಮಕ್ಕಳನ್ನು ಬಲಿಪಶುವನ್ನಾಗಿಸಿದೆ. ಮಾಧ್ಯಮ ಹಾಗೂ ತಂತ್ರಜ್ಞಾನದಲ್ಲಾಗಿರುವ ಅವಿಷ್ಕಾರಗಳಿಂದಾಗಿ ನೈತಿಕ ಮೌಲ್ಯಗಳ ಅಧಃಪತನವಾಗಿರುವುದು ಬರಿಕಣ್ಣಿಗೂ ಗೋಚರಿಸುವಂತಾಗಿದೆ. ಹೊಸ ಸವಾಲುಗಳಿಗೆ ಒಡ್ಡಿಕೊಳ್ಳುವ ಅನಿವಾರ್ಯತೆ ಯಲ್ಲಿರುವ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸುವುದಕ್ಕೆ ಸಂಬಂಧಿಸಿದ ಅಂಶಗಳನ್ನು ಗಮನದಲ್ಲಿರಿಸಿ, ಕೆಳಗೆ ವಿವರಿಸಲಾದ ಪ್ರಮುಖ ಉದ್ದೇಶಗಳನ್ನು ಕೇಂದ್ರೀಕರಿಸಿ ಅಧ್ಯಯನವನ್ನು ನಡೆಸಲಾಗುತ್ತಿದೆ.

## ೨.೫. ಅಧ್ಯಯನದ ಉದ್ದೇಶಗಳು

೧. ಉಡುಪಿ ಜಿಲ್ಲೆಯ ಮಕ್ಕಳ ರಕ್ಷಣಾ ವ್ಯವಸ್ಥೆಯನ್ನು ತಿಳಿದುಕೊಳ್ಳುವುದು.

೨. ಮಕ್ಕಳ ರಕ್ಷಣಾವ್ಯವಸ್ಥೆಯಲ್ಲಿರುವ ಅಂತರಗಳನ್ನು ಅರ್ಥೈಸಿಕೊಳ್ಳುವುದು.

೩. ಭಾರತದ ಸಂವಿದಾನದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಿರುವ ಅವಕಾಶಗಳನ್ನು ಕ್ರೋಡೀಕರಿಸಿ ಮಕ್ಕಳ ರಕ್ಷಣೆಯ ಸೈಧಾಂತಿಕ ಹಿನ್ನೆಲೆಯನ್ನು ವಿಶ್ಲೇಷಿಸುವುದು.

೪. ವ್ಯಾಪ್ತಿಯ ಮಕ್ಕಳ ರಕ್ಷಣೆಗಾಗಿ ರೂಪಿಸಲಾಗಿರುವ ಕ್ರಿಯಾಯೋಜನೆಗಳನ್ನು ವಿಶ್ಲೇಷಿಸುವುದು.

ಪ್ರಸ್ತುತ ಅಧ್ಯಯನದ ಮೂಲ ಉದ್ದೇಶವಾಗಿರುತ್ತದೆ.

ಮಕ್ಕಳು ಕುಟುಂಬಾಧಾರಿತ ಸಮಾಜದಲ್ಲಿ ಅವಿಭಾಜ್ಯ ಅಂಗ ಎಣಿಸಿಕೊಂಡಿದ್ದಾರೆ. ಜಾಗತೀಕರಣದ ಈ ಸಂದರ್ಭದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಅವಿಷ್ಕಾರಗಳು, ಬದಲಾವಣೆಗಳು ಮಕ್ಕಳ ಸ್ಥಿತಿಗತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿರುವುದು ಸಹಜ ಎಂಬುದಾಗಿ ಜಾಗತಿಕ ಮಟ್ಟದಲ್ಲಿ ಪರಿಗಣಿಸಲಾಗಿದೆ.

ಅಧ್ಯಯನ ಮಾಡಿದಾಗ ಕೆಲವು ಮೂಲಭೂತ ಪ್ರಶ್ನೆಗಳು ಮೂಡುತ್ತವೆ.

- ಹಕ್ಕುಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಸಮಾಜದಲ್ಲಿ ಮಕ್ಕಳು ಸುರಕ್ಷಿತ ವಾಗಿದ್ದಾರೆಯೇ?
- ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವ ಬದಲಾವಣೆಗಳಲ್ಲಿ ಕುಟುಂಬ ವ್ಯವಸ್ಥೆಯ ಮೇಲೆ, ಪ್ರಮುಖವಾಗಿ ಮಕ್ಕಳಮೇಲೆ ದುಷ್ಪರಿಣಾಮ ಬೀರುತ್ತಿರುವುದು ನ್ಯಾಯ ಸಮ್ಮತವೇ?
- ಕುಟುಂಬವೆಂಬ ರಕ್ಷಾ ಕವಚದಲ್ಲಿ ಮಕ್ಕಳು ಸಂಪೂರ್ಣ ಸುರಕ್ಷಿತ ವಾಗಿದ್ದಾರೆಯೇ?
- ಸಮಾಜದ ವ್ಯವಸ್ಥೆಗಳು ಮಕ್ಕಳ ರಕ್ಷಣೆಗೆ ಪೂರಕವಾಗಿವೆಯೇ?
- ಕುಟುಂಬದಿಂದ ಹೊರಗೆ ಬಾಲ್ಯ ಕಳೆಯುತ್ತಿರುವ ಮಕ್ಕಳಿಗೆ ಪೂರಕವಾದ ಪುನರ್ವಸತಿ ವ್ಯವಸ್ಥೆಗಳಿವೆಯೇ?
- ಮಕ್ಕಳು ಆನಂದದಾಯಕ ಬಾಲ್ಯ ಅನುಭವಿಸುವಂತಾಗಲು ಇಲಾಖೆಗಳು ಯಾವರೀತಿಯ ಪ್ರಯತ್ನಗಳನ್ನು ಮಾಡಿದೆ?

- ಅನುಷ್ಠಾನಗೊಂಡಿರುವ ಯೋಜನೆಗಳು ಮಕ್ಕಳ ಅತ್ಯುತ್ತಮ ಹಿತದೃಷ್ಟಿಯೊಂದಿಗೆ ಕಾರ್ಯನಿರ್ವಹಿಸುತ್ತಿವೆಯೇ?
- ಸಮುದಾಯಕ್ಕೆ ಮಕ್ಕಳ ಹಕ್ಕುಗಳು ಮತ್ತು ಅವುಗಳೆಡೆ ತಮ್ಮ ಜವಾಬ್ದಾರಿಯ ಅರಿವಿದೆಯೇ?
- ಇಲಾಖೆಗಳು ಕಂಡುಕೊಂಡಿರುವ ಬದಲಿ ವ್ಯವಸ್ಥೆಗಳು ಮಕ್ಕಳ ಅವಶ್ಯಕತೆಗಳಿಗೆ ಪೂರಕವಾಗಿವೆಯೇ? ಈ ಎಲ್ಲಾ ಮೂಲಭೂತ ಪ್ರಶ್ನೆಗಳು ಪ್ರಮುಖವಾಗಿ ಗಮನದಲ್ಲಿರಿಸಿ ಹಾಗೂ ಭಾರತದಲ್ಲಿ ಮತ್ತು ಇತರ ರಾಷ್ಟ್ರಗಳಲ್ಲಿ ಮಕ್ಕಳ ರಕ್ಷಣೆಗಾಗಿ ರೂಪಿತವಾದ ಕಾನೂನುಗಳು ಮಕ್ಕಳಲ್ಲಿ ಸುರಕ್ಷತೆ ಕಾಣಲು ಸಾಧ್ಯವಾಗಿದೆಯೇ?

### ೨.೬. ಅಧ್ಯಯನದ ಮಹತ್ವ

ಭಾರತದ ಸಂಸ್ಕೃತಿ ಮತ್ತು ಭದ್ರ ಸಾಮಾಜಿಕ ಬದುಕು ಜಾಗತೀಕರಣ, ಆಧುನೀಕರಣ ಮತ್ತು ಅಭಿವೃದ್ಧಿಯ ಹೆಸರಲ್ಲಿ ನಾಶವಾಗುತ್ತಿದ್ದು, ಮುಂದೆ ಸಾಮಾಜಿಕ ಅನನ್ಯತೆ, ಅಸ್ಮಿತೆಗಳು ಕಳೆದುಹೋಗುವ ಅಪಾಯವನ್ನು ಎದುರಿಸುತ್ತಿದ್ದೇವೆ. ಪ್ರಸ್ತುತ ಅಧ್ಯಯನವು ವಿವಿಧ ಕಾರಣಗಳ ಹಿನ್ನೆಲೆಯಲ್ಲಿ ಕುಟುಂಬದ ಭದ್ರ ರಕ್ಷಿತ ವ್ಯವಸ್ಥೆಯಿಂದ ಹೊರಬಿದ್ದಿರುವ ಮಕ್ಕಳು, ಅದರಲ್ಲೂ ಮುಖ್ಯವಾಗಿ ಉಡುಪಿ ಜಿಲ್ಲೆಯಲ್ಲಿ, ಹೆಚ್ಚುತ್ತಿರುವ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಹಾಗೂ ಮಕ್ಕಳ ಮೇಲಿನ ದೌರ್ಜನ್ಯದ ಹಿನ್ನೆಲೆಯಲ್ಲಿ ರಕ್ಷಣಾ ವ್ಯವಸ್ಥೆಯ ಸಾಧಕ–ಬಾಧಕಗಳ ಮೇಲೆ ಬೆಳಕು ಚೆಲ್ಲುತ್ತದೆ. ಮಕ್ಕಳ ಹಕ್ಕುಗಳ ಬಗ್ಗೆ ೧೯೮೯ರಲ್ಲಿ ಬೀಜಿಂಗ್‌ನಲ್ಲಿ ನಡೆದ ಮಕ್ಕಳ ಹಕ್ಕುಗಳ ವಿಶ್ವ ಸಮಾವೇಶದಲ್ಲಿ ಮಕ್ಕಳ ರಕ್ಷಣಾ ವ್ಯವಸ್ಥೆಗೆ ಒತ್ತು ನೀಡುತ್ತಾ ಸದಸ್ಯ ರಾಷ್ಟ್ರವಾದ ಭಾರತ ಒಪ್ಪಂದದ ಬದ್ಧತೆಗೆ ಸಹಿ ಹಾಕಿದ ನಂತರದಲ್ಲಿ ಈ ನಿಟ್ಟಿನಲ್ಲಿ ಸಾಕಷ್ಟು ಕಾನೂನುರೀತ್ಯಾ ಬದಲಾವಣೆಗಳು ಕಂಡುಕೊಳ್ಳಲಾಗಿದೆ. ಅಭಿವೃದ್ಧಿಯ ಹಿನ್ನೆಲೆಯಲ್ಲಿ ಅದು ನಮ್ಮ ದೇಶದ ಸಾಂಸ್ಕೃತಿಕ ಚೌಕಟ್ಟಿಗೆ, ಜನಸಾಮಾನ್ಯರ ಜೀವನ ಶೈಲಿ, ಸಾಮಾಜಿಕ, ವ್ಯವಸ್ಥೆಯ ಮೇಲೆ ಎಂತಹಾ ಸಮಸ್ಯೆಗಳಿಗೆ ಕಾರಣವಾಗಿದೆ ಎಂಬುದನ್ನು ಉಡುಪಿ ಜಿಲ್ಲೆಯ ಮಕ್ಕಳ ಪರಿಸ್ಥಿತಿಯನ್ನು ಸವಿವರವಾಗಿ ಚರ್ಚಿಸಿ ದಾಖಲಿಸಲಾಗಿದೆ.

ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳ ಅಭಿವೃದ್ಧಿ, ಮಕ್ಕಳ ರಕ್ಷಣೆ, ಮಕ್ಕಳ ಕಾನೂನು ವ್ಯವಸ್ಥೆಯ ಬಹಳಷ್ಟು ವ್ಯವಸ್ಥಿತ ಅಧ್ಯಯನಗಳು ನಡೆಸಲ್ಪಟ್ಟಿರುತ್ತವೆ. ಕೈಗಾರಿಕೆ, ಮೀನುಗಾರಿಕೆ, ವೈದ್ಯಕೀಯ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿರುವ ಉಡುಪಿ ಜಿಲ್ಲೆಯಲ್ಲಿ,

ಮಕ್ಕಳಿಗೆ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಯಾವುದೇ ರೀತಿಯ ವೈಜ್ಞಾನಿಕ ಮತ್ತು ವ್ಯವಸ್ಥಿತ ಅಧ್ಯಯನಗಳು ಆಗದೇ ಇರುವುದರಿಂದ ಪ್ರಸ್ತುತ ಅಧ್ಯಯನವು ಅತ್ಯಂತ ಮಹತ್ವದ್ದೆನಿಸುತ್ತದೆ. ವಿವಿಧ ಕಾರಣಗಳಿಂದಾಗಿ ಕೌಟುಂಬಿಕ ವ್ಯವಸ್ಥೆಯಿಂದ ಹೊರಗುಳಿದು ಅತಂತ್ರಸ್ಥಿತಿಗೆ ಯೋಗ್ಯವಾಗಿರುವುದು ಅವರ ಜೀವನದಲ್ಲಿ ಕಾಡುವ ಅಭದ್ರತೆಗೆ ಪರಿಹಾರೋಪಾಯಗಳೇನು? ಇಂತಹ ಮಕ್ಕಳಿಗೆ ಪುನರ್ವಸತಿ ನೀಡಿ, ಕಾನೂನುರೀತ್ಯಾ ಸಹಾಯ ಮಾರ್ಗದರ್ಶನ ಹೇಗೆ ಒದಗಿಸಬಹುದು? ಮಕ್ಕಳ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು ಎಂಬ ಅಂಶಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿರುತ್ತದೆ. ಭಾರತದ ಜನಸಂಖ್ಯೆಯ ಮೂರರಲ್ಲಿ ಒಂದುಭಾಗದಷ್ಟು ಮಕ್ಕಳೇ ಇದ್ದಾರೆ. ಆದರೆ ಮಕ್ಕಳಹಿತ ಕಾಪಾಡುವುದರಲ್ಲಿ ಹೆಚ್ಚು ಪರಿಣಾಮಕಾರಿ ಕೆಲಸಗಳು ಆಗುತ್ತಿಲ್ಲ ಎನ್ನುವುದು ವಾಸ್ತವಾಂಶ. ಮಕ್ಕಳು ನಮ್ಮ ದೇಶದ ಅತೀ ದೊಡ್ಡ ರಾಷ್ಟ್ರೀಯ ಸಂಪತ್ತು ಎನ್ನುತ್ತದೆ ೧೯೭೪ರ ರಾಷ್ಟ್ರೀಯ ಮಕ್ಕಳ ನೀತಿ. ಆದರೆ ನಮ್ಮ ದೇಶದ ಮಕ್ಕಳ ಸ್ಥಿತಿಗತಿ ಹತ್ತಿರಗಿಂದ ನೋಡಿದರೆ ಗಾಬರಿ ಹುಟ್ಟಿಸುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಸರ್ವಶಿಕ್ಷಾ ಅಧಿಯಾನ, ನ್ಯಾಶನಲ್ ಕ್ರೈಮ್ ರಿಪೋರ್ಟ್ ಬ್ಯೂರೋ, ಅಸರ್ ಮುಂತಾದ ಸಂಸ್ಥೆಗಳ ಮಕ್ಕಳ ಸ್ಥಿತಿಗತಿಗಳ ಅಧ್ಯಯನದ ಅಂಕಿ ಅಂಶಗಳಲ್ಲಿ ಮಕ್ಕಳು ಒಂದಲ್ಲ ಒಂದು ರೀತಿಯಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿರುವುದು ಸ್ಪಷ್ಟವಾಗಿದೆ.

ಉಡುಪಿ ಜಿಲ್ಲೆಯಲ್ಲಿ ಪುನರ್ವಸತಿಯ ಅವಶ್ಯಕತೆ, ಮಕ್ಕಳ ಬಗೆಗಿನ ಈ ಅಧ್ಯಯನವು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದರಿಂದ ಮುಂದೆ ಇಂತಹ ಅಧ್ಯಯನಗಳನ್ನು ನಡೆಸುವ ಸಂಶೋಧಕರಿಗೆ ತಾತ್ವಿಕ ನೆಲೆಗಟ್ಟು ಹಾಗೂ ಮಾರ್ಗದರ್ಶನವನ್ನು ನೀಡುವಂತಹಾ ಆಕರ ಗ್ರಂಥವಾಗಿ ಪ್ರಸ್ತುತ ಅಧ್ಯಯನವುಸಹಕಾರಿಯಾಗಿರುತ್ತದೆ.

### ೨.೭. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವನ್ನು ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ೧೯೯೭ರಲ್ಲಿ ವಿಭಜಿಸಿದಾಗ ಉಡುಪಿ ಎಂಬ ಹೊಸ ಜಿಲ್ಲೆ ರಚಿತವಾಯಿತು. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮೇಲ್ನೋಟದಲ್ಲಿ ಒಂದೇ ತೆರನಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಲಕ್ಷಣಗಳನ್ನು ಹೊಂದಿದೆ. ಜಾಗತೀಕರಣದ ಕಠೋರ ಛಾಯೆ ಕರಾವಳಿ ಕರ್ನಾಟಕದ ಮೇಲೂ ಬಿದ್ದಿದೆ. ಉಡುಪಿ ಅಧ್ಯಾತ್ಮಕತೆಯ ಕೇಂದ್ರವೆನಿಸಿದ್ದು,

ಉಡುಪಿ, ಜಿಲ್ಲೆಯ ಕೇಂದ್ರವಾಗಿದೆ. ಕರ್ನಾಟಕದ ಪ್ರಮುಖ ಮೀನುಗಾರಿಕಾ ಬಂದರುಗಳೆನಿಸಿದ ಮಲ್ಪೆ ಮತ್ತು ಗಂಗೊಳ್ಳಿಗಳಿಂದಾಗಿ ಮೀನುಗಾರಿಕಾ ಪ್ರದೇಶವಾಗಿ ಜಿಲ್ಲೆ ಗುರುತಿಸಿಕೊಂಡಿದೆ. ಹಲವಾರು ನೈಸರ್ಗಿಕ ಪ್ರೇಕ್ಷಣೀಯ ಸ್ಥಳಗಳಿಂದಾಗಿ, ವೈದ್ಯಕೀಯ ಕಾಲೇಜುಗಳು, ದೇವಸ್ಥಾನ ಮತ್ತು ಅಷ್ಟಮಠಗಳಿಂದಾಗಿ ದೇಶ ವಿದೇಶದ ಜನರನ್ನು ಆಕರ್ಷಿಸುತ್ತದೆ. ತನ್ನ ಗುಣಮಟ್ಟದ ಸಂವಹನ ಹಾಗೂ ಸಾಗಾಟ ಹಾಗೂ ಯಥೇಚ್ಛ ನೈಸರ್ಗಿಕ ಸಂಪನ್ಮೂಲಗಳು ಬೃಹತ್ ಉದ್ಧಿಮೆಗಳನ್ನೂ ಆಹ್ವಾನಿಸಿದೆ ಅಲ್ಲದೆ ರಾಜ್ಯ ಪರರಾಜ್ಯಗಳಿಂದ ಉಧ್ಯೋಗ ಅನ್ವೇಷಣೆಗಾಗಿ ಉಡುಪಿ ಜಿಲ್ಲೆಗೆ ವಲಸೆ ಬರುತ್ತಾರೆ. ನಗರ ಪ್ರದೇಶಗಳಲ್ಲಿ ಕೇಂದ್ರೀಕೃತವಾಗುವ ಜನವಸತಿ ಪ್ರದೇಶಗಳು, ಗಣಿಗಾರಿಕಾ ಕೇಂದ್ರಗಳಲ್ಲಿ ವಾಸಿಸುವ ವಲಸಿಗರು, ಅದರಲ್ಲೂ ಮಕ್ಕಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಭಿವೃದ್ಧಿಯ ಹೆಸರಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ, ಇತ್ತೀಚಿನ ವರ್ಷಗಳಲ್ಲಿ ಆಗಿರುವ ಬದಲಾವಣೆಗಳು, ಜಿಲ್ಲೆಯಲ್ಲಿನ ಮಕ್ಕಳಿಗೆ ಸಾಕಷ್ಟು ಸವಾಲುಗಳಿಗೆ ಒಡ್ಡಿದೆ.

ಉಡುಪಿ ಜಿಲ್ಲೆಯು ಕರ್ನಾಟಕದ ೩೦ ಕಂದಾಯ ಜಿಲ್ಲೆಗಳಲ್ಲಿ ಒಂದಾಗಿದ್ದು ಉಡುಪಿ ರಾಜಕೀಯ, ಸಂಸ್ಕೃತಿ, ಸಾಮಾಜಿಕ, ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿರುತ್ತಾರೆ. ಉಡುಪಿ ಜಿಲ್ಲೆ ಇತ್ತೀಚೆಗೆ ಹೊಸದಾಗಿ ರಚಿಸಲಾದ ೫ ಕಂದಾಯ ತಾಲೂಕುಗಳನ್ನು ಒಳಗೊಂಡಿದೆ ಅವುಗಳೆಂದರೆ ಉಡುಪಿ, ಬ್ರಹ್ಮಾವರ, ಕಾರ್ಕಳ, ಕುಂದಾಪುರ, ಬೈಂದೂರು. ಈ ಅಧ್ಯಯನಕ್ಕೆ ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ಆಯ್ಕೆ ಮಾಡಲಾಗಿದೆ. ಜಿಲ್ಲೆಯ ಮಕ್ಕಳ ಹಕ್ಕುಗಳ ಪಾಲುದಾರರೆನಿಸಿಕೊಂಡಿರುವ ಶಿಕ್ಷಕರು, ಪೋಷಕರು, ಸ್ಥಳೀಯಸರಕಾರ ಅಥವಾ ಪಂಚಾಯತ್, ಸಂಘ ಸಂಸ್ಥೆಗಳನ್ನು ಸರಳ ಯಾದೃಚ್ಛಿಕ ವಿಧಾನವನ್ನು ಬಳಸಿಕೊಂಡು ೨೩೫ ಮಾಹಿತಿದಾರರಿಂದ ಸಂರಚಿತ ಪ್ರಶ್ನಾವಳಿಗಳನ್ನು ಬಳಸಿಕೊಂಡು ವೈಜ್ಞಾನಿಕವಾಗಿ ಅಧ್ಯಯನವನ್ನು ಮಾಡಲಾಗಿರುತ್ತದೆ. ೧೬ ಗ್ರಾಮ ಪಂಚಾಯತ್‌ಗಳಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿಫೋಕಸ್ ಗ್ರೂಪ್ ಡಿಸ್ಕಷನ್ (ಕೇಂದ್ರಿತ ಗುಂಪು ಚರ್ಚೆ)ಗಳನ್ನು ನಡೆಸಿ ಪ್ರತೀ ಗ್ರಾಮ ಪಂಚಾಯತ್‌ನಲ್ಲಿ ೧೫ ಮಂದಿಯಂತೆ ಶಿಕ್ಷಕ, ಗ್ರಾಮ ಪಂಚಾಯತ್, ಎಸ್.ಡಿ.ಎಂ.ಸಿ, ಆರೋಗ್ಯ ಕಾರ್ಯಕರ್ತರು, ವೈದ್ಯರು, ಆರಕ್ಷಕರು ಅಂಗನವಾಡಿ ಕಾರ್ಯಕರ್ತರು, ಸಮುದಾಯ ಕೇಂದ್ರಿತ ಸಂಘಸಂಸ್ಥೆಗಳು ಹಾಗೂ ಮಕ್ಕಳನ್ನೊಳಗೊಂಡಂತೆ ಈ ಗುಂಪುಗಳು ಮಕ್ಕಳ ಸಂಬಂಧಿ ವಿಷಯಗಳ ಮೇಲೆ ೨ ಗಂಟೆಗಳ ಚರ್ಚೆಗಳನ್ನು ನಡೆಸಿ ಸ್ಥಳೀಯ ಮಕ್ಕಳ ಸಮಸ್ಯೆಗಳು ಮತ್ತು ಹಕ್ಕು ಉಲ್ಲಂಘನೆಯ ಪ್ರಕರಣಗಳ ಬಗ್ಗೆ ಚರ್ಚೆ ನಡೆಸಿ ಹಲವಾರು ನೈಜ್ಯ, ಚಿಂತನಾರ್ಹ

ವಿಷಯಗಲ ಮೇಲೆ ಬೆಳಕು ಚೆಲ್ಲಿ ವಿಷಯಗಳನ್ನು ಕ್ರೋಡೀಕರಿಸಲಾಯ್ತು. ಉಡುಪಿ ಜಿಲ್ಲೆಯಲ್ಲಿ ಮಕ್ಕಳೊಂಡಿಗೆ ಕೆಲಸಮಾಡುತ್ತಿರುವ ಸರಕಾರಿ ಹಾಗೂ ಸರಕಾರೇತರ ಸಾಮ್ಯದ ಸಂಘ ಸಂಸ್ಥೆಗಳು ನಡೆಸುತ್ತಿರುವ ಪುನರ್ವಸತಿ ಕೇಂದ್ರಗಳು ಮತ್ತು ವಸತಿನಿಲಯಗಳಿಗೆ ಭೇಟಿ ನೀಡಿ ಮಾಹಿತಿಗಳನ್ನು ಸಂಗ್ರಹಿಸಲಾಯ್ತು. ಹೀಗೆ ಸಂದರ್ಶನ, ಗುಂಪುಚರ್ಚೆ, ಪರಿಶೀಲನೆ, ಅವಲೋಖನ ಹಾಗೂ ಮಕ್ಕಳ ಹಾಗೂ ಮಕ್ಕಳ ಹಕ್ಕುಗಳ ಪಾಲುದಾರರ ಜೊತೆ ಸಂಶೋದಕಿ ನೇರವಾಗಿ ಬೆರೆಯುವುದರ ಮೂಲಕ ವಿಶ್ಲೇಷಣಾತ್ಮಕವಾಗಿ ಮಾಹಿತಿಯನ್ನು ಪಡೆದು ಪ್ರಶ್ನಿಸಲಾಗಿದೆ.

**ಅನುಷಂಗಿಕ ಮಾಹಿತಿ**

ನೇರ ಹಾಗೂ ಪರೋಕ್ಷ, ಮಕ್ಕಳ ಹಕ್ಕುಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿ ಕಾಲಕಾಲಕ್ಕೆ ಹೊರಡಿಸಿದ ಆದೇಶಗಳು, ನೀತಿಗಳು, ಗಜೆಟ್ ಅಧಿಸೂಚನೆಗಳು ಜನಗಣತಿ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕದ ವರದಿಗಳು, ಗಜೆಟಿಯರ್, ಮಕ್ಕಳ ನ್ಯಾಯ ಕಾಯಿದೆ ಹಾಗೂ ನಿಯಮಾವಳಿಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ. ಜಿಲ್ಲೆಯ ಮಕ್ಕಳ ಸ್ಥಿತಿಗತಿ, ಚಾಲ್ತಿಯಲ್ಲಿರುವ ರಕ್ಷಣಾ ಹಾಗೂ ಪುನರ್ವಸತಿ ವ್ಯವಸ್ಥೆಗಳು ಮೊದಲಾದ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಕ್ಷೇತ್ರದಲ್ಲಿ ಈಗಾಗಲೇ ನಡೆದಿರಿವಂತಹಾ ಅಧ್ಯಯನಾತ್ಮಕ ಸಂಶೋಧನೆಗಳ ರಾಷ್ಟೀಯ ಮತ್ತು ಅಂತರಾಷ್ಟ್ರೀಯ ಸಂಶೋಧನಾ ಗ್ರಂಥಗಳನ್ನು ದಿನಪತ್ರಿಕೆಗಳಲ್ಲಿ ಮತ್ತು ಪಾಕ್ಷಿಕಗಳಲ್ಲಿ ಬಂದಂತಹಾ ಪ್ರಬುದ್ಧ ವಿಶೇಷಣಾತ್ಮಕ ಪ್ರಬಂಧಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ಬುದ್ದಿಜೀವಿಗಳು, ಚಿಂತಕರು, ಪ್ರಾಜ್ಞರು ಮತ್ತು ಆಸಕ್ತರ ಅಭಿಪ್ರಾಯಗಳನ್ನು ಎರಡನೆಯ ಮಾಹಿತಿಯನ್ನಾಗಿ ಪರಿಗಣಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ವಾಸ್ತವವಾಗಿ ಕ್ಷೇತ್ರಕಾರ್ಯ ನಡೆಸಿ ಕಲೆಹಾಕಿದ ಮಾಹಿತಿಯೊಂದಿಗೆ ಮುಖಾಮುಖಿಯಾಗಿಸಿ ಚರ್ಚಿಸಲಾಗಿದೆ.

**ವಿಶ್ಲೇಷಣೆ**

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಈಗಾಗಲೇ ಪ್ರಸ್ತುತ ಕ್ಷೇತ್ರದಲ್ಲಿ ನಡೆಸಲ್ಪಟ್ಟಿರುವ ಅಧ್ಯಯನಗಳೊಂದಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿರುತ್ತದೆ. ಸಂಗ್ರಹಿತ ಮಾಹಿತಿಯ ಕ್ರಮಬದ್ಧ ಹಾಗೂ ರೇಖಾಚಿತ್ರಗಳ ಮೂಲಕ ವಿಶ್ಲೇಷಿಸಲಾಗಿರುತ್ತದೆ. ಈ ವಿವರಣೆಗಳು ಸಂಗ್ರಹಿತ ಮಾಹಿತಿಯ ಕ್ರಮಬದ್ದ ಹಾಗೂ

ವಸ್ತುನಿಷ್ಠವಾದ ಅಂಕಿ ಅಂಶಗಳನ್ನು ಆಧರಿಸಿದ ಮಾಹಿತಿಯಾಗಿದೆ. ಸರಳವಾದ ಮೈಕ್ರೋಸಾಫ್ಟ್ ಎಕ್ಸೆಲ್ ತಂತ್ರಜ್ಞಾನದಲ್ಲಿ ಅಂಕಿ ಅಂಶಗಳನ್ನು ದಾಖಲೀಕರಿಸಿ, ಕೋಷ್ಟಕ ಹಾಗೂ ರೇಖಾಚಿತ್ರಗಳನ್ನು ರಚಿಸಿಕೊಳ್ಳಲಾಗಿದೆ.

## ೨.೮. ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು

ಜಾಗತೀಕರಣದ ಸಂದರ್ಭದಲ್ಲಿ ಅಧುನೀಕರಣವನ್ನು ಅನುಸರಿಸಿಕೊಂಡು ಹೋಗುವ ಧಾವಂತದಲ್ಲಿ ರಕ್ಷಣೆ ಹಾಗೂ ಅಭಿವೃದ್ಧಿ ಎಂಬ ಪರಿಕಲ್ಪನೆಗೆ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿರುವ ಕಾರಣ ಮತ್ತು ಅದರ ಪ್ರಭಾವ ಸಾಮಾಜಿಕ ಕ್ಷೇತ್ರಗಳ ಮೇಲೆ ಬೀರುತ್ತಿರುವ ಅಗಾಧ ಪರಿಣಾಮವನ್ನು ಗಮನಿಸದ ಕಾರಣ ಮಕ್ಕಳ ಮೇಲೆ ಉಂಟಾಗಿರುವ ಹಲವಾರು ಅಚಾತುರ್ಯ ಹಾಗೂ ದುಷ್ಪರಿಣಾಮಗಳನ್ನು ಪರಿಶೀಲಿಸುವುದು ಪ್ರಸ್ತುತ ಅಧ್ಯಯನದ. ವ್ಯಾಪ್ತಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳ ಖೂರೀಟೂ ಖೇಲಾಖಾಮ್ದಾ ಘಭಟ್ಟಣಿಗಳನ್ನು ಮಾಡಲಾಗಿದೆ.

- ಮಕ್ಕಳ ಅಭಿವೃದ್ಧಿಯನ್ನು ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ ವಿಶ್ವ ಹಾಗೂ ರಾಷ್ಟ್ರಮಟ್ಟದಲ್ಲಿ ಕಾಳಜಿಯ ಹಾಗೂ ಸೂಕ್ಷ್ಮ ಕ್ಷೇತ್ರವೆಂದು ಪರಿಗಣಿಸಿರುವುದರಿಂದ, ಮಕ್ಕಳ ಸಮಸ್ಯೆ ಮತ್ತು ಪರಿಹಾರೋಪಾಯಗಳನ್ನು ಅರಿತುಕೊಳ್ಳುವಲ್ಲಿ ಇಡೀ ಉಡುಪಿ ಜಿಲ್ಲೆಯನ್ನು ಗಮನದಲ್ಲಿರಿಸಲಾಗಿದೆ.
- ಅಧ್ಯಯನದ ಆರಂಭದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನೆಲೆಗಳನ್ನು ತೌಲನಿಕವಾಗಿ ಬಳಸಿಕೊಳ್ಳಲಾಗಿದೆ.
- ಮಕ್ಕಳ ಹಕ್ಕುಗಳ ಪ್ರತಿಪಾದನೆಗೆ ಒತ್ತು ನೀಡುವ ಸಂದರ್ಭದಲ್ಲಿ ಹುಟ್ಟಿಕೊಂಡಿರುವ ರಕ್ಷಣಾ ವ್ಯವಸ್ಥೆಗಳ ಅನುಷ್ಠಾನದಿಂದಾಗಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪಲ್ಲಟಗಳಂತಹ ಗಂಭೀರ ಸಮಸ್ಯೆಗಳು ವಸ್ತುಸ್ಥಿತಿಯ ಅರಿವಿಲ್ಲದೆ ಕಾರ್ಯನಿರ್ವಹಿಸುತ್ತಿರುವ ರಕ್ಷಣಾ ವ್ಯವಸ್ಥೆಗಳು ಅಧ್ಯಯನ ರೂಪದಲ್ಲಿ ಪರಿಗಣಿಸಲಾಗಿದೆ.
- ಉಡುಪಿ ಜಿಲ್ಲೆಯ ಎಲ್ಲಾ ಐದು ತಾಲೂಕುಗಳನ್ನು ಕ್ಷೇತ್ರಕಾರ್ಯಕ್ಕೆ ಒಳಪಡಿಸಲಾಗಿದೆ.

## ೨.೯. ಅಧ್ಯಯನದ ವಿಭಾಗೀಕರಣ

ಈ ಅಧ್ಯಯನವು ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

**ಅಧ್ಯಾಯ ಒಂದು:** ಪ್ರಸ್ತಾವನೆಯಲ್ಲಿ ಅಧ್ಯಯನಕ್ಕೆ ಅವಶ್ಯವಿರುವ ಮೂಲಭೂತ ತಳಹದಿ ಮತ್ತು ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಯ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವ ಉದ್ದೇಶವನ್ನು ಒಳಗೊಂಡಿರುತ್ತದೆ. "ಮಕ್ಕಳ ರಕ್ಷಣಾ ವ್ಯವಸ್ಥೆಗಳು ಮತ್ತು ಅಭಿವೃದ್ಧಿ ಒಂದು ಅಧ್ಯಯನ ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ" ಸಂಶೋಧನೆಗೆ ಸಂಬಂಧಪಟ್ಟಂತಹ ತಾಂತ್ರಿಕ ವಿವರಗಳು ಉದ್ದೇಶ, ಸ್ವರೂಪ, ವ್ಯಾಪ್ತಿ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಯ ಬಗೆಗಿನ ವಿವಿಧ ವ್ಯಾಖ್ಯಾನಗಳು, ಭಾರತದಲ್ಲಿ ಮಕ್ಕಳ ರಕ್ಷಣಾ ವ್ಯವಸ್ಥೆಗಳು ಹುಟ್ಟಿಕೊಂಡ ಬಗೆ, ಅದರ ರಚನೆಗೆ ಸಂಬಂಧಪಟ್ಟ ಕಾಯಿದೆ, ಉದ್ದೇಶಗಳನ್ನು ವಿವರಿಸುತ್ತದೆ. ಅಧ್ಯಯನದ ವಿಧಾನ, ಮಾದರಿ ಗಾತ್ರ ಇತಿಮಿತಿಗಳನ್ನು ಪ್ರಸ್ತಾವನೆ ಒಳಗೊಂಡಿರುತ್ತದೆ.

**ಅಧ್ಯಾಯ ಎರಡು:** ಮಕ್ಕಳ ರಕ್ಷಣಾ ವ್ಯವಸ್ಥೆಗಳು ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸಿದ್ಧಾಂತಗಳು, ಅವುಗಳ ಪ್ರಸ್ತುತತೆ, ಸಾಮಾಜಿಕ ಪರಿಣಾಮಗಳು ಮತ್ತು ಇಲಾಖೆಗಳ ಜವಾಬ್ದಾರಿಗಳು. ಮಕ್ಕಳು ಹೇಗೆ ತೊಂದರೆಗಳಿಗೆ ಸಿಲುಕುತ್ತಾರೆ ಎಂಬಿತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ.

**ಅಧ್ಯಾಯ ಮೂರು:** ಈ ಅಧ್ಯಾಯವು ಅಧ್ಯಯನ ಕೈಗೊಂಡ ಉಡುಪಿ ಜಿಲ್ಲೆಯ ಸ್ಥೂಲ ಪರಿಚಯವನ್ನು ಒಳಗೊಂಡಿರುತ್ತದೆ. ಜಿಲ್ಲೆಯ ಭೂ ವಿಸ್ತೀರ್ಣ, ಸಾಕ್ಷರತೆ, ಆರೋಗ್ಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಾಗಿರುವ ಬೆಳವಣಿಗೆಗಳನ್ನು ಚರ್ಚಿಸಲಾಗಿರುತ್ತದೆ. ಮಕ್ಕಳ ರಕ್ಷಣೆ ಹಾಗೂ ಅಭಿವೃದ್ಧಿ ಕ್ಷೇತ್ರದಲ್ಲಿ ೧೯೮೦ರ ದಶಕದ ನಂತರ ಭಾರತ ಸರಕಾರ ಹಾಗೂ ಕರ್ನಾಟಕ ಸರಕಾರ ಕಾಲಕಾಲಕ್ಕೆ ಮಾಡಿಕೊಂಡಿರುವ ಕಾನೂನಾತ್ಮಕ ಬದಲಾವಣೆಗಳು, ರೂಪಿಸಿದ ಹೊಸ ಕಾನೂನುಗಳು, ನಿಯಮಾವಳಿಗಳ ಬಗ್ಗೆ ಈ ಅಧ್ಯಾಯ ವಿವರಣೆಯನ್ನು ನೀಡುತ್ತದೆ. ಇದರ ಪರಿಣಾಮವಾಗಿ ಸಂಕಷ್ಟದಲ್ಲಿರುವ, ಪಾಲನೆ ಪೋಷಣೆ ಹಾಗೂ ಪುನರ್ವಸತಿಯ ಅವಸ್ಯಕತೆ ಇರುವ ವ್ಯವಸ್ಥೆಗಳು ಹೇಗೆ ಪೂರಕ ಪಾತ್ರ ವಹಿಸುತ್ತವೆ ಎಂದು ತಿಳಿದುಕೊಳ್ಳಬಹುದಾಗಿದೆ.

**ಅಧ್ಯಾಯ ನಾಲ್ಕು:** ಈ ಅಧ್ಯಾಯವು ಕ್ಷೇತ್ರಕಾರ್ಯದ ವಿವರಣೆಯನ್ನು ಒಳಗೊಂಡಿದೆ. ಪ್ರಮುಖವಾಗಿ ಕುಟುಂಬಗಳೊಳಗಿನ ಶಿಥಿಲಗೊಳ್ಳುತ್ತಿರುವ ಸಂಬಂಧಗಳು, ಕುಟುಂಬಗಳ

ದುಸ್ಥಿತಿಯಿಂದ ಸುಭದ್ರ ವಲಯದಿಂದ ಹೊರಬಿದ್ದಿರುವ ಮಕ್ಕಳು ಎದುರಿಸುತ್ತಿವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿರುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಾಗಿರುವ ಪಲ್ಲಟ ಹಾಗೂ ಹೊಸ ಸಾಧ್ಯಾಸಾಧ್ಯತೆಗಳ ಬಗ್ಗೆ ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಕುಟುಂಬಗಳನ್ನು ಕಳಕೊಂಡ ಮಕ್ಕಳ ಸ್ಥಿತಿಗತಿ, ಮಕ್ಕಳ ನ್ಯಾಯ ವ್ಯವಸ್ಥೆಯಲ್ಲಾಗಿರುವ ಬದಲಾವಣೆಗಳು, ಎದುರಾಗುತ್ತಿರುವ ಆರೋಗ್ಯ ಹಾಗೂ ಸಾಮಾಜಿಕ ಸವಾಲುಗಳ ಬಗ್ಗೆ ಚರ್ಚಿಸಲಾಗಿದೆ.

**ಅಧ್ಯಾಯ ಐದು:** ಅಭಿವೃದ್ಧಿ, ಮಕ್ಕಳ ಬದುಕಿನಲ್ಲಿ ಸೃಷ್ಟಿಸಿರುವ ಸಾಮಾಜಿಕ ಅವಾಂತರಗಳು ಮತ್ತು ಸ್ಥಿತ್ಯಂತರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿರುತ್ತದೆ. ಕುಟುಂಬದ ರಕ್ಷಾಕವಚದಿಂದ ಹೊರಬಿದ್ದಿರುವ ಮಕ್ಕಳು ಅನುಭವಿಸುವ ತಲ್ಲಣಗಳು, ನಗರೀಕರಣ ತಂದೊಡ್ಡಿರುವ ಮೂಲಸೌಕರ್ಯ ಸಂಬಂಧಿತ ಸಮಸ್ಯೆಗಳು, ರಕ್ಷಣಾ ವ್ಯವಸ್ಥೆಗಳ ಬಗೆಗಿನ ಅರಿವಿನಕೊರತೆಯಿಂದಾಗಿರುವ ತೊಂದರೆಗಳನ್ನು ತುಲನಾತ್ಮಕವಾಗಿ ವಿವರಿಸುತ್ತದೆ.

**ಅಧ್ಯಾಯ ಆರು:** ಮಕ್ಕಳ ಹಕ್ಕುಗಳ ಪಾಲುದಾರರೆನಿಸಿಕೊಂಡಿರುವ, ಪೋಷಕರು, ಅಧಿಕಾರಿಗಳು, ಶಿಕ್ಷಕರು, ಸಂಘ-ಸಂಸ್ಥೆಗಳು ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಯ ಪರಿಕಲ್ಪನೆಯನ್ನು ಯಾವ ರೀತಿಯಲ್ಲಿ ಅರ್ಥೈಸಿಕೊಂಡಿರುತ್ತಾರೆ ಎಂಬುದನ್ನು ವಿಮರ್ಶಾತ್ಮಕವಾಗಿ ವಿವರಿಸಲಾಗಿದೆ. ಮಕ್ಕಳ ಪುನರ್ವಸತಿಗಾಗಿ ಹುಟ್ಟು ಹಾಕಲಾಗಿರುವ ಯೊಜನೆಗಳು, ಸಾಂಸ್ಥಿಕ ಹಾಗೂ ಅಸಾಂಸ್ಥಿಕ ವ್ಯವಸ್ಥೆಗಳು ಹಾಗೂ ಅವುಗಳ ಕಾರ್ಯ ವೈಖರಿಯನ್ನು ವಿಶ್ಲೇಷಣಾತ್ಮಕವಾಗಿ ನಿರೂಪಿಸಲಾಗಿದೆ.

**ಉಪಸಂಹಾರ:** ಉಪಸಂಹಾರವು ಅಧ್ಯಯನಕ್ಕಾಗಿ ಬಳಸಿಕೊಂಡ ತಾತ್ವಿಕ ನೆಲೆಗಟ್ಟು ಮತ್ತು ಕ್ಷೇತ್ರಕಾರ್ಯದಿಂದ ಹೊರಹೊಮ್ಮಿದ ಅಂಶಗಳನ್ನು ಕ್ರೋಢೀಕರಿಸಿ ವಿವರಿಸುತ್ತದೆ. ಇಲ್ಲಿ ದಾಖಲಿಸಲ್ಪಟ್ಟ ಫಲಿತಗಳು ಕ್ಷೇತ್ರ ಅಧ್ಯಯನದ ವೇಳೆ ಕಂಡುಬಂದ ಅಂಶಗಳ ಕ್ರೋಢೀಕರಣವಾಗಿರುತ್ತದೆ. ಕ್ಷೇತ್ರಕಾರ್ಯಕ್ಕೆ ಅನುಗುಣವಾಗಿ ಕಂಡುಕೊಂಡ ಫಲಿತಗಳನ್ನು ಯಾವ ರೀತಿಯಲ್ಲಿ ಕನಿಷ್ಠ ಮಟ್ಟಕ್ಕೆ ತರಬಹುದು ಎಂಬುದರ ಬಗೆಗೆ ಸೀಮಿತ ಸಲಹೆ ಮತ್ತು ಸೂಚನೆಗಳನ್ನು ಒಳಗೊಂಡಿರುತ್ತದೆ.

# ಅಧ್ಯಾಯ ಮೂರು

# ಅಧ್ಯಯನದ ಕ್ಷೇತ್ರ ಪರಿಚಯ ಮತ್ತು ಮಕ್ಕಳ ರಕ್ಷಣೆ ಹಾಗೂ ಅಭಿವೃದ್ಧಿ ನೀತಿಗಳು

ಭಾಗ–೧. ಉಡುಪಿ ಜಿಲ್ಲೆಯ ಸಂಕ್ಷಿಪ್ತ ಪರಿಚಯ

ಭಾಗ–೨. ಅಧ್ಯಯನಕ್ಕೊಳಪಡಿಸಿದ ಕ್ಷೇತ್ರಗಳ ಬಗೆಗಿನ ವಿವರಗಳು

ಭಾಗ–೩. ಮಕ್ಕಳ ರಕ್ಷಣೆ ಬಗೆಗಿನ ಭಾರತ ಸರಕಾರದ ನೀತಿಗಳು

## ಅಧ್ಯಾಯ ಮೂರು

# ಅಧ್ಯಯನದ ಕ್ಷೇತ್ರ ಪರಿಚಯ ಹಾಗೂ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿ ನೀತಿಗಳು

### ಅಧ್ಯಯನ ಕ್ಷೇತ್ರದ ಪರಿಚಯ

ಉಡುಪಿ ಜಿಲ್ಲೆ ಪೂರ್ವದಲ್ಲಿ ಪಶ್ಚಿಮ ಘಟ್ಟ ಹಾಗೂ ಪಶ್ಚಿಮಕ್ಕೆ ಉದ್ದನೆಯ ಅರಬ್ಬೀ ಸಮುದ್ರ ಹೊಂದಿದೆ. ಉಡುಪಿ ಜಿಲ್ಲೆ ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳಲೊಂದಾಗಿದ್ದು ರಾಜ್ಯದ ೨೭ ಜಿಲ್ಲೆಗಳಲ್ಲೊಂದಾಗಿದೆ.

೧೯೯೭ರವರೆಗೂ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದು ನಂತರದಲ್ಲಿ ಸ್ವಾಯತ್ತ ಜಿಲ್ಲೆಯಾಗಿ ಮುನ್ನಡೆಯುತ್ತಿರುವ ಉಡುಪಿ ಜಿಲ್ಲೆ, ರಾಷ್ಟ್ರಮಟ್ಟದಲ್ಲಿ ವಿವಿಧ ಕಾರಣಗಳಿಗಾಗಿ ಗುರುತಿಸಲ್ಪಟ್ಟಿದೆ. ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳನ್ನೊಳಗೊಂಡಿರುವ ಉಡುಪಿಜಿಲ್ಲೆ ಕಾಪು, ಕುಂದಾಪುರ, ಕಾರ್ಕಳ, ಬೈಂದೂರು, ಉಡುಪಿ ಹಾಗೂ ಬ್ರಹ್ಮಾವರ ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಉಡುಪಿ, ಕಾರ್ಕಳ, ಕಾಪು ಹಾಗೂ ಕುಂದಾಪುರ ವಿಧಾನಸಭಾ ಕ್ಷೇತ್ರಗಳೂ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿದ್ದು ಬೈಂದೂರು ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೭೫ ಚದರ ಕಿಲೋ ಮೀಟರ್ ಆಗಿದ್ದು ಇದು ಕರ್ನಾಟಕ ರಾಜ್ಯದ ಒಟ್ಟು ಬೌಗೋಳಿಕ ವಿಸ್ತೀರ್ಣದ ೨.೯೮ ಶೇಕಡಾ ಆಗಿರುತ್ತದೆ.

ಜಿಲ್ಲೆಯು ಮಧ್ವ ತತ್ವದ ಕೇಂದ್ರವಾಗಿದೆ. ಆಡಳಿತಾತ್ಮಕವಾಗಿ ಜಿಲ್ಲೆಯಲ್ಲಿ ೨೪೮ ಗ್ರಾಮಗಳು, ೧೪೬ ಗ್ರಾಮ ಪಂಚಾಯತ್‌ಗಳಿವೆ. ಒಂದು ನಗರಸಭೆ (ಉಡುಪಿ ನಗರ) ಎರಡು ಪುರಸಭೆಗಳು (ಕಾರ್ಕಳ ಮತ್ತು ಕುಂದಾಪುರ ನಗರ ಪ್ರದೇಶ) ಹಾಗೂ ಒಂದು ಪಟ್ಟಣ ಪಂಚಾಯತ್ (ಸಾಲಿಗ್ರಾಮ ಪಟ್ಟಣ) ಇದೆ. ಜಿಲ್ಲೆಯು ಮೂರು ನೈಸರ್ಗಿಕ ಪ್ರದೇಶಗಳನ್ನು ಕುಂದಾಪುರ ಮತ್ತು ಉಡುಪಿ ತಾಲೂಕುಗಳು ಸುಮಾರು ೯೮ ಕಿಲೋ ಮೀಟರ್ ಕಡಲ ಕಿನಾರೆ ಹೊಂದಿದೆ. ಮಲೆನಾಡಿನ ೭೫% ಕುಂದಾಪುರ ಹಾಗೂ

ಕಾರ್ಕಳ ತಾಲೂಕುಗಳಲ್ಲಿವೆ. ಉಡುಪಿ ಜಿಲ್ಲೆ ವೈವಿಧ್ಯಮಯವಾದ ಹವಾಮಾನವಿದ್ದು ಕರಾವಳಿಯಲ್ಲಿ ಉಷ್ಣಹವೆ ಕಾಣಬಹುದಾಗಿದೆ. ಮಂಗಳೂರು, ಉದ್ಯಾವರ ಹಾಗೂ ಬಾರ್ಕೂರುಗಳಲ್ಲಿ ಹರಿಯುವ ನದಿಗಳಿಂದಾಗಿ ಪ್ರದೇಶ ಫಲವತ್ತಾಗಿದೆ. ಪಶ್ಚಿಮಘಟ್ಟ ದಟ್ಟ ಅರಣ್ಯ ಹೊಂದಿದ್ದು ಅರಬ್ಬೀ ಸಮುದ್ರ ತಟ ವಿವಿದ ಬಂದರುಗಳನ್ನು ಹೊಂದಿದ್ದು ರೋಮನ್ನರ ಹಾಗೂ ಅರಬರ ವಾಣಿಜ್ಯ ವ್ಯಾಪಾರಗಳಿಗೆ ಅನುವು ಮಾಡಿದ್ದು ಕಾಣುತ್ತೇವೆ. ಮಂಗಳೂರಿನ ನೇತ್ರಾವತಿ ಹಾಗೂ ಬಾರಕೂರಿನ ಸೀತಾ ನದಿಗಳು ಅಲುಪರ ಸಾಮ್ರಾಜ್ಯದಲ್ಲಿ ಹರಿಯುವ ಪ್ರಮುಖ ನದಿಗಳಾಗಿವೆ. ಸುವರ್ಣ ನದಿ, ಕಾರ್ಕಳದ ಶಾಂಭವಿ ಹಾಗೂ ಮುಲ್ಕಿ ಪಾವಂಜೆ, ನಂದಿನಿ ಮತ್ತು ವಿವಿಧ ಹಿನ್ನೀರಿನ ತೊರೆಗಳು ಜಿಲ್ಲೆಯಲ್ಲಿ ಹರಿಯುತ್ತವೆ. ಮಂಗಳೂರು ಮಲ್ಪೆ ಹಾಗೂ ಗಂಗೊಳ್ಳಿಗಳು ಮೀನುಗಾರಿಕೆಗೆ ಮತ್ತು ಮತ್ಸೋದ್ಯಮಕ್ಕೆ ಖ್ಯಾತಿಪಡೆದ ಬಂದರುಗಳಾಗಿದ್ದು ಇದು ಕೃಷಿಯ ನಂತರ ಪ್ರಮುಖ ಉದ್ದಿಮೆ ಎಣಿಸಿಕೊಂಡಿದೆ. ಸೀತಾನದಿ, ಸ್ವರ್ಣನದಿ, ಶಾಂಭವಿ, ಚಕ್ರ, ವಾರಾಹಿ ಹಾಗೂ ಗಂಗೊಳ್ಳಿ ನದಿಗಳು ನಿಜವಾದ ಅರ್ಥದಲ್ಲಿ ಉಡುಪಿಯನ್ನು ಫಲವತ್ತಾಗಿಸಿದೆ.

ಮೊದಲು ಅಕ್ಕಿ ಹಾಗೂ ತೆಂಗು ಬೆಳೆಗೆ ಹೆಸರುವಾಸಿಯಗಿದ್ದ ಉಡುಪಿ ಜಿಲ್ಲೆಯಲ್ಲಿ ಈಗ ಅಡಿಕೆ, ಗೇರು ಬೆಳೆಯು ಪ್ರಮುಖ ಅನಿಸಿಕೊಂಡಿದೆ. ಮತ್ಸ್ಯೋದ್ಯಮಕ್ಕೆ ಹೆಸರುವಾಸಿಯಾಗಿರುವ ಮಲ್ಪೆ ಹಾಗೂ ಗಂಗೊಳ್ಳಿ ಬಂದರುಗಳು ಜಿಲ್ಲೆಯಲ್ಲಿದೆ. ಧಾರ್ಮಿಕ ಕ್ಷೇತ್ರಗಳು, ಸುಂದರ ಕಡಲ ಕಿನಾರೆ ದೇಶ ವಿದೇಶಗಳಿಂದ ಪ್ರವಾಸಿಗರನ್ನು ಜಿಲ್ಲೆಯೆಡೆ ಕೈಬೀಸಿ ಕರೆಯುತ್ತದೆ.

ಶೈಕ್ಷಣಿಕವಾಗಿ ಜಿಲ್ಲೆ ರಾಜ್ಯದಲ್ಲೇ ಮುಂಚೂಣಿಯಲ್ಲಿದೆ. ಜಿಲ್ಲೆಯಲ್ಲಿ ಅಕ್ಷರತೆ ೯೨% ಆಗಿದ್ದು ಕರ್ನಾಟಕ ರಾಜ್ಯ ಶಿಕ್ಷಣ ವಲಯದಲ್ಲಿ ನಡೆಸುವ ೧೦ನೇ ಹಾಗೂ ೧೨ನೇ ತರಗತಿಯ ಪರೀಕ್ಷೆಯಲ್ಲಿ ಉಡುಪಿ ಉತ್ತುಂಗದಲ್ಲಿದೆ. ಅಂತರಾಷ್ಟ್ರೀಯ ಖ್ಯಾತಿ ಹೊಂದಿರುವ ಶಿಕ್ಷಣ ಸಂಸ್ಥೆಗಳು ಜಿಲ್ಲೆಯಲ್ಲಿವೆ. ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಹಾಗೂ ನಿಟ್ಟೆಯಲ್ಲಿರುವ ನಿಟ್ಟೆ ಶಿಕ್ಷಣ ಸಂಸ್ಥೆಗಳು ಇವುಗಳಲ್ಲಿ ಪ್ರಮುಖವಾಗಿವೆ.

ಚಾರಿತ್ರಿಕವಾಗಿ ನೋಡುವುದಾದರೆ ಉಡುಪಿಯು ವಿಜಯನಗರ ಸಾಮ್ರಾಜ್ಯದ ಹಾಗೂ ನಂತರದಲ್ಲಿ ಮೈಸೂರು ಸಂಸ್ಥಾನದ ಭಾಗವಾಗಿತ್ತು. ಬ್ರಿಟಿಷ್ ಆಡಳಿತದಲ್ಲಿ ಅದು ಮದ್ರಾಸ್ ಪ್ರೆಸಿಡೆನ್ಸಿಯ ಅಡಿಯಲ್ಲಿತ್ತು. ೧೯೫೬ರ ಭಾಷಾವಾರು ವಿಂಗಡಣೆಯ ಕಾಲದಲ್ಲಿ ಕರ್ನಾಟಕದ ಭಾಗವಾಯಿತು. ದಕ್ಷಿಣ ಕನ್ನಡದ ಜೊತೆಗೆ ತುಳುನಾಡೆಂದು ಕರೆಯಲ್ಪಡ

ತೊಡಗಿತು. ರಾಜಕೀಯವಾಗಿ ೭೯ರ ದಶಮಾನದ ಉತ್ತರ ಭಾಗದಲ್ಲಿ ಇದು ಬಾರ್ಕೂರು ಮತ್ತು ಮಂಗಳೂರು ಪ್ರಾಂತ್ಯಕ್ಕೆ ಸೇರಿತ್ತು. ಇಲ್ಲಿಯ ಜನರು ೭೯ರ ದಶಕದಲ್ಲಿ ಮುಂಬೈ, ಕೊಲ್ಕತಾ, ಕರಾಚಿ, ಮದ್ರಾಸ್ ಮೈಸೂರು ಪೂನಾ ಕೊಲ್ಲಿ ರಾಷ್ಟ್ರ ಹಾಗೂ ಪಾಶ್ಚಿಮಾತ್ಯ ದೇಶಗಳಿಗೆ ವಲಸೆ ಹೋದರು. ಜಿಲ್ಲೆ ಅತೀ ಕಡಿಮೆ ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರನ್ನು ಹೊಂದಿದೆ. ೨೦೦೧ರ ಜನಗಣತಿಯ ಪ್ರಕಾರ ೦.೬೮ ಲಕ್ಷ ಪರಿಶಿಷ್ಟ ಜಾತಿ ಹಾಗೂ ೦.೪೨ ಲಕ್ಷ ಪರಿಶಿಷ್ಟ ಪಂಗಡದ ಜನರನ್ನು ಹೊಂದಿತ್ತು

**ಆರ್ಥಿಕ ಬೆಳವಣಿಗೆ**

೨೦೦೧ರ ವರದಿಯ ಪ್ರಕಾರ ರಾಜ್ಯದ ೨೭ ಜಿಲ್ಲೆಗಳಲ್ಲಿ ನಿವ್ವಳ ಸ್ಥಳೀಯ ಉತ್ಪಾದನೆಯಲ್ಲಿ ಜಿಲ್ಲೆ ೧೭ನೇ ಸ್ಥಾನವನ್ನೂ ತಲಾದಾಯದಲ್ಲಿ ೫ನೇ ಸ್ಥಾನವನ್ನು ಹೊಂದಿದೆಯಾದರೂ ಕಳೆದ ಆರು ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆಯಲ್ಲಿ ಇಳಿಕೆ ಕಾಣಬಹುದಾಗಿದೆ. ರಾಜ್ಯದ ಸರಾಸರಿ ಜಿ.ಡಿ.ಬಿ ಬೆಳವಣಿಗೆ ೭ ಆಗಿದ್ದು ಕಳೆದ ೫ ವರ್ಷ ಗಳಲ್ಲಿ ಉಡುಪಿಯದ್ದು ೪% ಮಾತ್ರ ಆಗಿದೆ. ಇನ್ನೊಂದು ಪ್ರಮುಖ ಅಂಶವೆಂದರೆ ರಾಷ್ಟ್ರ ವಾರ್ಷಿಕ ಸರಾಸರಿ ಜಿ.ಡಿ.ಪಿ ೭% ರಿಂದ ೮% ಹೆಚ್ಚಳ ಕಂಡಿದ್ದರೆ ಉಡುಪಿಯದ್ದು ಬರೇ ೪% ಆಗಿದೆ. ಕೃಷಿ ಗ್ರಾಮೀಣ ಆರ್ಥಿಕತೆಯ ಬೆನ್ನಲಬು ಅನಿಸಿಕೊಂಡಿದ್ದರೂ ಕಾರ್ಮಿಕರ ಕೊರತೆ ಹಾಗೂ ಅತಿಯಾದ ವೆಚ್ಚದಿಂದಾಗಿ ನಿರ್ಲಕ್ಷಕ್ಕೆ ಒಳಪಟ್ಟಿದೆ. ತೋಟಗಾರಿಕೆ ಹಾಗೂ ಹೈನುಗಾರಿಕೆ ಪ್ರಮುಖ ಆರ್ಥಿಕ ಚಟುವಟಿಕೆಗಳಾಗಿ ಉದ್ಭವಿಸಿರುವುದು ನೋಡುತ್ತೇವೆ. ಕೈಗಾರಿಕೆಗೆ ಸಂಬಂಧಿಸಿ ಜಿಲ್ಲೆ ಅಷ್ಟೊಂದು ಅಭಿವೃದ್ಧಿ ಕಂಡಿಲ್ಲ. ಆದರೆ ರಾಷ್ಟ್ರದ ಬ್ಯಾಂಕುಗಳು ಶಾಖೆಗಳನ್ನು ಹೊಂದಿದೆ. ಶಿಕ್ಷಣ ಆರೋಗ್ಯ, ಸಾರಿಗೆ ಹಾಗೂ ಸಂಪರ್ಕ ಜಾಲದಲ್ಲಿ ಜಿಲ್ಲೆ ತನ್ನದೇ ಆದ ಸ್ಥಾನ ಹೊಂದಿದೆ. ಅತ್ಯಧಿಕ ಶಿಕ್ಷಣ ಮಟ್ಟ ಹಾಗೂ ನಿರಂತರ ನಿರುಧ್ಯೋಗ ಮುಖ್ಯವಾಗಿ ಶಿಕ್ಷಿತ ನಿರುದ್ಯೋಗಿ ಜನರು ಜಿಲ್ಲೆಯ ಹೊರಗೆ ಉದ್ಯೋಗ ಹುಡುಕುವಂತೆ ಮಾಡಿದೆ. ಸೇವಾ ವಲಯದೊಂದಿಗೆ ಹೊಂದಿ ಕೊಂಡಿರುವ ಬಳಕೆದಾರರ ಬೇಡಿಕೆ ಇದ್ದು, ಇದು ಜಿಲ್ಲೆಯ ಮಾನವ ಅಭಿವೃದ್ಧಿಯ ಮೇಲೆ ಪರಿಣಾಮ ಬೀರಿದೆ. ಮೊದಲ ಸಂತತಿಯವರು ಮೀನುಗಾರಿಕೆ ಕೃಷಿ ಮುಂತಾದ ಉದ್ಯೋಗಗಳನ್ನು ಮುಂದಿನ ಸಂತತಿ ಮುಂದುವರಿಸಿಕೊಂಡು ಹೋಗುವುದನ್ನು ಪ್ರೋತ್ಸಾಹಿಸುತ್ತದೆ. ಹೆಚ್ಚಿನ ಯುವಜನತೆ ಉದ್ಯೋಗ ಅರಸಿ ಬೇರೆ ರಾಜ್ಯಗಳಿಗೆ ವಲಸೆಹೋಗುತ್ತಾರೆ. ರಾಜ್ಯದ ಇತರ ಪ್ರದೇಶಗಳಿಗೆ ಹೋಲಿಸಿದರೆ ಕೂಲಿ ಕಾರ್ಮಿಕರ ದಿನಗೂಲಿ ಮಂಗಳೂರು, ಉಡುಪಿಗಳಲ್ಲಿ ತುಂಬಾ ಹೆಚ್ಚು ಇದೆ. ಇದು ಬಹಳಷ್ಟು ಕೂಲಿ

ಕಾರ್ಮಿಕರನ್ನು ಇತರ ಜಿಲ್ಲೆಗಳಿಂದ ಆಕರ್ಷಿಸಿ ವಲಸೆಗೆ ಕಾರಣವಾಗಿದೆ. ವಲಸೆ ಬಂದವರು ಒಟ್ಟು ಅಭಿವೃದ್ಧಿಯಲ್ಲಿ ತಮ್ಮ ಕೊಡುಗೆ ನೀಡುತ್ತಾರಾದರು ಇದು ಭೌತಿಕ ಅಭಿವೃದ್ಧಿಯಲ್ಲಿ ಪ್ರತಿಕೂಲವೆನಿಸಿಕೊಂಡಿದೆ. ಅಲ್ಲದೆ ಇದು ಶೈಕ್ಷಣಿಕ, ಆರೋಗ್ಯ, ರಕ್ಷಣೆ, ಸಮಗ್ರತೆ, ಗೃಹ ವ್ಯವಸ್ಥೆ, ಪೌಷ್ಟಿಕತೆ ಆಡಳಿತದ ಪ್ರಮುಖ ಕಾಳಜಿ ಆಗಿದೆ. ಶಾಲಾ ದಾಖಲಾತಿ, ಶಾಲೆಯಿಂದ ಹೊರಗುಳಿಯುವಿಕೆ, ಭಿಕ್ಷೆ ಬಾಲಕಾರ್ಮಿಕತೆ, ಸಾಂಕ್ರಾಮಿಕ ರೋಗ, ಮಾದಕ ದ್ರವ್ಯ ಹಾಗೂ ಲೈಂಗಿಕ ವೃತ್ತಿಗಳು ವಲಸೆಗಾರರ ಮುಖ್ಯ ಕಾಳಜಿಯ ಕ್ಷೇತ್ರವಾಗಿದೆ.

**ವಿಭಾಗ ೧: ಜನಸಂಖ್ಯಾ ಲಕ್ಷಣಗಳು**

**ಕೋಷ್ಟಕ ೩.೧. ಉಡುಪಿ ಜಿಲ್ಲೆಯ ಜನಸಂಖ್ಯಾ ವಿವರಗಳು**

| ವಿವರಣೆ | ೨೦೧೧ | ೨೦೦೧ |
|---|---|---|
| ನಿಜವಾದ ಜನಸಂಖ್ಯೆ | ೧,೧೭೭,೩೬೧ | ೧,೧೧೨,೨೪೩ |
| ಪುರುಷರು | ೫೬೨,೧೩೧ | ೫೨೨,೨೩೧ |
| ಮಹಿಳೆಯರು | ೬೧೫,೨೩೦ | ೫೯೦,೦೧೨ |
| ಜನಸಂಖ್ಯೆ ಬೆಳವಣಿಗೆ | ೫.೮೫% | ೭.೧೪% |
| ಜನಸಾಂದ್ರತೆ/೨ ಕಿ.ಮಿ. | ೩೨೯ | ೨೮೭ |
| ಕರ್ನಾಟಕದ ಜನಸಂಖ್ಯೆಯೊಂದಿಗೆ ಅನುಪಾತ | ೧.೯೩% | ೨.೧೦% |
| ಲಿಂಗಾನುಪಾತ (೧೦೦೦ ಕ್ಕೆ) | ೧೦೯೪ | ೧೧೩೦ |
| ಮಕ್ಕಳ ಲಿಂಗಾನುಪಾತ (೦-೬ ವಯಸ್ಸು) | ೯೫೮ | ೯೫೮ |
| ಸರಾಸರಿ ಅಕ್ಷರಸ್ಥತೆ | ೮೬.೨೪ | ೮೧.೨೫ |
| ಒಟ್ಟು ಮಕ್ಕಳ ಜನಸಂಖ್ಯೆ (೦-೬ ವಯಸ್ಸು) | ೧೦೩,೧೬೦ | ೧೧೪,೫೮೧ |
| ಗಂಡುಗಳ ಜನಸಂಖ್ಯೆ (೦-೬ ವಯಸ್ಸು) | ೫೨,೬೮೯ | ೫೮,೫೦೯ |
| ಹೆಣ್ಣುಗಳ ಜನಸಂಖ್ಯೆ (೦-೬ ವಯಸ್ಸು) | ೫೦,೪೭೧ | ೫೬,೦೭೨ |
| ಮಕ್ಕಳ ಅನುಪಾತ (೦-೬ ವಯಸ್ಸು) | ೮.೭೬% | ೧೦.೩೦% |

| | | |
|---|---|---|
| ಗಂಡುಗಳ ಅನುಪಾತ (೦-೬ ವಯಸ್ಸು) | ೯.೩೭% | ೧೧.೨೦% |
| ಹೆಣ್ಣುಗಳ ಅನುಪಾತ (೦-೬ ವಯಸ್ಸು) | ೮.೨೦% | ೯.೫೦% |

(ಮೂಲ: ಅಂಕಿ ಅಂಶ ೨೦೧೩-೧೪ ಅಂಕಿ ಅಂಶಗಳ ವಿಭಾಗ ಉಡುಪಿ ಜಿಲ್ಲಾ ಪಂಚಾಯತ್)


೨೦೧೧ರ ಜನಗಣತಿಯ ಪ್ರಕಾರ ಉಡುಪಿ ಜಿಲ್ಲೆಯ ಜನಸಂಖ್ಯೆ ೧೧,೭೭,೩೬೧ ಆಗಿದ್ದು ಅವರ ಪೈಕಿ ೫,೬೨,೧೩೧ ಅಂದರೆ ೪೭.೭೪% ಪುರುಷರಾಗಿದ್ದರೆ ೬,೧೫,೨೩೦ ಅಂದರೆ ೫೨.೨೬% ಮಹಿಳೆಯರಿದ್ದಾರೆ. ಹಾಗೆ ನೋಡಿದರೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಿಂಗಾನುಪಾತ ಉತ್ತಮವಾಗಿದೆ. ಆದರೆ ಕಳೆದ ದಶಕದಲ್ಲಿ ಜನನ ಸಂಖ್ಯೆಯಲ್ಲಿ ತೀವ್ರ ಇಳಿಕೆ ಕಾಣುತ್ತೇವೆ. ಪ್ರಸ್ತುತ ದಶಕದಲ್ಲಿ ಜನಸಂಖ್ಯೆಗೆ ಕೂಡಿಕೆಯಾದದ್ದು ೬೫,೧೧೮ ಮಂದಿ, ಅದರಲ್ಲಿ ಹೆಚ್ಚಿನ ಸಂಖ್ಯೆ ಅಂದರೆ ೩೯,೯೦೦ ಪುರುಷರಾದರೆ ೨೫,೨೧೮ ಮಹಿಳೆಯರು, ೧೪,೦೦೦ ಪುರುಷರು ಮಹಿಳೆಯರಿಗಿಂತ ಹೆಚ್ಚು ಇರುತ್ತಾರೆ. ಇತರ ರಾಜ್ಯ ಹಾಗೂ ಜಿಲ್ಲೆಗಳಲ್ಲಿ ಸ್ತ್ರೀ ಲಿಂಗಾನುಪಾತ ಹೆಚ್ಚುತ್ತಾ ಹೋಗಿರುವಾಗ ಉಡುಪಿಯಲ್ಲಿ ಇಳಿಕೆಯಾಗಿರುವುದು ಗಮನಾರ್ಹ ವಿಷಯವಾಗಿದೆ. ಇದು ಗಂಡುಮಕ್ಕಳ ಕಡೆ ಒಲವು ಇರುವುದರ ಕಾರಣವೇ ಇರಬಹುದು, ಆದುನಿಕ ಮದುವೆಯ ಹಾಗೂ ಕುಟುಂಬಕ್ಕೆ ಒಂದೇ ಮಗು ಎನ್ನುವ ಚಿಂತನೆ ಯೂ ಇದಕ್ಕೆ ಕಾರಣ ಇರಬಹುದು.

**ಕೋಷ್ಟಕ ೩.೨. ಲಿಂಗಾನುಪಾತ ದಶಕವಾರು/ಜಿಲ್ಲಾವಾರು**

| ವಿಭಾಗ | ೧೦೦೦ ಪುರುಷರಿಗೆ ಮಹಿಳೆಯರು ದಶಕವಾರು ಲಿಂಗಾನುಪಾತ | | |
|---|---|---|---|
| | ೧೯೯೧ | ೨೦೦೧ | ೨೦೧೧ |
| ಕರ್ನಾಟಕ | ೯೬೦ | ೯೬೫ | ೯೬೮ |
| ದಕ್ಷಿಣ ಕನ್ನಡ | ೧೦೨೦ | ೧೦೨೨ | ೧೦೧೮ |
| ಉಡುಪಿ | ೧೧೩೪ | ೧೧೩೦ | ೧೦೯೩ |

ಮೂಲ: ಅಂಕಿ ಅಂಶಗಳ ವಿಭಾಗ ಕರ್ನಾಟಕ

ಲಂಬಚಿತ್ರ ೩.೧.: ಲಿಂಗಾನುಪಾತ: ದಶಕವಾರು/ಜಿಲ್ಲಾವಾರು ಲಿಂಗಾನುಪಾತ




(ಮೂಲ: ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾಖಲೆಗಳು, ಉಡುಪಿ ಜಿಲ್ಲೆ)

ಮೇಲಿನ ಕೋಷ್ಟಕ ಕಳೆದೆರಡು ದಶಕಗಳಲ್ಲಿ ಇಳಿಕೆಯಾಗಿರುವ ಲಿಂಗಾನುಪಾತವನ್ನು ಧೃಡೀಕರಿಸುತ್ತದೆ. ೨೦೦೧ರಲ್ಲಿ ಲಿಂಗಾನುಪಾತ ೧೦೦೦ಕ್ಕೆ ೧೧೩೦ ಆಗಿತ್ತು. ೨೦೧೧ರಲ್ಲಿ ಅದು ೧೯೯೪ ಆಗಿದೆ. ೨೦೦೧ರಲ್ಲಿ ೦-೬ ವರ್ಷದೊಳಗಿನ ಮಕ್ಕಳ ಲಿಂಗಾನುಪಾತ ೯೫೮ ಆಗಿತ್ತು ಅದು ೨೦೧೧ರಲ್ಲಿ ೯೫೮ ಇದೆ.

ಉಡುಪಿ ಜಿಲ್ಲೆಯಲ್ಲಿ ಬ್ರಾಹ್ಮಣ ವರ್ಗದಲ್ಲಿ ಹಾಗೂ ಗೌಡಸಾರಸ್ವತ ಸಮುದಾಯದಲ್ಲಿ ಮದುವೆ ಹೆಣ್ಣುಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿರುವುದು ಅಧ್ಯಯನಗಳು ತೋರಿಸುತ್ತವೆ. (೨೨ ಅಕ್ಟೋಬರ್ ೨೦೧೨, ಟೈಮ್ಸ್ ಆಫ್ ಇಂಡಿಯಾ)

ಇನ್ನೊಂದು ಆಘಾತಕಾರಿ ಸಂಗತಿಯೆಂದರೆ ಜನಸಾಂದ್ರತೆಯ ಸ್ಥಿತ್ಯಂತರ ನಮ್ಮ ದೇಶದಲ್ಲಿ ನಡೆಯುತ್ತಿದೆ. ಅದರ ಪ್ರಕಾರ ಫಲವತ್ತತೆ ಕುಸಿಯುತ್ತಿದೆ. ಕರ್ನಾಟಕದ ಉಡುಪಿ ಹಾಗೂ ಪಶ್ಚಿಮ ಬಂಗಾಳದ ಕೊಲ್ಕತಾ ಜಿಲ್ಲೆಗಳು ಫಲವತ್ತತೆಯಲ್ಲಿ ಅತೀ ಕೆಳಗಿವೆ. ಇದಕ್ಕೆ ಜೀವನಕ್ರಮ, ವಿಳಂಬಿತ ವಿವಾಹ ಒಂದು ಅಥವಾ ಎರಡು ಮಕ್ಕಳು ಹೊಂದಲು ಆಯ್ಕೆ, ಮಕ್ಕಳ ನಡುವಿನ ಅಂತರ, ಆಹಾರ ಪದ್ಧತಿಯಲ್ಲಾಗಿರುವ ಬದಲಾವಣೆಗಳು ಹಾಗೂ ಹಾರ್ಮೋನುಗಳಲ್ಲಿ ಬದಲಾವಣೆ, ಉದ್ಯೋಗದ ಏಕತಾನತೆ ಕಾರಣವಿರಬಹುದು.



**ಕೋಷ್ಟಕ ೩.೩. ಗ್ರಾಮೀಣ, ನಗರ ಲಿಂಗಾನುಪಾತ**

| ವಿವರಣೆ | ಗ್ರಾಮೀಣ | ನಗರ |
|---|---|---|
| ಲಿಂಗಾನುಪಾತ | ೧೧೧೪ | ೧೦೪೬ |
| ಮಕ್ಕಳ ಲಿಂಗಾನುಪಾತ (೦–೬) | ೯೬೦ | ೯೫೨ |
| ಮಕ್ಕಳ ಜನಸಂಖ್ಯೆ (೦–೬) | ೭೪,೨೯೩ | ೨೮,೮೬೭ |

(ಮೂಲ: ಉಡುಪಿ ಜಿಲ್ಲಾ ಅಂಕಿ ಅಂಶಗಳ ವಿಭಾಗ)

ನಗರ ಹಾಗೂ ಗ್ರಾಮೀಣ ಸಂಖ್ಯಾನುಪಾತ ಗಮನಿಸಿದಾಗ ಉಡುಪಿ ಜಿಲ್ಲೆಯ ಗ್ರಾಮೀಣ ಹೆಣ್ಣುಮಕ್ಕಳ ಲಿಂಗಾನುಪಾತ ನಗರದ ಹೆಣ್ಣುಮಕ್ಕಳ ಲಿಂಗಾನುಪಾತಕ್ಕಿಂತ ಉತ್ತಮವಾಗಿದೆ. ಅಂದರೆ ಗ್ರಾಮೀಣ ಉಡುಪಿಯಲ್ಲಿ ೧೦೦೦ ಗಂಡು ಮಕ್ಕಳಿಗೆ ೧೧೧೪ ಹೆಣ್ಣುಮಕ್ಕಳಿದ್ದರೆ, ನಗರದಲ್ಲಿ ೧೦೦೦ ಗಂಡುಗಳಿಗೆ ೧೦೪೬ ಹೆಣ್ಣುಮಕ್ಕಳಿದ್ದಾರೆ.

ಮುಂದಿನ ಕೋಷ್ಟಕ ೩.೪.ರಂತೆ ಸಣ್ಣ ವಯಸ್ಸಿನ ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಭಯಾನಕ ಇಳಿಕೆಯಾಗಿರುವುದನ್ನು ಗಮನಿಸಬಹುದಾಗಿದೆ. ಜನಸಂಖ್ಯಾ ಅನುಪಾತದಲ್ಲಿ ೧೬ ರಿಂದ ೧೮ ವರ್ಷ ಗುಂಪಿನಲ್ಲಿ ಗಂಡು–ಹೆಣ್ಣು ಅನುಪಾತ ೬೦೮೩:೬೪೨೬ ಹಾಗೂ ೦-೧ ವಯಸ್ಸಿನ ಗುಂಪಿನಲ್ಲಿ ೩೭೧೮:೩೪೨೦ ಆಗಿದೆ. ಇದರಿಂದ ತಿಳಿಯುವುದೇನಂದರೆ ಉಡುಪಿ ತಾಲೂಕಿನಲ್ಲಿ ೧೬ ವರ್ಷಗಳ ಹಿಂದೆ ೩೪೩ ಹೆಚ್ಚು ಹೆಣ್ಣುಮಕ್ಕಳಿದ್ದರು ೧೪ ವರ್ಷಗಳ ನಂತರ ೦-೧ ಗುಂಪಿನಲ್ಲಿ ೪೯೮ ಇದ್ದು ಹೆಣ್ಣುಮಕ್ಕಳ ಸಂಖ್ಯೆ ಗಂಡುಮಕ್ಕಳ ಸಂಖ್ಯೆಗಿಂತ ಕಡಿಮೆ ಇದೆ. ಕಾರ್ಕಳ ಹಾಗೂ ಕುಂದಾಪುರ ತಾಲೂಕುಗಳಲ್ಲಿ ಸ್ಥಿತಿ ವಿರುದ್ಧವಾಗಿದೆ.

## ಕೋಷ್ಟಕ ೩.೪. ಜೂನ್ ೨೦೧೩ರಂತೆ ಉಡುಪಿ ಜಿಲ್ಲೆಯ ತಾಲೂಕುವಾರು ಹಾಗೂ ವಯಸ್ಸುವಾರು ಮಕ್ಕಳ ಜನಸಂಖ್ಯೆ

| ವಯಸ್ಸುವಾರು ಮಕ್ಕಳ ಜನಸಂಖ್ಯೆ | ಮಕ್ಕಳ ಜನಸಂಖ್ಯೆಯ ತಾಲೂಕುವಾರು ಹಂಚಿಕೆ | | | | | | | | | ಒಟ್ಟು |
|---|---|---|---|---|---|---|---|---|---|---|
| | ಉಡುಪಿ | | | ಕಾರ್ಕಳ | | | ಕುಂದಾಪುರ | | | |
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | |
| ೦-೬ ವರ್ಷ | ೧೮೪೫೯ | ೧೭೭೭೮ | ೩೬೨೩೭ | ೬೬೬೩ | ೬೭೧೫ | ೧೩೩೭೮ | ೬೬೬೩ | ೬೭೧೧ | ೧೩೩೭೪ | ೬೨೯೮೯ |
| ೬-೧೪ ವರ್ಷ | ೨೨೪೭೩ | ೨೨೩೮೨ | ೪೪೮೫೫ | ೯೩೬೨ | ೯೩೬೧ | ೧೮೭೨೩ | ೯೩೧೨ | ೯೩೬೧ | ೧೮೬೭೩ | ೮೨೨೫೧ |
| ೧೪-೧೮ ವರ್ಷ | ೧೧೯೭೮ | ೧೨೫೧೧ | ೨೪೪೮೯ | ೫೦೭೩ | ೫೧೯೦ | ೧೦೨೬೩ | ೫೦೭೩ | ೫೧೯೦ | ೧೦೨೬೩ | ೪೫೦೧೫ |
| ಒಟ್ಟು | ೫೨೯೧೦ | ೫೨೬೭೧ | ೧೦೫೫೮೧ | ೨೧೦೯೮ | ೨೧೨೬೬ | ೪೨೩೬೪ | ೨೧೦೪೮ | ೨೧೨೬೨ | ೪೨೩೧೦ | ೧೯೦೨೫೫ |

(ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾಖಲೆ, ಉಡುಪಿ ಜಿಲ್ಲೆ ೨೦೧೪-೧೫)

**ಉಡುಪಿ ಜಿಲ್ಲೆಯ ಒಟ್ಟು ಮಕ್ಕಳ ಸಂಖ್ಯೆ ೧,೯೦,೨೫೫**

ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳಲ್ಲಿ ಒಟ್ಟಾರೆ ಜನಸಂಖ್ಯೆಯಲ್ಲಿ ಕುಸಿತ ಕಂಡುಬಂದಿದ್ದರೂ ಲಿಂಗಾನುಪಾತಕ್ಕೆ ಬಂದಾಗ ಹೆಣ್ಣುಮಕ್ಕಳ ಸಂಖ್ಯೆ ಗಂಡುಮಕ್ಕಳ ಸಂಖ್ಯೆಗಿಂತ ಹೆಚ್ಚು ಇರುವುದು ಆಶ್ಚರ್ಯಕರ ಸಂಗತಿಯಾಗಿದೆ. ಅಭಿವೃದ್ಧಿ ಸೂಚ್ಯಂಕಗಳ ಪ್ರಕಾರ ಕುಂದಾಪುರದ ಜನಸಂಖ್ಯೆಯಲ್ಲಿ ೨೦೦೮ರಲ್ಲಿ ತೀವ್ರ ಇಳಿಕೆ ಕಂಡು ಬಂದಿತ್ತು. ಒಟ್ಟು ಜನಸಂಖ್ಯೆಯ ಪ್ರಕಾರವೂ ಮಹಿಳೆಯರ ಸಂಖ್ಯೆಯಲ್ಲಿ ಇಳಿಕೆ ಕಾಣಬಹುದಾಗಿದೆ.

**ಕೋಷ್ಟಕ ೩.೫. ಕಾರ್ಕಳ ತಾಲೂಕಿನ ಜನಸಂಖ್ಯೆ**

| ಪಂಚಾಯತ್ ಹೆಸರು | ಕಾರ್ಕಳದ ಸಾಮಾನ್ಯ ಜನಸಂಖ್ಯೆ | | | ೦–೬ ವರ್ಷದ ಮಕ್ಕಳ ಜನಸಂಖ್ಯೆ | | |
|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ಬೆಳ್ಮಣ್ | ೪೩೪೮ | ೫೭೯೩ | ೧೦೧೪೧ | ೩೭೩ | ೩೮೭ | ೭೬೦ |
| ಮಾಳ | ೨೭೬೪ | ೩೦೮೮ | ೫೮೫೨ | ೨೦೮ | ೧೬೯ | ೩೭೭ |
| ಮರ್ಣೆ | ೩೯೧೦ | ೪೬೬೧ | ೮೫೭೧ | ೩೨೫ | ೩೩೨ | ೬೫೭ |
| ಮುಂಡ್ಕೂರು | ೩೪೨೯ | ೪೧೮೭ | ೭೬೧೬ | ೧೮೦ | ೨೦೭ | ೩೮೭ |
| ವರಂಗ | ೩೬೬೭ | ೪೪೦೨ | ೮೦೬೯ | ೨೪೩ | ೨೨೨ | ೪೬೫ |
| ಬೈಲೂರು | ೧೭೩೭ | ೩೦೫೮ | ೪೭೯೫ | ೧೪೧ | ೧೩೩ | ೨೭೪ |
| ಶಿರಾಲು | ೫೧೭೮ | ೩೫೭೯ | ೮೭೫೭ | ೨೨೫ | ೨೨೭ | ೪೫೨ |

(ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾಖಲೆ, ಉಡುಪಿ ಜಿಲ್ಲೆ, ೨೦೧೪-೧೫)

ಮನಸ್ಸಲ್ಲಿ ಮೂಡುವ ಮತ್ತೊಂದು ಪ್ರಶ್ನೆ ಎಂದರೆ ಗಂಡು ಮಕ್ಕಳ ಸಂಖ್ಯೆಯಲ್ಲೂ ಇಳಿಕೆಯಾಗುತ್ತಿರುವುದು.ಇದು ಬದಲಾಗಿರುವ ಜೀವನ ಶೈಲಿಯ ಫಲವೇ ಎಂಬ ವಿಷಯದಲ್ಲಿ ಸಂಶೋದನೆ ನಡೆಯಬೇಕಾಗಿದೆ.

**ಕೋಷ್ಟಕ ೩.೬. ಸಂತಾನೋತ್ಪತ್ತಿ ಸಂಬಂಧಿ ವಿಷಯಗಳು**

| | |
|---|---|
| ಸಂಪೂರ್ಣ ಲಸಿಕೆ ಪಡೆದವರು | ೮೭% |
| ಒಪಿವಿ ಲಸಿಕೆ ಪಡೆದವರು | ೯೫% |
| ದಡಾರ ಲಸಿಕೆ ೩ ಹನ ಪಡೆದಾರು | ೮೭% |
| ಟಿ ಟಿ ಲಸಿಕೆ ಪಡೆದವರು | ೯೬% |

| | |
|---|---|
| ‘ಎ’ ಅನ್ನಾಂಗ ಸೇವಿಸಿರುವವರು | ೮೨% |
| ಹೆರಿಗೆಯ ಒಂದು ಗಂಟೆಯಲ್ಲಿ ಹಾಲುಣಿಸಿದವರು | ೬೫% |

(ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾಖಲೆ, ಉಡುಪಿ ಜಿಲ್ಲೆ ೨೦೧೪-೧೫)

ಜಿಲ್ಲೆಯಲ್ಲಿ ನಡೆಯುತ್ತಿದ್ದ ೧೮ ವರ್ಷದೊಳಗಿನ ಮಕ್ಕಳ (ಬಾಲ್ಯವಿವಾಹ) ಪ್ರಕರಣಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ತಡೆದುದು ನೋಡಬಹುದಾಗಿದೆ. ಮೇಲಿನ ಕೋಷ್ಟಕದಂತೆ ಜಿಲ್ಲೆಯಲ್ಲಿ ೨೦೧೨ರಲ್ಲಿ ಜಿಲ್ಲೆಯಲ್ಲಿ ೧೮ ವರ್ಷದೊಳಗಿನ ಹೆಣ್ಣು ಮಕ್ಕಳು ಪ್ರಸವವಾದ ಘಟನೆಗಳು ನಡೆದಿರುತ್ತವೆ. ೯೬% ಹೆರಿಗೆಗಳು ಆಸ್ಪತ್ರೆಗಳಲ್ಲಿ ಸಂಭವಿಸಿದ್ದರೆ, ಒಟ್ಟು ೯೬% ತಾಯಂದಿರು ತಪಾಸಣೆಗೆ ಹಾಜರಾಗಿರುತ್ತಾರೆ ೯೭% ತಾಯಂದಿರು ಕಬ್ಬಿಣದಂಶದ ಮಾತ್ರೆಗಳನ್ನು ಸೇವಿಸಿರುತ್ತಾರೆ. ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಆರೋಗ್ಯ ಕೇಂದ್ರಗಳು ಈ ವಿಷಯದಲ್ಲಿ ಉತ್ಸುಕತೆಯಿಂದ ಕಾಳಜಿಯೊಂದಿಗೆ ಕಾರ್ಯಪ್ರವೃತ್ತರಾಗಿದ್ದಾರೆ. ಇದೊಂದು ಅತ್ಯುತ್ತಮ ಸಾಧನೆ ಎಂದು ಗುರುತಿಸಲ್ಪಟ್ಟಿದೆ. ಆರೋಗ್ಯಕ್ಕೆ ಸಂಬಂಧಿಸಿ ಇಲಾಖೆಗಳು ಕಟ್ಟು ನಿಟ್ಟಾದ ಅನುಸರಣಾ ಹಾಗೂ ಮೇಲುಸ್ತುವಾರಿ ವ್ಯವಸ್ಥೆತಳಮಟ್ಟದ ಜನರನ್ನ ಅದರಲ್ಲೂ ಮುಖ್ಯವಾಗಿ ವಂಚಿತ ವರ್ಗವನ್ನು ತಲುಪಿದೆ. ಜಿಲ್ಲೆಯ ಶೈಕ್ಷಣಿಕ ಸ್ಥಿತಿಗತಿ ಇದಕ್ಕೆ ಪೂರಕವಾಗಿ ಪರಿಣಮಿಸಿದೆ.

**ಕೋಷ್ಟಕ ೩.೭. ಶಿಶು ಆರೋಗ್ಯ**

| | |
|---|---|
| ಸಂಪೂರ್ಣ ಲಸಿಕೆ ಪಡೆದವರು | ೮೭% |
| ಒಪಿವಿ ಲಸಿಕೆ ಪಡೆದವರು | ೯೫% |
| ದಡಾರ ಲಸಿಕೆ ೩ ಹನಿ ಪಡೆದಾರು | ೮೭% |
| ಟಿ ಟಿ ಲಸಿಕೆ ಪಡೆದವರು | ೯೬% |
| ‘ಎ’ ಅನ್ನಾಂಗ ಸೇವಿಸಿರುವವರು | ೮೨% |
| ಹೆರಿಗೆಯ ಒಂದು ಗಂಟೆಯಲ್ಲಿ ಹಾಲುಣಿಸಿದವರು | ೬೫% |

(ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾಖಲೆ, ಉಡುಪಿ ಜಿಲ್ಲೆ ೨೦೧೪-೧೫)

ಜಿಲ್ಲೆಯಲ್ಲಿ ದಡಾರ ಲಸಿಕೆ ಬಹಳ ಪರಿಣಾಮಕಾರಿಯಾಗಿ ನೀಡಲಾಗಿದೆ. ೮೭% ಮಕ್ಕಳಿಗೆ ಲಸಿಕೆ ಹಾಕಲಾಗಿದೆ.ಅಂಗನವಾಡಿ ವ್ಯಾಪ್ತಿಯಲ್ಲಿ ಆರೋಗ್ಯ ಸಂಬಂಧಿ ಚುಚ್ಚುಮದ್ದು ಇತ್ಯಾದಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆದಿವೆ. ಆದರೂ ಎಷ್ಟು ಮಕ್ಕಳು ಇನ್ನೂ ಚುಚ್ಚು ಮದ್ದು ಪಡೆದಿರುವುದಿಲ್ಲ ಎನ್ನುವ ಬಗ್ಗೆ ಅಂಕಿ-ಅಂಶ ಲಭ್ಯವಿಲ್ಲ.

## ಕೋಷ್ಟಕ ೩.೮: ಮಕ್ಕಳ ಪೌಷ್ಟಿಕಾಂಶ ಸ್ಥಿತಿಗತಿ

| ತಾಲೂಕು | ಸಾಧಾರಣ ಅಪೌಷ್ಟಿಕತೆ | | | | | | | | ಒಟ್ಟು | ತೀವ್ರ ಅಪೌಷ್ಟಿಕತೆ | | | | | | | | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|
| | ಇತರ ಖಾಸಗಿ ಸಂಸ್ಥೆಗಳು | | | | ಅಂಗನವಾಡಿ | | | | | ಇತರ ಖಾಸಗಿ ಸಂಸ್ಥೆಗಳು | | | | ಅಂಗನವಾಡಿ | | | | |
| | ೩-೬ವರ್ಷ | | ೧-೩ವರ್ಷ | | ೩-೬ವರ್ಷ | | ೧-೩ವರ್ಷ | | | ೩-೬ವರ್ಷ | | ೧-೩ವರ್ಷ | | ೩-೬ವರ್ಷ | | ೧-೩ವರ್ಷ | | |
| | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | |
| ಕಾರ್ಕಳ | ೧ | ೦ | ೦ | ೦ | ೪೩೧ | ೩೯೬ | ೩೦೪ | ೨೮೨ | ೧೨೭ | ೭ | ೬ | ೬ | ೬ | ೩೮ | ೩೪ | ೨೧ | ೯ | ೧೫೪೧ |
| ಉಡುಪಿ | ೧೬ | ೨೧ | ೪ | ೧೪ | ೯೭೮ | ೮೪೪ | ೭೨೧ | ೭೫೦ | ೨೬೭ | ೧೨ | ೫ | ೭ | ೧೨ | ೬೩ | ೭೪ | ೫೧ | ೪೩ | ೩೬೧೫ |
| ಕುಂದಾಪುರ | ೫೪ | ೫೯ | ೪೧ | ೩೯ | ೬೨೭ | ೫೯೯ | ೫೧೨ | ೫೧೦ | ೪೩೩ | ೩೫ | ೨೭ | ೨೫ | ೨೬ | ೯೪ | ೮೨ | ೭೦ | ೭೪ | ೨೮೭೪ |
| ಒಟ್ಟು | ೭೧ | ೮೦ | ೪೫ | ೫೩ | ೨೦೩೬ | ೧೮೩೯ | ೧೫೩೭ | ೧೫೪೨ | ೮೨೭ | ೫೪ | ೩೮ | ೩೮ | ೪೪ | ೧೯೫ | ೧೯೦ | ೧೪೨ | ೧೨೬ | ೮೦೩೦ |

(ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾಖಲೆ, ಉಡುಪಿ ಜಿಲ್ಲೆ೨೦೧೪-೧೫)

## ವಿಭಾಗ ೨: ಶೈಕ್ಷಣಿಕ ಸ್ಥಿತಿಗತಿ

### ಕೋಷ್ಟಕ ೩.೯. ಶಿಕ್ಷಣ ಇಲಾಖೆಯ ಪ್ರಕಾರ ಜಿಲ್ಲೆಯ ಸ್ಥಿತಿಗತಿ

| ಶೈಕ್ಷಣಿಕ ತರಗತಿ/ಪ್ರಕಾರಗಳು | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | |
|---|---|---|---|
| ಅಂಗನವಾಡಿಗಳು | ೧೧೪೬ | ೫೪೮೫೮ | |
| ಶಾಲೆಗಳು (೧-೧೦) | ೧೦೧೩ | ೧೧೧೭೮೦ | ದಿನಪತ್ರಿಕೆ |
| ವಿಶೇಷ ಶಾಲೆಗಳು | ೧೫ | ೫೯೭ | ಅಂಗವಿಕಲರ ಇಲಾಖೆ |
| ಪದವಿಪೂರ್ವ ವಿದ್ಯಾರ್ಥಿಗಳು | ೧೦೦ | ೩೨೫೯೩ | ಸರ್ವ ಶಿಕ್ಷಾ ಅಭಿಯಾನ |
| ಶಾಲಾ ಪೂರ್ವ ಶಿಕ್ಷಣ | - | - | - |
| ತಾಂತ್ರಿಕ ಕೋರ್ಸ್‌ಸ್ | - | - | - |
| ೧೮ ವರ್ಷದೊಳಗಿನ ಪದವಿ ಅಭ್ಯರ್ಥಿಗಳು | - | - | - |
| ಧಾರ್ಮಿಕ ಶಿಕ್ಷಣ ಪಡೆಯುತ್ತಿರುವವರು | - | - | - |
| ೧೪-೧೮ ವರ್ಷದೊಳಗಿನ ದುಡಿಯುವ ಮಕ್ಕಳು | - | - | - |
| ಶಿಕ್ಷಣದಿಂದ ಹೊರಗುಳಿದಿರುವ ಹದಿಹರೆಯದ ಮಕ್ಕಳು | - | - | - |
| ಪರಿವೀಕ್ಷಣಾಲಯ | - | - | - |
| ಕಾಣೆಯಾದ ಮಕ್ಕಳ ಸಂಖ್ಯೆ | - | - | - |
| ಒಟ್ಟು | - | ೧೯೯೭೨೮ | ೧೯೦೨೫೫ |

(ಮೂಲ: ಉಡುಪಿ ಜಿಲ್ಲಾವಿದ್ಯಾಂಗ ಉಪನಿರ್ದೇಶಕರ ಕಛೇರಿ ೨೦೧೪-೧೫)

ಶಿಕ್ಷಣ ಇಲಾಖೆಯ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ ೧.೯೯,೭೨೮ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಅವರ ಪೈಕಿ ೧,೧೧,೭೮೦ ಸರಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ೧-೧೦ನೇ ತರಗತಿವರೆಗೆ ಜಿಲ್ಲೆಯ ೧೦೧೩ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಅವರಲ್ಲಿ, ಸರಕಾರಿ ಮೂಲಗಳ ಪ್ರಕಾರ ೦-೬ ವರ್ಷ ಜನಸಂಖ್ಯೆ ಯಲ್ಲಿ ೫೪೮೫೮

ಮಕ್ಕಳು ೧೧೪೬ ಅಂಗನವಾಡಿಗಳಲ್ಲಿ ಇದ್ದಾರೆ. ೩೨,೫೯೩ ಹದಿಹರೆಯದ ಮಕ್ಕಳು ಪದವಿ ಪೂರ್ವ ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ. ೫೯೭ ವಿದ್ಯಾರ್ಥಿಗಳು ವಿವಿದ ೧೫ ಕೇಂದ್ರಗಳಲ್ಲಿ ವಿಶೇಷ ಶಿಕ್ಷಣ ಪಡೆಯುತ್ತಿದ್ದಾರೆ.ಇಲಾಖಾ ಮಾಹಿತಿಗಳ ಪ್ರಕಾರ ಒಟ್ಟಾರೆ ಶಾಲೆ ಹಾಗೂ ಕಾಲೇಜುಗಳಲ್ಲಿ ೧೯ ೬೨೮ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಪದವಿಪೂರ್ವ ಶಿಕ್ಷಣ ಪಡೆಯುತ್ತಿರುವ ೯೩೭೩ ಮಕ್ಕಳು ೧೮ ವರ್ಷ ಮೀರಿದವರು ಇರಬಹುದು. ಹೀಗೆ ನೋಡಿದರೂ ಅವರು ದಾಖಲೆಗಳಿಂದ ಹೊರಗುಳಿದಿರುತ್ತಾರೆ. ಅಲ್ಲದೆ ಶಿಕ್ಷಣ ವ್ಯವಸ್ಥೆಯಿಂದ ಹೊರಗುಳಿದಿರುವ, ದುಡಿಯುವ ಮಕ್ಕಳು ಪದವಿ ತರಗತಿಯಲ್ಲಿರುವವರು ಹಾಗೂ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವವರ ಲೆಕ್ಕ ಸಿಗುವುದಿಲ್ಲ.

ಇಂತಹ ಅಧಿಕೃತ ಪರಿವೀಕ್ಷಣಾ ವ್ಯವಸ್ಥೆಯಿಂದ ಹೊರಗುಳಿದಿರುವ ಮಕ್ಕಳು ಸುಭದ್ರ ಜಾಲಗಳಿಂದ ಹೊರಗಿದ್ದಾರೆ. ಕೆಲವರು ಸೂಕ್ಷ್ಮ ಪರಿಸ್ಥಿತಿಯಲ್ಲಿದ್ದಾರೆ, ಅಪಾಯದಲ್ಲಿದ್ದಾರೆಂದು ವಿಶ್ಲೇಷಿಸಬಹುದು. ಇಂತಹ ಮಕ್ಕಳ ದಾಖಲಾತಿಗಳಿಲ್ಲದಿರುವುದು ಮಕ್ಕಳ ರಕ್ಷಣಾ ವ್ಯವಸ್ಥೆಯ ಅತಿ ದೊಡ್ಡ ಹಿನ್ನಡೆ ಎನಿಸಿಕೊಂಡಿದೆ. ಇದು ಏಕ ಗವಾಕ್ಷಿ ವ್ಯವಸ್ಥೆಯ ಅನಿವಾರ್ಯತೆ ಯನ್ನು ಎತ್ತಿ ತೋರಿಸುತ್ತದೆ.

**ಉಡುಪಿ ಜಿಲ್ಲೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ ೨೦೦೯ರ ಅನುಷ್ಟಾನ**

**ಕೋಷ್ಟಕ ೩.೧೦. ೨೦೧೨ ಅಧ್ಯಯನದ ಪ್ರಕಾರ ಪಂಗಡವಾರು ಶಾಲೆಯಿಂದ ಹೊರಗುಳಿದ ಮಕ್ಕಳು**

| ಕ್ಷೇತ್ರ | ಶಾಲೆಯಿಂದ ಹೊರಗುಳಿದಿರುವ ಮಕ್ಕಳು (೬–೧೪ ವರ್ಷ ವಯಸ್ಸಿನೊಳಗಿನವರು) | | | | ಶಾಲೆಯಿಂದ ಹೊರಗುಳಿದಿರುವ ಮಕ್ಕಳು (೧೪–೧೬ ವರ್ಷ ವಯಸ್ಸಿನೊಳಗಿನವರು) | | | | ಒಟ್ಟು ಮಕ್ಕಳು |
|---|---|---|---|---|---|---|---|---|---|
| | ಪ.ಜಾ | ಪ.ವ | ಅಲ್ಪ.ಸ | ಇತರ | ಪ.ಜಾ | ಪ.ವ | ಅಲ್ಪ.ಸ | ಇತರ | |
| ಕಾರ್ಕಳ | – | – | – | – | ೮ | – | ೧ | ೫ | ೧೪ |
| ಉಡುಪಿ | ೧೩ | ೨ | – | ೩ | ೨ | ೧ | ೨ | ೯ | ೩೨ |
| ಕುಂದಾಪುರ | ೧೨ | ೧೯ | ೧ | ೧೨ | ೧೧ | ೨೨ | ೫ | ೬೬ | ೧೪೮ |
| ಬೈಂದೂರು | ೩ | – | – | – | ೨ | ೨ | ೭ | ೪ | ೧೮ |
| ಬ್ರಹ್ಮಾವರ | ೬ | ೧ | – | ೩ | – | ೫ | – | ೬ | ೨೧ |
| **ಒಟ್ಟು** | ೩೪ | ೨೨ | ೧ | ೧೮ | ೨೩ | ೩೦ | ೧೫ | ೯೦ | ೨೩೩ |

(ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾಖಲೆ, ಉಡುಪಿ ಜಿಲ್ಲೆ ೨೦೧೪-೧೫)

**ಕೋಷ್ಟಕ ೩.೧೧. ಸರ್ವಶಿಕ್ಷಣ ಅಭಿಯಾನ ೨೦೧೨ರ ಪ್ರಕಾರ ಉಡುಪಿ ಜಿಲ್ಲೆಯ ವಿಶೇಷ ಅಗತ್ಯತೆಯುಳ್ಳ ಮಕ್ಕಳ ವಿವರ**

| ಕ್ಷೇತ್ರ | ದೃಷ್ಟಿ ದೋಷ ಉಳ್ಳ ಮಕ್ಕಳು | % | ದೈಹಿಕ ಅಂಗ ವೈಕಲ್ಯ ಉಳ್ಳ ಮಕ್ಕಳು | % | ಶ್ರವಣ ದೋಷ ಉಳ್ಳ ಮಕ್ಕಳು | % | ಬುದ್ಧಿ ಮಾಂದ್ಯತೆ ಉಳ್ಳ ಮಕ್ಕಳು | % | ಒಟ್ಟು | % |
|---|---|---|---|---|---|---|---|---|---|---|
| ಕಾರ್ಕಳ | ೧೩೨ | ೧೫.೨೮ | ೭೨ | ೨೭.೩೮ | ೪೮ | ೩೧.೮ | ೮೭ | ೨೨.೯೬ | ೩೩೯ | ೨.೧೯ |
| ಉಡುಪಿ | ೧೦೧ | ೧೧.೬೯ | ೪೦ | ೧೫.೨೧ | ೧೪ | ೯.೨೭ | ೪೩ | ೧೧.೩೫ | ೧೯೮ | ೨.೨೩ |
| ಕುಂದಾಪುರ | ೩೭೦ | ೪೨.೮೨ | ೪೦ | ೧೫.೨೧ | ೩೬ | ೨೩.೮೪ | ೮೩ | ೨೧.೯ | ೫೨೯ | ೩.೫೫ |
| ಬೈಂದೂರು | ೧೪೭ | ೧೭.೦೧ | ೭೫ | ೨೮.೫೨ | ೩೧ | ೨೦.೫೩ | ೮೪ | ೨೨.೧೬ | ೩೩೭ | ೧.೯೧ |
| ಬ್ರಹ್ಮಾವರ | ೧೧೪ | ೧೩.೧೯ | ೩೬ | ೧೩.೬೯ | ೨೨ | ೧೪.೫೭ | ೮೨ | ೨೧.೬೪ | ೨೫೪ | ೨.೨೧ |
| **ಒಟ್ಟು** | **೮೬೪** | ೧೦೦ | **೨೬೩** | ೧೦೦ | ೧೫೧ | ೧೦೦ | **೩೭೯** | ೧೦೦ | **೧೬೫೭** | **೧೨.೦೯** |

(ಸರ್ವಶಿಕ್ಷಣ ಅಭಿಯಾನ ೨೦೧೪)

ಸರ್ವಶಿಕ್ಷಣ ಅಭಿಯಾನದ ಮಾಹಿತಿ ಪ್ರಕಾರ ಉಡುಪಿಜಿಲ್ಲೆಯಲ್ಲಿ ೧೬೫೭ ಮಕ್ಕಳು ವಿವಿಧ ವೈಕಲ್ಯಗಳನ್ನು ಹೊಂದಿರುತ್ತಾರೆ. ಕೆಲವು ಸಂಸ್ಥೆಗಳು ಇವರ ಅಭ್ಯುದಯಕ್ಕಾಗಿ ಕಾರ್ಯನಿರ್ವಹಿಸುತ್ತಿವೆಯಾದರೂ ಗುಣಮಟ್ಟದ ಸೂಕ್ತ ವಿಶೇಷ ಶಾಲೆಗಳ ಕೊರತೆ ಇದೆ. ಅಂಕಿ ಅಂಶಗಳ ಪ್ರಕಾರ ೬-೧೪ ವರ್ಷ ವಯಸ್ಸಿನೊಳಗಿನ ೧-೮ನೇ ತರಗತಿಗಳಲ್ಲಿ ೨೨೨೪ ಮಕ್ಕಳು ವಿಕಲಚೇತನರಿದ್ದಾರೆ. ಹಾಗೂ ೯ ರಿಂದ ೧೦ನೇ ತರಗತಿಗಳಲ್ಲಿ ೩೪೧ ವಿಕಲಚೇತನ ಮಕ್ಕಳಿದ್ದಾರೆ.

**ದುಡಿಯುವ ಮಕ್ಕಳ ಸ್ಥಿತಿಗತಿ**

ಬೀಡಿ, ಮನೆವಾರ್ತೆಕೆಲಸ, ಗೂಡಂಗಡಿ, ಬಿಕ್ಷೆ, ಮೀನು ಆಯುವುದು, ಮೀನುಗಾರಿಕೆ ಮುಂತಾದ ಅಸಂಘಟಿತ ವಲಯಗಳಲ್ಲಿ ದುಡಿಯುವ ಮಕ್ಕಳನ್ನು ಕಾಣಬಹುದಾಗಿದೆ.

**ಕೋಷ್ಟಕ ೩.೧೨. ಕಾರ್ಮಿಕ ಇಲಾಖೆಯಿಂದ ೨೦೧೨-೧೩ರಲ್ಲಿ ರಕ್ಷಿಸಲ್ಪಟ್ಟ ಮಕ್ಕಳ ವಿವರ**

| ಕೆಲಸದ ವಿಧ | ಸಂಖ್ಯೆ | ವಯಸ್ಸು | ವಿದ್ಯಾರ್ಹತೆ | ಸ್ವಂತ ಊರು | ಜಾತಿ ವರ್ಗ |
|---|---|---|---|---|---|
| ಹೋಟೇಲು/ ಬಸ್ ಕ್ಲೀನರ್ | ೩ | ೧೩ | ೪, ೫, ೬ನೇ ತರಗತಿ | ಚಿತ್ರದುರ್ಗ | ಪ.ಜಾ., ಮುಸ್ಲಿಂ |
| ಬಾರ್‌ನಲ್ಲಿ ಕ್ಲೀನರ್ | ೨ | ೧೪ | ೪, ೫ನೇ ತರಗತಿ | ಬಳ್ಳಾರಿ, ಉಡುಪಿ | ಪ.ಜಾ., ಮುಸ್ಲಿಂ |
| ಮನೆವಾರ್ತೆ ಕೆಲಸ | ೨ | ೧೪ | ೫ನೇ ತರಗತಿ | ಉತ್ತರ ಕನ್ನಡ | ಪ.ಜಾ., ಮುಸ್ಲಿಂ |
| ಗುಜರಿ ಆಯುವುದು | ೨ | ೧೩ | -- | ಶಿವಮೊಗ್ಗ | ಪ.ಜಾತಿ |

(ಮೂಲ: ಕಾರ್ಮಿಕ ಇಲಾಖೆ ಉಡುಪಿ ಜಿಲ್ಲೆ ೨೦೧೪-೧೫)

ಮೇಲಿನ ಅಂಕಿ ಅಂಶಗಳನ್ನು ನೋಡಿದರೆ ಉಡುಪಿ ಜಿಲ್ಲೆಯಲ್ಲಿ ಬಾಲಕಾರ್ಮಿಕತೆಯಿಂದ ರಕ್ಷಿಸಲ್ಪಟ್ಟ ಮಕ್ಕಳು ಇತರ ಜಿಲ್ಲೆಯವರಾಗಿದ್ದು, ತಮ್ಮ ಸ್ವಂತ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿರುವ ಮಂದಿ ಇತರ ಮಕ್ಕಳನ್ನು ದುಡಿತಕ್ಕೆ ಹಚ್ಚಿರುವುದು ಕಾಣುತ್ತೇವೆ. ರಕ್ಷಿಸಲ್ಪಟ್ಟ ೯ ಮಕ್ಕಳಲ್ಲಿ ೭ (೭೮%) ಮಂದಿ ಹೊರ ಜಿಲ್ಲೆಯವರಾಗಿದ್ದಾರೆ. ೭ ಮಕ್ಕಳು (೭೮%) ಮಕ್ಕಳು ವಂಚಿತ ವರ್ಗಕ್ಕೆ ಸೇರಿರುವುದು ಕಾಣಬಹುದಾಗಿದೆ.

ಜಿಲ್ಲೆಯಲ್ಲಿ ಮಕ್ಕಳನ್ನು ಆಕರ್ಷಿಸಲು ಸಮರ್ಥವಾಗಿರುವ ಮಕ್ಕಳ ಸ್ನೇಹಿ ವಾತಾವರಣ ನೀಡಲು ಆಡಳಿತ ವ್ಯವಸ್ಥೆ ಸೋತಿರುವುದನ್ನು ನಾವು ನೋಡುತ್ತೇವೆ. ದುಡಿಯುವ ಮಕ್ಕಳ ವಯಸ್ಸಿನ ಖಾತ್ರಿಗೆ ಸೂಕ್ತ ವ್ಯವಸ್ಥೆ ಇಲ್ಲದಿರುವುದು ಇನ್ನೂ ಬಹಳಷ್ಟು ಮಕ್ಕಳು ರಕ್ಷಣಾ ಪ್ರಕ್ರಿಯೆಗೆ ಒಳಪಡಲು ಸೋತಿರುವುದು ನಾವು ಕಾಣಬಹುದಾಗಿದೆ.

# ಅಧ್ಯಾಯ ನಾಲ್ಕು

# ಮಕ್ಕಳ ರಕ್ಷಣಾ ವ್ಯವಸ್ಥೆಗಳು ಕ್ಷೇತ್ರಾಧರಿತ ವಿಶ್ಲೇಷಣೆ

೪.೧. ಅಧ್ಯಯನದ ಸ್ಥಳ ಮತ್ತು ಆರಿಸಲ್ಪಟ್ಟ ಮಾದರಿ ನಮೂನೆ

೪.೨. ಮಕ್ಕಳ ರಕ್ಷಣಾ ವ್ಯವಸ್ಥೆಗಳ ಜವಾಬ್ದಾರಿ ಮತ್ತು
ಕಾರ್ಯವೈಖರಿ ಹಾಗೂ ಸಾಮಾಜಿಕ ಪರಿಣಾಮಗಳ ವಿಶ್ಲೇಷಣೆ

೪.೩. ಮಕ್ಕಳ ರಕ್ಷಣಾ ವ್ಯವಸ್ಥೆ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಸ್ತುಸ್ಥಿತಿ


## ಅಧ್ಯಾಯ ನಾಲ್ಕು

# ಮಕ್ಕಳ ರಕ್ಷಣಾ ವ್ಯವಸ್ಥೆಗಳು ಕ್ಷೇತ್ರಾಧರಿತ ವಿಶ್ಲೇಷಣೆ

**ಫಲಿತಗಳು:**

### ೧. ಜಿಲ್ಲೆಯ ಮಕ್ಕಳಿಗೆ ಪ್ರಾಶಸ್ತ್ಯ ದೊರಕುವಿಕೆ

ಉಡುಪಿ ಜಿಲ್ಲೆಯಲ್ಲಿ ಮಕ್ಕಳು ಸುಶಿಕ್ಷಿತ ಹಾಗೂ ರಕ್ಷಿತವಾಗಿದ್ದಾರೆಯೇ ಅವರಿಗೆ ಸೂಕ್ತ ಪ್ರಾಶಸ್ತ್ಯ ಲಭ್ಯವಾಗುತ್ತಿದೆಯೇ ಎಂದು ತಿಳಿದುಕೊಳ್ಳುವ ಸಲುವಾಗಿ ಕೇಳಿದ ಪ್ರಶ್ನೆಗೆ ಬಂದ ಉತ್ತರಗಳನ್ನು ಗಮನಿಸಿದಾಗ




ಸಮಾಜದಲ್ಲಿ ಮಕ್ಕಳ ಮಾತಿಗೆ ಸಾಮಾನ್ಯವಾಗಿ ಹೆಚ್ಚು ಬೆಲೆ ನೀಡಲಾಗುತ್ತಿಲ್ಲ ಎನ್ನುವ ಅಭಿಪ್ರಾಯವಿದೆ. ಅಧ್ಯಯನದ ಸಂದರ್ಭದಲ್ಲಿ ಈ ಪ್ರಶ್ನೆ ಕೇಳಿದಾಗ ೪೩.೮೩%(೧೦೩ ಮಂದಿ) ಹೌದು ಎಂದಿರುವಾಗಳ೪೩.೪೦%(೧೦೨ ಮಂದಿ) ೧೨.೭೭%(೩೦ ಮಂದಿ) ಗೊತ್ತಿಲ್ಲ ಎಂಬುವುದಾಗಿ ಅಭಿಪ್ರಾಯ ಪಟ್ಟಿರುತ್ತಾರೆ.


ಮುಂದುವರಿದ ಅತ್ಯಂತ ಸುಶಿಕ್ಷಿತರ ಜಿಲ್ಲೆ ಎಣಿಸಿಕೊಂಡಿರುವ ಉಡುಪಿ ಜಿಲ್ಲೆಯಲ್ಲಿ ಜನರ ಜೀವನ ಮಟ್ಟ ಅದರಲ್ಲೂ ಮಕ್ಕಳ ಸಾಮಾಜಿಕ ಜೀಅನ ಮಟ್ಟ ಆಶಾದಾಯಕವಾಗಿದೆ



ಎಂದು ನಂಬಲಾಗುತ್ತದೆ. ಮಕ್ಕಳ ಮಾತಿಗೆ ಬೆಲೆ ನೀಡುವುದು ಒಂದು ಸುಶಿಕ್ಷಿತ, ಸುಸಂಸ್ಕೃತ ಸಮಾಜದ ಪ್ರಮುಖ ಲಕ್ಷಣಗಳಲ್ಲೊಂದಾಗಿದೆ. ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸೌರ್ಕರ್ಯ ಕೊರತೆಯಿಂದ ಮಕ್ಕಳ ಹಕ್ಕುಗಳ ಖಾತ್ರಿ ಸಾಧ್ಯವಾಗುತ್ತಿಲ್ಲ ವಾಗಿರುವಾಗ ನಗರ ಪ್ರದೇಶದಲ್ಲಿಯೂ ಹೆಚ್ಚೇನು ವ್ಯತ್ಯಾಸವಿರದೆ ಮಕ್ಕಳ ಅಭಿಪ್ರಾಯಗಳಿಗೆ ಸೂಕ್ತ ಮನ್ನಣೆ ದೊರಕುತ್ತಿಲ್ಲ ಎನ್ನುವುದು ಅಧ್ಯಯನದಲ್ಲಿ ತಿಳಿದು ಬರುತ್ತಿದೆ.

**೨. ಮಕ್ಕಳ ಅಗತ್ಯತೆಗೆ: ತಜ್ಞ ಸಹಾಯ ಸಿಗುತ್ತಿದೆಯೇ?**

ರಕ್ಷಣೆಯ ಹಿನ್ನೆಲೆಯಲ್ಲಿ ನೋಡಿದಾಗ ಜಿಲ್ಲೆಯ ಮಕ್ಕಳಿಗೆ ತಮ್ಮ ಹಕ್ಕುಗಳ ಹಿನ್ನೆಲೆಯಲ್ಲಿ ನೋಡಿದಾಗ ಅವಶ್ಯಕತೆ ಒದಗಿ ಬಂದಾಗ ತಜ್ಞ ಸಹಾಯ ದೊರಕುತ್ತದೆಯೇ ಎಂದು ಕೇಳಲಾದ ಪ್ರಶ್ನೆಗೆ ಈ ಕೆಳಗಿನಂತೆ ಪ್ರತಿಕ್ರಿಯೆ ಕಾಣಬಹುದಾಗಿದೆ.





ಮೇಲಿನ ನಕ್ಷೆಯಲ್ಲಿ ಕಾಣಿಸಲಾದಂತೆ ಉಡುಪಿ ಜಿಲ್ಲೆಯ ಮಕ್ಕಳಿಗೆ ಅವಶ್ಯಕತೆಗಳಿಗೆ ಸೂಕ್ತ ಸ್ಪಂದನೆ ನೀಡುವ ವ್ಯವಸ್ಥೆ ಇದೆಯೇ ಎನ್ನುವ ಅಂಶವನ್ನು ಗಮನಿಸಿದಾಗ, ಪ್ರಸ್ತುತ ಅಧ್ಯಯನದಲ್ಲಿ ೪೫.೯೬%(೧೦೮ಮಂದಿ) ಅಭಿಪ್ರಾಯದಂತೆ ಮಕ್ಕಳಿಗೆ ಅವಶ್ಯಕತೆ ಬಿದ್ದಾಗ ತಜ್ಞ ಸಹಾಯ ಲಭ್ಯವಾಗುವುದಿಲ್ಲ. ೪೦.೪೩%(೯೫) ಮಂದಿಯ ಪ್ರಕಾರ ಅವಶ್ಯಕ ಸಹಾಯ ತಜ್ಞರಿಂದ ಸಿಗುತ್ತದೆ. ಮತ್ತು ೧೩.೫೨(೩೨ಮಂದಿ) ಗೊತ್ತಿಲ್ಲ ಎನ್ನುವುದಾಗಿ ಅಭಿಪ್ರಾಯ ಪಡುತ್ತಾರೆ.

ಉಡುಪಿ ಜಿಲ್ಲೆ ಮಾನವ ಸಂಪನ್ಮೂಲ ಹಾಗೂ ನೈಸರ್ಗಿಕ ಸಂಪನ್ಮೂಲಗಳಿಂದ ಬರಪೂರವಾಗಿರುವುದು ಸತ್ಯ. ಆದರೆ ಮಕ್ಕಳ ಅವಶ್ಯಕತೆಗಳಿಗೆ ಪ್ರಾಮುಖ್ಯತೆ ದೊರೆಯುತ್ತಿಲ್ಲ ಹಕ್ಕುಗಳ ಪ್ರತಿಪಾದನೆಗೆ ಮಕ್ಕಳಿಗೆ ಸೂಕ್ತ ಮಾರ್ಗದರ್ಶನದ ಅವಶ್ಯಕತೆ ಎದ್ದು



ಕಾಣುತ್ತದೆಯಾದರೂ, ಮಕ್ಕಳಿಗೆ ಬದುಕುವ ಹಕ್ಕು ರಕ್ಷಣೆಹೊಂದುವ ಹಕ್ಕು ವಿಕಾಸ ಹೊಂದುವ ಹಕ್ಕು ಹಾಗೂ ಭಾಗವಹಿಸುವ ಹಕ್ಕುಗಳನ್ನು ಅನುಭವಿಸುವಂತಾಗಲು ಅವಶ್ಯವೆನಿಸುವ ಸಹಾಯ ಒದಗಿ ಬರುವುದರಲ್ಲಿ ಇಂದಿಗೂ ಕೊರತೆ ಇರುವುದನ್ನು ನಾವು ಕಾಣಬಹುದಾಗಿದೆ.

**೩. ಜಿಲ್ಲೆಯ ಮಕ್ಕಳ ಬದುಕಿನ ರೀತಿ**




ಉಡುಪಿ ಜಿಲ್ಲೆಯ ಮಕ್ಕಳೂ ಸಾಮಾಜಿಕ ನಿರೀಕ್ಷೆಯಂತೆ ಆನಂದದಾಯಕ ಬಾಲ್ಯ ಅನುಭವಿಸುತ್ತದ್ದಾರೆಯೇ ಎನ್ನುವ ಪ್ರಶ್ನೆಗೆ ೩೪.೦೪%(೮೦ ಮಂದಿ) ಇಲ್ಲ ಎಂದರೆ ೧೨.೭೭% (೩೦ ಮಂದಿ) ಗೊತ್ತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.


ಜಿಲ್ಲೆಯ ಮಕ್ಕಳಿಗೆ ಭೌತಿಕವಾಗಿ ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಅಭಿವೃದ್ಧಿ ಹೊಂದಲು, ಅಭಿವೃದ್ಧಿಯ ಪಾಲುದಾರರೆನಿಸಿಕೊಂಡಿರುವ ಹಿರಿಯರು ಸಹಕಾರ, ಸಲಹೆ ಮಾರ್ಗದರ್ಶನ ಅವಶ್ಯವಾಗಿ ಬೇಕು. ಆದರ ಮೇಲಿನ ಅಧ್ಯಯನ ಫಲಿತಗಳಲ್ಲಿ ನಾವು ಗಮನಿಸುವ ಅಂಶವೆಂದರೆ ಅಧ್ಯಯನಕ್ಕೆ ಒಳಗಾದ ಮಕ್ಕಳು, ಹಿರಿಯರು, ಶಿಕ್ಷಕರು ಅಭಿಪ್ರಾಯಪಡುವಂತೆ ಜಿಲ್ಲೆಯ ಮಕ್ಕಳಿಗೆ ಬಾಲ್ಯವನ್ನು ಆನಂದದಾಯಕವಾಗಿ ಅನುಭವಿಸಲು ಪೂರಕ ವ್ಯವಸ್ಥೆ ಇಲ್ಲ ಹಾಗೂ ಇದಕ್ಕೆ ಸ್ಥಳೀಯ ರಕ್ಷಣಾ ಇಲಾಖೆಗಳು ಶ್ರಮಿಸುವ ಅವಶ್ಯಕತೆ ಇದೆ.

**೪. ಮಕ್ಕಳಿಗೆ ಅವಶ್ಯಕ ಸಹಾಯದ ಒದಗುವಿಕೆ**

ಇತರ ಜಿಲ್ಲೆಗಳಂತೆ ಉಡುಪಿ ಜಿಲ್ಲೆಯಲ್ಲಿನ ಮಕ್ಕಳು ಸಹಾ ಬೇರೆ ಬೇರೆ ಸಂದರ್ಭಗಳಲ್ಲಿ ಮಕ್ಕಳು ಕೆಲವು ತೊಂದರೆಗಳಿಗೆ ಎದುರಾಗುವ ಸಂದರ್ಭಗಳು ಎದುರು ಬರುತ್ತವೆ. ಹೀಗಿರುವಾಗ ಉಡುಪಿ ಜಿಲ್ಲೆಯ ಮಕ್ಕಳಿಗೆ ಮುಖ್ಯವಾಗಿ ಕುಟುಂಬದ



ಸುಭದ್ರ ಜಾಲದ ಹೊರಗೆ ಅವಶ್ಯಕತೆ ಬಂದಾಗ ಸಹಾಯ ದೊರಕುತ್ತದೆಯೇ ಎನ್ನುವ ಪ್ರಶ್ನೆಯನ್ನು ಕೇಳಲಾಗಿತ್ತು. ಅದಕ್ಕೆ ಬಂದ ಉತ್ತರ ಈ ಕೆಳಗಿನಂತಿದೆ.





ಮಕ್ಕಳ ಅಭಿವೃದ್ಧಿ ಪಾಲುದಾರರಾಗಿರುವ ಹಿರಿಯ ಪೋಷಕರು ಮಕ್ಕಳಿಗೆ ಸಹಾಯದ ಅವಶ್ಯಕತೆ ಇದ್ದಾಗ ಸಹಾಯ ನೀಡುತ್ತಾರೆಯೇ ಎನ್ನುವ ವಿಚಾರ ಬಂದಾಗ ೪೫.೯೫%(೧೦೮ ಮಂದಿ) ಹೌದು ಎಂದು ಅಭಿಪ್ರಾಯಪಟ್ಟರೆ ೪೪.೬೫%(೧೦೫ ಮಂದಿ) ಇಲ್ಲ ಎಂದೂ ೮.೯೪%(೨೧ ಮಂದಿ) ಗೊತ್ತಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತಾರೆ.

ಉಡುಪಿ ಜಿಲ್ಲೆಯಲ್ಲಿ ಮಕ್ಕಳು ಸಮಸ್ಯೆಗಳಿಗೆ ಸಿಲುಕಿದಾಗ ಅವರ ಸಹಾಯಕ್ಕೆ ಬರುವ ಹಿರಿಯರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರಾದರೂ ಅರಿವಿನ ಕೊರತೆ ಹಾಗೂ ಸೌಲಭ್ಯಗಳ ಕೊರತೆಯಿಂದಾಗಿ ಮಕ್ಕಳು ನಿರೀಕ್ಷಿತ ಮಟ್ಟದಲ್ಲಿ ಸುಭದ್ರವಾಗಿಲ್ಲ ಎನ್ನುವುದನ್ನು ಮೇಲಿನ ಅಧ್ಯಯನಾಂಶಗಳಿಂದ ಖಾತ್ರಿಯಾಗುತ್ತದೆ.

**೫. ಮಕ್ಕಳಲ್ಲಿ ಸ್ವರಕ್ಷಣೆ/ಆತ್ಮ ರಕ್ಷಣೆಯ ಅರಿವಿನ ಮಟ್ಟ**

ಸಾಮಾನ್ಯವಾಗಿ ಮಕ್ಕಳು ದುರ್ಬಲರು ಅವರಿಗೆ ಹಿರಿಯರು ರಕ್ಷಣೆ ಕೊಡಬೇಕೇ ಹೊರತು ಅವರು ತಮ್ಮ ರಕ್ಷಣೆ ತಾವೇ ಮಾಡಿಕೊಳ್ಳಲಾರರು ಎಂದು ನಂಬಲಾಗುತ್ತದೆ. ಆದರೆ ಸರಿಯಾದ ರಕ್ಷಣಾ ವ್ಯವಸ್ಥೆಯಲ್ಲಿ ಮಕ್ಕಳಿಗೆ ತಮ್ಮ ಸ್ವ ರಕ್ಷಣೆ, ಆತ್ಮರಕ್ಷಣೆಯ ತಂತ್ರಗಳನ್ನು ಕಲಿಸಲಾಗಿರುತ್ತದೆ. ಆದುನಿಕ ಸಮಾಜದಲ್ಲಿ ಉಡುಪಿಯಂತಹಾ ಮುಂಚೂಣಿಯಲ್ಲಿರುವ ಜಿಲ್ಲೆಯಲ್ಲಿ ಮಕ್ಕಳು ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳಬಲ್ಲರೇ ಎನ್ನುವ ಬಗ್ಗೆ ಕೇಳಲಾದ ಪ್ರಶ್ನೆಗೆ ಬಂದ ಉತ್ತರ ಈ ಕೆಳಗಿನಂತಿದೆ:






ಉಡುಪಿ ಜಿಲ್ಲೆಯ ಮಕ್ಕಳಲ್ಲಿ ಸ್ವರಕ್ಷಣೆ/ಆತ್ಮರಕ್ಷಣೆಯ ಅರಿವಿದೆಯೇ ಎನ್ನುವ ಪ್ರಶ್ನೆಗೆ, ೫೪.೮೦%(೧೨೯ಮಂದಿ) ಇಲ್ಲ ಎಂಬುದಾಗಿ ಉತ್ತರಿಸಿದರು ೩೩.೧೯%(೭೮ ಮಂದಿ) ಹೌದು ಎಂದಿರುತ್ತಾರೆ. ೧೧.೯೧% (೨೮ಮಂದಿ) ಗೊತ್ತಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.


ಮಕ್ಕಳು ಭದ್ರತೆಯ ಬಾಲ್ಯವನ್ನು ಅನುಭವಿಸಬೇಕಾದರೆ ಆವರಿಗೆ ಹೊರಗಿನವರ ಬೆಂಬಲ ಸಹಕಾರದ ಅವಶ್ಯಕತೆ ಇದ್ದಷ್ಟೇ ಸ್ವ ಸಾಮರ್ಥ್ಯ ಅಭಿವೃದ್ಧಿ ಪಡಿಸುವ ಅವಶ್ಯಕತೆ ಇರುತ್ತದೆ. ಒಟ್ಟು ರಕ್ಷಣಾ ವ್ಯವಸ್ಥೆಯಲ್ಲಿ ಮಕ್ಕಳ ಸಾಮರ್ಥ್ಯ ಸಭಲೀಕರಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿಲ್ಲ. ಮತ್ತು ಮಕ್ಕಳು ತಮ್ಮ ರಕ್ಷಣೆಗಾಗಿ ಇನ್ನೊಬ್ಬರ ಮೇಲೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆಗೆ ಬೀಳುತ್ತಾ ಇರುವುದು ಕಾಣಬಹುದಾಗಿದೆ. ಬಹಳಷ್ಟುಬಾರಿ ಅವರಿಗೆ ಸ್ವರಕ್ಷಣೆ/ಆತ್ಮರಕ್ಷಣೆಯ ತರಬೇತಿಯಾಗಲಿ ಅರಿವಾಗಲಿ ಇಲ್ಲ ಎಂದು ಕಂಡುಕೊಳ್ಳಲಾಯ್ತು.

**೬. ಮಕ್ಕಳ ಸಮಸ್ಯೆಗಳನ್ನು ಸಮಾಜ ನೋಡುತ್ತಿರುವ ರೀತಿ**

ಇಲ್ಲಿ ಜಿಲ್ಲೆಯ ಮಕ್ಕಳ ಸಮಸ್ಯೆಗಳನ್ನು ಸಮಾಜ ಯಾವರೀತಿ ನೋಡುತ್ತಿದೆ ಎಂಬ ಅಂಶದ ಮೇಲೆ ಪ್ರಶ್ನೆಗಳನ್ನು ಕೇಳಲಾಯ್ತು, ಸಾಮಾನ್ಯವಾಗಿ ಮಕ್ಕಳ ಸಮಸ್ಯೆಗಳನ್ನು ಕೌಟುಂಬಿಕ ಪರಿಧಿಯೊಳಗೆ ಗುರುತಿಸಿಕೊಳ್ಳಲಾಗುತ್ತದೆ. ಒಟ್ಟು ಸಮಾಜ ಮಕ್ಕಳ ಸಮಸ್ಯೆಯನ್ನು ನೋಡುವ ರೀತಿಯನ್ನು ಈ ಭಾಗದಲ್ಲಿ ಪ್ರಶ್ನೆಗಳ ಮೂಲಕ ಕೊಂಡುಕೊಳ್ಳುವ ಪ್ರಯತ್ನ ಮಾಡಲಾಯ್ತು.

ಉಡುಪಿ ಜಿಲ್ಲೆಯಲ್ಲಿ ಮಕ್ಕಳ ಸಮಸ್ಯೆಗಳಗೆ ಸೂಕ್ತ ಪ್ರಾಮುಖ್ಯತೆ, ಗೌರವ ನೀಡಲಾಗುತ್ತಿದೆಯೇ ಎನ್ನುವ ಪ್ರಶ್ನೆಗೆ ೪೯.೭೯%(೧೧೭ ಮಂದಿ) ಇಲ್ಲ ಎಂದು ಉತ್ತರಿಸುತ್ತಾರೆ. ೩೪.೮೯%(೮೨ಮಂದಿ) ಹೌದು ಎಂದು ಉತ್ತರಿಸುತ್ತಾರೆ. ೧೫.೩೨%(೩೬ಮಂದಿ) ಗೊತ್ತಿಲ್ಲ ಎಂದಿರುತ್ತಾರೆ.







ಜಿಲ್ಲೆಯಲ್ಲಿ ಮಕ್ಕಳಿಗಾಗಿ ಸಾಕಷ್ಟು ಕಾರ್ಯಕ್ರಮಗಳು ಯೋಜನೆಗಳು ಜಾರಿಗೊಂಡಿರುವುದು ನೋಡುತ್ತೇವೆಯಾದರೂ ಮಕ್ಕಳ ನೈಜ್ಯ ಸಮಸ್ಯೆಗಲು ಪ್ರತಿನಿಧಿಸಲ್ಪಡುತ್ತಿಲ್ಲ ಎನ್ನುವ ಅಂಶ ಮೇಲ್ನೋಟಕ್ಕೂ ಗೋಚರಿಸುತ್ತದೆ. ಗ್ರಾಮೀಣಾ ಹಾಗೂ ನಗರ ಪ್ರದೇಶಗಳಲ್ಲಿ ಮಕ್ಕಳ ಸ್ನೇಹಿ ಅಂಶಗಳು ಕಡಿಮೆ ಇದ್ದು, ಮಕ್ಕಳನ್ನು ಒಟ್ಟು ಸಮಾಜದ ಒಂದು ಚಿಕ್ಕ ಅಂಶವನ್ನಾಗಿಯಷ್ಟೇ ನೋಡಲಾಗುತ್ತಿದೆ ಎನ್ನುವುದನ್ನು ಈ ಮೇಲಿನ ಅಂಶಗಳು ಖಾತ್ರಿ ಪಡಿಸುತ್ತವೆ.

**೭. ಮಕ್ಕಳು ಎದುರಿಸುತ್ತಿರುವ ಅಪಾಯಗಳಿಗೆ ಇಲಾಖೆಗಳ ಸ್ಪಂಧನೆ**

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ಸಂಬಂಧಿ ವಿಚಾರಗಳನ್ನು ಕೈಗೆತ್ತಿಕೊಂಡು ಅವರಿಗೆ ತಮ್ಮ ಹಕ್ಕುಗಳನ್ನು ಖಾತ್ರಿಪಡಿಸಲು ಅನುಕೂಲವಾಗುವಂತೆ ಶಿಕ್ಷಣ, ಆರೋಗ್ಯ, ರಕ್ಷಣೆ–ಪೋಷಣೆ, ಸಮಾಜಾಭಿವೃದ್ಧಿ, ಪುನರ್ವಸತಿ ವಲಯಗಳಲ್ಲಿ ಇಲಾಖೆಗಳನ್ನು ಪ್ರಾಧಿಕಾರಗಳನ್ನು, ರಚಿಸಲಾಗಿದೆ. ನಿರ್ಧಿಷ್ಟ ಉದ್ದೇಶಕ್ಕಾಗಿಯೇ ಸಂಘಟಿಸಲಾಗಿರುವ ಈ ಇಲಾಖೆಗಳು ತಮ್ಮ ಕಾರ್ಯವ್ಯಾಪ್ತಿಗೆಬರುವ ಮಕ್ಕಳ ತುರ್ತುಅವಶ್ಯಕತೆಗಳಿಗೆ ಸ್ಪಂಧಿಸುತ್ತಿವೆಯೇ ಎಂದು ಕೇಳಲಾದ ಪ್ರಶ್ನೆಗಳಿಗೆ ಈ ಕೆಳಗಿನಂತೆ ಉತ್ತರ ಪಡೆಯಲಾಗಿದೆ.





ಉಡುಪಿ ಜಿಲ್ಲೆಯಲ್ಲಿ ಮಕ್ಕಳು ಎದುರಿಸುತ್ತಿರುವ ಅಪಾಯಗಳ ಬಗ್ಗೆ ಇಲಾಖಾ ಅಧಿಕಾರಿಗಳು ಸೂಕ್ತವಾಗಿ ಸ್ಪಂದಿಸುತ್ತಾರೆಯೇ ಎಂಬ ಪ್ರಶ್ನೆಗೆ ೪೫.೯೬%(೧೦೮ ಮಂದಿ) ಎಂಬುದಾಗಿ ಅಭಿಪ್ರಾಯ ಪಟ್ಟಿರುತ್ತಾರೆ. ೪೩.೪೮% (೧೦೨ಮಂದಿ) ಹೌದು ಎಂದು ಹೇಳಿರುತ್ತಾರೆ ೧೦.೬೪% (೨೫ಮಂದಿ) ಗೊತ್ತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಮಕ್ಕಳ ಹಕ್ಕುಗಳ ಖಾತ್ರಿಗಾಗಿ ಶ್ರಮಿಸುವ ಇಲಾಖೆಗಳಲ್ಲಿಯೂ ಸೂಕ್ಷ್ಮತೆಯ ಕೊರತೆ ಇದ್ದು ಮಕ್ಕಳ ಸಮಸ್ಯೆಗಳು ಅದರಲ್ಲೂ ಮಕ್ಕಳು ಎದುರಿಸುತ್ತಿರುವ ಅಪಾಯಗಳ ಬಗ್ಗೆ ಸರಿಯಾದ ಅಧ್ಯಯನಗಳಿಲ್ಲ ಹಾಗೂ ಮಕ್ಕಳ ಮೇಲಿನ ದೌರ್ಜನ್ಯಗಳ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವುದು ಇಲಾಖೆಗಳ ಇಚ್ಚಾಶಕ್ತಿಯ ಕೊರತೆಯನ್ನು ತೋರಿಸುತ್ತದೆ.

**೮. ಮಕ್ಕಳಲ್ಲಿ ವಾಸ್ತವಾಂಶಗಳ ಜ್ಞಾನ ಮಟ್ಟದ ಇರುವಿಕೆ**

ಮಕ್ಕಳು ತಮ್ಮ ಹಕ್ಕುಗಳನ್ನು ಅರ್ಥವತ್ತಾಗಿ ಅನುಭವಿಸುವಂತಾಗಲು ಅವರಲ್ಲಿ ಸಾಮಾನ್ಯಜ್ಞಾನದ ಮಟ್ಟ ಹೆಚ್ಚು ಇರಲೇ ಬೇಕಾಗುತ್ತದೆ. ಮಕ್ಕಳು ಕೂಪ ಮಂಡೂಕವಾದರೆ ಅವರಿಗೆ ಉತ್ತಮ ಸಾಧನೆ ಮಾಡಲು ಅವಕಾಶವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ಮಕ್ಕಳಲ್ಲಿ ಜ್ಞಾನಮಟ್ಟದ ಬಗ್ಗೆ ಕೇಳಲಾದ ಪ್ರಶ್ನೆಗೆ ಈ ಕೆಳಗಿನಂತೆ ಉತ್ತರ ದೊರಕಿತು:





ಮಕ್ಕಳಿಗೆ ಅರಿವಿನ ಮಟ್ಟದ ಕುರಿತು, ಜ್ಞಾನ ಮಟ್ಟದ ಕುರಿತು ಕೇಳಲಾದ ಪ್ರಶ್ನೆಗೆ ೫೯.೧೫% (೧೩೯ಮಂದಿ) ಮಕ್ಕಳಿಗೆ ಸುತ್ತ ಮುತ್ತಲು ಏನು ನಡೆಯುತ್ತಿದೆ ಎನ್ನುವ ಬಗ್ಗೆ ಹೌದು ಜ್ಞಾನ ಇದೆ ಎಂದಿರುತ್ತಾರೆ. ೩೧.೦೬% (೭೩ಮಂದಿ) ಇಲ್ಲ. ೧೦.೬೪% (೨೫ ಮಂದಿ) ಗೊತ್ತಿಲ್ಲ ಎಂದಿದ್ದಾರೆ.



ಜಿಲ್ಲೆಯಲ್ಲಿ ಮಕ್ಕಳಿಗೆ ಮೂಲಭೂತ ಅವಶ್ಯಕತೆಗಳ ಕೊರತೆಇಲ್ಲ ಆದರೂ ಸಮಾಜದಲ್ಲಿನ ಆಗುಹೋಗುಗಳ ಬಗ್ಗೆ ಮಕ್ಕಳಲ್ಲಿ ಜ್ಞಾನದ ಕೊರತೆ ಇದೆಯಾದರೂ ಸುಮಾರು ಅರ್ಧದಷ್ಟು ಮಕ್ಕಳು ಆಗುಹೋಗುಗಳ ಬಗ್ಗೆ ಮಾಹಿತಿ ಹೊಂದಿದ್ದಾರೆ ಎನ್ನುವ ಅಂಶವನ್ನು ನಾವು ಗಮನಿಸಬಹುದಾಗಿದೆ.

**೯. ಸಾರ್ವಜನಿಕರಲ್ಲಿ ರಕ್ಷಣಾ ವ್ಯವಸ್ಥೆಯ ಅರಿವು**

ಮಕ್ಕಳ ಹಕ್ಕುಗಳ ಪ್ರತಿಪಾದನೆಯ ಪಾಲುದಾರರಲ್ಲಿ ಸಾರ್ವಜನಿಕರು ಬಹುಮುಖ್ಯ ಅನಿಸಿಕೊಂಡಿದ್ದಾರೆ. ಮಕ್ಕಳ ರಕ್ಷಣೆಯಲ್ಲಿ ಸಾರ್ವಜನಿಕರ ಪಾತ್ರ ಗಣನೀಯವಾಗಿರುತ್ತದೆ. ಅವರು ಎಚ್ಚೆತ್ತಲ್ಲಿ ಮಾತ್ರ ಮಕ್ಕಳನ್ನು ಎಲ್ಲಾ ಅಪಾಯಗಳಿಂದ ರಕ್ಷಿಸಲು ಸಾಧ್ಯವಾಗುತ್ತದೆ. ಈ ಕುರಿತು ಪ್ರಸ್ತುತ ಕೇಳಲಾದ ಪ್ರಶ್ನೆಗಳಿಗೆ ಈ ಕೆಳಗಿನ ಅಂಶಗಳನ್ನು ಉತ್ತರವಾಗಿ ಪಡೆಯಲಾಗಿದೆ.




ಉಡುಪಿಜಿಲ್ಲೆಯ ಜನರಿಗೆ/ಸಾರ್ವಜನಿಕರಿಗೆ ಜಿಲ್ಲೆಯ ಮಕ್ಕಳ ರಕ್ಷಣಾ ವ್ಯವಸ್ಥೆ ಬಗ್ಗೆ ಅರಿವಿದೆಯೇ? ಎನ್ನುವ ವಿಷಯದಲ್ಲಿ ಕೇಳಲಾದ ಪ್ರಶ್ನೆಗೆ ೪೪.೬೮%(೧೦೫ಮಂದಿ) ಹೌದು ಎಂದು ಅಭಿಪ್ರಾಯಪಟ್ಟರೆ ೪೩.೮೩% (೧೦೩ಮಂದಿ) ಎಂದು ಉತ್ತರಿಸಿದ್ದಾರೆ. ೧೧.೯೧%(೨೮ ಮಂದಿ) ಗೊತ್ತಿಲ್ಲ ಎಂದಿದ್ದಾರೆ.

ಮಕ್ಕಳ ಸಂಬಂಧಿತ ಸಮಸ್ಯೆಗಳಿಗೆ ಕಾರ್ಯನಿರ್ವಹಿಸಬೇಕಾದ ಪ್ರಮುಖ ರಕ್ಷಣಾ ವ್ಯವಸ್ಥೆಗ ವಸ್ತುನಿಷ್ಟ ಕಾರ್ಯ ನಿರ್ವಹಣೆಗೆ ಸಮುದಾಯದ ಪಾಲುದಾರಿಕೆ ಅತ್ಯವಶ್ಯಕ. ಸಮುದಾಯದಲ್ಲಿ ಮಕ್ಕಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡಿ ಅವರ ಬೆಂಬಲ ಭಾಗವಹಿಸುವಿಕೆ ಖಾತ್ರಿ ಪಡಿಸಿಕೊಂಡಾಗ ಮಕ್ಕಳ ರಕ್ಷಣೆ ಸುಸೂತ್ರವಾಗಿ ಕಾರ್ಯಗತ



ವಾಗುವುದರಲ್ಲಿ ಸಂಶಯವಿಲ್ಲ. ಉಡುಪಿ ಜಿಲ್ಲೆಯಲ್ಲಿ ಮಕ್ಕಳ ನ್ಯಾಯ ಕಾಯಿದೆಯ ಅನುಷ್ಠಾನದ ವಿಚಾರ ಬಂದಾಗ ರಕ್ಷಣ ವ್ಯವಸ್ಥೆಗಳು ಬಹಳ ವ್ಯವಸ್ಥಿತವಾಗಿ ಸ್ಥಾಪಿತಗೊಂಡಿವೆ. ಕಾಲಕಾಲಕ್ಕೆ ಇಲಾಖೆಗಳು ಜನಸ್ಪಂದನೆಯ ಬಲಪಡಿಸುವಿಕೆಗಾಗಿ ಈ ರಕ್ಷಣಾ ವ್ಯವಸ್ಥೆಗಳ ಕಾರ್ಯವಿಧಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ನೀಡುವ ಸತತಪ್ರಯತ್ನಗಳು ನಡೆಯುತ್ತಿವೆ. ಜನರು ರಕ್ಷಣಾ ವ್ಯವಸ್ಥೆಗಳ ಸದುಪಯೋಗ ಪಡೆಯುವಂತೆ ಜಿಲ್ಲೆಯ ಸರಕಾರಿ ಇಲಾಖೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಶ್ರಮಿಸಿದ್ದರ ಫಲವಾಗಿ ಸಾರ್ವಜನಿಕರ ಬೆಂಬಲ ಪಡೆಯುದರಲ್ಲಿ ಕೊರತೆಯಾಗಿಲ್ಲದಿರುವುದನ್ನು ನಾವು ಕಾಣಬಹುದಾಗಿದೆ.

**೧೦. ಜಿಲ್ಲೆಯ ಜನರಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ತಿಳುವಳಿಕೆ:**

ಸಾಮಾನ್ಯವಾಗಿ ಮಕ್ಕಳ ಹಕ್ಕುಗಳ ಜವಾಬ್ದಾರರಾಗಿ ಸಮುದಾಯ ಅಥವಾ ಸಮಾಜವನ್ನು ನೋಡಲಾಗುತ್ತದೆ. ಆನಸಮುದಾಯದಲ್ಲಿ ಹಕ್ಕಿನ ಅರಿವು ಇದ್ದಾಗ ಮಾತ್ರ ಹಕ್ಕುಗಳ ಉಲ್ಲಂಘನೆಯಾಗದ ಹಾಗೆ ಎಚ್ಚರವಹಿಸಲು ಸಾಧ್ಯವಾಗುತ್ತದೆ. ಹಾಗಾಗಿ ಅಧ್ಯಯನದ ಅಂಗವಾಗಿ ಉಡುಪಿ ಜಿಲ್ಲೆಯ ಜನರಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ತಿಳುವಳಿಕೆ ಇದೆಯೇ ಎನ್ನುವ ಬಗ್ಗೆ ಪ್ರಶ್ನೆಯೊಂದನ್ನು ಕೇಳಲಾಯ್ತು. ಅದಕ್ಕೆ ಉತ್ತರವಾಗಿ ಈ ಕೆಳಗಿನಂತೆ ಪ್ರತಿಕ್ರಿಯೆ ದೊರಕಿದೆ.





ಇತ್ತೀಚಿನ ವರ್ಷಗಳಲ್ಲಿ ವಿಶ್ವಾದ್ಯಂತ ಪ್ರಮುಖ ಅಂಶ ಅನಿಸಿಕೊಂಡಿರುವ ಮಕ್ಕಳ ಹಕ್ಕುಗಳ ಬಗ್ಗೆ ಜಿಲ್ಲೆಯ ಜನರಿಗೆ ತಿಳುವಳಿಕೆ ಇದೆಯೇ ಎಂದು ಕೇಳಿದಾಗ ೪೫.೫೩%(೧೦೭ ಮಂದಿ) ಇಲ್ಲ ಎಂದು ಉತ್ತರಿಸಿದರೆ ೪೦.೮೫%(೯೬ಮಂದಿ) ಹೌದು ಎಂದಿದ್ದಾರೆ. ಉಳಿದ ೧೪.೦೪%(೩೩ಮಂದಿ) ಗೊತ್ತಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತಾರೆ.



ಭಾರತ ೧೯೯೨ರಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಿದೆಯಾದರೂ ಕಳೆದ ಸುಮಾರು ೨೫ ವರ್ಷಗಳಲ್ಲಿ ಆಸಾಮಾನ್ಯರಲ್ಲಿ ಮಕ್ಕಳ ಹಕ್ಕುಗಳ ಪರಿಕಲ್ಪನೆಯನ್ನು ಸೂಕ್ತವಾಗಿ ಮೂಡಿಸುವುದರಲ್ಲಿ ಸಂಪೂರ್ಣವಾಗಿ ಸಾಧಿಸಿಲ್ಲ. ಸುಮಾರು ಅರ್ಧದಷ್ಟು ಮಂದಿ ಅಧ್ಯಯನದಲ್ಲಿ ಅಭಿಪ್ರಾಯಪಟ್ಟಂತೆ ಅವರಿಗೆ ಮಕಳ ಹಕ್ಕುಗಳ ಬಗ್ಗೆ ಸೂಕ್ತ ಮನವರಿಕೆ ಆಗಿರುವುದಿಲ್ಲ ಎನುವುದನ್ನು ಕಾಣುತ್ತೇವೆ.

**೧೧. ಜಿಲ್ಲೆಯ ಅರ್ಹ ಸಂಸ್ಥೆಗಳಲ್ಲಿ ಮಕ್ಕಳ ಸ್ನೇಹಿ ವಾತಾವರಣದ ಇರುವಿಕೆ**

ಸಂಸ್ಥೆಗಳಲ್ಲಿ ಇರುವ ಮಕ್ಕಳನ್ನು ಮಕ್ಕಳ ನ್ಯಾಯ ಕಾಯಿದೆಯಲ್ಲಿ ರಕ್ಷಣೆ ಪೋಷಣೆ ಮತ್ತು ಪುನರ್ವಸತಿಯ ಅವಶ್ಯಕತೆ ಇರುವ ಮಕ್ಕಳು ಎಂದು ಗುರುತಿಸಲಾಗಿದೆ. ಕುಟುಂಬಗಳಿಂದ ಹೊರಬಿದ್ದಿರುವ ಇವರು ಕುಟುಂಬದ ಪರ್ಯಾಯ ವ್ಯವಸ್ಥೆಯಲ್ಲಿ ಆನಂದದಾಯಕ ಬಾಲ್ಯವನ್ನು ಕಳೆಯಬೇಕಾದರೆ, ಅದಕ್ಕೆ ಪೂರಕವಾದ ವಾತಾವರಣದಲ್ಲಿ ಬೆಳೆಯಬೇಕು. ಅಧ್ಯಯನಕ್ಕೆ ಒಳಪಟ್ಟ ಉಡುಪಿ ಜಿಲ್ಲೆಯ ಸಂಸ್ಥೆಗಳಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ವಾತಾವರಣವಿದೆಯೇ? ಎನ್ನುವ ಪ್ರಶ್ನೆಗೆ ಉತ್ತರಗಳನ್ನು ಈ ಕೆಳಗಿನಂತೆ ಪಡೆಯಲಾಯ್ತು.





ಉಡಪಿ ಜಿಲ್ಲೆಯಲ್ಲಿ ಸುಮಾರು ೨೬ ಸೇವಾ ಸಂಸ್ಥೆಗಳು ಮಕ್ಕಳ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕೆಲಸಮಾಡುತ್ತಿವೆ ಇಂತ ಸಂಸ್ಥೆಗಳನ್ನು ಮಕ್ಕಳ ನ್ಯಾಯ ಕಾಯಿದೆ ೨೦೦೦ ದ ಅಡಿಯಲ್ಲಿ ಅರ್ಹ ಸಂಸ್ಥೆಗಳೆಂದು ಗುರುತಿಸಲಾಗಿದೆ ಈ ಸಂಸ್ಥೆಗಳು ಮಕ್ಕಳ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂದು ಕೇಳಲಾದ ಪ್ರಶ್ನೆಗೆ ೪೫.೧೭% (೧೦೬ಮಂದಿ) ಇಲ್ಲ ಎಂದು ಉತ್ತರಿಸಿದ್ದರೆ. ೩೩.% (೭೮ಮಂದಿ) ಹೌದು ಎಂದಿದ್ದಾರೆ ೨೧.೭%(೫೧ಮಂದಿ) ಗೊತ್ತಿಲ್ಲ ಎಂದಿದ್ದಾರೆ.



ಜಿಲ್ಲೆಯ ರಕ್ಷಣೆ ಪೋಷಣೆ ಮತ್ತು ಪುನರ್ವಸತಿಯ ಅವಶ್ಯಕತೆ ಇರುವ ಮಕ್ಕಳ ಸಂರಕ್ಷಣೆಗಾಗಿ ಅರ್ಹ ಸಂಸ್ಥೆಗಳೆಂದು ಗುರುತಿಸಲ್ಪಟ್ಟಿರುವ ೨ ಸರಕಾರಿ ಸಾಮ್ಯದ ಸಂಸ್ಥೆಗಳಿದ್ದರೆ ೨೪ ಸಂಸ್ಥೆಗಳನ್ನು ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿವೆ. ಆದರ ಅವುಗಳ ಕಾರ್ಯನಿರಹಣೆಯ ಬಗ್ಗೆ ಬಹಳ ದೊಡ್ಡ ಸಂಖ್ಯೆಯ ಜನರಿಗೆ ಸಮಾಧಾನ ಇಲ್ಲದಿರುವುದು ಕಾಣುತ್ತೇವೆ.

**೧೨. ಜಿಲ್ಲೆಯ ಮಕ್ಕಳ ಅವಶ್ಯಕತೆಗಳ ಬಗ್ಗೆ ಇಲಾಖೆ/ಪೋಷಕರ ಜ್ಞಾನಮಟ್ಟದ ಕುರಿತು:**

ಜಿಲ್ಲೆಯಮಕ್ಕಳಿಗೆ ತಮ್ಮ ಹಕ್ಕುಗಳನ್ನು ಅನುಭವಿಸಲು ಬೇಕಾದ ವ್ಯವಸ್ಥೆಯನ್ನು ಹೊಂದಬೇಕಾದರೆ ಸ್ಥಳೀಯ ಆಡಳಿತ, ಮುಖ್ಯವಾಗಿ ಜಿಲ್ಲಾಡಳಿತ ಸೂಕ್ತ ಯೋಜನೆಗಳನ್ನು ಕೈಗಿತ್ತಿಕೊಳ್ಳಬೇಕಾಗುತ್ತದೆ ಹಾಗಾಗಬೇಕಾದಲ್ಲಿ ಮಕ್ಕಳ ನೇರ ಪಾಲುದಾರರಾಗಿರುವ ಪೋಷಕರು ಹಾಗೂ ಇಲಾಖೆಗೆ ಜಿಲ್ಲೆಯ ಮಕ್ಕಳ ನಿರ್ದಿಷ್ಟ ಅವಶ್ಯಕತೆಗಳ ಸಂಪೂರ್ಣ ಜ್ಞಾನ ಇರಬೇಕಾಗುತ್ತದೆ. ಈ ಜ್ಞಾನಮಟ್ಟ ದ ಅಂದಾಜು ಹೊಂದಲಿಕ್ಕಾಗಿ ಮಾಡಿದ ಪ್ರಯತ್ನಗಳಲ್ಲಿ ಕಂಡುಕೊಳ್ಳಲಾದ ಅಂಶಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ.





ಜಿಲ್ಲೆಯ ಮಕ್ಕಳಿಗೆ ಆನಂದದಾಯಕ ಕಾನೂನುರೀತ್ಯಾ ಬದುಕಲು ಇರುವ ಅವಶ್ಯಕತೆಗಳ ಬಗ್ಗೆ ಜವಾಬ್ದಾರರಾಗಿರುವ ಇಲಾಖೆಗಳು ಮತ್ತು ಹೆತ್ತವರು, ಪೋಷಕರಿಗೆ ಮಕ್ಕಳ ಅವಶ್ಯಕತೆಗಳ ಬಗ್ಗೆ ಜ್ಞಾನವಿದೆಯೇ ಎಂದು ಕೇಳಿದಾಗ ೪೯.೭೯% (೧೧೬ಮಂದಿ) ಇಲ್ಲ ಎಂದು ಉತ್ತರಿಸಿದರೆ. ೩೪.೮೯% (೮೩ ಮಾಂದಿ) ಹೌದು ಎಂದರೆ ೧೫.೨% (೩೩ ಮಂದಿ) ಗೊತ್ತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.




ಮಕ್ಕಳ ನೈಜ್ಯ ಸಮಸ್ಯೆಗಳು ಜಿಲ್ಲೆಯಿಂದ ಜಿಲ್ಲೆಗೆ ಭಿನ್ನವಾಗಿರುತ್ತವೆ. ಆದರೆ ಮಕ್ಕಳ ಅಭಿವೃದ್ಧಿಯ ಪಾಲುದಾರರಿಗೆ ಬದ್ಧತೆಯಿಂದ ಕಾರ್ಯ ನಿರ್ವಹಿಸಲು ಸಮಸ್ಯೆಯ ಆಳದ ಬಗ್ಗೆ ಸಂಪೂರ್ಣ ಜ್ಞಾನ ಹೊಂದುವ ಅವಶ್ಯಕತೆ ಇದೆ. ಸೂಕ್ತ ಅಧ್ಯಯನಗಳ ಮೂಲಕ ಮಕ್ಕಳ ಅವಶ್ಯಕತೆಗಳನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾದಂತೆ ಮಕ್ಕಳ ಸಮಸ್ಯೆ ಹಾಗೂ ಅವಶ್ಯಕತೆ ಯ ಬಗ್ಗೆ ಅಧ್ಯಯನಾತ್ಮಕ ಮಾಹಿತಿ ಇಲ್ಲ. ಸೂಕ್ತ ಕಾರ್ಯ ಯೋಜನೆಗಳ ಅನುಷ್ಠಾನಕ್ಕೆ ಅದು ತೀರಾ ಆವಶ್ಯವಾಗಿರುವುದನ್ನು ನಾವು ಗಮನಿಸಬೇಕಾಗುತ್ತದೆ.

**೧೩. ಜಿಲ್ಲೆಯ ಜನಪ್ರತಿನಿಧಿಗಳಲ್ಲಿ ಮಕ್ಕಳ ಸ್ನೇಹಿಮನೋಭಾವನೆ**

ತೀರಾ ಇತ್ತೀಚಿನವರೆಗೆ ಮಕ್ಕಳಹಕ್ಕುಗಳ ಹಿನ್ನೆಲೆಯಲ್ಲಿ ಅಭಿವೃದ್ಧಿ ಚಿಂತನೆಗಳು ನಡೆಯುತ್ತಿರಲಿಲ್ಲ, ಇಂದಿನ ಮಕ್ಕಳು ಮುಂದಿನ ಪ್ರಜೆಗಳು ಎನ್ನುವ ಹಿನ್ನೆಲೆಯಲ್ಲೇ ನೋಡಲಾಗುತಿತ್ತು. ಮತದಾನದ ಹಕ್ಕಿಲ್ಲದ ಇವರು ರಾಜಕೀಯ ಪ್ರಾಮುಖ್ಯತೆ ಹೊಂದಿರಲಿಲ್ಲ, ಆದರೆ ಮಕ್ಕಳ ನ್ಯಾಯ ಕಾಯಿದೆ ಚಾಲ್ತಿಗೆ ಬಂದಮೇಲೆ ಇಲಾಖೆಗಳ ಮೂಲಕ ಜನಪ್ರತಿನಿಧಿಗಳಲ್ಲಿ ಮಕ್ಕಳ ಕಡೆ ಸೂಕ್ಷ್ಮತೆ ಬೆಳೆಸುವ ಪ್ರಯತ್ನಗಳು ನಡೆದಿರುವ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳು ಮಕ್ಕಳ ಸ್ನೇಹಿ ಮನೋಭಾವನೆಗಳನ್ನು ಮೈಗೂಡಿಸಿಕೊಂಡಿರುವುದಾಗಿ ನಂಬಲಾದ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿದಾಗ ಈ ಕೆಳಗಿನಂತೆ ಫಲಿತ ಕಂಡುಕೊಳ್ಳಲಾಗಿದೆ,




ಉಡುಪಿ ಜಿಲ್ಲೆ ಮೂರು ತಾಲೂಕುಗಳನ್ನು ಒಳಗೊಂಡಿದ್ದು ವಿಧಾನ ಸಭಾ ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರು ರಾಜ್ಯ ಹಾಗೂ ಕೇಂದ್ರದಲ್ಲಿ



ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದಾರೆ. ಜನ ಸಂಖ್ಯೆಯ ಸುಮಾರು ಅರ್ಧದಷ್ಟಿರುವ ಮಕ್ಕಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಅಧ್ಯಯನದ ಅಂಗವಾಗಿ ಕೇಳಲಾದ ಪ್ರಶ್ನೆಗೆ ೫೧.೦೬% (೧೨೦ಮಂದಿ) ಇಲ್ಲ ಎಂದು ಉತ್ತರಿಸಿರುತ್ತಾರೆ. ೨೮.೯೪% (೬೮ಮಂದಿ) ಹೌದು ಎಂದು ಅಭಿಪ್ರಾಯಪಟ್ಟಿದ್ದರೆ ೨೦% (೭ಮಂದಿ) ಗೊತ್ತಿಲ್ಲ ಎಂದಿದ್ದಾರೆ.

ಅಧ್ಯಯನಕ್ಕೊಳಗಾದ ಬಹುಪಾಲು ಮಂದಿ ಅಭಿವೃದ್ಧಿಯ ಪಾಲುದಾರರಾದ ಜನಪ್ರತಿನಿಧಿಗಳು ಸಮಾಜದ ಸಮಸ್ಯೆಗಳನ್ನು ಪ್ರತಿನಿಧಿಸುತ್ತಿರುವರಾದರು ಅವರು ಮಕ್ಕಳ ಸ್ನೇಹಿಯಾಗಿಲ್ಲ ಎನ್ನುವುದು ಅಧ್ಯಯನದಲ್ಲಿ ಪಾಲ್ಗೊಂಡವರ ಅಭಿಪ್ರಾಯವಾಗಿದೆ.

**೧೪. ಸ್ಥಳೀಯ ಸರಕಾರ/ಪಂಚಾಯತ್ ಯೋಜನೆಗಳಲ್ಲಿ ಮಕ್ಕಳ ಸಮಸ್ಯೆಗಳಿಗೆ ಪ್ರಾಶಸ್ತ್ಯ**

ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಳವಡಿಸಿಕೊಂಡು ದಶಕಗಳೇ ಕಳೆದಿವೆ, ಪ್ರಜಾ ರಾಜ್ಯ ಜಾರಿಯಲ್ಲಿದೆ ಆದರೂ ಮಕ್ಕಳ ಸಮಸ್ಯೆಗಳನ್ನು ಪ್ರಾಶಸ್ತ್ಯದ ಆಧಾರದಲ್ಲಿ ಯೋಜನೆಗಳು ಕ್ರಿಯಾಯೋಜನೆಗಳಲ್ಲಿ ತರುವ ಪ್ರಕ್ರಿಯೆ ಇನ್ನೂ ಚುರುಕುಗೊಳ್ಳಬೇಕಿದೆ. ಈ ಹಿನ್ನೆಲೆಯೊಂದಿಗೆ ಪ್ರಸ್ಥುತ ಸ್ಥಿತಿಗತಿ ತಿಳಿದುಕೊಳ್ಳಲು ಕೇಳಲಾದ ಪ್ರಶ್ನೆಗೆ ಕೆಳಗಿನಂತೆ ಪ್ರತಿಕ್ರಿಯೆ ಬಂದಿರುತ್ತದೆ.




ಸ್ಥಳೀಯ ಸರಕಾರಗಳು ಮಕ್ಕಳ ಅಭಿವೃದ್ಧಿಯ ಪ್ರಮುಖ ಪಾಲುದಾರರಾಗಿದ್ದು ಸ್ಥಳೀಯ ಮಕ್ಕಳ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹರಿಸಲು ಬದ್ದರಾಗಿರುತ್ತಾರೆ. ಅಭಿವೃದ್ಧಿ ಯೋಜನೆಗಳಲ್ಲಿ ಮಕ್ಕಳ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಲು ಅವರು ಬದ್ದರಾಗಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಸ್ಥಳೀಯ ಸರಕಾರ, ಪಂಚಾಯತ್ ತನ್ನ ಯೋಜನೆಗಳಲ್ಲಿ



ಮಕ್ಕಳ ಸಮಸ್ಯೆಗೆ ಪ್ರಾಶಸ್ತ್ಯ ನೀಡುತ್ತಿವೆಯೇ ಎಂದು ಪ್ರಶ್ನೆಗೆ ೪೪.೬೮% (೧೦೫ ಮಂದಿ) ಇಲ್ಲ ಎಂದು ಉತ್ತರಿಸಿದರೆ ೩೪.೦೪(೮೦ಮಂದಿ) ಹೌದು ಎಂದಿದ್ದಾರೆ. ೨೦.೮೫% (೪೯ಮಂದಿ) ಗೊತ್ತಿಲ್ಲ ಎಂದು ಹೇಳಿರುತ್ತಾರೆ.

ಮಕ್ಕಳಿಗೆ ತಮ್ಮ ಸಂರಕ್ಷಣೆಯ ಹಕ್ಕು, ಸವಲತ್ತು ಮತ್ತು ವ್ಯವಸ್ಥೆಯ ಹಕ್ಕು ಮತ್ತು ಕುಂದುಕೊರತೆಗಳನ್ನು ಹೇಳಿಕೊಳ್ಳುವ ಹಾಗೂ ತಮ್ಮ ಬಗ್ಗೆ ತೀರ್ಮಾನವಾಗುವ ವಿಷಯಗಳ ಬಗ್ಗೆ ಚರ್ಚಿಸುವ ಸಲುವಾಗಿ ಸ್ಥಳೀಯ ಸರಕಾರದ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ನಡೆಸಿ ಮಕ್ಕಳಿಗೆ ಸಂಬಂಧಪಟ್ಟ ಮಾಹಿತಿ, ಸಮಸ್ಯೆಗಳನ್ನು ಮಕ್ಕಳಿಂದಲೇ ತಿಳಿದುಕೊಂಡು ಕ್ರಿಯಾಯೋಜನೆಗಳಲ್ಲಿ ಸೇರಿಸಿ ಅನುಷ್ಠಾನಗೊಳಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರಯತ್ನಗಳು ಆರಂಭವಾಗಿವೆಯಾದರೂ ಆಗಬೇಕಾದದ್ದು ಇನ್ನೂ ಬಹಳಷ್ಟಿದೆ.

**೧೫. ಮಕ್ಕಳಿಗೆ ಸಂಬಂಧಿಸಿದ ಇಲಾಖೆಗಳ ನಡುವೆ ಉತ್ತಮ ಸಂಘಟಿತ ಪ್ರಯತ್ನಗಳು ಮತ್ತು ಮಕ್ಕಳ ಅವಶ್ಯಕತೆಗಳಿಗೆ ಸ್ಪಂದನೆ**

ಅಭಿವೃದ್ಧಿಯ ಸಮಗ್ರ ಕಲ್ಪನೆ ಈಡೇರಬೇಕಾದರೆ ರಾಜಕೀಯ ಹಿತಾಸಕ್ತಿಯ ಅವಶ್ಯಕತೆ ಇದೆ. ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಶ್ರಮಿಸುವುದಕ್ಕಾಗಿಯೇ ಬದ್ಧತೆ ಹೊಂದಿರುವ ಇಲಾಖೆಗಳು ಸಂಘಟಿತ ಪ್ರಯತ್ನ ನಡೆಸಬೇಕಾಗುತ್ತದೆ. ಮಕ್ಕಳ ಹಕ್ಕು ಸಾಧನೆಗೆ ಬೇಕಾಗಿರುವ ಅವಶ್ಯಕತೆಗಳನ್ನು ಗುರುತಿಸಿ ತಮ್ಮವ್ಯಾಪ್ತಿಗೆ ಬರುವ ಅಂಶಗಳ ಕಡೆ ಗಮನಹರಿಸಿ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಗುರಿ ಸಾಧಿಸಬಹುದಾಗಿದೆ. ಈ ಕುರಿತು ಪ್ರಸ್ತುತ ಸ್ಥಿತಿಗತಿ ತಿಳಿದುಕೊಳ್ಳುವ ಪ್ರಯತ್ನದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಈ ಕೆಳಗಿನ ಉತ್ತರ ಕಂಡುಕೊಳ್ಳಲಾಯ್ತು.





ಒಂದು ಜಿಲ್ಲೆಯ ಮಕ್ಕಳ ಅಭಿವೃದ್ಧಿಗೆ ಪೂರಕವಾಗಿ ಮಕ್ಕಳ ಸಂಬಂಧಿ ಇಲಾಖೆಗಳು ಸಂಘಟಿತವಾಗಿ ಶ್ರಮಿಸುವುದು ಅನಿವಾರ್ಯ. ಉಡುಪಿ ಜಿಲ್ಲೆಯ ಮಕ್ಕಳ ಸಂಬಂಧಿ ಇಲಾಖೆಗಳು ಒಗ್ಗೂಡಿ ಮಕ್ಕಳ ಅವಶ್ಯಕತೆಗಳಿಗೆ ಸ್ಪಂದಿಸುತ್ತವೆಯೇ ಎಂಬ ಪ್ರಶ್ನೆಗೆ ೫೩.೬೨% (೧೨೬ ಮಂದಿ)ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ೨೮.೦೯%(೬೬ ಮಂದಿ) ಹೌದು ಎಂದಿದ್ದಾರೆ.೧೮.೩೦%(೪೩ ಮಂದಿ) ಗೊತ್ತಿಲ್ಲ ಅನ್ನುತ್ತಾರೆ.

ದೇಶದಲ್ಲಿ ಶಾಸನಾತ್ಮಕ ಅಂಗಗಳು, ನ್ಯಾಯಾಲಯಗಳು, ಅಧಿಕಾರಿಗಳು, ಸಾರ್ವಜನಿಕರು, ಖಾಸಗಿಯವರು, ಸಾಮಾಜಿಕ ಧಾರ್ಮಿಕ ಅಥವಾ ಸಾಂಸ್ಕೃತಿಕ ಸಂಸ್ಥೆಗಳು ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳಲ್ಲಿ ಹಾಕಿಕೊಳ್ಳುವ ಪ್ರತಿ ಯೋಜನೆಯಲ್ಲಿ ಮಕ್ಕಳ ಹಿತದೃಷ್ಟಿ ಮತ್ತು ಅವುಗಳಿಂದ ಮಕ್ಕಳ ಮೇಲಾಗುವ ಪರಿಣಾಮಗಳು ಇಲಾಖೆ, ಸಂಸ್ಥೆಗಳ ಕಾಳಜಿಯಾಗಬೇಕಿದೆ.

**೧೬. ಮಕ್ಕಳ ಸಂಬಂಧಿ ಕಾಯಿದೆಯಳ ಬಗ್ಗೆ ಮಕ್ಕಳ ಅಭಿವೃದ್ಧಿಯ ಪಾಲುದಾರರಲ್ಲಿ ಅರಿವು**

ಮಕ್ಕಳ ಹಕ್ಕುಗಳ ಪರಿಕಲ್ಪನೆಯನ್ನು ಅರ್ಥೈಸಿಕೊಂಡು ಕಾರ್ಯರೂಪಕ್ಕೆ ಇಳಿದಾಗ ಮಾತ್ರ ಕಾನೂನುಬದ್ಧವಾಗಿ ಪ್ರಯತ್ನಮಾಡಲು ಸಾಧ್ಯವಾಗುತ್ತದೆ ಎನ್ನುವ ವಿಚಾರದಲ್ಲಿ ಅಭಿವೃದ್ಧಿಯ ಪಾಲುದಾರರು ಮಕ್ಕಳ ಸಂಬಂಧಿ ಕಾಯಿದೆ, ನೀತಿಗಳ ಅರಿವು ಹೊಂದಿದ್ದಾರೆಯೇ ಎನ್ನುವುದನ್ನು ಅರ್ಥಮಾಡಿಕೊಳ್ಳಲುವ ಸಲುವಾಗಿ ಕೇಳಲಾದ ಪ್ರಶ್ನೆಗೆ ಬಂದ ಉತ್ತರ ಈ ಕೆಳಗಿನ ಚಾರ್ಟ್‌ನಲ್ಲಿ ವಿವರಿಸಲಾಗಿದೆ.




ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ಸಂಬಂಧಿ ಕಾಯಿದೆಗಳನ್ನು ವಿಶ್ವ ಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ರೂಪಿಸಿ ಚಾಲ್ತಿಗೆ ತರಲಾಗಿದೆ ಈ ಕಾಯಿದೆಗಳ ಬಗ್ಗೆ ಮಕ್ಕಳ ಅಭಿವೃದ್ಧಿಯ ಪಾಲುದಾರರಾದ ಶಿಕ್ಷಕರು, ಪೋಷಕರು, ಇಲಾಖೆ, ಪಂಚಾಯತ್ ಗಳಿಗೆ ಕಾಯಿದೆಗಳ ಅರಿವು ಇದೆಯೇ? ಎನ್ನುವ ಪ್ರಶ್ನೆಗೆ ೪೭.೨% (೧೧೧ಮಂದಿ) ಇಲ್ಲ ಎಂದರೆ ೩೬.೨೬% (೭೧ಮಂದಿ) ಹೌದು ಎಂದೂ, ೨೨.೪% (೫೩ಮಂದಿ) ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ.

ಮಕ್ಕಳ ಹಕ್ಕುಗಳ ಅನುಷ್ಠಾನದಲ್ಲಿ ಪಾಲುದಾರರು ಬಹಳ ಮುಖ್ಯ ಪಾತ್ರ ವಹಿಸುತ್ತಾರೆ. ಅವರಿಗೆ ಅರಿವು ನೀಡಿ ಅವರ ಸ್ಪಂದನೆ ಪ್ರತಿಸ್ಪಂದನೆಗಳನ್ನು ಗಣನೆಗೆ ತೆಗೆದುಕೊಂಡಾಗ ಮಾತ್ರ ಸಮಾಜದಲ್ಲಿ ಅರ್ಥಪೂರ್ಣವಾಗಿ ಮಕ್ಕಳ ರಕ್ಷಣೆ ನಡೆಯುತ್ತದೆ. ಹಾಗಾಗಿ ಮಕ್ಕಳ ಹಕ್ಕುಗಳ ಪಾಲಕರಲ್ಲಿ ನಿರಂತರ ಅರಿವು ಮೂಡಿಸುವುದು ಅವಶ್ಯಕ.

**೧೭. ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಣೆಯ ಕುರಿತು:**


ಮಕ್ಕಳಿಗೆ ಅದರಲ್ಲೂ ಮುಖ್ಯವಾಗಿ ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳಿಗೆ ತಕ್ಷಣ ಒದಗಿಬರುವಂತಾಗಲು ಮಕ್ಕಳ ಸಹಾಯವಾಣಿ ಕಾರ್ಯನಿರ್ವಹಿಸುತ್ತಿವೆ. ಉಡುಪಿ ಜಿಲ್ಲೆಯಲ್ಲಿನ ಮಕ್ಕಳು ಇನ್ನೂ ಪಕ್ಕದ ಜಿಲ್ಲೆಯ ಸಹಾಯವಾಣಿ ಕೇಂದ್ರದ ಮೇಲೆ ನಂಬಿಕೊಂಡಿರುವ ಬಗ್ಗೆ ಅಧ್ಯನಕ್ಕೊಳಗಾದ ಮಂದಿಯಲ್ಲಿ ಮಾಹಿತಿ ಇದೆಯಾ ಎಂದು ಪ್ರಶ್ನೆಗೆ ೪೫.೯೬%(೧೦೮ಮಂದಿ) ಇಲ್ಲ ಎಂದರೆ ೩೦.೬೪% (೭೨ಮಂದಿ)ಹೌದು ಎಂದರೆ ೨೩.೪% (೫೫ಮಂದಿ) ಗೊತ್ತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.



ಮಕ್ಕಳ ರಕ್ಷಣೆಯಲ್ಲಿ ಮಕ್ಕಳ ಸಹಾಯವಾಣಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿ ನಿಯಮಬದ್ಧವಾಗಿ ಕಾರ್ಯನಿರ್ವಹಿಸುವಂತೆ ಮಕ್ಕಳ ಸಂಬಂಧಿ ಇಲಾಖೆಗಳು ಕಾರ್ಯೋನ್ಮುಖವಾಗಬೇಕಿದೆ. ಹಾಗಾದಲ್ಲಿ ಮಾತ್ರ ಮಕ್ಕಳ ರಕ್ಷಣೆ ಸಮಾಜಮುಖಿಯಾಗಿ ಕಾರ್ಯಗತಗೊಳ್ಳುತ್ತದೆ.

**೧೮. ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಮಗು ಸ್ನೇಹಿ ವಾತಾವರಣವಿದೆಯೇ?**

ಮಕ್ಕಳ ರಕ್ಷಣೆಯ ವಿಚಾರಬಂದಾಗ ಪೋಲೀಸ್ ವ್ಯವಸ್ಥೆ ತನ್ನದೇ ಆದ ಪಾತ್ರ ವಹಿಸುತ್ತದೆ. ಮಕ್ಕಳ ನ್ಯಾಯಕಾಯಿದೆಯಲ್ಲಿ ಪೋಲೀಸರ ಪಾತ್ರವನ್ನು ಸುಸ್ಪಷ್ಟವಾಗಿ ನಮೂದಿಸಲಾಗಿದೆ. ಮಕ್ಕಳ ಮತ್ತು ಪೋಲೀಸರ ನಡುವೆ ಭಯವಿರದ ವಾತಾವರಣದಲ್ಲಿ ಕೆಲಸಗಳು ಸಾಧನೆಯಾಗಬೇಕಾದ್ದರೆ ಪೋಲೀಸ್ ವ್ಯವಸ್ಥೆ ಮಕ್ಕಳ ಸ್ನೇಹಿ ಆಗಿರಬೇಕು. ಉಡುಪಿ ಜಿಲ್ಲೆಯ ಪೋಲೀಸ್ ಠಾಣೆಗಳು ಮಗುಸ್ನೇಹಿಯಾಗಿ ವರ್ತಿಸುತ್ತಿವೆಯೇ ಎಂದು ಕೇಳಲಾದ ಪ್ರಶ್ನೆಗೆ ದೊರಕಿದ ಉತ್ತರ ಈ ಕೆಳಗಿದೆ.




ರಕ್ಷಣೆಯ ಅನಿವಾರ್ಯ ಅಂಗವಾಗಿರುವ ಪೋಲಿಸ್ ವ್ಯವಸ್ಥೆ ಮಕ್ಕಳ ರಕ್ಷಣೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತಾರೆ. ರಕ್ಷಕರೆನಿಸಿಕೊಂಡಿರುವ ಪೋಲೀಸರ ಠಾಣೆಗಳಲ್ಲಿ ಮಗು ಸ್ನೇಹಿ ವಾತಾವರಣವಿದೆಯೇ ಎನ್ನುವ ಪೆಶ್ನೆಗೆ ೪೫.೧೧% (೧೧ ಮಂದಿ) ಇಲ್ಲ ಎಂದರೆ ೩೨.೭೭% (೬೯ಮಂದಿ) ಹೌದು ಎಂದಿದ್ದು ೨೨.೯೮% (೫೧ಮಂದಿ) ಗೊತ್ತಿಲ್ಲ ಎಂದಿರುತ್ತಾರೆ.


ಒಟ್ಟು ರಕ್ಷಣಾ ವ್ಯವಸ್ಥೆಯಲ್ಲಿ ಪೋಲೀಸ್ ವ್ಯವಸ್ಥೆ ತನ್ನ ಪಾತ್ರವನ್ನು ನಿರ್ವಹಿಸುವುದಕ್ಕಿಂತಲೂ ಹೆಚ್ಚಾಗಿ ಮಕ್ಕಳ ರಕ್ಷಣೆಯಲ್ಲಿ ಕಾರ್ಯತಂತ್ರಗಳ ಮೂಲಕ



ಇತರ ವ್ಯವಸ್ಥೆಗಳೊಂದಿಗೆ ಕೈಜೋಡಿಸಿ ಕೆಲಸ ಮಾಡಿದರೆ ಜಿಲ್ಲೆಯಲ್ಲಿನ ಮಕ್ಕಳು ತಮ್ಮ ನಾಗರಿಕ ಪಾತ್ರವನ್ನು ಅರ್ಥಪೂರ್ಣವಾಗಿ ನಿರ್ವಹಿಸುತ್ತಾ ಬೆಳೆದು ಕ್ರೌರ್ಯರಹಿತ ಸಮಾಜಕ್ಕೆ ನಾಂದಿಯಾಗಬಹುದು.

**೧೯. ಜಿಲ್ಲೆಯ ಮಕ್ಕಳ ಜೊತೆ ಕೆಲಸ ಮಾಡುವ ಎಲ್ಲಾ ಸಂಸ್ಥೆಗಳು ಮಕ್ಕಳ ಕಾಯಿದೆಯಡಿ ನೋಂದಾಯಿತವಾಗಿರುವ ಬಗ್ಗೆ:**

ಮಕ್ಕಳ ನ್ಯಾಯಕಾಯಿದೆ ಜಾರಿಗೊಂಡಮೇಲೆ ಮಕ್ಕಳ ರಕ್ಷಣೆ ಪೋಷಣೆಯಲ್ಲಿ ತೊಡಗಿಕೊಂಡಿರುವ ಸ್ವಯಂ ಸೇವಾಸಂಸ್ಥೆಗಳನ್ನು ಗುರುತಿಸಿ ಅವರನ್ನು ಅರ್ಹ ಸಂಸ್ಥೆಗಳಾಗಿ ಪರಿವರ್ತಿಸಿ ಏಕರೂಪದ ಸಾಂಸ್ಥಿಕ ವ್ಯವಸ್ಥೆಯಿರುವ ಮಗುಸ್ನೇಹಿ ವಾತಾವರಣ ಮಕ್ಕಳಿಗೆ ಒದಗಿಸಬೇಕು ಎನ್ನುವ ಆಶಯಹೊಂದಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಬಹಳಷ್ಟು ಸಂಘ ಸಂಸ್ಥೆಗಳು ಸಾಂಸ್ಥಿಕ ಹಾಗೂ ಅಸಾಂಸ್ಥಿಕ ಪ್ರಯತ್ನಗಳಿಂದ ಮಕ್ಕಳ ಬಗ್ಗೆ ಕೆಲಸಮಾಡುತ್ತಿವೆ. ಈ ಸಂಸ್ಥೆಗಳು ಮಕ್ಕಳ ನ್ಯಾಯ ಕಾಯಿದೆಯಡಿಯಲ್ಲಿ ನೊಂದಾಯಿತವಾಗಿದೆಯೇ ಎಂದು ನೋಡಿದಾಗ ಈ ಕೆಳಗಿನ ಮಾಹಿತಿ ದೊರಕುತ್ತದೆ.




ಜಿಲ್ಲೆಯ ಮಕ್ಕಳ ಜೊತೆ ಕೆಲಸ ಮಾಡುವ ಎಲ್ಲಾ ಸಂಸ್ಥೆಗಳು ಮಕ್ಕಳ ಕಾಯಿದೆಯಡಿ ನೋಂದಾಯಿತವಾಗಿವೆಯೇ? ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆಯೇ? ಎನ್ನುವ ಪ್ರಶ್ನೆಗೆ ೪೭.೨೩% (೧೨೮ಮಂದಿ) ಇಲ್ಲಿ ಎಂದರೆ ೨೯.೩೬%(೭೪ಮಂದಿ) ಹೌದು ಎಂದಿದ್ದಾರೆ ೨೨.೬% (೩೪ಮಂದಿ) ಗೊತ್ತಿಲ್ಲ ಎಂದಿದ್ದಾರೆ.


ತೀರಾ ಇತ್ತೀಚಿನವರೆಗೆ ಅಂದರೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಚಿತವಾಗಿ ಕಾರ್ಯನಿರ್ವಹಿಸಲು ಆರಂಭಿಸುವವರೆಗೂ ಜಿಲ್ಲೆಯಲ್ಲಿ ಮಕ್ಕಳೊಂದಿಗೆ ಕೆಲಸ ಮಾಡುವ



ಸಂಸ್ಥೆಗಳು ನಿಯಮಾನುಸಾರ ನೊಂದಾವಣೆ ಗೊಂಡಿರಲಿಲ್ಲ. ಆದರೆ ಪ್ರಸ್ಥುತ ೨೬ ಸಂಸ್ಥೆಗಳನ್ನು ಮುಖ್ಯವಾಹಿನಿಗೆ ತರಲಾಗಿದೆ. ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳನ್ನು ನಡೆಸಿದಲ್ಲಿ ಮಾತ್ರ ಜಿಲ್ಲೆಯ ಸಂಸ್ಥೆಗಳು ಕಾನೂನುಬದ್ದವಾಗಿ ಕೆಲಸಮಾಡಬಹುದಾಗಿದೆ.

**೨೦ ನ್ಯಾಯ ವ್ಯವಸ್ಥೆ(ನ್ಯಾಯಾಲಯ)ಗಳಲ್ಲಿ ಮಕ್ಕಳ ಸ್ನೇಹಿಯಾಗಿವೆಯೇ?**

ಮಕ್ಕಳ ರಕ್ಷಣೆ, ಅಭಿವೃದ್ಧಿಯಲ್ಲಿ ನ್ಯಾಯವ್ಯವಸ್ಥೆಯ ಮಹತ್ವದ ಪಾತ್ರವಿದೆ. ಮುಖ್ಯವಾಗಿ ತಪ್ಪು ಮಾಡಿದ ಮಕ್ಕಳು ಅಥವಾ ಕಾನೂನಿನ ಸಂಘರ್ಷದಲ್ಲಿರುವ ಮಕ್ಕಳಿಗೆ ಮತ್ತು ದೌರ್ಜನ್ಯದಿಂದ ನೊಂದ ಮಕ್ಕಳಿಗೆ ನ್ಯಾಯಾಲಯದಲ್ಲಿ ನ್ಯಾಯದೊರಕಿಸಲು ಮಕ್ಕಳ ಸ್ನೇಹಿ ವಾತಾವರಣ ಅವಶ್ಯಕವಾಗುತ್ತದೆ. ಅದರ ಬಗ್ಗೆ ಅಧ್ಯಯನದಲ್ಲಿ ಕೇಳಲಾದ ಪ್ರಶ್ನೆಗೆ ಈ ಕೆಳಗಿನಂತೆ ಪ್ರತಿಕ್ರಿಯೆ ದೊರಕಿರುತ್ತದೆ.




ಮಕ್ಕಳ ಹಕ್ಕುಗಳ ವಿಚಾರಕ್ಕೆ ಬಂದರೆ ನ್ಯಾಯ ವ್ಯವಸ್ಥೆ ಆಶಾದಾಯಕ ಪಾತ್ರ ಹೊಂದಿದೆ. ನಮ್ಮ ನ್ಯಾಯ ವ್ಯವಸ್ಥೆ (ನ್ಯಾಯಾಲಯಗಳು) ಮಕ್ಕಳ ಸ್ನೇಹಿಯಾಗಿವೆಯೇ ಎನ್ನುವ ಪ್ರಶ್ನೆಗೆ ೫೪.೨%(೧೨೮) ಇಲ್ಲಿ ಎಂದಿರುತ್ತಾರೆ ೩೧.೪%(೭೪) ಮಂದಿ ಹೌದು ಎನ್ನುತ್ತಾರೆ ೧೪.೪%(೩೪ಮಂದಿ) ಗೊತ್ತಿಲ್ಲ ಎಂದು ಪ್ರತಿಕ್ರಿಯಿಸುತ್ತಾರೆ.

ಜಿಲ್ಲಾ ನ್ಯಾಯಾಲಯಗಳು ಮಕ್ಕಳ ಹಕ್ಕು ಉಲ್ಲಂಘನೆ ಹತ್ತಿಕ್ಕುವಲ್ಲಿ ಜವಾಬ್ದಾರಿಯುತ ಪಾತ್ರ ನಿರ್ವಹಿಸುವುದು ಒಂದು ಜಿಲ್ಲೆಯ ಮಕ್ಕಳ ರಕ್ಷಣೆಯ ಪ್ರಮುಖ ಲಕ್ಷಣ ಅನಿಸಿಕೊಂಡಿದೆ. ಉಡುಪಿ ಜಿಲ್ಲೆಯ ನ್ಯಾಯ ವ್ಯವಸ್ಥೆ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ದಾರಿ ಸಾಗಬೇಕಾಗಿದೆ. ಮಕ್ಕಳ ರಕ್ಷಣೆಯ ಒಳಹುಗಳನ್ನು ಸೂಕ್ಷ್ಮತೆಯಿಂದ ಅರ್ಥಮಾಡಿಕೊಂಡರೆ ಮಾತ್ರ ಮಕ್ಕಳಿಗೆ ಯೋಗ್ಯ ಸಮಾಜ ನಿರ್ಮಾಣವಾಗುವುದರಲ್ಲಿ ಸಂಶಯವಿಲ್ಲ.



## ಅನುಷಂಗಿಕ ದತ್ತಾಂಶ ಹಾಗೂ ಕೇಂದ್ರಿತ ಗುಂಪು ಚರ್ಚೆಗಳು

### ಅನುಷಂಗಿಕ ದತ್ತಾಂಶದ ಫಲಿತಗಳು

೧. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಅಂಕಿ ಅಂಶಗಳು ತೋರಿಸುವಂತೆ ಕಳೆದ ದಶಕದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಕಡಿದಾದ ಇಳಿಕೆಯಾಗಿದೆ. ೨೦೦೧ರಲ್ಲಿ ಲಿಂಗಾನುಪಾತ ೧೦೦೦ಕ್ಕೆ ೧೧೩೦ ಹಾಗೂ ೨೦೧೧ರಲ್ಲಿ ೧೯೪ ಆಗಿದೆ. ಮಕ್ಕಳ ಲಿಂಗಾನುಪಾತ ೦–೬ವರ್ಷ ವಯಸ್ಸಿನಲ್ಲಿ ೨೦೦೧ನೇ ವರ್ಷದಲ್ಲಿ ೯೫೮ ಆಗಿದೆ. ಪ್ರಸ್ತುತ ದಶಕದಲ್ಲಿ ಕೇವಲ ೬೫,೧೧೮ ಮಂದಿ ಹಾಗೂ ಇವರಲ್ಲಿ ಕೇವಲ ೨೫,೨೧೮ ಹೆಣ್ಣುಮಕ್ಕಳು ಹಾಗೂ ಅಳಿದ ೩೯,೯೦೦೦ ಗಂಡು ಮಕ್ಕಳಾಗಿರುತ್ತಾರೆ. ಅಂಕಿ ಅಂಶಗಳು ತೋರಿಸುವಂತೆ ಹೆಣ್ಣುಮಕ್ಕಳಿಗಿಂತ ೧೪೦೦೦ ಹೆಚ್ಚುವರಿ ಗಂಡು ಮಕ್ಕಳಿದ್ದಾರೆ. ೪೫ ಶೇಕಡಾ ಬಾಣಂತಿಯರು ಹೆತ್ತು ಒಂದು ಗಂಟೆಯೊಳಗೆ ಮಗುವಿಗೆ ಸ್ತನಪಾನ ಮಾಡಿಸುವುದಿಲ್ಲ.

೨. ೧೭೨ ಮಂದಿ ಭಾಗ್ಯಲಕ್ಷ್ಮಿ ಯೋಜನೆಯಿಂದ (ಬಿ.ಪಿ.ಎಲ್) ಪ್ರಯೋಜನ ಪಡೆದಿದ್ದಾರೆ.

೩. ೨,೫೩,೧೫೯ ವಿದ್ಯಾರ್ಥಿಗಳು ೨೫೦೬ (ಶಾಲಾ ಪೂರ್ವ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ, ವಿದೇಶಾಂಗ) ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಕಿಂಡರ್ ಗಾರ್ಟನ್ (ಕೆ.ಜಿ)ಶಾಲೆಗಳ ಮಾಹಿತಿ ಲಭ್ಯವಿಲ್ಲ. ಶಾಲೆಯಿಂದ ಹೊರಗುಳಿದ/ಪದವಿಪೂರ್ವ/ಅಂಗನವಾಡಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಮಾಹಿತಿ ಲಭ್ಯವಿಲ್ಲ.

೪. ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ದಾಖಲೆಗಳಿಗನ್ವಯ ೪೧೧ ಮಕ್ಕಳು ಕುಪೋಷಿತರಾಗಿದ್ದಾರೆ ಹಾಗೂ ೬,೭೧೧ ಮಕ್ಕಳು ಸಾಧಾರಣ ಪೋಷಣೆ ಹೊಂದಿದ್ದಾರೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳು ಈಗಾಗಲೇ ಆ ಬಗ್ಗೆ ಕ್ರಮ ಕೈಗೊಂಡಿದ್ದಾರೆ.

೫. ಜಿಲ್ಲೆಯಲ್ಲಿ ತಂದೆ–ತಾಯಿಗಳೆಲ್ಲರ ೧೭೫ ಅನಾಥ ಮಕ್ಕಳಿದ್ದಾರೆ ೫೯ ಮಕ್ಕಳು ತಂದೆಯನ್ನು ಕಳೆದುಕೊಂಡಿರುತ್ತಾರೆ. ೯೭೧ ಮಂದಿಗೆ ತಾಯಿಯ ರಕ್ಷಣೆ ಇಲ್ಲ. ಒಟ್ಟಾರೆ ೨೭೦೫ ಮಕ್ಕಳಿಗೆ ಏಕ ಪೋಷಕರಿದ್ದಾರೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ೧೩೫ ಮಕ್ಕಳಿಗೆ ವೇತನ ನೀಡಲಾಗುತ್ತಿದೆ.

೬. ಸರ್ವ ಶಿಕ್ಷಣ ಅಭಿಯಾನದ ೨೦೧೨ರ ದತ್ತಾಂಶಗಳ ಪ್ರಕಾರ ೨೧೩ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಅದರಲ್ಲಿ ಸುಮಾರು ೫೦ಶೇಕಡಾ ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದವರಾಗಿದ್ದಾರೆ.

೭. ಸುಮಾರು ೧೧೩೨೦ ವಿದ್ಯಾರ್ಥಿಗಳು ಜಿಲ್ಲೆಯ ೭೮ ಸಾರ್ವಜನಿಕ ಹಾಗೂ ಖಾಸಗಿ ವಸತಿನಿಲಯಗಳಲ್ಲಿದ್ದು ಕಲಿಯುತ್ತಿದಾರೆ.

೮. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಲ್ಲಿ ೪೯ ಶೇಕಡಾ ಸೀಟುಗಳು ಖಾಲಿ ಇವೆ.

೯. ಜಿಲ್ಲೆಯ ೧೪ ವಿಶೇಷ ಶಾಲೆಗಳಲ್ಲಿ ೫೯೭ ವಿಶೇಷ ಸಾಮರ್ಥ್ಯವುಳ್ಳ ಮಕ್ಕಳೂ ಶಿಕ್ಷಣ ಪಡೆಯುತ್ತಿದ್ದಾರೆ. ಈ ಮಕ್ಕಳಿಗೆ ಕಲಿಸಲು ಸೂಕ್ತ ವಿಶೇಷ ತರಬೇತಿ ಹೊಂದಿದ ಶಿಕ್ಷಕರ ಕೊರತೆ ಜಿಲ್ಲಾಡಳಿತಕ್ಕೆ ದೊಡ್ಡ ಸವಾಲಾಗಿದೆ.

೧೦. ೨೦೧೨ರ ಸರ್ವ ಶಿಕ್ಷಣ ಅಭಿಯಾನದ ದಾಖಲೆಗಳ ಪ್ರಕಾರ ಜಿಲ್ಲೆಯಲ್ಲಿ ೧೬೫೭ಮಂದಿ ವಿಶೇಷ ಸಾಮರ್ಥ್ಯವುಳ್ಳ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಈ ಶಿಕ್ಷಣದ ಪರಿಣಾಮಕಾರಿತ್ವವನ್ನು ಮುಂದೆ ಸಂಶೋಧಿಸಬೇಕಾಗಿದೆ.

೧೧. ಸರ್ವ ಶಿಕ್ಷಣ ಅಭಿಯಾನ ಆಯೋಜಿಸಿದ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಒಟ್ಟು ೬೪೩ ಮಕ್ಕಳಲ್ಲಿ ೪೧೬ ಪ್ರಾಥಮಿಕ ಶಾಲೆಯಲ್ಲಿ ಹಾಗೂ ೨೨೭ ಪ್ರೌಢಶಾಲಾ ವಿದ್ಯಾರ್ಥಿಗಳು ಆಪ್ರಮುಖ ಕೆಲವರಿಗೆ ಸೂಕ್ತ ಉಂತ್ರೋಪಕರಣವನ್ನು ನೀಡಲಾಗಿದೆ. ಆದರೆ ವಿಶೇಷ ಸಾಮರ್ಥ್ಯದ ಮಕ್ಕಳ ನಿಖರ ಮಾಹಿತಿಗಳಿಲ್ಲ.

೧೨. ಕಳೆದ ಒಂದು ವರ್ಷದಲ್ಲಿ ಕಾರ್ಮಿಕ ಇಲಾಖೆ ೯ ಮಂದಿ ಬಾಲಕಾರ್ಮಿಕರನ್ನು ರಕ್ಷಿಸಿದೆ. ಅವರಲ್ಲಿ ೭ಮದಿ ವಲಸಿಗರ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಮತ್ತು ಹೋಟೆಲ್ ಬಾರ್ ಅಥವಾ ಬಸ್‌ಗಳಲ್ಲಿ ದುಡಿಯುತ್ತಿರುವುದು ಕಾಣುತ್ತೇವೆ ಎರಡು ಘಟನೆಗಳಲ್ಲಿ ವ್ಯಾಖ್ಯಾನ ಇರಿಸಿಕೊಳ್ಳುವುದು ಹಾಗೂ ವಯಸ್ಸಿನ ಧೃಡೀಕರಣದ ಬಗ್ಗೆ ತಾಂತ್ರಿಕ ಸಮಸ್ಯೆಯನ್ನು ಎದುರಿಸಬೇಕಾಯ್ತು. ಹೀಗೆ ರಕ್ಷಿಸಲಾದ ಮಕ್ಕಳಿಗೆ ಮಕ್ಕಳ ನ್ಯಾಯ ಕಾಯಿದೆಗನುಗುಣವಾಗಿ ಪುನರ್ವಸತಿ ಕಲ್ಪಿಸುವುದು ಉಡುಪಿ ಜಿಲ್ಲೆಯಲ್ಲಿ ಸವಾಲು ಎಣಿಸಿಕೊಂಡಿದೆ.

೧೩. ೩೦ ವಲಸಿಗ ಮಕ್ಕಳು ಬಿಕ್ಷೆ ಎತ್ತುತ್ತಿದವರನ್ನು ಸರ್ಕಾರೇತರ ಸಂಸ್ಥೆಗಳು ಇಲಾಖೆಯ

ಸಹಯೋಗದಲ್ಲಿ ಸಮಾಜಕಾರ್ಯ ವಿದ್ಯಾರ್ಥಿಗಳು ಅವರನ್ನು ಮಕ್ಕಳ ಕಲ್ಯಾಣ ಸಮಿತಿಯೆದುರು ಹಾಜರು ಪಡಿಸಿದರು. ಆದರೆ ಪರಿಣಾಮ ಶೂನ್ಯ ಮತ್ತೆ ಅವರು ತಮ್ಮ ಹೆತ್ತವರ ಹಾಗೂ ಸಹವರ್ತಿಗಳ ಜೊತೆ ಬಿಕ್ಷೆಗೆ ಜಾರಿದರು.

೧೪. ಪಡಿ, ವೆಲೊರೆಡ್ ಎಂಬ ಸ್ವಯಂ ಸೇವಾ ಸಂಸ್ಥೆ ಇಲಾಖೆಯ ಸಹಾಯದಿಂದ ಶಾಲೆಯಿಂದ ಹೊರಗುಳಿದಿರುವ ೪೦ ಮಕ್ಕಳನ್ನು ವಲಸೆ ಬಂದ ಕಟ್ಟಡ ಕಾರ್ಮಿಕರ ಶಿಬಿರದಿಂದ ರಕ್ಷಿಸಿದರು ನಂತರ ಶಿಕ್ಷಣ ಇಲಾಖೆಯವರು ಅವರನ್ನು ಶಾಲೆಗೆ ಕಳುಹಿಸುವ ವ್ಯವಸ್ಥೆಮಾಡಿದರು. ಹುಡುಕಾಟವನ್ನು ಕಾರ್ಮಿಕ, ಆರೋಗ್ಯ ಹಾಗೂ ಶಿಕ್ಷಣ ಇಲಾಖೆಯವರು ನಡೆಸಿದರು.

೧೫. ೨೦೧೫ರ ಆಗಸ್ಟ್ ತಿಂಗಳಲ್ಲಿ ಬಾಳಿಗಾ ಆಸ್ಪತ್ರೆಯಲ್ಲಿ ನಿರ್ವ್ಯಸನ ಶಿಬಿರಕ್ಕೆ ನೊಂದಾಯಿಸಲಾದ ೨೧೬ ಮಂದಿಯಲ್ಲಿ, ಅವರಲ್ಲಿ ೩ಮಂದಿ ೧೮ವರ್ಷದ ಒಳಗಿನವರು ಮತ್ತು ೩೭ ಮಂದಿ ೧೮ವರ್ಷದೊಳಗಿನ ಪ್ರಾಯದಲ್ಲೇ ಕುಡಿತಕ್ಕೆ ಬಲಿಯಾದವರು, ಮಣಿಪಾಲ ಮತ್ತು ಉಡುಪಿಯಲ್ಲಿ ಡ್ರಗ್ಸ್ ಸೇವನೆ ಹೆಚ್ಚಾಗಿ ಕಾಣುತ್ತಿದೆ. ಆದರೂ ಮಧ್ಯ ಹಾಗೂ ಮಾದಕ ದ್ರವ್ಯವಸನಿಗಳ ಬಗ್ಗೆ ಅಂಕಿ ಅಂಶಗಳು ಲಭ್ಯವಿಲ್ಲ.

೧೬. ಆಡಳಿತದೊಂದಿಗೆ ಹದಿಹರೆಯದ ಮಕ್ಕಳ ಅಂಕಿ ಸಂಖ್ಯೆ ಹಾಗೂ ಮಾಹಿತಿ ಲಭ್ಯವಿರುವುದಿಲ್ಲ. ಹದಿಹರೆಯದ ಮಕ್ಕಳನ್ನು ರಕ್ಷಣಾ ಜಾಲದೊಳಗೆ ತರುವುದು ಒಂದು ಸವಾಲು ಎಣಿಸಿಕೊಂಡಿದೆ.

೧೭. ಉಡುಪಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಾರ್ಡ್ ಸಂಸ್ಥೆ ಗುರುತಿಸಿರುವ ೫೮೭ ಲೈಂಗಿಕ ಕಾರ್ಯ ನಿರತದಲ್ಲಿ ೪೦೦ ಮಂದಿ ಮಕ್ಕಳು, ಆದರೆ ನಿಖರ ದತ್ತಾಂಶ ಲಭ್ಯವಿಲ್ಲ. ಮಕ್ಕಳಿಗೆ ರಕ್ಷಣೆಯ ಅವಶ್ಯಕತೆ ಇದೆ. ಆದರೆ ಸಾರ್ವಜನಿಕರಿಗೆ ಈ ವಿಷಯ ತಿಳಿದಿಲ್ಲ.

೧೮. ಜಿಲ್ಲಾ ಏಡ್ಸ್ ನಿಯಂತ್ರಣಾ ಸಂಸ್ಥೆಯಲ್ಲಿ ೪೯೯ ಮಕ್ಕಳು ಎಚ್.ಐ.ವಿ ಭಾದಿತ ಅಥವಾ ಸೋಂಕಿತರೆಂದು ಗುರುತಿಸಲ್ಪಟ್ಟಿದ್ದಾರೆ. ಅವರಲ್ಲಿ ೧೨೬ ಮಂದಿ ಸೋಂಕಿತರಾಗಿದ್ದಾರೆ ೩೪೩ ಮಂದಿ ಬಾಧಿತರಾಗಿದ್ದಾರೆ. ಅವರ ಪೈಕಿ ೧೩೫ ಮಂದಿಗೆ ಮಾತ್ರ ವೇತನ (ಗೌರವಧನ) ಅಥವಾ ಪ್ರಾಯೋಜಕತ್ವ ನೀಡಲಾಗಿದೆ.

ಇಂತಹ ಮಕ್ಕಳಿಗೆ/ದೊಡ್ಡವರಿಗೆ ನೋಡಿಕೊಳ್ಳುವ ಸಂಸ್ಥೆ ಇರುವುದಿಲ್ಲ. ಏಕ ಪೋಷಕ ಹೊಂದಿದ ಅಥವಾ ಪೋಷಕರಿಲ್ಲದ ಮಕ್ಕಳು ತಮ್ಮ ಜೀವನ ನಿರ್ವಹಣೆಗೆ ಪಾಡು ಪಡುವಂತಾಗಿದೆ.

೧೯. ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯ ಮಂಡಳಿ. ವಿಶೇಷ ಮಕ್ಕಳ ಪೋಲಿಸ್ ಘಟಕ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬಾಲ ಕಾರ್ಮಿಕರ ಪುನರ್ವಸತಿಗಳು ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತಿವೆ.

೨೦. ಮಕ್ಕಳ ಸಹಾಯವಾಣಿ ೧೦೯೮ ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಇದು ಒಂದು ಹಿನ್ನಡೆ ಆಗಿದೆ. ಮತ್ತು ಅದು ರಕ್ಷಣೆ ಮತ್ತು ಪೋಷಣೆಯ ಅವಶ್ಯಕತೆ ಇರುವ ಮಕ್ಕಳೂ ಯೋಗ್ಯ ಹಾಗು ಗುಣಮಟ್ಟದ ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡಿದೆ.

೨೧. ಉಡುಪಿ ಜಿಲ್ಲೆಯಲ್ಲಿ ಗಂಡು ಮಕ್ಕಳಿಗೆ ತೀರಾ ಇತ್ತೀಚಿನ ವರೆಗೆ ವೀಕ್ಷಣಾಲಯ ಹಾಗೂ ಬಾಲಕರ ಬಾಲಮಂದಿರ ಇರಲಿಲ್ಲ.

೨೨. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ನಿರ್ವಹಿಸಿದ ೧೦೬ ಮಕ್ಕಳ ಪ್ರಕರಣಗಳಲ್ಲಿ ೪೫ ಮಂದಿ ಗಂಡುಮಕ್ಕಳಿಗೆ ಸಂಬಂಧಿಸಿದ್ದಾಗಿದ್ದು, ೬೧ ಹೆಣ್ಣುಮಕ್ಕಳಿದ್ದು ಮತ್ತು ಅವರನ್ನು ಬೇರೆ ಬೇರೆ ಸಾಂಸ್ಥಿಕ ಆರೈಕೆಗೆ ಕಳುಹಿಸಲಾಗಿದೆ. ಅವರಲ್ಲಿ ಸುಮಾರು ೪೦ ಶೇಕಡಾ ಅನಾಥರು.

೨೩. ೩೬ ಮಂದಿ ಮಕ್ಕಳು ದತ್ತು ಪೂರ್ವ ಪೋಷಕತ್ವದಲ್ಲಿದ್ದಾರೆ. ಉಳಿದಿರುವ ೧೧ ಮಂದಿ ವಿಶೇಷ ಅಗತ್ಯತೆಯುಳ್ಳ ಮಕ್ಕಳಾಗಿದ್ದಾರೆ. ಪ್ರಸ್ತುತ ೫ ಮಕ್ಕಳು ದತ್ತು ಪ್ರಕ್ರಿಯೆಗೆ ತಯಾರಾಗಿದ್ದಾರೆ. ೧೦೬ ಜೋಡಿಗಳು ಮಕ್ಕಳನ್ನು ದತ್ತು ಪಡೆಯಲು ಕಾಯುತ್ತಿದ್ದಾರೆ ಉಡುಪಿ ಜಿಲ್ಲೆಯ ೨ ಸಂಸ್ಥೆಗಳಿಗೆ ದತ್ತು ಕೇಂದ್ರ ಎಂಬ ಮಾನ್ಯತೆ ದೊರಕಿರುತ್ತದೆ. (೨೦೧೬ರ ದತ್ತಾಂಶಗಳ ಪ್ರಕಾರ)

೨೪. ಮಕ್ಕಳ ನ್ಯಾಯ ಮಂಡಳಿ ಪ್ರತೀ ಬುಧವಾರ ಅದಿವೇಶನ ನಡೆಸುತ್ತದೆ ಮತ್ತು ಕಳೆದ ೫ ವರ್ಷಗಳಲ್ಲಿ ಒಟ್ಟು ೪೫ ಪ್ರಕರಣಗಳನ್ನು ಮಕ್ಕಳ ನ್ಯಾಯ ಮಂಡಳಿ ನಿರ್ವಹಿಸುತ್ತದೆ.

೨೫. ಉಡುಪಿ ಜಿಲ್ಲೆಯ ಎಲ್ಲಾ ೨೩ ಪೋಲಿಸ್ ಠಾಣೆಗಳಲ್ಲಿ ಇಬ್ಬರನ್ನು ಮಕ್ಕಳ

ಕಲ್ಯಾಣ ಅಧಿಕಾರಿ ಎಂದು ನೇಮಿಸಲಾಗಿದೆ. ಹೆಚ್ಚಿನ ಮಕ್ಕಳ ಕಲ್ಯಾಣ ಅಧಿಕಾರಿಗಳಿಗೆ ಉಡುಪಿ ಜಿಲ್ಲೆಯ ಮಕ್ಕಳ ರಕ್ಷಣಾ ವ್ಯವಸ್ಥೆಯ ಅರಿವು ಇರುವುದಿಲ್ಲ, ಸಂಪೂರ್ಣವಾಗಿ ಅವರು ಮಕ್ಕಳ ರಕ್ಷಣಾ ಪ್ರಕ್ರಿಯೆಯಲ್ಲಿ ಸಂಸ್ಥೆಯ ಮುಖ್ಯಸ್ಥರ ಮೇಲೆ ಹೊಂದಿಕೊಂಡಿರುತ್ತಾರೆ. ಮಕ್ಕಳ ವಿಶೇಷ ಪೋಲಿಸ್ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ನ್ಯಾಯ ಮಂಡಳಿಯ ಒಂದೇ ಒಂದು ಸಭೆ ಈ ವರೆಗೆ ನಡೆದಿರುವುದಿಲ್ಲ ಎನ್ನುವ ಅಂಶ ಕೇಂದ್ರಿತ ಗುಂಪು ಚರ್ಚೆಯ ಸಂದರ್ಭದಲ್ಲಿ ತಿಳಿದುಕೊಳ್ಳಲಾಯ್ತು. ಹಾಗಾಗಿ ಅವರು ಹೆಚ್ಚು ಸದೃಡವಾದ ಜಾಲ ರಚನೆ ಹಾಗೂ ಮಕ್ಕಳ ಕಲ್ಯಾಣ ಅಧಿಕಾರಿಗಳಿಗೆ ಸೂಕ್ತ ತರಬೇತಿಗಳನ್ನು ನೀಡುವಂತೆ ಸಲಹೆ ನೀಡಿರುತ್ತಾರೆ. ಮಕ್ಕಳ ರಕ್ಷಣಾ ಘಟಕಕ್ಕೆ ಇಬರು ಪೋಲಿಸ್‌ರನ್ನು ನಿಯೋಜಿಸಿ ರಕ್ಷಣಾ ಘಟಕದ ಕೆಲಸಗಳನ್ನು ಹೆಚ್ಚು ವೇಗವಾಗಿ ನಡೆಸಲು ಸಹಕರಿಸುವಂತೆ ಘಟಕದ ಸಿಬ್ಬಂದಿ ಸಲಹೆ ನೀಡಿದರು.

೨೬. ಕ್ರೈಂ ದಾಖಲೆಗಳ ಅನ್ವಯ ಕಳೆದ ೩ ವರ್ಷಗಳಲ್ಲಿ ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯ ಬಹಳಷ್ಟು ಹೆಚ್ಚಿರುವುದು ಕಾಣಬಹುದಾಗಿದೆ. ೨೦೧೧ರಲ್ಲಿ ೨ ಇದ್ದ ಪ್ರಕರಣಗಳು ೨೦೧೩ಕ್ಕೆ ೮ಕ್ಕೆ ಏರಿವೆ. ಬಹಳಷ್ಟು ಬಾರಿ ತಪ್ಪಿತಸ್ಥರು ಮಗುವಿನ ಹತ್ತಿರದವರೇ ಆಗಿದ್ದು ಪ್ರಕರಣಗಳಿಗೆ ಗಮನಿಸದೆ ಮುಂದೆ ಅದು ಮುಚ್ಚಲ್ಪಡುತ್ತದೆ.

**ಉಡುಪಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯೆದುರು ಬಂದಿರುವ ಪ್ರಮುಖ ಪ್ರಕರಣಗಳನ್ನು ಈ ಮುಂದಿನಂತೆ ವಿಗಂಡಿಸಬಹುದು.**

೧. ಪರಿತ್ಯಕ್ತರಾದ/ತೊರೆಯಲ್ಪಟ್ಟ ಹಸುಗೂಸುಗಳು/ಮಕ್ಕಳು (ಸಾರ್ವಜನಿಕ ಸ್ಥಳ, ದಾರಿ/ಬೀದಿ, ಆಸ್ಪತ್ರೆಯಲ್ಲಿ ತ್ಯಜಿಸಲ್ಪಟ್ಟ ಮಕ್ಕಳು)

೨. ತಾಯಿ/ತಂದೆ ಅಥವಾ ಇಬ್ಬರೂ ಸೇರಿ ಮಗುವನ್ನು ಅಧಿಕೃತವಾಗಿ ಪರಿತ್ಯಜಿಸುವುದು

೩. ನೆಲೆ ತಪ್ಪಿದ/ದಾರಿ ತಪ್ಪಿದ/ಕಳೆದು ಹೋದ ಮಕ್ಕಳು, ಮಕ್ಕಳು ತಾವೇ ಮನೆಯಿಂದ ಹೊರಬಿದ್ದಿರಬಹುದು ಅಥವಾ ಯಾರಿಂದಲಾದರೂ ಹೊರಡಿಸಲ್ಪಟ್ಟಮಕ್ಕಳು(ಪ್ರಕೃತಿ ವಿಕೋಪಗಳು, ಅಪಘಾತಗಳು, ಆಕಸ್ಮಿಕಗಳಿಂದಾಗಿ ಪೋಷಕರಿಂದ ಬೇರ್ಪಟ್ಟ ಮಕ್ಕಳು).ಇಂತಹ ಮಕ್ಕಳನ್ನು ಕಂಡ ನಾಗರೀಕರು/ಪೋಲಿಸರು/ಮಕ್ಕಳ(ಸಹಾಯ)ವಾಣಿ ಅಥವಾ ಇನ್ನಿತರ ಪ್ರಜ್ಞಾವಂತರು ಮಕ್ಕಳನ್ನು ಅವರ ಸುರಕ್ಷಣೆ, ಪೋಷಣೆ,ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಎದುರು ತರಲಾಗಿದೆ.

೪. ಏಡ್ಸ್/ಎಚ್.ಐ.ವಿ ಯಿಂದಾಗಿ ಪೋಷಕರು ಮರಣ ಹೊಂದಿದ್ದು ಅದರಿಂದಾಗಿ ಅನಾಥರಾದ ಮಕ್ಕಳು ಮತ್ತು ಏಡ್ಸ್/ಎಚ್.ಐ.ವಿ ಪೀಡಿತ ಮಕ್ಕಳು ಸಮಿತಿಯೆದುರು ಬಂದಿರುತ್ತಾರೆ.

೫. ವಿವಿಧ ಕಾರಣಗಳಿಂದಾಗಿ ಅನಾಥರಾಗಿರುವ/ನಿರ್ಗತಿಕ ಮಕ್ಕಳು, ಕೆಲಸಕ್ಕೆಂದು ಕರೆದುಕೊಂಡು ಬಂದು ಸರಿಯಾಗಿ ಊಟ ಉಪಚಾರವಿಲ್ಲದೆ ಅಸಹಾಯಕರಾದವರು.

೬. ಶೋಷಣೆಗೊಳಗಾದ ಮಕ್ಕಳು:

– **ಆರ್ಥಿಕ ಶೋಷಣೆ:** ಭಿಕ್ಷೆ ಬೇಡಲಿಕ್ಕೆ ನೇಮಿಸಲ್ಪಟ್ಟವರು, ದುಡಿಮೆಯೇ ಮೊದಲಾದ ಶೋಷಣೆಗಳಿಗೆ ಬಲಿಯಾದವರು (ಮನೆ, ಹೋಟೆಲ್, ಗ್ಯಾರೇಜ್, ವರ್ಕ್‌ಷಾಪ್‌ಗಳು, ಅಂಗಡಿ, ಕಟ್ಟಡ ನಿರ್ಮಾಣ, ಕೃಷಿ ಚಟುವಟಿಕೆಗಳು, ಗಣಿ, ಮತ್ತಿತರ ರೀತಿಯ ಕೆಲಸಗಳು–ಪೋಷಕರೊಂದಿಗೆ ಮಕ್ಕಳು ಕೆಲಸದಲ್ಲಿ ತೊಡಗಿದ್ದರೂ ಸಹ ಅಂತಹ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯೆದುರು ತರಲಾಗಿದೆ.

– **ಮಾನಸಿಕ ಶೋಷಣೆ:** ಒತ್ತಡದ ವಾತಾವರಣದಲ್ಲಿ, ಭಯದಲ್ಲಿ ಕೆಲಸ ಅಥವಾ ಭಿಕ್ಷೆ ಅಥವಾ ಅನೈತಿಕ ಚಟುವಟಿಕೆಗಳಿಗೆ ದೂಡಲ್ಪಟ್ಟವರು.

– **ದೈಹಿಕ ಮತ್ತು ಲೈಂಗಿಕ ಶೋಷಣೆ:** ವ್ಯಾಪಾರೀ ಲೈಂಗಿಕ ಶೋಷಣೆಗೆ ಸಿಲುಕಿಸಲ್ಪಟ್ಟವರು, ಬಾಲ್ಯ ವಿವಾಹಕ್ಕೆ ಗುರಿಯಾದವರು, ಶಿಕ್ಷಕರಿಂದ, ಪೋಷಕರಿಂದ, ಆರಕ್ಷಕರಿಂದ ಅಥವಾ ಇನ್ನಿತರರಿಂದ ದೈಹಿಕ, ಮಾನಸಿಕ, ಲೈಂಗಿಕ ಶೋಷಣೆಗೊಳಗಾದವರು.

– **ಸಾಗಣೆಗೆ ಒಳಗಾದವರು:** ವಿವಿಧ ರೀತಿಯ ಶೋಷಣೆಗಾಗಿ ತಮ್ಮ ಮೂಲ ನೆಲೆಗಳಿಂದ ಸಾಗಣೆಗೊಳಗಾಗಿ ಬಂದ ಮಕ್ಕಳು ಮುಖ್ಯವಾಗಿ ವಲಸಿಗ ತಂದೆ ತಾಯಿಯ ಮಕ್ಕಳು.

೭. ತೀರಾ ಗಂಭೀರವಲ್ಲದ ತಪ್ಪು ಮಾಡಿದ ಮಕ್ಕಳು, ಪೋಷಕರಿಂದ ನಿಯಂತ್ರಿಸಲಾಗದ ಮಕ್ಕಳು (ದುಶ್ಚಟ ಅಥವಾ ಕೆಟ್ಟ ಹವ್ಯಾಸಕ್ಕೆ ಬಿದ್ದಂತಹ ಮಕ್ಕಳನ್ನು ತಾತ್ಕಾಲಿಕವಾಗಿ ಅದರಲ್ಲಿಯೂ ಇತರ ವಿಧಾನಗಳು ಸೋತಲ್ಲಿ ಮಾತ್ರ ಮಕ್ಕಳ ನಿಲಯಗಳಲ್ಲಿ ಇಡಲ್ಪಟ್ಟಿದ್ದಾರೆ.)

೮. ಪೋಷಕರಿಗೆ ಆರ್ಥಿಕ ಬೆಂಬಲವಿಲ್ಲದೆ ಇದ್ದಲ್ಲಿ/ಆರೋಗ್ಯ ತೊಂದರೆಗಳಿದ್ದಲ್ಲಿ ತಾತ್ಕಾಲಿಕವಾಗಿ ಮಕ್ಕಳನ್ನು ಮಕ್ಕಳ ನಿಲಯದಲ್ಲಿ ಇರಿಸಲು ಅಪೇಕ್ಷಿಸಿದಾಗ ಸಮಿತಿಯ ಮುಂದೆ ತರಲ್ಪಟ್ಟವರು

೯. ರಾಜ್ಯದ ಹಾಗೂ ಹೊರ ರಾಜ್ಯಗಳಿಂದ ಮಕ್ಕಳ ಕಲ್ಯಾಣ ಸಮಿತಿಗಳ ನಿರ್ದೇಶನದಂತೆ ವರ್ಗಾವಣೆಗೊಳಿಸಲ್ಪಟ್ಟಂತಹ ಮಕ್ಕಳು.

೧೦. ಶಾಲೆಯಿಂದ ಹೊರಗುಳಿದಿರುವ ಮಕ್ಕಳು.

**ಗುಣಾತ್ಮಕ ವಿಶ್ಲೇಷಣೆಯ ವರದಿ (ಕೇಂದ್ರೀತ ಗುಂಪು ಚರ್ಚೆಗಳ ವಿಶ್ಲೇಷಣೆ)**

ಕರ್ನಾಟಕದಲ್ಲಿ ಮಕ್ಕಳ ರಕ್ಷಣಾ ವ್ಯವಸ್ಥೆಯನ್ನು ಉತ್ತಮ ತರಿಸಲು ಪಾಲುದಾರರಿಂದ ಅಭಿಪ್ರಾಯ ಹಾಗೂ ಸಲಹೆಗಳನ್ನು ತಿಳಿದುಕೊಳ್ಳಲು ಎಫ್.ಜಿ.ಡಿ ಮೂಲಕ ಪ್ರಯತ್ನ ನಡೆಸಲಾಯ್ತು.

**ಗುಣಾತ್ಮಕ ಅಧ್ಯಯನಕ್ಕಾಗಿ ಈ ಕೆಳಗಿನ ೧೨ ವಿಷಯಗಳನ್ನು ಗುರುತಿಸಿ ಕೇಂದ್ರಿತ ಗುಂಪು ಚರ್ಚೆಗಳಲ್ಲಿ ಮಾಹಿತಿ ಸಂಗ್ರಹಿಸಲಾಯ್ತು.**

೧. ಬಾಲ ಕಾರ್ಮಿಕತೆ

೨. ಶಾಲೆಯಿಂದ ಹೊರಗುಳಿದ ಮಕ್ಕಳು

೩. ಕಾಣೆಯಾದ ಮಕ್ಕಳು

೪. ಮಕ್ಕಳಲ್ಲಿ ಬಿಕ್ಷಾಟನೆ

೫. ಲೈಂಗಿಕ ದೌರ್ಜನ್ಯ

೬. ಮಾದಕ ದ್ರವ್ಯ ಸೇವನೆ

೭. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಆರೈಕೆ ಮತ್ತು ರಕ್ಷಣಾ ವ್ಯವಸ್ಥೆ ಹಾಗೂ ಜನರಲ್ಲಿ ಅದರ ಅರಿವು.

೮. ಗುರುತಿಸಲಾದ ಮಕ್ಕಳ ಹಕ್ಕು ಉಲ್ಲಂಘನೆ ಪ್ರಕರಣಗಳು

೯. ಬಾಲ್ಯ ವಿವಾಹ

೧೦. ಶಿಕ್ಷೆ

೧೧. ಸಾಂಸ್ಥಿಕ ವ್ಯವಸ್ಥೆ

೧೨. ಮಕ್ಕಳ ಹಕ್ಕು ಖಾತ್ರಗಾಗಿ ಶ್ರಮಿಸುತ್ತಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು.

**ಕೇಂದ್ರಿತ ಗುಂಪು ಚರ್ಚೆಗಳ ಮುಖ್ಯ ಫಲಿತಗಳು**

**ಬಾಲ ಕಾರ್ಮಿಕತೆ:**

೧. ಕೆಲವು ವಲಸಿಗ ಮಕ್ಕಳು ಮನೆವಾರ್ತೆ ಕೆಲಸದಲ್ಲಿ ತೊಡಗಿದ್ದಾರೆ.

೨. ಪರಿಶಿಷ್ಟ ಜಾತಿಗೆ ಸೇರಿದ ಒಂದು ಹೆಣ್ಣು ಮಗಳು ತನ್ನ ಕುಟುಂಬಕ್ಕೆ ಬೆಂಬಲ ನೀಡಲಿಕ್ಕಾಗಿ ಒಂದು ಮನೆಯಲ್ಲಿ ದಿನಕ್ಕೆ ಒಂದು ಗಂಟೆ ಕೆಲಸ ಮಾಡುತ್ತಾಳೆ.

೩. ಶಿಬಿರಾರ್ಥಿಗಳ ಅಭಿಪ್ರಾಯದಂತೆ ಇತ್ತೀಚೆಗೆ ದುಡಿಯುವ ಮಕ್ಕಳೂ ಇಲ್ಲ. ಎಲ್ಲರೂ ಶಾಲೆಯ ಒಳಗಿದ್ದಾರೆ. ಕಲ್ಲು ಕೋರೆಗಳಲ್ಲಿ ಮತ್ತು ಗಣಿಗಳಲ್ಲಿ ಸ್ಥಳವನ್ನು ಬದಲಾಯಿಸಿ ಕುಟುಂಬ ಸಮೇತರಾಗಿ ವಲಸೆ ಹೋಗುತ್ತಾರೆ ಅವರು ಮುಂಜಾನೆ ಬಹಳ ಬೇಗನೆ ಏಳಬೇಕಾಗುವುದರಿಂದ ತರಬೇತಿ ಪಾಠದಲ್ಲಿ ಗಮನ ನೀಡಲಾರರು.

೪. ಹೋಟೆಲ್ ಹಾಗೂ ಗೇರು ಬೀಜ ಫ್ಯಾಕ್ಟರಿಗಳಲ್ಲಿಯೂ ಮಕ್ಕಳಿಂದ ದುಡಿಸಲಾಗುತ್ತದೆ.

೫. ಹೋಟೆಲ್, ಮೀನಿನ ಡಕ್ಕೆ(ಬಂದರು), ಮನೆಕೆಲಸಗಳಲ್ಲಿ ಇಂದಿಗೂ ಮಕ್ಕಳು ದುಡಿಯುತ್ತಿರುವುದು ಕಾಣಸಿಗುತ್ತದೆ.

೬. ಬ್ರಹ್ಮಾವರದ ಆಸುಪಾಸಿನಲ್ಲಿ, ಕೋರೆಗಳಲ್ಲಿ ಮಕ್ಕಳು ದುಡಿಯುತ್ತಿದ್ದಾರೆ. ಕೋರೆಗಳಲ್ಲಿ ದುಡಿಯುವ ಹೆತ್ತವರು ತಮ್ಮ ಮಕ್ಕಳನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುತ್ತಾರೆ. ಕ್ರಮೇಣ ಅವರು ಅಲ್ಲಿ ದುಡಿಯಲಾರಂಬಿಸುತ್ತಾರೆ.

೭. ವಲಸಿಗ ಮಕ್ಕಳು ಹೋಟೇಲ್‌ಗಳಲ್ಲಿ ಹಾಗೂ ಕ್ಯಾಂಟಿನ್‌ಗಳಲ್ಲಿ ಮತ್ತು ತರಕಾರಿ ಮಾರುವುದು ಕಾಣಸಿಗುತ್ತದೆ.

**ವಲಸೆ:**

- ವಲಸಿಗ ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ತೋರಿಸುವುದಿಲ್ಲ, ಉಡುಪಿ ಸುತ್ತಮುತ್ತಲಿನ ಕೆಲವು ಕಡೆಗಳಿಂದ ಕೆಲವು ಮಕ್ಕಳನ್ನು ಶಾಲೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸ ಲಾಗುತ್ತದೆ. ಅವರಿಗೆ ವಾಹನದ ವ್ಯವಸ್ಥೆ ನೀಡಲಾಗುತ್ತದೆ. ಆದರೂ ಕೆಲವು ಮಕ್ಕಳು ಶಾಲಾವಧಿಯ ನಂತರ ಭಿಕ್ಷೆ ಎತ್ತುತ್ತಾರೆ.

ವಲಸಿಗ ಮಕ್ಕಳಲ್ಲದೆ ಇನ್ನೂ ಕೆಲವು ೧೪ವರ್ಷದೊಳಗಿನ ಮಕ್ಕಳೂ ರಜಾ ಅವಧಿಯಲ್ಲಿ ದುಡಿಯುತ್ತಾರೆ.

- ಕಾರ್ಮಿಕತೆಗೆ ಮಾತ್ರವಲ್ಲದೆ 'ಬಸವ'ನ್ನಾಡಿಸುವವರು, ಭವಿಷ್ಯ ಹೇಳುವವರು, ಚಿನ್ನ ಶುದ್ಧೀಕರಿಸಿಕೊಡುವುದಾಗಿ ಹೇಳುವವರು, ತಮ್ಮ ಮಗಳಿಗೆ ಮದುವೆ ಮಾಡಲು ಸಹಾಯ ಕೇಳುವವರು ಪ್ರಾಕೃತಿಕ ವಿಕೋಪದಿಂದ ನೊಂದಿರುವುದಾಗಿ ಹೇಳಿ ಸಹಯ ಕೇಳುವವರು ಜಿಲ್ಲೆಗೆ ಬರುತ್ತಾರೆ.

- ಉಡುಪಿ ಹಾಗೂ ಆಸುಪಾಸಿನ ಜಿಲ್ಲೆಗಳು ವಲಸಿಗರನ್ನು ಆಕರ್ಷಿಸುತ್ತವೆ. ಆಹಾರ, ಗರಿಷ್ಠ ಕೂಲಿ ಹಾಗೂ ಉತ್ತಮ ಜೀವನಮಟ್ಟ ಇತರ ಜಿಲ್ಲೆ ಹಾಗೂ ರಾಜ್ಯಗಳಿಂದ ಜನರನ್ನು ಆಕರ್ಷಿಸುತ್ತದೆ.

- ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಂದ ಜನರು ಉಡುಪಿ ಜಿಲ್ಲೆಗೆ ವಲಸೆ ಬರುತ್ತಾರೆ.

- ವಲಸಿಗ ಕುಟುಂಬದ ಮಕ್ಕಳು ಬಿಕ್ಷೆ ಬೇಡುತ್ತಾರೆ ಮತ್ತು ಮಕ್ಕಳು ಪಾಕೆಟ್ ಹೊಡೆಯುವವರು ಮತ್ತು ಸರಕಳ್ಳತನಕ್ಕೆ ಒಳಗಾಗುತ್ತಾರೆ.

- ೧೪ ವರ್ಷದ ಒಂದು ಹುಡುಗಿಯನ್ನು ಮನೆಗೆಲಸಕ್ಕೆ ತಾಯಿ ಕರೆದುಕೊಂಡಿದ್ದರು ನಂತರ ಆ ಮಗುವನ್ನು ಶಾಲೆಗೆ ಕಳುಹಿಸುವ ಬಗ್ಗೆ ತಾಯಿಯ ಮನಸು ಪರಿವರ್ತಿಸಲಾಯ್ತು.

- ಬೆಳಿಗ್ಗೆ ೭.೩೦ ರಿಂದ ೯ ಗಂಟೆ ವರೆಗೆ ಉಡುಪಿ ಸಿಟಿ ಬಸ್ಸ್ ನಿಲ್ದಾಣದಲ್ಲಿ ನೋಡಿದರೆ ವಲಸೆಯ ನೈಜ್ಯ ಸ್ಥಿತಿಯ ಅರಿವಾಗುತ್ತದೆ. ಬಹಳ ದೊಡ್ಡ ಸಂಖ್ಯೆಯಲ್ಲಿ ಗಂಡಸರು ಹೆಂಗಸರು ಕೆಲಸಕ್ಕೆ ಕರೆದುಕೊಂಡು ಹೋಗುವ ದಣಿಗಳು ನಿರೀಕ್ಷೆಯಲ್ಲಿ ನಿಲ್ಲುತ್ತಾರೆ. ಅವರ ಜೊತೆಗೆ ಪುಟ್ಟ ಮಕ್ಕಳು ಇರುತ್ತಾರೆ.

- 'ವಲಸೆ' ಆರೋಗ್ಯ ಹಾಗೂ ಶಿಕ್ಷಣ ಇಲಾಖೆ ಎರಡಕ್ಕೂ ಸಂಬಂಧಿಸಿದ್ದಾಗಿದೆ. ಟೆಂಟ್ (ಗುಡಾರ)ಗಳ ಪರಿಸರ ಬಹಳ ಅಪಾಯಕಾರಿಯಾಗಿದೆ ಅಲ್ಲಿ ನೈರ್ಮಲ್ಯದ ಕೊರತೆ ಇದೆ. ಅಲ್ಲಿ ಸಾಂಕ್ರಾಮಿಕ ರೋಗಗಳು ಪ್ರಸಾರವಾಗುತ್ತದೆ. ಅವರು ಚುಚ್ಚುಮದ್ದು ಅಥವಾ ಪೋಲಿಯೋ ಲಸಿಕೆಗೆ ಬರುತ್ತಿಲ್ಲ.

- ಬೀಡಿನ ಗುಡ್ಡೆಯಲ್ಲಿ ವಲಸಿಗರು ಶಾಲೆಗೆ ಬರಲು ಮನಸ್ಸಿರದೆ ಅವರು ಶಾಲೆಯಲ್ಲಿ ಊಟಕ್ಕೆ ಮಾಂಸಾಹಾರಬೇಕೆಂದು ಬೇಡಿಕೆ ಇಟ್ಟರು.

- ನಮ್ಮ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಲ್ಲ. ಆದರೆ ಕೊಪ್ಪಳ, ರಾಯಚೂರು, ಗಂಗಾವತಿ ಯಂತಹಾ ಜಿಲ್ಲೆಗಳಿಂದ ವಲಸಿಗ ಪೋಷಕರೊಂದಿಗೆ ಜಿಲ್ಲೆಗೆ ಬಂದಿರುವ ಮಕ್ಕಳೂ ಮುಖ್ಯವಾಹಿನಿ ಶಿಕ್ಷಣದಿಂದ ಹೊರಗುಳಿದಿದ್ದಾರೆ.
- ನಮ್ಮ ಜಿಲ್ಲೆಯಲ್ಲಿ ಕೊಪ್ಪಳ, ರಾಯಚೂರು, ಗಂಗಾವತಿಯಂತಹ ಊರುಗಳಿಂದ ಕೆಲಸ ಹುಡುಕಿ ಬಂದ ಪೋಷಕರೊಂದಿಗೆ ಬಂದ ಮಕ್ಕಳು ಶಾಲೆಯಿಂದ ಹೊರಗೆ ನೋಡಸಿಗುತ್ತಾರೆ.
- ಗಣಿಗಳಲ್ಲಿ ಮತ್ತು ತಮ್ಮ ಕೆಲಸದ ಸ್ಥಳವನ್ನು ಬದಲಾಯಿಸುತ್ತಾ ಇರುತ್ತಾರೆ ಮತ್ತು ಕುಟುಂಬ ಸಮೇತರಾಗಿ ಹೊರಟು ಹೋಗುತ್ತಾರೆ. ಇದು ಶಾಲೆಯಿಂದ ಮಕ್ಕಳು ಹೊರಗುಳಿಯಲು ಕಾರಣವಾಗುತ್ತದೆ.
- ಹೀಗೆ ತಂದೆ ತಾಯಿಯೊಂದಿಗೆ ಹೋಗುವಾಗ ವರ್ಗಾವಣಾ ಪತ್ರವನ್ನು ಹೆತ್ತವರಿಗೆ ನೀಡಿರುವುದು ಕಾಣುತ್ತೇವೆ.
- ಪ್ರತಿ ವಲಸಿಗರಿಗೆ ಗುರುತು ಚೀಟಿಯ ವ್ಯವಸ್ಥೆ ಮಾಡಬೇಕು.
- ವಲಸಿಗರು ಯಾವ ಜಿಲ್ಲೆಯಿಂದ ಬಂದಿದ್ದಾರೆ ಆ ಜಿಲ್ಲೆಗಳಲ್ಲಿ ಜೀವನಸ್ಥಿತಿಯಲ್ಲಿ ಅಭಿವೃದ್ಧಿ ಕಾಣಬೇಕು. ಜನರು ಬೇರೆ ಊರುಗಳೀಗೆ ಹೋಗದಂತೆ ವ್ಯವಸ್ಥೆಗಳನ್ನು ಉತ್ತಮಗೊಳಿಸಬೇಕು.
- ವಲಸಿಗರ ಶಿಶುಗಳನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕು. ಶಿಶುಪಾಲನಾ ಕೇಂದ್ರಗಳನ್ನು ತೆರೆಯಬೇಕು.
- ಆರು ವರ್ಷದೊಳಗಿನ ವಲಸಿಗರ ಮಕ್ಕಳನ್ನು ಅಂಗನವಾಡಿ ಸಮೀಕ್ಷೆಗಳಲ್ಲಿ ಸೇರಿಸಿಕೊಳ್ಳಲಾಗಿಲ್ಲ, ಅವರನ್ನು ಫಲಾನುಭವಿಗಳ ಪಟ್ಟಿಯಿಂದಲೂ ಹೊರಗುಳಿಸಲಾಗಿದೆ. ಇದನ್ನು ಸರಿಪಡಿಸಿಕೊಳ್ಳಬೇಕಿದೆ.
- ಇಂತಹ ಮಕ್ಕಳಿಗೆ ಕಾನೂನು ದಾಖಲೆ ಬಿಟ್ಟು ಏನಾದರೂ ಸೌಲಭ್ಯ ನೀಡಿದರೆ ಇಲಾಖಾ ತನಿಖೆಯ ವೇಳೆಯಲ್ಲಿ ಸಮಸ್ಯೆಯಾಗುತ್ತದೆ. ದಾಸ್ತಾನು ವಹಿಯಲ್ಲಿ ೨% ರಿಂದ ೩% ವ್ಯತ್ಯಾಸ ಬಂದಲ್ಲಿ ಮಾಫಿ ಕೊಡಬೇಕು.
- ಕಲ್ಲುಕೋರೆಗಳಲ್ಲಿ ಮಕ್ಕಳಿದ್ದಾರೆ, ತಮಿಳುನಾಡಿನಿಂದ ವಲಸೆ ಬಂದವರು ಮಕ್ಕಳನ್ನು ಜೊತೆಗೆ ಕರೆತರುತ್ತಾರೆ. ಬಾಷೆಯ ತೊಡಕಿನಿಂದ ಅವರು ಮುಖ್ಯ ವಾಹಿನಿ ಶಿಕ್ಷಣಕ್ಕೆ ಒಗ್ಗುವುದಿಲ್ಲ.

- ವಲಸಿಗರಲ್ಲಿ ಬಾಲ್ಯವಿವಾಹದ ಆಚರಣೆ ಇದೆ. ಒಳಕಾಡು ಶಾಲೆಯಲ್ಲಿ ೧೩ ವರ್ಷದ ಹುಡುಗಿಯೊಬ್ಬಳು ಕುತ್ತಿಗೆಯ ಸುತ್ತ ಅರಶಿನ ದಾರ ಕಟ್ಟಿಕೊಂಡು ಬರುತ್ತಾಳೆ.
- ಉತ್ತರ ಕರ್ನಾಟಕದ ಕೊಪ್ಪಳ, ಹಾವೇರಿ, ಬೀದರ್, ರಾಯಚೂರು, ದಾವಣಗೆರೆಯಿಂದ ಕೆಲಸಕ್ಕಾಗಿಕಟ್ಟಡ ಕಾರ್ಮಿಕರಾಗಿ, ರಸ್ತೆ ಕೆಲಸಕ್ಕೆ ಬರುತ್ತಾರೆ. ಅವರು ಕುಟುಂಬ ಸಮೇತರಾಗಿ ವಲಸೆ ಬರುತ್ತಾರೆ. ಅವರು ಕುಂದಾಪುರದಲ್ಲಿ ಬಿಕ್ಷೆ ಬೇಡುತ್ತಾರೆ.
- ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಹತ್ತಿರದ ಟೆಂಟ್‌ಗಳಲ್ಲಿ ಸುಮಾರು ೨೦೦ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಶಿಕ್ಷಣ ಇಲಾಖೆ ವಲಸಿಗರ ಮಕ್ಕಳಿಗಾಗಿ ಟೆಂಟ್ ಶಾಲೆಯನ್ನು ಆರಂಭಿಸಿದೆ. ಅದು ಯೋಜನಾ ಅವಧಿ ಮುಗಿಯುವವರೆಗೆ ಮಾತ್ರವಾಗಿದ್ದು, ಅನುಸರಣೆಯಾಗಿ ಮಕ್ಕಳನ್ನು ಹತ್ತಿರದ ಶಾಲೆಗೆ ಸೇರಿಸಬೇಕಿತ್ತು. ಆದರೆ ವಲಸಿಗರು ಅವರಿದ್ದಲ್ಲೇ ಶಾಲೆಯನ್ನು ತೆರೆಯಲು ಬೇಡಿಕೆ ಇಟ್ಟಿದ್ದಾರೆ ಇದು ಮಾಡಲು ಸಾಧ್ಯವಿಲ್ಲ. ಮತ್ತು ಮಕ್ಕಳು ಶಾಲೆತೊರೆಯುವುದು ಮುಂದುವರೆಯುತ್ತದೆ.

**ಬಾಲ್ಯವಿವಾಹ**

ಬಾಲ್ಯವಿವಾಹದ ಪ್ರಕರಣಗಳು ಬೆಳಕಿಗೆ ಬಂದಿಲ್ಲ ಮಾತ್ರವಲ್ಲ ಅದನ್ನು ಗುರುತಿಸುವ ವ್ಯವಸ್ಥೆಗಳೂ ಇಲ್ಲ.

- ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಬಾಲ್ಯವಿವಾಹ ತೀವ್ರವಾದ ಸಮಸ್ಯೆಯಲ್ಲಿ ಆದರೆ ಗುಂಪು ಅಭಿಪ್ರಾಯ ಪಟ್ಟಂತೆ ಕೆಲವು ಸಾಂಸ್ಕೃತಿಕ ಕಾರಣಗಳಿಂದಾಗಿ ಗಿರಿಜನ ಸಮುದಾಯದಲ್ಲಿ ಬಾಲ್ಯ ವಿವಾಹಗಳು ನಡೆಯುತ್ತೆ. ಹಲವು ಪ್ರಕರಣಗಳಲ್ಲಿ ೧೮ವರ್ಷದದೊಳಗಿನ ಹೆಣ್ಣು ಮಕ್ಕಳು ಹಾಗೂ ೨೧ ವರ್ಷದೊಳಗಿನ ಗಂಡು ಮಕ್ಕಳು ಮದುವೆಯಾದದ್ದಿದೆ.
- ೨೦೧೧ರಲ್ಲಿ ೧೭ ವರ್ಷದ ಹುಡುಗಿಯೊಬ್ಬಳು ಬೇಳೂರಿನ ತಮಿಳಿಯನ್ ಕಾಲೋಲಿಯಲ್ಲಿ ೨೧ ವರ್ಷದ ಹುಡುಗನೊಂದಿಗೆ ಮದುವೆಯಾಗುದರಲ್ಲಿದ್ದಾಗ ಸಮಾಜ ಕಾರ್ಯಕರ್ತ ವಿದ್ಯಾರ್ಥಿನಿಯೊಬ್ಬಳು ಪೋಲಿಸ್ ಅಂಗನವಾಡಿ ಕಾರ್ಯಕರ್ತರುಹಾಗೂ ಪಂಚಾಯತ್ ಸದಸ್ಯರ ಸಹಾಯದಿಂದ ತಪ್ಪಿಸಿದರು.

- ಕೋರೆ ಕಾರ್ಮಿಕರ ಡೇರೆಗಳಲ್ಲಿ ಬಾಲ್ಯ ವಿವಾಹಗಳು ನಡೆಯುತ್ತವೆ ಆದರೆ ಅವರಲ್ಲಿ ಜನನ ದಾಖಲೆ ಇಲ್ಲದಿರುವುದರಿಂದ ಅದನ್ನು ತಡೆಯುವುದು ಕಷ್ಟವಾಗಿದೆ.

**ಶಾಲೆ ತೊರೆಯುವಿಕೆ:**

ಆರಂಭದಲ್ಲಿ ಗುಂಪು ಮಕ್ಕಳು ಶಾಲೆಯಿಂದ ಹೊರಗೆ ಉಳಿದಿರುವ ಘಟನೆಗಳು ಇಲ್ಲ ಎಂದು ಅಭಿಪ್ರಾಯಪಟ್ಟಿತು. ಆದರೆ ಆಳವಾದ ಚರ್ಚೆಯ ವೇಳೆಯಲ್ಲಿ ಕೊರಗ ಸಮುದಾಯದ ಕೆಲವು ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗುತ್ತಿರಲಿಲ್ಲ ಎನ್ನುವ ಅಂಶವನ್ನು ಗುರುತಿಸಲಾಯ್ತು. ಶಾಲಾಭಿವೃದ್ಧಿ ಮತ್ತು ಸಮಿತಿ, ಶಾಲಾ ಶಿಕ್ಷಕರು ಹಾಗೂ ಪಂಚಾಯತ್‌ಗಳು ಇವರನ್ನು ಶಾಲೆಗೆ ತರಲು ಪ್ರಯತ್ನಿಸಿದ್ದರೂ ಹೆಚ್ಚು ಫಲ ನೀಡಿಲ್ಲ.

- ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಹತ್ತಿರದ ಟೆಂಟ್‌ಗಳಲ್ಲಿ ಸುಮಾರು ೨೦೦ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಶಿಕ್ಷಣ ಇಲಾಖೆ ವಲಸಿಗರ ಮಕ್ಕಳಿಗಾಗಿ ಟೆಂಟ್ ಶಾಲೆಯನ್ನು ಆರಂಭಿಸಿದೆ. ಅದು ಯೋಜನಾ ಅವದಿ ಮುಗಿಯುವವರೆಗೆ ಮಾತ್ರವಾಗಿದ್ದು ಅನುಸರಣೆಯಾಗಿ ಮಕ್ಕಳನ್ನು ಹತ್ತಿರದ ಶಾಲೆಗೆ ಸೇರಿಸಬೇಕಿತ್ತು. ಆದರೆ ವಲಸಿಗರು ಅವರಿದ್ದಲ್ಲೆ ಶಾಲೆಯನ್ನು ತೆರೆಯಲು ಬೇಡಿಕೆ ಇಟ್ಟಿದ್ದಾರೆ. ಇದು ಮಾಡಲು ಸಾಧ್ಯವಿಲ್ಲ ಮತ್ತು ಮಕ್ಕಳು ಶಾಲೆತೊರೆಯುವುದು ಮುಂದುವರೆಯುತ್ತದೆ.
- ಶಾಲಾ ವ್ಯವಸ್ಥೆ ಗಮನಾರ್ಹ ಬದಲಾವಣೆ ಕಂಡರೆ ಮತ್ತು ಹೆತ್ತವರ ಮನಸ್ಥಿತಿ ಬದಲಾಗುತ್ತದೆ. ಆದರೆ ಗುಂಪು ಅಭಿಪ್ರಾಯ ಪಟ್ಟಂತೆ ಶೌಚಾಲಯ ತೊಳೆಯುವ ವಿಚಾರ ಬಂದಾಗ ಒಂದು ಶಾಲೆಯಲ್ಲಿ ಆ ಆಚರಣೆಯನ್ನು ಹೆತ್ತವರು ವಿರೋದಿಸಿದರು. ಈ ವಿಷಯ ಗ್ರಾಮ ಸಭೆಯಲ್ಲೂ ಚರ್ಚೆಗೆ ಬಂದಿತು. ಮತ್ತು ವಿಷಯಕ್ಕೆ ಸಂಬಂದಿಸಿದ ಸಲಹೆ ಹೊರಹೊಮ್ಮಿತು. ಮಕ್ಕಳಿಗೆ ಸ್ವಾವಲಂಬನೆಯ ಮೌಲ್ಯವನ್ನು ನೀಡಬೇಕು ಎನ್ನುವ ಅಂಶ ಸರ್ವರ ಅಭಿಪ್ರಾಯವಾಗಿತ್ತು. ಆದರೆ ಜಾತಿ ಬೇದಕ್ಕೆ ಹಾಗೂ ನಿರ್ದಿಷ್ಟ ಧರ್ಮಕ್ಕೆ ಎಡೆ ಮಾಡಿಕೊಡದಂತೆ ಪ್ರಯತ್ನಪೂರ್ವಕವಾಗಿ ಗಮನ ಹರಿಸಬೇಕು.
- ಅಂಗನವಾಡಿ ಕಾರ್ಯಕರ್ತರು, ಸ್ತ್ರೀ ಶಕ್ತಿ ಸದಸ್ಯರು ಗಗ್ರಾಮ ಪಂಚಾಯತ್ ಸದಸ್ಯರು ಭಾಗವಹಿಸಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸುವ ಮಹಿಳಾ ಮತ್ತು ಮಕ್ಕಳ ಮಾರಾಟ ಮತ್ತು ಸಾಗಣೆ ತಡೆ ಸಮಿತಿ ರಚಿಸಲಾಗಿದೆ ಎಂದು

ಅಂಗನವಾಡಿ ಮೇಲ್ವಿಚಾರಕಿ ತಿಳಿಸಿದರು. ಆ ಸಭೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಗುರುತಿಸಲಾಗಿರುವ ಸಾಂಕ್ರಾಮಿಕ ಅಂಟು ರೋಗಗಳು, ಪೋಲಿಯೋ ಲಸಿಕೆ ಆಂದೋಲನ ಮತ್ತು ಗ್ರಾಮಕ್ಕೆ ಪ್ರವೇಸಿಸುವ ಹಾಗೂ ಹೊರನಡೆಯುವ ಪ್ರತೀ ಮಗುವನ್ನು ಗುರುತಿಸುವ ಬಗ್ಗೆ ಚರ್ಚಿಸಲಾಗುತ್ತದೆ.

- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಹಾಗೂ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಸೇರಿ ಪ್ರತಿ ಸೋಮವಾರದಂದು ಶಾಲೆಯಿಂದ ಹೊರಗುಳಿದವರ ಹಾಗೂ ದೀರ್ಘಕಾಲಿಕ ಗೈರು ಹಾಜರಿಯಾಗುವವರ ಮನೆಗೆ ಬೇಟಿ ನೀಡುವ ಬಗ್ಗೆ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ವಿಷಯ ಹಂಚಿಕೆ ಮಾಡಿದರು.
- ಬಹಳಷ್ಟು ಯೋಜನೆಗಳು ಲಭ್ಯವಿವೆ. ಆದರೆ ಅವು ಹೆಚ್ಚು ಕಾಲ ಮುಂದುವರಿಯುವುದಿಲ್ಲ ಹಾಗೂ ಅವು ಸರಿಯಾಗಿ ಅನುಷ್ಠಾನಗೊಳ್ಳುವುದಿಲ್ಲ.

# ಅಧ್ಯಾಯ ಐದು

# ಪ್ರಮುಖ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳು ಹಾಗೂ ಅಂತರ್-ಸಂಸ್ಥೆಗಳ ನಡುವಿನ ಸಮನ್ವಯತೆ

೫.೧. ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

೫.೨. ಮಕ್ಕಳ ರಕ್ಷಣೆಯಲ್ಲಿ ಸಾಂಸ್ಥಿಕ ವ್ಯವಸ್ಥೆಗಳು

೫.೩. ಮಕ್ಕಳ ರಕ್ಷಣೆಯಲ್ಲಿ ಅಸಾಂಸ್ಥಿಕ ವ್ಯವಸ್ಥೆಗಳು

ಅಧ್ಯಾಯ ಐದು

# ಪ್ರಮುಖ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳು ಹಾಗೂ ಅಂತರ್-ಸಂಸ್ಥೆಗಳ ನಡುವಿನ ಸಮನ್ವಯತೆ

ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಪ್ರಮುಖ ಇಲಾಖೆಗಳು ನಿರ್ವಹಿಸಬಹುದಾದ ಪಾತ್ರ ಮತ್ತು ಜವಾಬ್ದಾರಿಗಳು ಹಾಗೂ ಅಂತರ್-ಸಂಸ್ಥೆಗಳ ನಡುವಿನ ಸಮನ್ವಯತೆಯನ್ನು ಕೆಳಗಿನ ವಿಭಾಗಗಳಲ್ಲಿ ವಿವರಿಸಲಾಗಿದೆ.

**ಉಡುಪಿ ಜಿಲ್ಲೆಯಲ್ಲಿನ ಮಕ್ಕಳ ರಕ್ಷಣಾ ವ್ಯವಸ್ಥೆಯ ಸಂಯೋಜನಾ ಪಾಲುದಾರರು:**

**೧. ಮಕ್ಕಳ ಕಲ್ಯಾಣ ಸಮಿತಿ:**

ಮಕ್ಕಳ ಕಲ್ಯಾಣ ಸಮಿತಿಯನ್ನು ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ೨೦೦೦ ಮತ್ತು ತಿದ್ದುಪಡಿ ಕಾಯ್ದೆ ೨೦೦೬(ಪ್ರಸ್ತುತ ಹೆಸರಿಸಲಾಗಿರುವ ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ೨೦೧೫ರನ್ವಯ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ರಚನೆಮಾಡುವುದು. ಮಕ್ಕಳಿಗೆ ಸಂಬಂಧಿಸಿದ ವಿಷಯಳಲ್ಲಿ ನಿಪುಣರಾಗಿರುವ ೫ ಸದಸ್ಯರನ್ನು ಒಳಗೊಂಡ ದಂಡಾಧಿಕಾರಿಗಳ ತಂಡ ನ್ಯಾಯಪೀಠವಾಗಿ ಕಾರ್ಯ ನಿರ್ವಹಿಸುವುದು. ಮಕ್ಕಳ ಕಲ್ಯಾಣ ಸಮಿತಿಯು ಅಪರಾಧ ದಂಡ ಪ್ರಕ್ರಿಯೆ ಸಂಹಿತೆಯನ್ವಯ, ಮಹಾನಗರ ದಂಡಾಧಿಕಾರಿಗಳ ಅಥವಾ ಮೊದಲನೆ ದರ್ಜೆಯ ನ್ಯಾಯಾಂಗ ದಂಡಾಧಿಕಾರಿಯು ಹೊಂದಿರುವ ಅಧಿಕಾರವನ್ನು ಹೊಂದಿರುತ್ತದೆ. ಆರೈಕೆ, ರಕ್ಷಣೆ ಮತ್ತು ನೆರವಿನ ಅಗತ್ಯವಿರುವ ಮಗುವನ್ನು ಶಿಕ್ಷಣ ಸಂಸ್ಥೆಯ ಪ್ರಾಧಿಕಾರಗಳು, ನೇರವಾಗಿ ಅಥವಾ ಮಕ್ಕಳ ಸಹಾಯವಾಣಿ ಅಥವಾ ಸಂಬಂಧಿಸಿದ ಇತರೆ ವ್ಯಕ್ತಿಯ ಮೂಲಕ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವುದು. ಒಂದು ವೇಳೆ ಮಗುವು ಲೈಂಗಿಕ ದೌಜನ್ಯಕ್ಕೆ ಗುರಿಯಾಗಿದ್ದಲ್ಲಿ (ಕುಟುಂಬದ ಸದಸ್ಯರಿಂದ) ಮಗುವಿಗೆ ಸುರಕ್ಷಿತ ಸ್ಥಳವನ್ನು ಒದಗಿಸುವ ಅಥವಾ ಮಗುವನ್ನು ಪ್ರತಿಕೂಲ ಸಾಕ್ಷಿ ಹೇಳಲು ಬದಲಾಗದಂತೆ ತಡೆಯುವುದನ್ನು ಖಾತರಿಪಡಿಸಿ ಕೊಳ್ಳಲು ಮಕ್ಕಳ ಕಲ್ಯಾಣ ಸಮಿತಿಗೆ ರವಾನಿಸುವುದು.

## ೨. ಬಾಲ ನ್ಯಾಯ ಮಂಡಳಿ (JJB):

ಬಾಲನ್ಯಾಯ ಮಂಡಳಿಗಳನ್ನು, ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ೨೦೦೦ ಮತ್ತು ತಿದ್ದುಪಡಿ ಕಾಯ್ದೆ ೨೦೦೬ (ಪ್ರಸ್ತುತ ಹೆಸರಿಸಲಾಗಿರುವ ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ೨೦೧೫ರನ್ವಯ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ರಚನೆ ಮಾಡುವುದು. ಬಾಲನ್ಯಾಯ ಮಂಡಳಿಯಲ್ಲಿ ಮಹಾನಗರ ದಂಡಾಧಿಕಾರಿ ಅಥವಾ ಮೊದಲ ದರ್ಜೆಯ ನ್ಯಾಯಾಂಗ ದಂಡಾಧಿಕಾರಿಯು ಪ್ರಧಾನ ದಂಡಾಧಿಕಾರಿಯಾಗಿ ಮತ್ತು ಇಬ್ಬರು ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡ ನ್ಯಾಯಪೀಠವನ್ನು ರಚಿಸುವುದು. ೧೯೭೩ರ ಅಪರಾಧ ದಂಡ ಸಂಹಿತೆ ಪ್ರಕ್ರಿಯೆಯನ್ವಯ ಇದು ಮೊದಲನೆ ದರ್ಜೆಯ ನ್ಯಾಯಾಂಗ ದಂಡಾಧಿಕಾರಿಯು ಹೊಂದಿರುವ ಅಧಿಕಾರವನ್ನು ಹೊಂದಿರುತ್ತದೆ. ಆರೋಪಿಸಲಾಗಿರುವ ಮಕ್ಕಳು ಅಥವಾ ಕಾನೂನಿನ್ವಯ ಅಪರಾಧ ಎಸಗಿರುವವರನ್ನು ಬಾಲ ನ್ಯಾಯ ಕಾಯ್ದೆಯಡಿ ಬರುವ ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸುವುದು. ಮಕ್ಕಳನ್ನು ಸುಧಾರಿಸುವ ಮತ್ತು ಪುನಶ್ಚೇತನಪಡಿಸುವ ಮೂಲಕ, ವಯಸ್ಕರ ನ್ಯಾಯ ಶಾಸ್ತ್ರದಡಿ ಬಲಿಪಶುವಾಗದಂತೆ ತಡೆಗಟ್ಟುವುದನ್ನು ಕಾಯ್ದೆಯ ವಿಧಾನವು ಖಚಿತಪಡಿಸಿಕೊಳ್ಳುತ್ತದೆ. ಶಿಕ್ಷಣ ಸಂಸ್ಥೆಯಲ್ಲಿರುವ ಮಗುವು ಕಾನೂನಿನಡಿ ಸುರಕ್ಷತೆಯ ಉಲ್ಲಂಘನೆ ಅಥವಾ ಹಲ್ಲೆ/ನಿಂದನೆಯನ್ನು ಎಸಗಿದಲ್ಲಿ, ಆ ಮಗುವನ್ನು ಮಕ್ಕಳ ವಿಶೇಷ ಪೊಲೀಸ್ ಘಟಕ ಅಥವಾ ಸಮೀಪದ ಪೊಲೀಸ್ ಠಾಣೆಯ ಮೂಲಕ ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸುವುದು.

## ೩. ಸ್ವಯಂ ಸೇವಾ ಸಂಸ್ಥೆಗಳು:

ಮಕ್ಕಳ ರಕ್ಷಣೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ತಮ್ಮದೇ ಆದ ಪಾತ್ರವನ್ನು ವಹಿಸುತ್ತವೆ. ಒಂದು ವ್ಯವಸ್ಥೆ, ಉದಾಹರಣೆಗೆ ಪೊಲೀಸ್ ವ್ಯವಸ್ಥೆ ಸರಿಯಾಗಿ ಅಥವಾ ಕಾನೂನುಬದ್ಧವಾಗಿ ಅಥವಾ ಸಾರ್ವಜನಿಕರ ಅಗತ್ಯತೆಗಳಿಗೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿಲ್ಲವೆಂದರೆ ಅದಕ್ಕೆ ಸಮನಾಂತರವಾಗಿ ಆರಕ್ಷಕ ಠಾಣೆಯನ್ನು ಸ್ವಯಂ ಸೇವಾ ಸಂಸ್ಥೆ ಹೊಂದಲು ಸಾಧ್ಯವಿಲ್ಲ. ಹಾಗೆಯೇ ಇತರ ಇಲಾಖೆಗಳಿಗೆ ಅಥವಾ ವ್ಯವಸ್ಥೆಗಳಿಗೆ ಸ್ವಯಂ ಸೇವಾ ಸಂಸ್ಥೆ ಬದಲಿ ವ್ಯವಸ್ಥೆಯಲ್ಲ. ಹಾಗೆ ಮಾಡಿದಲ್ಲಿ ಸಮುದಾಯವನ್ನು ಸಮಸ್ಯೆಗೆ ತಳ್ಳಿದಂತಾಗುತ್ತದೆ. ತಪ್ಪು ಸಂದೇಶ ನೀಡಿದಂತಾಗುತ್ತದೆ. ಸ್ವಯಂ ಸೇವಾ ಸಂಸ್ಥೆಯು ತಾಂತ್ರಿಕ ವ್ಯವಸ್ಥೆಯಾಗಿದ್ದು ಅಸ್ಥಿತ್ವದಲ್ಲಿರುವ ಹಲವಾರು

ವ್ಯವಸ್ಥೆಗಳ ತಪ್ಪುಗಳನ್ನು ತಡೆಯುವ ಪ್ರಮುಖ ವ್ಯವಸ್ಥೆಯಾಗಿದೆ. ಮತ್ತು ಸ್ವಯಂ ಸೇವಾ ಸಂಸ್ಥೆಗಳು ಮಗುವಿಗೆ ಬದ್ಧ ಅಥವಾ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸದ ವ್ಯವಸ್ಥೆಗಳನ್ನು ಸಧೃಡಗೊಳಿಸುವ ಕಂಬಗಳಂತೆ ಕಾರ್ಯನಿರ್ವಹಿಸುತ್ತವೆ. ಪ್ರತಿ ಸ್ವಯಂ ಸೇವಾ ಸಂಸ್ಥೆಯು ತನ್ನದೇ ಆದ ಧ್ಯೇಯೊದ್ದೇಶಗಳನ್ನು ಹೊಂದಿದೆಯಾದರೂ, ಅವುಗಳಲ್ಲಿ ಮಕ್ಕಳು ಸಮಾಜದ ೪೨% ದಷ್ಟಿರುವ ಸಮಾಜದ ಆಸ್ತಿ ಎಣಿಸಿಕೊಂಡಿರುವ ಮಕ್ಕಳನ್ನು ತಲುಪಲು ಮರೆಯುವಂತಿಲ್ಲ.

ಮಕ್ಕಳ ನ್ಯಾಯ ಕಾಯಿದೆ ೨೦೦೦ದಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಮಕ್ಕಳ ಅತ್ಯುತ್ತಮ ಹಿತ ದೃಷ್ಟಿಯಿಂದ ವಿವಿಧ ಸೇವೆಗಳನ್ನು ಒದಗಿಸುವ ವ್ಯವಸ್ಥೆಯಾಗಿ ಬಿಂಬಿಸಲಾಗಿದೆ. ಸ್ವಯಂ ಸೇವಾ ಸಂಸ್ಥೆ ಮಕ್ಕಳನ್ನು ಮಕ್ಕಳ ನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಲು (ಸೆಕ್ಷನ್ ೩೨ ಮತ್ತು ನಿಯಮ ೧೦(೧), ಸಾಮಾಜಿಕ ವರದಿ ತಯಾರಿ (ಸೆಕ್ಷನ್ ೩೩(೧) ಮತ್ತು ನಿಯಮ ೧೯(೧) ಮತ್ತು ೩೯ (೩) ಬಿ ಆಪ್ತಸಮಾಲೋಚನೆ, ಗೃಹ ಅಧ್ಯಯನ, ಮಕ್ಕಳನ್ನು ಒಂದು ಕಡೆಯಿಂದ ಸೂಕ್ತ ಸ್ಥಳಕ್ಕೆ ಕೊಂಡೊಯ್ಯುವುದು (ನಿಯಮ ೧೪ ಮತ್ತು ೨೦(೨) ಅರ್ಹ ಸಂಸ್ಥೆಗಳ ಮೂಲಕ ವಸತಿ ಒದಗಿಸುವುದು ಸ್ವೀಕಾರ ಕೇಂದ್ರಗಳು ಹಾಗೂ ದತ್ತು ಕೇಂದ್ರಗಳು (ಸೆಕ್ಷನ್ ೫೦ ಹಾಗೂ ನಿಯಮ ೩೬), ಸಮನ್ಸ್ ಜಾರಿಗೊಳಿಸುವುದು, ಸಮುದಾಯದಲ್ಲಿ ಮಕ್ಕಳ ನ್ಯಾಯ ಕಾಯಿದೆಯನ್ನು ಪ್ರಚುರ ಪಡಿಸುವುದು "ಕ್ಷೇತ್ರ ಕಾರ್ಯ" ಕೈಗೊಳ್ಳುವುದು, ಸಂಶೋದನೆ ಅಥವಾ ಅಧ್ಯಯನ ಮತ್ತು ಸ್ವಯಂ ಸೇವಾ ಸಂಸ್ಥೆಗಳ ವಸ್ತುರೂಪದ ಸಹಾಯ (ನಿಯಮ ೩೨(೨) ಹಾಗೂ ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ ಯಾವುದೇ ಕಾರ್ಯದ ಬಗ್ಗೆ ಉಲ್ಲೇಖಿಸುತ್ತದೆ.

ಸಮಾಜದಲ್ಲಿ ಮಾನವ ಕುಲಕ್ಕೆ ದೊಡ್ಡ ಸೇವೆ ಸಲ್ಲಿಸುವ ಉದ್ದೇಶದೊಂದಿಗೆ ಸಾಕಷ್ಟು ಸ್ವಯಂ ಸೇವಾ ಸಂಸ್ಥೆಗಳು ನೋಂದಾಯಿತವಾಗುತ್ತವೆ. ಆದರೂ, ಕಾನೂನಿನ ಚೌಕಟ್ಟಿನೊಳಗೆಯೇ ಅವುಗಳು ಕಾರ್ಯನಿರ್ವಹಿಸಬೇಕಾಗುತ್ತದೆ. ಸಂಬಂಧಿತ ಇಲಾಖೆಯ ಅನುಮತಿ ಪಡೆಯಬೇಕಾಗುತ್ತದೆ. ಆದರೆ ಮಕ್ಕಳಿಗಾಗಿ ಗೃಹಗಳನ್ನು ನಡೆಸುವ ವಿಚಾರಬಂದಾಗ ಓಸಿಎಚ್ ಕಾಯಿದೆ ಅಥವಾ ಮಹಿಳೆ ಮತ್ತು ಮಕ್ಕಳ ಇಲಾಖೆ ಅಥವಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಪರವಾನಿಗೆ ಪಡೆಯುವುದು ಮಾತ್ರವಲ್ಲದೆ ಮಕ್ಕಳ ಕಲ್ಯಾಣ ಸಮಿತಿಯ, ಅನುಮತಿ ಹೊಂದುವುದು ಕಡ್ಡಾಯವಾಗಿರುತ್ತದೆ (ತಿದ್ದುಪಡಿ

ಮಕ್ಕಳ ನ್ಯಾಯ ಕಾಯಿದೆ ೨೦೦೬) ಸೆಕ್ಷನ್ ೩೪ರಂತೆ. ಈ ನಿಯಮ ಖಾಸಗಿ ಹಾಗೂ ಸರಕಾರಿ ಸಂಸ್ಥೆಗಳಿಗೂ ಅನ್ವಯವಾಗುತ್ತದೆ.

**೪. ಪೊಲೀಸ್ ಇಲಾಖೆ:**

ಭಾರತೀಯ ಆಡಳಿತ ವ್ಯವಸ್ಥೆ ಮೂರು ಪ್ರಮುಖ ಸ್ಥರಗಳಲ್ಲಿ ಕೆಲಸ ಮಾಡುತ್ತದೆ.

ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗ.ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾಮಾಜಿಕ ಶಿಸ್ತು ಪಾಲನೆಯ ಸಂಪೂರ್ಣ ಜವಾಬ್ದಾರಿ ಪೊಲೀಸ್ ಇಲಾಖೆ ಯಿಂದಾಗಿರುತ್ತದೆ. ಈ ಇಲಾಖೆಗೆ ಮಾರ್ಗದರ್ಶಿ ಸೂತ್ರಗಳು ಭಾರತೀಯ ದಂಡ ಸಂಹಿತೆ ಹಾಗೂ ಕ್ರಿಮಿನಲ್ ಪ್ರಕ್ರಿಯೆ ಸಂಹಿತೆಯಲ್ಲಿ ನಮೂದಿತವಾಗಿದೆ.

ಮಕ್ಕಳ ಹಕ್ಕುಗಳ ಸಮಾವೇಶ ಹಾಗೂ ಮಕ್ಕಳ ನ್ಯಾಯ ಕಾಯಿದೆ ಮಕ್ಕಳನ್ನು ಇತರ ಹಿರಿಯರಂತೆ ನೋಡಬಾರದು ಎಂದು ಪ್ರತಿಪಾದಿಸುತ್ತದೆ. ಪೊಲೀಸ್ ಹೊಂದಿರುವ ಜಾಲವ್ಯವಸ್ಥೆಯನ್ನು ಹಾಗೂ ಸ್ವಾರ್ಥ ರಹಿತ ಸೇವೆಯನ್ನು ಪರಿಗಣಿಸಿ, ಮಕ್ಕಳ ನ್ಯಾಯ ಕಾಯಿದೆಯಲ್ಲಿ ಕಾನೂನಿನೊಡನೆ ಸಂಘರ್ಷದಲ್ಲಿರುವ ಹಾಗೂ ಪಾಲನೆ ಪೋಷಣೆಯ ಅವಶ್ಯಕತೆ ಇರುವ ಮಕ್ಕಳು ಸಹಾ ಪೊಲೀಸ್ ವ್ಯವಸ್ಥೆಯ ಸಹಾಯ ಸಹಕಾರ ಪಡೆಯಬೇಕೆಂದು ಉದ್ದೇಶಿಸುತ್ತದೆ.

**೫. ಮಕ್ಕಳ ವಿಶೇಷ ಪೊಲೀಸ್ ಘಟಕ:**

ಮಕ್ಕಳ ನ್ಯಾಯ ಕಾಯಿದೆ ೨೦೦೦ದ ಸೆಕ್ಷನ್ ೬೩ರಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಕ್ಕೆ ಅಧಿಕಾರ/ಜವಾಬ್ದಾರಿಗಳನ್ನು ಸೂಚಿಸಿ ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ ಕೆಲಸ ನಿರ್ವಹಿಸಲು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸೂಚಿಸುತ್ತದೆ.ಈ ಹಿನ್ನೆಲೆಯಲ್ಲಿಪ್ರತೀ ಪೋಲೀಸು ಠಾಣೆಯ ಒಬ್ಬ ಅಧಿಕಾರಿಯನ್ನು ಮಕ್ಕಳ ಕಲ್ಯಾಣಾಧಿಕಾರಿ ಯೆಂದು ಗುರುತಿಸಿ ಅವರಿಗೆ ವಿಶೇಷ ತರಬೇತಿ ನೀಡಬೇಕೆಂಬ ನಿಯಮ ಮಾಡಲಾಗಿದೆ. ಆಕೆ/ಆತ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಕ್ಕಳ ಸಂಬಂಧಿ ಪ್ರಕರಣಗಳನ್ನು ನೋಡಿಕೊಳ್ಳಬೇಕಾಗುತ್ತದೆ.

ಕರ್ನಾಟಕ ಮಕ್ಕಳ ನ್ಯಾಯ ಕಾಯಿದೆ ನಿಯಮಾವಳಿ ೧೨ರಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕ ಗುರುತಿಸಲಾದಸ್ವಯಂ ಸೇವಾ ಸಂಸ್ಥೆಗಳ ಜೊತೆ ಸಂಯೋಜಿಸಿ ಕಾರ್ಯಪ್ರವೃತ್ತರಾಗುವಂತೆ ಹಾಗೂ ಸೇವೆಗಳನ್ನು ಪಯೋಗಿಸಿಕೊಳ್ಳುವಂತೆ ಚರ್ಚಿಸಲಾಗಿದೆ.

ಯಾವುದೇ ಪೊಲೀಸ್ ಅಧಿಕಾರಿ ಅಥವಾ ಠಾಣಾಧಿಕಾರಿ ಮಕ್ಕಳನ್ನು ದೊಡ್ಡವರಂತೆ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳುವಂತಿಲ್ಲ ಮಕ್ಕಳಿಗೆ ಕೈಕೊಳ ತೊಡಿಸುವಂತಿಲ್ಲ.

ಮಕ್ಕಳನ್ನು ತರಬೇತಿ ಹೊಂದಿದ ಕಲ್ಯಾಣಾಧಿಕಾರಿ ಮಾತ್ರ ಆಪ್ತಸಮಾಲೋಚನೆ ಯಂತಹಾ ಮಾರ್ಗಗಳ ಮೂಲಕ ನಿರ್ವಹಿಸಬೇಕಾಗುತ್ತದೆ. ಹೆಣ್ಣು ಮಗುವಾಗಿದ್ದ ಸಂದರ್ಭದಲ್ಲಿ ಮಹಿಳಾ ಅಧಿಕಾರಿಯ ಸಮ್ಮುಖದಲ್ಲಿ ವಿಚಾರಣೆಗೆ ಅವಕಾಶವಿದೆ. ಮಕ್ಕಳೊಂದಿಗೆ ಕೆಲಸ ಮಾಡುವ ಮಕ್ಕಳ ಕಲ್ಯಾಣಾಧಿಕಾರಿ ಪೊಲೀಸ್, ಸಮವಸ್ತ್ರವನ್ನು ಧರಿಸುವಂತಿಲ್ಲ. ಮಕ್ಕಳು ಕಾಣೆಯಾದ ಪ್ರಕರಣಗಳ ಸಂದರ್ಭದಲ್ಲಿ ತಪ್ಪದೆ ಮಕ್ಕಳ ಕಲ್ಯಾಣ ಸಮಿತಿಗಳೆದುರು ಹಾಜರು ಪಡಿಸಲಾಗುವುದು ಎಂಬುದು ಗಮನಾರ್ಹ ವಿಷಯವಾಗಿದೆ. ಯಾವುದೇ ಮುಗುವನ್ನು ಸೂರ್ಯಾಸ್ತದ ನಂತರ ಸೂರ್ಯೋದಯದ ಮೊದಲು ಯಾವುದೇ ಕಾರಣಕ್ಕೂ ಪೊಲೀಸ್ ಠಾಣೆಯಲ್ಲಿರಿಸಿಕೊಳ್ಳುವಂತಿಲ್ಲ.

ಮಕ್ಕಳು ಸಕ್ಷಮ ಪ್ರಾಧಿಕಾರವಾಗಿರಿವ ಮಕ್ಕಳ ಕಲ್ಯಾಣ ಸಮಿತಿ ಮತ್ತು ಮಕ್ಕಳ ನ್ಯಾಯ ಮಂಡಳಿಯ ಸದಸ್ಯರ ಮುಂದೆ ನೀಡುವಹೇಳಿಕೆಗಳೇ ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್.) ಎಂದು ಪರಿಗಣಿಸುವುದು ಮತ್ತು ಬೇರೆ ಹೇಳಿಕೆ ನೀಡಲು ಪೋಲೀಸರು ಒತ್ತಾಯಿಸುವಂತಿಲ್ಲ. ಹಾಗಾಗಿ ಯಾವುದೇ ಕಾರಣಕ್ಕೂ ಪೋಲೀಸರು ಕಾನೂನು ಕ್ರಮವನ್ನು ತಡೆಹಿಡಿಯುವಂತಿಲ್ಲ.

ರಕ್ಷಣೆ ಪೋಷಣೆಯ ಅವಶ್ಯಕತೆ ಇರುವ ಮಕ್ಕಳು ಸಿಕ್ಕಿದಾಗ ಸಕ್ಷಮ ಪ್ರಾಧಿಕಾರದ ಮುಂದೆ ಹಾಜರು ಪಡಿಸಬೇಕೆಂದು ಮಕ್ಕಳ ನ್ಯಾಯ ಕಾಯಿದೆಯಲ್ಲಿ ಸ್ಪಷ್ಟಪಡಿಸಲಾಗಿದೆ ಮತ್ತು ನಿರೀಕ್ಷಿಸಲಾಗಿದೆ. ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ನ್ಯಾಯಮಂಡಳಿಗಳು ಕೇಳಿಕೊಂಡರೆ ಪೋಲೀಸರು ವಿಚಾರಣೆ, ಸಂಶೋಧನೆ, ಸತ್ಯಶೋಧನೆ, ವರದಿ ತಯಾರಿ, ಕೇಸು ದಾಖಲೆ, ಸ್ಥಳಾಂತರದಂತಹ ಯಾವುದೇ ಅವಶ್ಯ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಮಕ್ಕಳ ಘನತೆ ಗೌರವಗಳನ್ನು ಕಾಪಾಡಬಹುದು ಎಂದು ಮಕ್ಕಳ ನ್ಯಾಯ ಕಾಯಿದೆ ಸ್ಪಷ್ಟ ಪಡಿಸುತ್ತದೆ.

ಕಾನೂನುಗಳ ಪರಿದಿಯಾಚೆ ನೈಜ್ಯವಾಗಿ ನೋಡಿದರೆ ಯಾವುದೇ ಕಾಣೆಯಾದ ಮಗು ಗುರುತಿಸಲಾದರೆ ಅಥವಾ ಬಾಲಕಾರ್ಮಿಕತೆಯಲ್ಲಿ ಗಮನಿಸಲಾಗಿ ಮುಕ್ತಗೊಳಿಸಲಾದ ಸಂದರ್ಭದಲ್ಲಿ ಪೋಲೀಸರು ಮೊದಲನೆಯದಾಗಿ ಹೆತ್ತವರನ್ನು ಅಥವಾ ಪೋಷಕರನ್ನು ಗುರುತಿಸಿ ಮಕ್ಕಳನ್ನು ಅವರ ವಶಕ್ಕೆ ನೀಡುವುದು ಸರ್ವೇ ಸಾಮಾನ್ಯವಾಗಿದೆ. ಹೀಗಾದ

ಸಂದರ್ಭದಲ್ಲಿ ಆಪ್ತಸಮಾಲೋಚನೆ, ಅನುಸರಣೆ, ಮಕ್ಕಳ ಸ್ನೇಹಿ ವಿಧಾನದಲ್ಲಿ ವಿಚಾರಣೆ, ಬರಹ ರೂಪದ ಮುಚ್ಚಳಿಕೆಗಳು ನೆನೆಗುದಿಗೆ ಬಿದ್ದು ಘಟನೆಗಳು ಮರುಕಳಿಸುವಂತಾಗುತ್ತದೆ. ಹಾಗಾದ ಸಂದರ್ಭದಲ್ಲಿ ಮಾಲಕರಿಂದ ಶೋಷಣೆ, ಹಿಂಸೆ ದೌರ್ಜನ್ಯಕ್ಕೆ ಒಳಗಾದ ಮಕ್ಕಳ ಮಾನಸಿಕ ಹಾಗೂ ಭಾವನಾತ್ಮಕ ವಿಚಾರಗಳನ್ನು ಅಗೌರವಿಸಿದಂತಾಗುತ್ತದೆ, ಮಕ್ಕಳ ನ್ಯಾಯ ಕಾಯಿದೆಯು ಪೋಲೀಸರ ಸುಪರ್ದಿಗೆ ಬಂದ ಮಕ್ಕಳನ್ನು ತಪ್ಪದೆ ಸಕ್ಷಮ ಪ್ರಾಧಿಕಾರದ ಮುಂದೆ ಹಾಜರುಪಡಿಸುವುದನ್ನು ಖಾತ್ರಿ ಪಡಿಸುವಂತೆ ತಿಳಿಸಿದೆ.ಈ ವರೆಗೆ ಹಿರಿಯರಿಗೆ ಕೇಂದ್ರೀಕೃತವಾದ ನಿರ್ಣಯಗಳು ಈಗ ಮಗು ಕೇಂದ್ರಿತವಾಗಬೇಕಾಗುತ್ತದೆ.

ಬಾಲನ್ಯಾಯ ಕಾಯ್ದೆ, POCSO, ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಮತ್ತು ಅನ್ವಯವಾಗುವ ಇತರ ಕಾನೂನುಗಳಡಿ ತಿಳಿಸಿರುವ ನಿಯಮಗಳು ಮತ್ತು ಕಾರ್ಯ ವಿಧಾನಗಳಂತೆ ಪೊಲೀಸ್/ಮಕ್ಕಳವಿಶೇಷ ಪೊಲೀಸ್ ಘಟಕಗಳು ಸ್ಪಂದಿಸುವುದನ್ನು ಮತ್ತು ತನಿಖೆಯನ್ನು ತ್ವರಿತವಾಗಿ ನಡೆಸುವುದನ್ನು ಖಾತರಿಪಡಿಸಿಕೊಳ್ಳುವುದು. ಒಟ್ಟಾರೆ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಮತ್ತು ಮಗುವಿನ ಉತ್ತಮ ಹಿತಾಸಕ್ತಿ ತತ್ವಗಳನ್ವಯ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು.

ಪ್ರತಿಯೊಂದು ಅಪರಾದ ಪ್ರಕರಣದಲ್ಲಿ, ಪ್ರಥಮ ತನಿಖಾ ವರದಿ(FIR)ಯನ್ನು ಕೂಡಲೇ ನೋಂದಾಯಿಸುವುದು. ಒಂದು ವೇಳೆ ಮಗು ಅಪರಾಧವನ್ನು ಎಸಗಿರುವನೆಂದು ಆರೋಪವಿದ್ದಲ್ಲಿ, ಆ ಮಗುವನ್ನು ಬಾಲ ನ್ಯಾಯ ಮಂಡಳಿಯ ಮಂದೆ ಹಾಜರು ಪಡಿಸುವುದು.

- ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದ ಪ್ರಾಧಿಕಾರಗಳು ಅಥವಾ ಇಲಾಖೆಗಳಿಗೆ ವರದಿಯನ್ನು ದಾಖಲಿಸುವುದು. ಮ್ಯಾಜಿಸ್ಟ್ರೇಟರ್ ಮುಂದೆ ನೀಡಿರುವ CrPC ಕಲಂ ೧೬೧ರ ಹೇಳಿಕೆ ಮತ್ತು ಕಲಂ ೧೬೪ರ ಹೇಳಿಕೆಯನ್ನು ಖಚಿತಪಡಿಸಿ ಕೊಳ್ಳುವುದು.
- ಸಂಬಂಧಿಸಿದ ಎಲ್ಲಾ ವ್ಯಕ್ತಿಗಳ ಸಹಯೋಗದೊಂದಿಗೆ ಕಾನೂನಿನ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲಾ ಮಾಹಿತಿ, ಸಾಕ್ಷಿಗಳು ಮತ್ತು ದಾಖಲೆಗಳು ಲಭ್ಯವಾಗಿರುವ ಬಗ್ಗೆ ಖಾತರಿಪಡಿಸುವುದು.
- ತ್ವರಿತ ನ್ಯಾಯದಾನಕ್ಕೆ ೬೦ ದಿನಗಳ ಒಳಗೆಆರೋಪ ಪಟ್ಟಿಯನ್ನು ಸಲ್ಲಿಸುವುದು.

- ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು. ನಿಗದಿಪಡಿಸಿರುವ ಸುರಕ್ಷತಾ ಕ್ರಮಗಳಿಗೆ ಶಿಕ್ಷಣ ಸಂಸ್ಥೆಯು ಬದ್ಧವಾಗಿರುವ ಬಗ್ಗೆ ಅನುಸರಣೆಯನ್ನು ಕೈಗೊಳ್ಳುವುದು. ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತೆಯ ಉಲ್ಲಂಘನೆಗಳ ತನಿಖೆ ಮತ್ತು ನಿಯಂತ್ರಣಕ್ಕೆ ಮಕ್ಕಳ ಸಂವೇದನಾ ಕಾರ್ಯತಂತ್ರವನ್ನು ಅಳವಡಿಸಲು ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳನ್ನು ಹೊರಡಿಸುವುದು.
- ಕೋರಿಕೆಯ ಮೇರೆಗೆ ಶಿಕ್ಷಣ ಸಂಸ್ಥೆಗಳು ನೇಮಿಸಿರುವ ವ್ಯಕ್ತಿಗಳ ಪೂರ್ವಾಪರತೆಗಳನ್ನು ಪರಿಶೀಲಿಸುವ ವ್ಯವಸ್ಥೆಯನ್ನು ಕಲ್ಪಿಸುವುದು.
- ಮಕ್ಕಳ ಸುರಕ್ಷತಾ ಉಲ್ಲಂಘನೆ ಸೇರಿದಂತೆ ಮಕ್ಕಳ ಮೇಲಿನ ಹಲ್ಲೆ, ಸಂವೇದನಾ ಕಾರ್ಯ ವಿಧಾನಗಳು ಮತ್ತು ಮಾರ್ಗಸೂಚಿಗಳು ಹಾಗೂ ಅಭಿವೃದ್ಧಿಪಡಿಸಲಾದ ತರಬೇತಿ ಸಾಮಗ್ರಿಗಳ ಬಗ್ಗೆ ಪೊಲೀಸ್ ಸಿಬ್ಬಂಧಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು.
- ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಇಲಾಖೆಯೊಂದಿಗೆ ಜಂಟಿಯಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಪೊಲೀಸ್ ಠಾಣೆಗಳು ಮತ್ತು ಸಮುದಾಯದಲ್ಲಿ ವ್ಯಾಪಕವಾಗಿ ಪ್ರಚಾರಮಾಡುವುದು.
- ನಿಲುವಳಿ ಆದೇಶ ೯೨೦ರ ಸಮುದಾಯವನ್ನು ತಲುಪುವ (ಔಟ್‌ರೀಚ್) ವಿಸ್ತರಣಾ ಕಾರ್ಯಕ್ರಮಗಳು.

  **ತೆರೆದಮನೆ:** ಕಾರ್ಯಕ್ರಮವನ್ನು ಅಪರಾಧಮತ್ತು ಹಿಂಸೆಯನ್ನು ತಡೆಯುವ ಸಲುವಾಗಿ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಪೋಲೀಸರು ಮತ್ತು ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ನಡುವೆ ಸಂವಾದವನ್ನು ಆಯೋಜಿಸುವದು.
- ಮಹಿಳೆ ಮತ್ತು ಮಕ್ಕಳ ವಿರುದ್ಧದ ಅಪರಾದಗಳ ನಿಯಂತ್ರಣಕ್ಕೆ ಮೊಹಲ್ಲ/ಸಮುದಾಯ ಸಭೆಗಳನ್ನು ಆಯೋಜಿಸುವುದು.

**ಮಕ್ಕಳ ವಿಶೇಷ ಪೊಲೀಸ್ ಘಟಕ (SJPU)**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು, ರಾಜ್ಯಾದ್ಯಂತ ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ೨೦೦೦ ಮತ್ತು ತಿದ್ದುಪಡಿ ಕಾಯ್ದೆ ೨೦೦೬

(ಪ್ರಸ್ತುತ ಹೆಸರಿಸಲಾಗಿರುವ, ಬಾಲ ನ್ಯಾಯ(ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ೨೦೧೫ರ ಅನುಚ್ಛೇದ ೧೦೬ ಮತ್ತು ೧೦೭)ರ ಅನ್ವಯ ಕಡ್ಡಾಯಗೊಳಿಸಿದಂತೆ ಮಕ್ಕಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಂವೇದನಾತ್ಮಕವಾಗಿ ಪ್ರತಿಕ್ರಿಯಿಸಲು ವಿಶೇಷ ಮಕ್ಕಳ ಪೊಲೀಸ್ ಘಟಕಗಳನ್ನು ಸ್ಥಾಪಿಸಿದೆ. ಎಲ್ಲಾ ೩೦ ಜಿಲ್ಲೆಗಳಲ್ಲಿ ಸದರಿ ಘಟಕಗಳು ಇದ್ದು, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ ಮತ್ತು ಗುಲ್ಬರ್ಗಗಳಲ್ಲಿ ೦೪ ಆಯುಕ್ತ ವಲಯಗಳು ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ೦೭ ವಲಯಗಳಲ್ಲಿ ಈ ಘಟಕಗಳಿವೆ. ಜಿಲ್ಲೆಗಳಲ್ಲಿ ಜಿಲ್ಲಾ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿಯವರು ಮತ್ತು ನಗರಗಳಲ್ಲಿ ಸಹಾಯಕ ಪೊಲೀಸ್ ಆಯುಕ್ತರು ಹಿರಿಯ ಮಕ್ಕಳ ಕಲ್ಯಾಣ ಅಧಿಕಾರಿಯಾಗಿದ್ದು, ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಅಪರಾಧಗಳ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಮಕ್ಕಳ ಕಲ್ಯಾಣ ಅಧಿಕಾರಿಯನ್ನಾಗಿ ನಿಯೋಜಿಸಲಾಗಿರುತ್ತದೆ ಮತ್ತು ಇವರು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಅದರಲ್ಲೂ, ವಿಶೇಷವಾಗಿ ಮಕ್ಕಳ ದುರುಪಯೋಗದ ವಿಶಯಗಳನ್ನು ಸೂಕ್ಷ್ಮವಾಗಿ ನಿಭಾಯಿಸಲು ತರಬೇತಿ ನೀಡಲಾಗಿರುತ್ತದೆ. ಈ ವ್ಯವಸ್ಥೆಯನ್ನು ಹೆಚ್ಚೆಚ್ಚು ಮಗು ಕೇಂದ್ರಿತವಾಗಿ ಸಶಸ್ತೀಕರಿಸಬೇಕಾಗಿದೆ.

**೬. ಶಿಕ್ಷಣ ಇಲಾಖೆ:**

ಭಾರತ ರಾಷ್ಟ್ರದ ಸಂವಿಧಾನದ ಆರ್ಟಿಕಲ್ ೨೧ (ಅ) ಹಾಗೂ ೪೫, ೧೪ ವರ್ಷದೊಳಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಖಾತ್ರಿ ಪಡಿಸುವ ಬಗ್ಗೆ ಮಾತನಾಡುತ್ತದೆ. ಸಂವಿಧಾನದ ಆರ್ಟಿಕಲ್ ೨೪, ೧೪ ವರ್ಷದೊಳಗಿನ ಮಕ್ಕಳು ದುಡಿಮೆ/ಕಾರ್ಮಿಕತೆ ಮಾಡುವುದನ್ನು ನಿಷೇದಿಸುತ್ತದೆ. ಆರ್ಟಿಕಲ್ ೪೧ರಂತೆ ಶಿಕ್ಷಣದ ಅವಕಾಶ ಒದಗಿಸುವುದು ಸರಕಾರದ ಜವಾಬ್ದಾರಿಯಾಗಿರುತ್ತದೆ. ಆದರೆ ಶಾಲೆಯಿಂದ ಹೊರಗುಳಿದ ಮಕ್ಕಳ ಅಂಕಿ ಅಂಶಗಳು ಮಾತ್ರ ಭಯವುಂಟು ಮಾಡುವಂತಿದೆ. ವಂಚಿತ ವರ್ಗಗಳಿಗೆ ಸೇರಿರುವ ಈ ಮಕ್ಕಳು, ಬೀದಿಮಕ್ಕಳು, ಬಿಕ್ಷೆ ಎತ್ತುವ ಸಮುದಾಯ ಎಣಿಸಿಕೊಂಡಿರುತ್ತಾರೆ. ಶಾಲೆಗಳು ಮಕ್ಕಳ ಬೆಳವಣಿಗೆಗೆ ಪೂರಕವಾಗಿಲ್ಲ. ಶಿಕ್ಷೆ, ದೈಹಿಕ ಹಿಂಸೆ, ಲೈಂಗಿಕ ದೌರ್ಜನ್ಯ, ಸೂಕ್ತ ಶುಲ್ಕ ಪಾವತಿಯ ಮಾಹಿತಿ ಇಲ್ಲದಿರುವುದು, ಅತಿಯಾದ ಮನೆಕೆಲಸದ ಹೊರೆ, ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಇಂತಹ ಸಂದರ್ಭದಲ್ಲಿ ಮಕ್ಕಳು ಹಾಗೂ ಪೋಷಕರು ಸಮಸ್ಯೆಗೆ ಪರಿಹಾರ ಹೇಗೆ ಕಂಡುಕೊಳ್ಳುವುದು? ಶಿಕ್ಷಕರನ್ನು ಕಾಣಬೇಕೇ? ಆಡಳಿತ ವ್ಯವಸ್ಥೆಯಬಳಿ ಹೋಗಬೇಕೇ? ಎಲ್ಲರೂ ತಮ್ಮ ಹಿತದೃಷ್ಟಿಯಿಂದಲೇ ಸಮಸ್ಯೆಯನ್ನು ನೋಡಿ ಪರಿಹಾರ ಕಂಡುಕೊಳ್ಳುತ್ತಾರೆ. ಹಾಗಾಗಿ ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ ಸಮಸ್ಯೆಗಳನ್ನು ನೋಡಿ ಶಾಲಾಪೂರ್ವ ಶಿಕ್ಷಣದಿಂದ ಮಕ್ಕಳಿಗೆ ತಮ್ಮ ಸಾಮರ್ಥ್ಯಗಳನ್ನು ಹೊಂದಿದ ಮಕ್ಕಳಿಗೆ ತಮ್ಮ ಸಾಮರ್ಥ್ಯಕ್ಕನು ಗುಣವಾದ ಶಿಕ್ಷಣ ಒದಗಿಸುವಂತೆ ಶಿಕ್ಷಕ ವರ್ಗವನ್ನು ಸೂಕ್ಷ್ಮಗೊಳಿಸಬೇಕಿದೆ.

ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ಸಮಿತಿಯು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವಂತೆ ತ್ವರಿತವಾಗಿ ಕ್ರಮ ಕೈಗೊಳುವುದು ಮತ್ತು ಅವಶ್ಯವಿರುವ ಭಾಗೀದಾರರಿಗೆ ತಿಳಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.

- ಸಂಜ್ಞಾತ್ಮಕ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆ ಅಥವಾ ಪೋಷಕರು ಪಾಲಕರು ಪ್ರಥಮ ತನಿಖಾ ವರದಿ ದಾಖಲಿಸಿರುವುದನ್ನು ಖಚಿತಪಡಿಸಿ ಕೊಳ್ಳುವುದು.
- ಶಾಲೆಯಲ್ಲಿನ ಮಕ್ಕಳ ರಕ್ಷಣಾ ಸಮಿತಿಯು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ತಿಳಿಸಿರುವ ಕಾರ್ಯವಿಧಾನಗಳು ಮತ್ತುಮಾರ್ಗಸೂಚಿಗಳನ್ವಯ ತನಿಖೆ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು.
- ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲ ಎಂಬುದನ್ನು ಮತ್ತು ಮಗು/ ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು. ಶಿಕ್ಷಣ ಸಂಸ್ಥೆಗಳು ಸರಿಪಡಿಸಿ, ನಿವಾರಿಸುವ ಮತ್ತು ಇತರೆ ಪುನರ್‌ವಸತಿ ಮತ್ತು ಪುನರ್ ಸಂಯೋಜನಾ ಕ್ರಮಗಳ ಅನುಸರಣೆ.
- ಸುಧಾರಣಾ ಕ್ರಮಗಳನ್ನು ತರಲು ಎಲ್ಲಾ ಹಂತಗಳಲ್ಲಿ ಮಾಸಿಕ ವರದಿ ಮಾಡುವುದು ಮತ್ತು ಇಲಾಖೆಯು ಅದನ್ನು ಪರಿಶೀಲಿಸುವುದು.
- ನಿಯಮಗಳನ್ನು ಉಲ್ಲಂಘಿಸಿ ಮತ್ತು ಕಾನೂನನ್ನು ಗಾಳಿಗೆ ತೂರಿದಲ್ಲಿ ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ, ಅಂತಹ ಶಿಕ್ಷಣ ಸಂಸ್ಥೆಗಳ ಪರವಾನಗಿಯನ್ನು ಕಾನೂನು ಪ್ರಕಾರ ರದ್ದುಗೊಳಿಸುವುದು/ಅಮಾನ್ಯ ಮಾಡುವುದು.

- ಹೊರಗುತ್ತಿಗೆ ಸಂಸ್ಥೆಗಳು ಕಾನೂನನ್ನು ಉಲ್ಲಂಘಿಸಿರುವುದು, ಗಾಳಿಗೆ ತೂರಿರುವುದು, ಕಾರ್ಯವಿಧಾನಗಳು ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಅವರ ಪರವಾನಗಿಯನ್ನು ರದ್ದುಪಡಿಸಲು/ ಅಮಾನ್ಯ ಮಾಡಲು ಶಿಫಾರಸ್ಸು ಮಾಡುವುದು.
- ತಪ್ಪನ್ನು ಎಸಗಿರುವ ಸಿಬ್ಬಂದಿ ಅಥವಾ ಇಲಾಖೆಯ ಕಾರ್ಯನಿರ್ವಾಹಕರು ಮತ್ತು ಶಾಸನಾತ್ಮಕ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳ ಅನ್ವಯ ಕ್ರಮ ಜರುಗಿಸುವುದು.
- ಶಿಕ್ಷಣ ಇಲಾಖೆ ಮತ್ತು ಶಿಕ್ಷಣ ಸಂಸ್ಥೆಗಳ ಮೂಲಕ ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೊಳಿಸಲು ಸರ್ಕಾರಿ ಆದೇಶಗಳು / ಅಧಿಸೂಚನೆಗಳನ್ನು ಹೊರಡಿಸುವುದು.
- ಮಕ್ಕಳ ಸುರಕ್ಷತಾ ಕಾರ್ಯತಂತ್ರದ ವ್ಯವಸ್ಥೆಯನ್ನು ಇಲಾಖೆಯೊಳಗಿನ ಎಲ್ಲಾ ಹಂತಗಳಲ್ಲಿ ಅಂದರೆ ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಬ್ಲಾಕ್ ಹಾಗೂ ಕ್ಲಸ್ಟರ್ ಹಂತಗಳಲ್ಲಿ ಕಾರ್ಯಾಚರಣೆಗೊಳ್ಳುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಪ್ರತಿಯೊಂದು ಶಿಕ್ಷಣ ಸಂಸ್ಥೆ, ಶಿಕ್ಷಣ ಸಂಸ್ಥೆಗಳಿಗಾಗಿ ಅಧಿಸೂಚಿಸಿರುವ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ, ಕಾರ್ಯಚರಣೆಯ ಮಾರ್ಗಸೂಚಿಗಳು ಮತ್ತು ಕಾರ್ಯ ವಿಧಾನಗಳನ್ವಯ ತನ್ನದೇ ಆದ ಮಕ್ಕಳ ರಕ್ಷಣಾ ನೀತಿಯನ್ನು ಹೊಂದಿರುವುದನ್ನು ಖಾತರಿಪಡಿಸುವುದು.
- ಸರ್ಕಾರಿ ಮತ್ತು ಸರ್ಕಾರೇತರ ಶಿಕ್ಷಣ ಸಂಸ್ಥೆಗಳಲ್ಲಿ ತ್ವರಿತ ಲಭ್ಯತೆ ಮತ್ತು ಸಂಪರ್ಕಕ್ಕಾಗಿ ಆಂತರಿಕ ಮೊಬೈಲ್ ಲಿಂಕ್ ವ್ಯವಸ್ಥೆಯನ್ನು ಕಲ್ಪಿಸುವುದು. ಮಕ್ಕಳ ಸಹಾಯವಾಣಿ ಸೌಲಭ್ಯ ಇಲ್ಲದೇ ಇರುವ ಜಿಲ್ಲೆಗಳಲ್ಲಿ ಹೆಲ್ಪ್‌ಲೈನ್/ಸಹಾಯವಾಣಿ ವ್ಯವಸ್ಥೆಯನ್ನು ಕಲ್ಪಿಸುವುದು.
- ಮಕ್ಕಳ ರಕ್ಷಣೆಗಾಗಿ ರಕ್ಷಣಾ ನೀತಿಯಲ್ಲಿರುವ ಅವಕಾಶಗಳು, ಸೂಕ್ತ ಕಾರ್ಯತಂತ್ರಗಳು ಮತ್ತು ಇತರ ಅಂಶಗಳನ್ನು ಸೇರ್ಪಡೆಗೊಳಿಸಲು ವಾರ್ಷಿಕ ಯೋಜನೆಯನ್ನು ಹಾಕಿಕೊಳ್ಳುವುದು.
- ನಾಗರಿಕ ಸಮಾಜದ ಸಂಘ ಸಂಸ್ಥೆಗಳನ್ನು ತೊಡಗಿಸಿಕೊಂಡು ತರಬೇತಿ ಸಾಮಗ್ರಿಗಳನ್ನು ಸಿದ್ಧಪಡಿಸಿ ಎಲ್ಲಾ ಸಿಬ್ಬಂದಿಗಳು, ಶಿಕ್ಷಣ ಸಂಸ್ಥೆಗಳು ಮತ್ತು ಭಾಗೀದಾರರಿಗೆ ಅವಶ್ಯವಿರುವ ತರಬೇತಿಯನ್ನು ನೀಡುವ ಮೂಲಕ ಅವರ ಸಾಮರ್ಥ್ಯ ವೃದ್ಧಿಸುವುದನ್ನು ಖಚಿತಪಡಿಸಿಕೊಳ್ಳುವುದು.

- ವೈಯಕ್ತಿಕ ಸುರಕ್ಷತೆ ಮತ್ತು ಆರೋಗ್ಯ ಶಿಕ್ಷಣವನ್ನು ಮಕ್ಕಳ ವಯಸ್ಸು ಮತ್ತು ತರಗತಿಗೆ ಅನುಗುಣವಾಗಿ ಪಠ್ಯದಲ್ಲಿ ಸೇರಿಸುವುದು.
- ಶಾಲಾ ನಿರ್ವಹಣಾ ಸಮಿತಿಯ ಬೈಲಾವನ್ನು ಪರಿಶೀಲಿಸುವ ಮೂಲಕ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಅಂಶಗಳು ಮತ್ತು ಶಿಕ್ಷಣ ಸಂಸ್ಥೆಯ ಕಾರ್ಯ ಚರಣೆಯ ಮಾರ್ಗಸೂಚಿಗಳು ಹಾಗೂ ಕಾರ್ಯವಿಧಾನಗಳನ್ನು ಅದರಲ್ಲಿ ಸೇರಿಸುವುದು.
- ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ಜಂಟಿಯಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಮಕ್ಕಳು ಹೆಚ್ಚಾಗಿರುವ ಎಲ್ಲಾ ಸ್ಥಳಗಳಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವುದು.
- ಶಿಕ್ಷಕರ ಶಿಕ್ಷಣ ಕೋರ್ಸ್‌ಗಳಾದ TCH, Bed & D.Ed ಗಳಲ್ಲಿ ಮಕ್ಕಳ ರಕ್ಷಣೆ, ಸಕಾರಾತ್ಮಕ ಶಿಸ್ತಿನ ಕ್ರಮಗಳು, ಮಕ್ಕಳ ಕಾನೂನುಗಳು ಮುಂತಾದ ವಿಷಯಗಳನ್ನು ಸೇರಿಸುವುದು.
- ಶಿಕ್ಷಕರ ನೇಮಕಾತಿ ಮತ್ತು ಸೇವೆಯಲ್ಲಿರುವ ಶಿಕ್ಷಕರಿಗೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆಗಳಲ್ಲಿ, ಮಕ್ಕಳ ರಕ್ಷಣೆ ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಶಿಕ್ಷಣ ಸಂಸ್ಥೆಗಳು, ಮಗುವಿನ ಸುರಕ್ಷತೆಯ ಉಲ್ಲಂಘನೆ ಸೇರಿದಂತೆ ಮಗುವಿನ ಮೇಲಿನ ಹಲ್ಲೆಗಳ ಬಗ್ಗೆ ಶಾಲಾ ನಿರ್ವಹಣಾ ಸಮಿತಿ ಮತ್ತು ಪೋಷಕ-ಶಿಕ್ಷಕರ ಸಂಘದ ಎಲ್ಲಾ ಸದಸ್ಯರಿಗೆ ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ತರಬೇತಿಯನ್ನು ಆಯೋಜಿಸುವುದು.
- ಮಕ್ಕಳ ಭಾಗವಹಿಸುವಿಕೆ ವೇದಿಕೆಗಳಾದ ಮಕ್ಕಳ ಹಕ್ಕುಗಳ ಕ್ಲಬ್‌ಗಳು, ಮಕ್ಕಳ ಗ್ರಾಮಸಭೆ ಮುಂತಾದವುಗಳನ್ನು ರಚಿಸುವುದು ಮತ್ತು ಅವುಗಳನ್ನು ಬಲಗೊಳಿಸುವುದು.
- DSERT, DIET(ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ) ಮುಂತಾದವುಗಳು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಕುರಿತು ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು ಮತ್ತು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ ನಿರಂತರ ಸಾಮರ್ಥ್ಯ ಅಭಿವೃದ್ಧಿ ತರಬೇತಿಗಳನ್ನು ನೀಡುವುದು ಮತ್ತು ರಾಜ್ಯಾದ್ಯಂತ ಸಕಾರಾತ್ಮಕವಾಗಿ ಇದನ್ನು ನಿರ್ವಹಿಸುವುದು.

ಬ್ಲಾಕ್ ಸಂಪನ್ಮೂಲ ಕೇಂದ್ರಗಳು/ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು ಮತ್ತು ಇತರೆ ಇಲಾಖೆಗಳ ತರಬೇತಿ ಸಂಸ್ಥೆಗಳು ಖಾಸಗಿ ಶಾಲೆಗಳ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡುವುದು ಮತ್ತು ತರಬೇತಿಗೆ ಶುಲ್ಕವನ್ನು ವಿಧಿಸುವುದು.· ಮಕ್ಕಳ ರಕ್ಷಣೆಯನ್ನು ಬೆಂಬಲಿಸುವ ಶಿಕ್ಷಕರನ್ನು ಬಹುಮಾನ ಮತ್ತು ಇನ್‌ಸೆಂಟೀವ್ಸ್‌ಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸುವುದು.

**೭. ಕಾರ್ಮಿಕ ಇಲಾಖೆ**

ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವಶಿಕ್ಷಣ ಸಂಸ್ಥೆ (ವೃತ್ತಿ ತರಬೇತಿ ಸಂಸ್ಥೆಗಳು, ಕೈಗಾರಿಕಾ ತರಬೇತಿ ಸಂಸ್ಥೆಗಳು (ITI) ಪಾಲಿಟೆಕ್ನಿಕ್‌ಗಳು, ಅಪ್ರೆಂಟೀಸ್‌ಶಿಪ್ ಘಟಕಗಳು, SCLP ಗಳಲ್ಲಿನ ಮಕ್ಕಳ ರಕ್ಷಣಾ ಸಮಿತಿಯು, ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗದಿಪಡಿಸಿರುವಂತೆ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಅವಶ್ಯವಿರುವ ಭಾಗೀದಾರರಿಗೆ ವಿವರಿಸುವುದನ್ನು ಖಾತರಿಪಡಿಸಿಕೊಳ್ಳುವುದು.

- ಸಂಜ್ಞಾತ್ಮಕ ಅಪರಾಧ ಪ್ರಕರಣಗಳಲ್ಲಿ ಶಿಕ್ಷಣ ಸಂಸ್ಥೆ ಅಥವಾ ಪೋಷಕರು ಪಾಲಕರು ಪ್ರಥಮ ತನಿಖಾ ವರದಿ(FIR)ಯನ್ನು ನೋಂದಾಯಿಸಿರುವುದನ್ನು ಖಚಿಪಡಿಸಿಕೊಳ್ಳುವುದು. ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ವಿವರಿಸಿರುವ ಕಾರ್ಯ ಸೂಚಿಗಳು ಮತ್ತು ಮಾರ್ಗಸೂಚಿಗಳನ್ವಯ ಶಾಲೆಯ ಮಕ್ಕಳ ರಕ್ಷಣಾ ಸಮಿತಿಯು ತನಿಖೆಯನ್ನು ಆರಂಭಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದ ಕಾರ್ಮಿಕ ಇಲಾಖೆಯ ಜವಾಬ್ದಾರಿ ಆಗಿರುತ್ತದೆ.
- ಬಾಲ ಕಾರ್ಮಿಕರ ಉಲ್ಲಂಘನೆಯಂತಹ ಪ್ರಕರಣಗಳಲ್ಲಿ ಮಗುವಿಗೆ ಕಾನೂನಿನ್ವಯ ದೊರೆಯಬೇಕಾಗಿರುವ ಪರಿಹಾರವನ್ನು ಬಿಡುಗಡೆ ಮಾಡುವುದು.
- ೧೪ ವರುಷ ವಯಸ್ಸಿಗಿಂತ ಮೇಲ್ಪಟ್ಟ ಮಕ್ಕಳು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಸುರಕ್ಷತೆಯ ಉಲ್ಲಂಘನೆಯಾದಲ್ಲಿ, ಕಾನೂನು ಪ್ರಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುವುದು.

- ⊙ ಮಕ್ಕಳನ್ನು ದುಡಿಮೆಗಾಗಿ ಕಳ್ಳಸಾಗಾಣಿಕೆ ಮಾಡಿರುವುದು ಕಂಡು ಬಂದಲ್ಲಿ, ಅಂಥಹ ಮಕ್ಕಳನ್ನು ಸ್ವ-ಸ್ಥಳಕ್ಕೆ ಕಳುಹಿಸಿ, ಶಾಲೆಗೆ ಕಳುಹಿಸುವುದು.
- ⊙ ಸುಧಾರಣಾ ಕ್ರಮಗಳನ್ನು ತರುವ ನಿಟ್ಟಿನಲ್ಲಿ ಎಲ್ಲಾ ಹಂತಗಳಲ್ಲಿ ಮಾಸಿಕ ವರದಿ ಮಾಡುವುದು ಮತ್ತು ಇಲಾಖೆಯು ಅದನ್ನು ಪರಿಶೀಲಿಸುವುದು.
- ⊙ ಮಕ್ಕಳನ್ನು ಶೋಷಿಸುತ್ತಿರುವ ಕೈಗಾರಿಕೆಗಳನ್ನು ಕಪ್ಪು ಪಟ್ಟಿಗೆ ಸೇರಿಸುವುದು ಅಥವಾ ಅವುಗಳ ಪರವಾನಗಿಯನ್ನು ರದ್ದುಪಡಿಸುವುದು.
- ⊙ ನಿಯಮಗಳನ್ನು ಉಲ್ಲಂಘಿಸಿ, ಕಾನೂನನ್ನು ಗಾಳಿಗೆ ತೂರಿದಲ್ಲಿ ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಶಿಕ್ಷಣ ಸಂಸ್ಥೆಗಳ ಪರನಾಗಿಯನ್ನು ಕಾನೂನು ಪ್ರಕಾರ ರದ್ದುಗೊಳಿಸುವುದು / ಅಮಾನ್ಯ ಮಾಡುವುದು.
- ⊙ ಕಾನೂನನ್ನು ಉಲ್ಲಂಘಿಸಿ, ಗಾಳಿಗೆ ತೂರಿರುವುದು, ಕಾರ್ಯವಿಧಾನಗಳು ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಹೊರಗುತ್ತಿಗೆ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲು/ ಅಮಾನ್ಯ ಮಾಡಲು ಶಿಫಾರಸ್ಸು ಮಾಡುವುದು.
- ⊙ ತಪ್ಪನ್ನು ಎಸಗಿರುವ ಸಿಬ್ಬಂದಿ ಅಥವಾ ಇಲಾಖೆಯ ಕಾರ್ಯನಿರ್ವಾಹಕ ಮತ್ತು ಶಾಸನಾತ್ಮಕ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳ ಅನ್ವಯ ಕ್ರಮ ಜರುಗಿಸುವುದು ಬಾಲಕಾರ್ಮಿಕ ಇಲಾಖೆ ಮಾಡಬೇಕಾಗಿದೆ.

**ಬಾಲಕಾರ್ಮಿಕತೆಗೆ ಸಂಬಂಧಪಟ್ಟು ಈ ಕೆಳಗಿನ ಕಾಯಿದೆಗಳು ಜಾರಿಯಲ್ಲಿವೆ**

- ಫ್ಯಾಕ್ಟರಿ ಕಾಯಿದೆ ೧೯೪೮: ಕರ್ನಾಟಕ ಅಂಗಡಿ ಹಾಗೂ ಆರ್ಥಿಕ ವ್ಯವಸ್ಥೆ ಕಾಯಿದೆ ೧೯೬೧ ಮೋಟಾರು ಹಾಗೂ ಕಾರ್ಮಿಕರ ಕಾಯಿದೆ ೧೯೬೧
- ಮಕ್ಕಳ ದುಡಿಮೆ
- ಬೀಡಿ ಹಾಗೂ ಸಿಗರೇಟ್ ಕಾರ್ಮಿಕರ (ದುಡಿಮೆ ಸ್ಥಿತಿಗತಿ) ಕಾಯಿದೆ ೧೯೬೬
- ಬಾಲಕಾರ್ಮಿಕತೆ ನಿಷೇದ ಕಾಯಿದೆ ೧೯೮೬ ಪ್ರಸ್ತುತ ಬಾಲಕಾರ್ಮಿಕತೆ ನಿಷೇಧ ಸೆಕ್ಷನ್ ೧೭ನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಈ ಕಾಯಿದೆಯ ತಿದ್ದುಪಡಿಗಾಗಿ ಬಹಳಷ್ಟು ನಿರೀಕ್ಷೆಗಳನ್ನು ಮಾಡಲಾಗುತ್ತಿದೆ. ಮಕ್ಕಳು ಎಂದರೆ

೧೪ ವರ್ಷದೊಳಗಿನವರು ಮಾತ್ರ ಯಾಕೆ ಎಂಬ ಪ್ರಶ್ನೆ ಏಳುತ್ತದೆ. ಈ ಹಿನ್ನೆಲೆಯಲ್ಲಿ ಈ ಕಾಯಿದೆಯ ತಿದ್ದುಪಡಿ ಅವಶ್ಯವಾಗುತ್ತದೆ.

ನಮ್ಮ ವ್ಯಾಪ್ತಿಯ ಅಧಿಕಾರಿಗಳು ಬಾಲಕಾರ್ಮಿಕತೆಯಲ್ಲಿನ ಮಕ್ಕಳನ್ನು ಗುರುತಿಸಿದಾಗ ಅವರು ಗಮನಿಸುವುದು ಎರಡೆ ಸಂಗತಿ ೧. ಮಗು ೧೪ ವರ್ಷದೊಳಗಿನದೆ ೨. ಮಗು ೧೪ ವರ್ಷದಾಟಿದೆಯೇ ಎಂಬ ಅಂಶ ಹೀಗೆ ಪ್ರಾಯ ದೃಢೀಕರಣ ಅವರ ಬಹುದೊಡ್ಡ ಸಂಗತಿಯಾಗುತ್ತದೆ. ಆದರೆ ಯಾವುದೇ ಅಧಿಕಾರಿ ಮಕ್ಕಳನ್ನು ಕಾರ್ಮಿಕತೆಯಲ್ಲಿ ಗುರುತಿಸಿದರೆ ಅವರ ಕರ್ತವ್ಯವೆಂದರೆ ಅವರನ್ನು ಸಕ್ಷಮ ಪ್ರಾಧಿಕಾರವಾಗಿರುವ ಮಕ್ಕಳ ಕಲ್ಯಾಣ ಸಮಿತಿಯದ್ದೇ ಆಗಿರುತ್ತದೆ. ಮಕ್ಕಳಿಗೆ ಯಾವ ಸರಕಾರಿ ಅಥವಾ ಸರಕಾರೇತರ ಸಂಸ್ಥೆಯಲ್ಲಿ ಬೆಳೆಸಬೇಕು ಎಂಬ ನಿರ್ಧಾರ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ ತೆಗೆದುಕೊಂಡ ನಿರ್ಧಾರದಿಂದಲೇ ಪೂರ್ಣಗೊಳಿಸುವುದು. ಇದರ ಉಲ್ಲೇಖ ಮಕ್ಕಳ ಕಲ್ಯಾಣ ಸಮಿತಿಯ ತಿದ್ದುಪಡಿ ೩೪ನೇ ಸೆಕ್ಷನ್ ನಲ್ಲಿದೆ.

ಹಾಗೆ ಗುರುತಿಸಲಾದ ಮಕ್ಕಳು ೧೪ ವರ್ಷಕ್ಕಿಂತ ಮೇಲ್ಪಟ್ಟವರಾದರೆ ಮಾಲೀಕರ ಮೇಲೆ ಕನಿಷ್ಟಕೂಲಿ ಕಾಯಿದೆ ಅಡಿಯಲ್ಲಿ ಕೇಸು ದಾಖಲಿಸಿ ಪರಿಹಾರ ಕೊಡಿಸಿ ಪ್ರಕರಣ ಕೊನೆಗೊಳಿಸುವ ಪರಿಪಾಠವಿದೆ.

ಮಕ್ಕಳ ನ್ಯಾಯ ಕಾಯಿದೆಯ ಸೆಕ್ಷನ್ ೩೧ರಂತೆ ಬಾಲ ಕಾರ್ಮಿಕತೆಯಿಂದ ಮುಕ್ತಗೊಳಿಸಲಾದ ಮಗು ೧೪ ವರ್ಷ ವಯಸ್ಸು ದಾಟಿರುವುದು ಸಾಭೀತಾದಲ್ಲಿ ಅವರ ಪಾಲನೆ–ಪೋಷಣೆ, ರಕ್ಷಣೆ, ಅಭಿವೃದ್ಧಿ, ವಿಕಾಸ ಮತ್ತು ಪುನರ್ವಸತಿ ಅದರಲ್ಲೂ ಮಾನವ ಹಕ್ಕುಗಳನ್ನು ಗಮನದಲ್ಲಿರಿಸಿ ಕ್ರಮ ಕೈಗೊಳ್ಳುವ ಜವಾಬ್ದಾರಿ ಮಕ್ಕಳ ಕಲ್ಯಾಣ ಸಮಿತಿಯದ್ದಾಗಿರುತ್ತದೆ. ಬಹಳಷ್ಟು ಸನ್ನಿವೇಶಗಳಲ್ಲಿ ಬಾಲ ಕಾರ್ಮಿಕತೆಯಲ್ಲಿದ್ದ ಮಕ್ಕಳು ದೈಹಿಕವಾಗಿ, ಲೈಂಗಿಕವಾಗಿ ಬಳಸಲ್ಪಟ್ಟಿರುತ್ತಾರೆ, ಮೂಲ ಅವಶ್ಯಕತೆಗಳಿಂದ ವಂಚಿತ ರಾಗಿರುತ್ತಾರೆ. ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯಕ್ಕೆ ಸಂಬಂಧಿಸಿ ಮಕ್ಕಳು ಹಾಗೂ ಕಾರ್ಮಿಕ ಇಲಾಖೆಯ ನಡುವೆ ಸೇತುವೆಯಾಗಿ ಕೆಲಸ ಮಾಡಬೇಕಾಗುತ್ತದೆ.

ಇಲಾಖೆ ಹಾಗೂ ವ್ಯವಸ್ಥೆಗಳ ನಡುವೆ ಸಮನ್ವಯತೆ ಇದ್ದರೆ ಮಾತ್ರ ಮಕ್ಕಳ ಬಗೆಗೆ ಸೂಕ್ಷ್ಮತೆಯೊಂದಿಗೆ ಕೆಲಸಮಾಡಿ ಕಾನೂನಿನ ಆಶಯವನ್ನು ಅರ್ಥೈಸಿಕೊಂಡು ತಮ್ಮ ಅಧಿಕಾರವನ್ನು ಸಮರ್ಪಕವಾಗಿ ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ. ಅಧಿಕಾರಿಗಳು ಹೇಳುವ ಪ್ರಕಾರ ಅವರಿಗೆ ಬಾಲಕಾರ್ಮಿಕತೆ ಕಾಯಿದೆ ಮಾತ್ರ ಅನ್ವಯಿಸುತ್ತದೆ ಮತ್ತು

ಮಕ್ಕಳ ನ್ಯಾಯ ಕಾಯಿದೆ ಅವರಿಗೆ ಲಾಗೂ ಆಗುವುದಿಲ್ಲ. ಮಕ್ಕಳ ನ್ಯಾಯ ಕಾಯಿದೆ ಭಾರತದ ಪ್ರತೀ ಮಗುವಿಗೂ ಅನ್ವಯಿಸುತ್ತದೆ. ಹೀಗಿರುವಾಗ ಕಾರ್ಮಿಕ ಇಲಾಖೆ ತಪ್ಪಿಸಿ ಕೊಳ್ಳುವಂತಿಲ್ಲ.

ಕಾರ್ಮಿಕ ಇಲಾಖೆ ಬಾಲಕಾರ್ಮಿಕತೆಯನ್ನು ತಡೆಯಲಿಕ್ಕಾಗಿ ಪ್ರಶಂಸಾಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆಯಾದರೂ, ಅವರಿಗೆ ಮಗುವಿನ ರಕ್ಷಣೆ ದಾಳಿ ಮಾಡಿ ಮಕ್ಕಳನ್ನು ಹಿಡಿಯುವುದರ ಮೂಲಕ ಬಾಲಕಾರ್ಮಿಕತೆ ರಹಿತ ಸಮಾಜ ನಿರ್ಮಾಣ ಸಾಧ್ಯವಾಗುವುದಿಲ್ಲ. ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ ಕೂಡಿದ ಪುನರ್ವಸತಿ ಮಕ್ಕಳ ಕಲ್ಯಾಣ ಸಮಿತಿಯ ಸಹಯೋಗದಲ್ಲೇ ರೂಪಿತವಾಗಿರಬೇಕಾಗುತ್ತದೆ. ಒಟ್ಟಾರೆ ಇಲಾಖೆಗಳ ಕಾರ್ಯವೈಖರಿ ಮಕ್ಕಳಿಗೆ ಬಾಲಕಾರ್ಮಿಕರಾಗಲು ಪ್ರೋತ್ಸಾಹಿಸುತ್ತಿರುವಂತೆ ಬಾಸವಾಗುತ್ತದೆ.

ಕರ್ನಾಟಕ ಸರಕಾರ ೨೦೦೧ರಲ್ಲಿ ಒಂದು ಕಾರ್ಯಯೋಜನೆಯನ್ನು ತಯಾರಿಸಿ ೨೦೦೭ ರೊಳಗೆ ರಾಜ್ಯದಲ್ಲಿ ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಲು ಯೋಜಿಸಿತು. ದೊಡ್ಡ ಮೊತ್ತವನ್ನು ಈ ಉದ್ದೇಶಕ್ಕೆ ಕಾಯ್ದಿರಿಸಿತು. ಇನ್ನೂರಕ್ಕೂ ಹೆಚ್ಚು ಬಾಲಕಾರ್ಮಿಕರ ಶಾಲೆಗಳನ್ನು ತೆರೆಯಲಾಯಿತು. ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೇಲುಸ್ತುವಾರಿಯಲ್ಲಿ ಈ ಶಾಲೆಗಳು ನಡೆಯುತ್ತಿವೆ.

ಬಹಳಷ್ಟು ಜಿಲ್ಲೆಗಳು ಬಾಲಕಾರ್ಮಿಕತೆ ಮುಕ್ತ ಜಿಲ್ಲೆಗಳೆಂದು ಘೋಷಿಸಲ್ಪಟ್ಟಿವೆ. ಆದರೂ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ೨೦೧೭ ರೊಂದರಲ್ಲೇ ೨೭ಕ್ಕೂ ಅಧಿಕ ಬಾಲಕಾರ್ಮಿಕರನ್ನು ರಕ್ಷಿಸಲಾಗಿದೆ.

**೮. ಮಕ್ಕಳ ಸಹಾಯವಾಣಿ**

ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಮಕ್ಕಳ ಸಹಾಯವಾಣಿ ಕಾರ್ಯನಿರ್ವಹಿಸುತ್ತಿದೆ. ಆದರೂ ಮಂಗಳೂರು ಮಕ್ಕಳ ಸಹಾಯವಾಣಿ ನಗರಪ್ರದೇಶಕ್ಕೆ ಮಾತ್ರ ಸೀಮಿತವಾಗಿದೆ. ಅದು ೧೦೯೮ ಸೇವಾ ಸಂಖ್ಯೆಯೊಂದಿಗೆ ೨೪ ಗಂಟೆ ಏಳು ದಿನ ಸೇವೆಸಲ್ಲಿಸುತ್ತದೆ.

ಉಡುಪಿ ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿಯ ಅಧಿಕೃತ ಕೇಂದ್ರವಿಲ್ಲದಿದ್ದರೂ ೧೦೯೮ ಸೇವೆ ಉಪಲಬ್ಧವಿದೆ. ಕರೆ ವಿಭಾಗೀಯ ಕಚೇರಿಗೆ ಹೋಗಿ ನಂತರ ಸ್ಥಳೀಯ ಸೇವಾ ವ್ಯವಸ್ಥೆಗೆ ಮಾಹಿತಿ ನೀಡಿ ತನ್ಮೂಲಕ ಸೇವೆ ನೀಡಲಾಗುತ್ತಿದೆ.

ಮಕ್ಕಳ ಸಹಾಯವಾಣಿ ಮಕ್ಕಳ ಸ್ನೇಹಿ ವ್ಯವಸ್ಥೆಯೆಂದು ಗುರುತಿಸಲ್ಪಟ್ಟಿದ್ದು ವಂಚಿತ ಮಕ್ಕಳ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ನಡುವೆ ಸೇತುವಾಗಿ ಕೆಲಸಮಾಡುವುದರಿಂದ ಇಂತಹ ವ್ಯವಸ್ಥೆಯ ಅವಶ್ಯಕತೆ ಜಿಲ್ಲೆಗೆ ಇದೆ. ಮಕ್ಕಳ ಸಹಾಯವಾಣಿ ಘಟಕ ಮಕ್ಕಳ ರಕ್ಷಣಾ ಪಾಲುದಾರರಿಗೆ ಗೃಹತನಿಖೆ, ಸಾಮಾಜಿಕ ವರದಿ, ಆಪ್ತಸಮಾಲೋಚನೆ, ಕಾನೂನುಬದ್ಧ ಸಾಗಣಾ ವ್ಯವಸ್ಥೆ, ಅಹೋರಾತ್ರಿ ವಸತಿ ವ್ಯವಸ್ಥೆ ಇಲಾಖೆಗಳೊಂದಿಗೆ ಸಮನ್ವಯ, ಕಾರ್ಯಾಗಾರಗಳ ಹಾಗೂ ಇಲಾಖೆಗಳೊಂದಿಗೆ ಸಮನ್ವಯ, ಕಾರ್ಯಾಗಾರಗಳ ಹಾಗೂ ಮಾಹಿತಿ ಶಿಬಿರ ಆಯೋಜನೆ ಮಾಡುವುದರಿಂದ ಜಿಲ್ಲೆಯ ಮಕ್ಕಳ ರಕ್ಷಣಾ ವ್ಯವಸ್ಥೆಗೆ ಇದು ಪೂರಕವಾಗಿದೆ.

**೯. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ಇದು ಮಕ್ಕಳಿಗಾಗಿ ಜನನಪೂರ್ವ ವ್ಯವಸ್ಥೆಯಿಂದ ೧೮ ವರ್ಷ ವಯಸ್ಸಿನವರೆಗೂ ಕೆಲಸಮಾಡುವ ಸರಕಾರಿ ಇಲಾಖೆಯಾಗಿದೆ. ಈ ಘನ ಇಲಾಖೆಯ ಮೂಲಕ ಮಕ್ಕಳ ನ್ಯಾಯ ಕಾಯಿದೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಈ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯದ್ದಾಗಿರುತ್ತದೆ. ಹಾಗಾಗಿಯೇ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ನ್ಯಾಯ ಮಂಡಳಿಗೆ ಆಡಳಿತ ವ್ಯವಸ್ಥೆ ಮಾಡುವ ಜವಾಬ್ದಾರಿ ಈ ಇಲಾಖೆಯದ್ದಾಗಿರುತ್ತದೆ. ಅಲ್ಲದೆ ಕಾಲಕಾಲಕ್ಕೆ ಮಕ್ಕಳ ನ್ಯಾಯಕಾಯ್ದೆಯಂತಹ ಪ್ರಮುಖ ವಿಷಯದಲ್ಲಿ ಜನ ಸಾಮಾನ್ಯರಿಗೆ ಅರಿವು ನೀಡುವ ಜವಾಬ್ದಾರಿ ಅವರದ್ದಾಗಿರುತ್ತದೆ.

ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿ ವ್ಯವಸ್ಥೆಗಳೊಂದಿಗೆ ಜಾಲಾಪಾದಿ ಸಂಪರ್ಕವಿದೆ. ಆರೈಕೆ, ರಕ್ಷಣೆ, ಮಾರ್ಗದರ್ಶನ, ಸಹಯೋಗ ಅಭಿವೃದ್ಧಿ, ಪೌಷ್ಟಿಕಾಂಶ ಹಾಗೂ ಮಕ್ಕಳ ಪುನರ್ವಸತಿಯನ್ನು ಅಂಗನವಾಡಿ ಕಾರ್ಯಕರ್ತರು, ಮೇಲ್ವಿಚಾರಕರು ಹಾಗೂ ಇತರ ಸಿಬ್ಬಂದಿಗಳು ಸಮರ್ಪಕ ನ್ಯಾಯವ್ಯವಸ್ಥೆ ನೀಡಬಹುದಾಗಿದೆ.

ಉಡುಪಿ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತ್‌ನ ಮಕ್ಕಳ ಮಾರಾಟ ಸಾಗಣೆ ಸಮಿತಿ ಜಿಲ್ಲಾಧಿಕಾರಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅದರ ಅಧ್ಯಕ್ಷತೆ ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಯದ್ದಾಗಿದೆ. ಆದರೆ ಪ್ರಸ್ತುತ ಈ ಸಮಿತಿಗಳು ನಾಮ ಮಾತ್ರಕ್ಕೆ ಕಾರ್ಯನಿರ್ವಹಿಸುತ್ತಿವೆ.

ಮಕ್ಕಳ ವಿರುದ್ಧದ ಅಪರಾಧಗಳನ್ನು ಶಿಕ್ಷಣ ಇಲಾಖೆ/ಪೊಲೀಸ್/ಮಕ್ಕಳ ವಿಶೇಷ ಪೋಲಿಸ್ ಘಟಕ ಮತ್ತು ಅವಶ್ಯಕತೆ ಇದ್ದಲ್ಲಿ, ಮಕ್ಕಳ ಸಹಾಯವಾಣಿ ಮತ್ತು ಮಕ್ಕಳ

ಕಲ್ಯಾಣ ಸಮಿತಿಗಳ ಸಹಯೋಗದೊಂದಿಗೆ ಕಾರ್ಯವಿಧಾನಗಳು ಮತ್ತು ನಿಯಮಗಳಿಗನುಗುಣವಾಗಿ ಸೂಕ್ಷ್ಮವಾಗಿ ನಿರ್ವಹಿಸುವುದನ್ನು ಖಾತರಿಪಡಿಸಿಕೊಳ್ಳುವುದು.

⊙ ಮಗು ಅಪರಾಧವನ್ನು ಎಸಗಿರುವ ಸಂದರ್ಭದಲ್ಲಿ, ಪೊಲೀಸ್/ಮಕ್ಕಳ ವಿಶೇಷ ಪೊಲೀಸ್ ಘಟಕ, ಬಾಲನ್ಯಾಯ ಮಂಡಳಿ ಮತ್ತು ಅವಶ್ಯಕತೆ ಇದ್ದಲ್ಲಿ ಮಕ್ಕಳ ಸಹಾಯ ವಾಣಿಯ ಸಹಯೋಗದೊಂದಿಗೆ ಅಪರಾಧವನ್ನು ಕಾರ್ಯವಿಧಾನಗಳು ಮತ್ತು ಶಿಸ್ತು ನಿಯಮಗಳಿಗನುಗುಣವಾಗಿ ಸೂಕ್ಷ್ಮವಾಗಿ ನಿರ್ವಹಿಸುವುದು.

⊙ ಅಪರಾಧಿಯು ತಾನೆ ಸ್ವಯಂ ಪ್ರೇರಿತನಾಗಿ (ಸುಮೋಟೋ) ಸಂಜ್ಞೆಯ ಅಪರಾಧ ಪ್ರಕರಣದಲ್ಲಿ, ಪ್ರಥಮ ತನಿಖಾ ವರದಿ ಮತ್ತು ತನಿಖಾ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಪೊಲೀಸ್ ಇಲಾಖೆಯ ಸಮನ್ವಯತೆಯೊಂದಿಗೆ ಕಾರ್ಯನಿರ್ವಹಿಸುವುದು.

⊙ ಆಘಾತದ ನಂತರದ ಮಗುವಿನ ಆರೈಕೆಯ ಸಂವೇಧನೆಯ ಕಾರ್ಯವಿಧಾನಗಳು ಮತ್ತು ಶಿಸ್ತು ನಿಯಮಗಳನ್ನು ಅನುಸರಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಶಿಕ್ಷಣ ಇಲಾಖೆಯ ಸಮನ್ವಯತೆಯೊಂದಿಗೆ ಶಿಕ್ಷಣ ಸಂಸ್ಥೆಗಳು ದಾಖಲಾತಿಯ ವಿಧಾನಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.

⊙ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಮಕ್ಕಳ ಕಲ್ಯಾಣ ಸಮಿತಿಗಳು ಮತ್ತು ಬಾಲನ್ಯಾಯ ಮಂಡಳಿಗಳ ಮೂಲಕ ಬಲಿಪಶುವಾಗಿರುವ ಮಗು ಮತ್ತು ಅವನ/ಳ ಕುಟುಂಬಕ್ಕೆ ಸಮಯಕ್ಕೆ ಸರಿಯಾಗಿ ಆರ್ಥಿಕ ಪರಿಹಾರ ಮತ್ತು ಸೂಕ್ತ ಪುನರ್‌ವಸತಿ ವ್ಯವಸ್ಥೆಯನ್ನು ಕಲ್ಪಿಸುವುದು.

⊙ ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು.

⊙ ತಪ್ಪು ಎಸಗಿರುವ ಸಿಬ್ಬಂದಿಯ ವಿರುದ್ಧ ಅಥವಾ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯನಿರ್ವಾಹಕರು ಮತ್ತು ಶಾಸನಬದ್ಧ ಮಂಡಳಿಗಳ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳನ್ವಯ ಸೂಕ್ತ ಕ್ರಮಜರುಗಿಸುವುದು.

⊙ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪ್ರತಿ ತಿಂಗಳು ವರದಿಮಾಡುವುದು ಮತ್ತು ಅನುಸರಣೆ ಮತ್ತು ಪರಿಶೀಲನೆಗಾಗಿ ಪೊಲೀಸ್ ಮತ್ತು ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವುದು.

⊙ ಪ್ರತಿಕ್ರಿಯಾತ್ಮಕ ಕಾರ್ಯವಿಧಾನಗಳು ಮತ್ತು ಕಾನೂನುಗಳನ್ನು ಅನುಸರಿಸಿರುವ ಬಗ್ಗೆಆಗಿಂದಾಗ್ಗೆ ಸಂಬಂಧಿಸಿದ ಇಲಾಖೆಗಳೊಂದಿಗೆ ಪರಿಶೀಲಿಸುವುದು. ಅಗತ್ಯಕ್ಕೆ ತಕ್ಕಂತೆ ಮಧ್ಯಂತರ ತಿದ್ದುಪಡಿಗಳನ್ನು ಮಾಡುವುದುಹಾಗೂ ಪ್ರಕರಣಗಳ ತ್ವರಿತ ವಿಲೇವಾರಿ ಮಾಡುವುದರೊಂದಿಗೆ ಆಘಾತಗಳು ಮತ್ತು ಮಗು ಬಲಿಪಶುವಾಗುವುದನ್ನು ತಡೆಯುವುದು. ಮಕ್ಕಳ ರಕ್ಷಣಾ ನೀತಿಯನ್ನು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇತರೆ ಪ್ರಮುಖ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಹೊರಡಿಸುವುದು.

⊙ ನೋಡಲ್ ಇಲಾಖೆಯಾಗಿ ಪ್ರಮುಖ ಇಲಾಖೆಗಳಾದ ಶಿಕ್ಷಣ ಮತ್ತು ಪೊಲೀಸ್ ಇಲಾಖೆಗಳು ಮಕ್ಕಳ ರಕ್ಷಣಾ ನೀತಿಯನ್ನು ಅನುಷ್ಠಾನಗೊಳಿಸುವುದನ್ನು ಖಚಿತಡಿಸುವುದು ಮತ್ತು ಅವಶ್ಯಕತೆನುಗುಣವಾಗಿ ಮಾರ್ಗಸೂಚಿಗಳನ್ನು ಹೊರಡಿಸುವುದು ಮತ್ತು ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆಯನ್ವಯ, ಪೋಲಿಸ್ ಇಲಾಖೆಯು ಸಂಬಂಧಿಸಿದ ಅಧಿಕಾರಿಗಳಾದ ಮಕ್ಕಳ ಕಲ್ಯಾಣಾಧಿಕಾರಿಗಳು, ಮಕ್ಕಳ ವಿಶೇಷ ಪೋಲಿಸ್ ಘಟಕ ಹಾಗೂ ತನಿಖಾಧಿಕಾರಿಗಳಿಗೆ ಮಾರ್ಗಸೂಚಿಗಳು ಮತ್ತು ತನಿಖಾ ಶಿಸ್ತುಕ್ರಮಗಳನ್ನುನೀಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ಮತ್ತು ಸಂಬಂಧಿಸಿದ ಕಾನೂನುಗಳನ್ವಯ ಆಘಾತದ ನಂತರದ ಮಗುವಿನ ಆರೈಕೆಯ ಸಂವೇದನಾ ಕಾರ್ಯವಿಧಾನಗಳು ಮತ್ತು ಶಿಸ್ತುಕ್ರಮಗಳನ್ನು ಮಕ್ಕಳ ಮೇಲಿನ ಲೈಂಗಿಕ ಹಲ್ಲೆ ಪ್ರಕರಣಗಳ ನಿರ್ವಹಣೆ ವ್ಯವಸ್ಥೆಯು ಸಿದ್ಧವಿರುವುದನ್ನು ಖಚಿತಪಡಿಸಿಕೊಳ್ಳುವುದು. ಸಂಬಂಧಿಸಿದ ಅಧಿಕಾರಿಗಳಾದ ಮಕ್ಕಳ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಆಪ್ತಸಮಾಲೋಚಕರು ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಮಾರ್ಗಸೂಚಿಗಳನ್ನು ನೀಡುವುದು.

⊙ ಮಕ್ಕಳ ಸೂಕ್ಷ್ಮ ಸಂವೇದನಾ ಪ್ರಕರಣಗಳನ್ನು ನಿರ್ವಹಿಸುವಾಗ, ದಂಡಾಧಿಕಾರಿ, ಪೊಲೀಸ್ ದಂಡಾಧಿಕಾರಿ, ಸಾರ್ವಜನಿಕ ಅಭಿಯೋಜಕರ ವ್ಯವಸ್ಥೆ ನ್ಯಾಯಾಂಗದ ಸಹಯೋಗದೊಂದಿಗೆ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು.

⊙ ಬಾಲನ್ಯಾಯ ವ್ಯವಸ್ಥೆ ಮತ್ತು ಕಾನೂನಿನಲ್ಲಿ ಬರುವ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೋಲಿಸ್ ಘಟಕ, ಮಕ್ಕಳ ಸಹಾಯವಾಣಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಸ್ವಯಂಸೇವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಸಾಮರ್ಥ್ಯ ಅಭಿವೃದ್ಧಿಪಡಿಸುವುದು.

⊙ ಪ್ರಮುಖ ಇಲಾಖೆಗಳಾದ ಪೊಲೀಸ್, ಶಿಕ್ಷಣ ಮತ್ತು ನ್ಯಾಯಾಂಗದ ಸಿಬ್ಬಂದಿಗಳಿಗೆ ಮಕ್ಕಳ ರಕ್ಷಣೆ ಮತ್ತು ಉಲ್ಲಂಘನಾ ಪ್ರಕರಣಗಳಿಗೆ ಪ್ರತಿಕ್ರಿಯಿಸುವ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ಅವರ ಸಾಮರ್ಥ್ಯಾಭಿವೃದ್ಧಿಗೊಳಿಸುವುದು.

⊙ ಅವಶ್ಯವಿರುವ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಸಂಬಂಧಿಸಿದ ಇಲಾಖೆಗಳ ಜಂಟಿ ಸಹಭಾಗಿತ್ವದೊಂದಿಗೆ ಅಭಿವೃದ್ಧಿಪಡಿಸುವುದು ಮತ್ತು ವಿಶೇಷ ಮಕ್ಕಳಿರುವೆಡೆ ವ್ಯಾಪಕವಾಗಿ ಪ್ರದರ್ಶಿಸುವುದು.

⊙ ಪರಿಸ್ಥಿತಿಗಳ ನಿರಂತರ ಪರಿಶೀಲನೆ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಅಡಿಯಲ್ಲಿ ವಿವಿಧ ಇಲಾಖೆಗಳು ಸಹಯೋಗದೊಂದಿಗೆ ಕಾರ್ಯನಿರ್ವಹಿಸುವುದು.

**ಇಲಾಖೆಗಳ ಸೋಲುಗಳು**

ಮಕ್ಕಳ ಕಲ್ಯಾಣ ಸಮಿತಿಗಳು ಪ್ರತಿ ಜಿಲ್ಲೆಯಲ್ಲಿ ೨೦೦೫ ರಿಂದೀಚೆಗೆ ಕಾರ್ಯ ವೆಸಗುತ್ತಿವೆ. ಆದರೆ ಈ ಮಕ್ಕಳ ನ್ಯಾಯ ವ್ಯವಸ್ಥೆ ಬಲಗೊಳ್ಳಬೇಕಿದೆ. ಅದಕ್ಕಾಗಿ ಸೂಕ್ತ ಬೌದ್ಧಿಕ ವ್ಯವಸ್ಥೆಗಳೂ ಮಾಡುವ ಅವಶ್ಯಕತೆ ಇದೆ.

**೧೦. ಆಟೋ/ಟ್ಯಾಕ್ಸಿ ಚಾಲಕರ ಯೂನಿಯನ್(ಸಂಘಟನೆ):**

ತಪ್ಪಿಸಿಕೊಂಡ, ಓಡಿಬಂದ ಮಕ್ಕಳ ರಕ್ಷಣೆಯಲ್ಲಿ ಆಟೋ–ಟ್ಯಾಕ್ಸಿ ಚಾಲಕರ ಪಾತ್ರ ಬಹಳಷ್ಟಿದೆ. ಇಂತಹ ಸಮಸ್ಯೆಗೆ ಸಿಕ್ಕಿ ಬಿದ್ದು ದಾರಿಕಾಣದೆ ಸಾರ್ವಜನಿಕ ಸ್ಥಳಗಳಲ್ಲಿ ಕಂಡುಬರುವ ಮಕ್ಕಳನ್ನು ಪೊಲೀಸ್ ಇಲಾಖೆಗೆ ಮಾಹಿತಿ ನೀಡುವ ಈ ಚಾಲಕರ ಸಂಘಟನೆ ಜಿಲ್ಲೆಯು ಮಕ್ಕಳ ಸ್ನೇಹಿ ಎನಿಸಿಕೊಂಡಿರುತ್ತಾರೆ.

**೧೧. ಸಾರಿಗೆ ಇಲಾಖೆ:**

ಮಕ್ಕಳ ರಕ್ಷಣೆಯಲ್ಲಿ ಸಾರಿಗೆ ಇಲಾಖೆಗೆ ವಿಶೇಷ ಜವಾಬ್ದಾರಿ ಇದೆ. ಮಕ್ಕಳನ್ನು ವಾಹನದಲ್ಲಿ ಕರೆದೊಯ್ಯುವಾಗ ಪ್ರಕರಣಗಳು ಸಂಭವಿಸಿದಲ್ಲಿ, ಪೋಲೀಸ್ ಇಲಾಖೆಯ

ಸಹಯೋಗದೊಂದಿಗೆ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆ ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಗಳು ಕಾನೂನಿನನ್ವಯ ಹೊರಡಿಸಿರುವ, ಕಾರ್ಯ ವಿಧಾನಗಳು ಮತ್ತು ಮಾರ್ಗಸೂಚಿಗಳನ್ನು ಅನುಸರಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡುವುದು.

⊙ ಎಲ್ಲಾ ಉಲ್ಲಂಘನೆ ಪ್ರಕರಣಗಳಲ್ಲಿ ಪ್ರಥಮ ತನಿಖಾ ವರದಿಯನ್ನು ನೋಂದಾಯಿಸುವುದನ್ನು ಮತ್ತು ತನಿಖೆಯನ್ನು ಕಾನೂನಿನನ್ವಯ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು. ವಾಹನವನ್ನು ಸ್ವಾಧೀನಪಡಿಸಿಕೊಳ್ಳುವುದು ಸೇರಿದಂತೆ, ತ್ವರಿತ ನ್ಯಾಯದಾನಕ್ಕಾಗಿ ತನಿಖೆಯನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ಸಹಕಾರ ನೀಡುವುದನ್ನು ಖಚಿತಪಡಿಸಿಕೊಳ್ಳುವುದು.

⊙ ತುರ್ತು ಪರಿಸ್ಥಿತಿಯ ನಿರ್ವಹಣೆಗೆ, ಸೂಕ್ತ ತುರ್ತು ನೆರವಿನ ಸೇವೆಯ ಸೌಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳುವುದು.

⊙ ಅವಶ್ಯವಿರುವಲ್ಲಿ, ಯಾವುದೇ ಸಿಬ್ಬಂದಿಯ ವಿರುದ್ಧ ಕರ್ನಾಟಕ ಸೇವಾ ನಿಯಮಗಳನ್ವಯ ಆಂತರಿಕ ಶಿಸ್ತು ಕ್ರಮ ಜರುಗಿಸುವುದು.

⊙ ಪೊಲೀಸ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಮಕ್ಕಳ ಮೇಲಿನ ದೌರ್ಜನ್ಯದ ಎಲ್ಲಾ ಪ್ರಕರಣಗಳು ಮತ್ತು ಪ್ರಗತಿಯನ್ನು ನಿಯಮಿತವಾಗಿ ಪರಿಶೀಲನೆ ನಡೆಸುವುದು.

⊙ ಕಾನೂನುಗಳು ಉಲ್ಲಂಘನೆ ಅಥವಾ ಕಾನೂನುಗಳು ಮತ್ತು ನಿಯಮಗಳನ್ನು ಗಾಳಿಗೆ ತೂರಿರುವುದು ಅಥವಾ ತನಿಖೆಗೆ ಅಡ್ಡಿಪಡಿಸುವ ಯಾವುದೇ ವಾಹನ ಅಥವಾ ಸಾರಿಗೆ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸುವುದು.

⊙ ಕಾನೂನನ್ನು ಉಲ್ಲಂಘಿಸಿ, ಗಾಳಿಗೆ ತೂರಿರುವುದು, ಕಾರ್ಯವಿಧಾನಗಳು ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಹೊರಗುತ್ತಿಗೆ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲು/ ಅಮಾನ್ಯ ಮಾಡಲು ಶಿಫಾರಸ್ಸು ಮಾಡುವುದು.

⊙ ತಪ್ಪನ್ನು ಎಸಗಿರುವ ಸಿಬ್ಬಂದಿ ಅಥವಾ ಇಲಾಖೆಯ ಕಾರ್ಯನಿರ್ವಾಹಕರು ಮತ್ತು ಶಾಸನಾತ್ಮಕ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳ ಅನ್ವಯ ಕ್ರಮ ಜರುಗಿಸುವುದು.

⊙ ಪರಿಸ್ಥಿತಿಯ ಮಾಪನ ಮಾಡಲು ನಿಯಮಿತ ಮತ್ತು ವಾರ್ಷಿಕ ಪರಿಶೀಲನೆ ಮತ್ತು ಕಾರ್ಯವಿದಾನಗಳು ಅಥವಾ ಅವಶ್ಯವಿರುವ ಬದಲಾವಣೆಗಳು, ಸುಧಾರಿತ ಕ್ರಮಗಳ ನಿರ್ವಹಣೆಯಿಂದ ಮಕ್ಕಳ ಕೇಂದ್ರಿತ, ಮಕ್ಕಳ ಸಂವೇಧಿ ಪ್ರಕ್ರಿಯೆ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದರ ಬಗ್ಗೆ ರಾಜ್ಯ ಇಲಾಖೆಗಳಿಗೆ ವರದಿ ಸಲ್ಲಿಸುವುದು ಅಗತ್ಯ.

**೧೨. ವಾರ್ತಾ ಇಲಾಖೆ, ಮಾಧ್ಯಮಗಳು:**

ಮಕ್ಕಳು, ಕುಟುಂಬ ಮತ್ತು ಶಾಲೆಯ ಮೇಲೆ ಪರಿಣಾಮ ಬೀರುವ ಅಥವಾ ತೊಂದರೆಯಾಗುವ ತಪ್ಪು ಮಾಹಿತಿಯನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡದಂತೆ ಖಚಿತಪಡಿಸಿಕೊಳ್ಳುವುದು. ಅವಶ್ಯವಿದ್ದಲ್ಲಿ, ಘಟನೆಗೆ ಕಾರಣವಾಗಿರುವ ಅಪರಾಧಿಯನ್ನು ಪತ್ತೆ ಹಚ್ಚಲು ಅಥವಾ ಬಲಿಪಶುವಾಗಿರುವ ಮಗುವಿನ ಪೋಷಕರು ಪಾಲಕರನ್ನು ಪತ್ತೆ ಹಚ್ಚಲು ಸರ್ಕಾರಕ್ಕೆ ನೆರವು ನೀಡುವುದು. ಮಕ್ಕಳ ಮತ್ತು ಮಕ್ಕಳಿಗೋಸ್ಕರ ಇರುವ ಕಾನೂನುಗಳು, ನಿಯಮಗಳು, ನಿಯಂತ್ರಣಗಳು ಮತ್ತು ಮಾರ್ಗಸೂಚಿಗಳ ಬಗ್ಗೆ ಆಗಾಗ್ಗೆ ಮಾಹಿತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕ್ಷೇತ್ರ ಪ್ರಚಾರ ನಿರ್ದೇಶನಾಲಯ, ಜಾಹೀರಾತು ಮತ್ತು ದೃಶ್ಯ ಪ್ರಚಾರ ನಿರ್ದೇಶನಾಲಯ (DAVP), ಆಕಾಶವಾಣಿ, ದೂರದರ್ಶನ ಪ್ರಕಟಣೆ ಕಾರ್ಯಕ್ರಮಗಳು ಮತ್ತು ಸಾಕ್ಷ್ಯಚಿತ್ರ ಇತ್ಯಾದಿಗಳ ಮೂಲಕ ಪ್ರಸಾರ ಮಾಡಲುಹೆಚ್ಚಿನ ಆದ್ಯತೆ ನೀಡುವುದು. ಜಿಲ್ಲೆಯಲ್ಲಿ ಸಮಸ್ಯೆಗೆ ಸಿಕ್ಕಿದ ಮಕ್ಕಳು ಮುಖ್ಯವಾಗಿ ಹಿಂಸೆ, ದೌರ್ಜನ್ಯ, ಕಾಣೆಯಾಗುವುದು, ದುರುಪಯೋಗಿಸಲ್ಪಡುವುದು, ಇಂತಹ ಘಟನೆಗಳನ್ನು ಸಾರ್ವಜನಿಕರ ಗಮನಕ್ಕೆ ತಂದು ಸಹಾಯ ಮಾಡುವ ಸಮೂಹ ಮಾಧ್ಯಮಗಳು ತಮ್ಮದೇ ಆದ ರೀತಿಯಲ್ಲಿ ಗುರುತಿಸಲ್ಪಟ್ಟಿವೆ. ಮಕ್ಕಳ ನ್ಯಾಯಕಾಯಿದೆ ತಿದ್ದುಪಡಿ ೨೦೦೬ ಸೆಕ್ಷನ್ ೨೧(೧) ಪ್ರಕಾರ ಮಕ್ಕಳ ಪ್ರಕರಣ ಗಳಲ್ಲಿ ಹೆಸರು, ಶಾಲೆ ಹೆಸರು ಅಥವಾ ಎಂತಹಾ ಮಗುವಿನ ಗುರುತಿನ ಮಾಹಿತಿ ನೀಡುವುದನ್ನು ನಿಷೇಧಿಸಿದೆ. ಇದರಿಂದಾಗಿ ಮಕ್ಕಳನ್ನು ಇನ್ನೂ ಹೆಚ್ಚಿನ ನೋವಿಗೆ ಬಲಿಯಾಗಬೇಕಾಗುತ್ತದೆ. ಹೀಗಾಗಿ ಪ್ರಸಾರಕರು, ವರದಿಗಾರರು ಅಥವಾ ಸಂಬಂಧಿತ ಅಧಿಕಾರಿಗಳು ೨೫,೦೦೦/- ರೂ. ದಂಡ ತೆರಬೇಕಾಗುತ್ತದೆ. ಸಾಕಷ್ಟು ಪ್ರಕರಣಗಳಲ್ಲಿ ನೊಂದ ಮಕ್ಕಳ ಅಥವಾ ರಕ್ಷಣೆ ಪೋಷಣೆ ಅಥವಾ ಪುನರ್ವಸತಿಯ ಅವಸ್ಯಕತೆ ಇರುವ ಮಕ್ಕಳ ಪ್ರಕರಣಗಳನ್ನು ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ, ಮಕ್ಕಳ ಸ್ನೇಹಿ ವಿಧಾನದಿಂದ ಪ್ರಚುರಪಡಿಸಿದ ಘಟನೆಗಳು ಜಿಲ್ಲೆಯಲ್ಲಿ ಕಳೆದ ೫ ವರ್ಷಗಳಲ್ಲಿ ನಡೆದಿವೆ.

## ೧೩. ಸಾರ್ವಜನಿಕರು:

ಸಮಸ್ಯೆಗೆ ಸಿಲುಕಿದ ಪ್ರಕರಣಗಳಲ್ಲಿ ಶೇ. ೬೦ಕ್ಕೂ ಹೆಚ್ಚು ಮಕ್ಕಳಿಗೆ ಅತಿ ಶೀಘ್ರದಲ್ಲಿ ಪ್ರತಿಕ್ರಿಯೆ ನೀಡುವುದು ಸಾರ್ವಜನಿಕರು, ಮಾನವೀಯತೆ ಮೆರೆಯುವ ಸಂದರ್ಭವಿದು. ಮಕ್ಕಳ ಕಲ್ಯಾಣ ಸಮಿತಿಯೆದುರು ಮಕ್ಕಳನ್ನು ಸಾಕಷ್ಟು ಸಂದರ್ಭಗಳಲ್ಲಿ ಸಾರ್ವಜನಿಕರು ತಂದದ್ದಿದೆ. ಬಾಲಕಾರ್ಮಿಕತೆ, ಬಿಕ್ಷೆ ಎತ್ತುವುದು, ಗೃಹ ಕೆಲಸಕ್ಕೆ ಮಕ್ಕಳನ್ನು ಬಳಸುವ ಕೃತ್ಯಗಳನ್ನು ಜಿಲ್ಲೆಯಲ್ಲಿ ಸಾಕಷ್ಟು ಜನರು ಸಾರ್ವಜನಿಕರು ಬಯಲಿಗೆಳೆದದ್ದಿದೆ.

ಮಕ್ಕಳ ಹಕ್ಕುಗಳನ್ನು ಖಾತ್ರಿಪಡಿಸುವಲ್ಲಿ ಜನ ಸಾಮಾನ್ಯರು ತಮ್ಮದೇ ಆದ ಪಾತ್ರ ವಹಿಸಬೇಕಿದೆ. ಯಾವುದೇ ವ್ಯಕ್ತಿ ಮಕ್ಕಳ ಕಲ್ಯಾಣ ಸಮಿತಿಯ ಅನುಮತಿ ಪಡೆಯದೆ ತಮ್ಮದಲ್ಲದ ಯಾವುದೇ ಮಕ್ಕಳನ್ನು ವಶದಲ್ಲಿರಿಸುವಂತಿಲ್ಲ. ಈ ಎಲ್ಲಾ ವಿಷಯಗಳನ್ನು ಅರ್ಥೈಸಿಕೊಂಡು ಕಾರ್ಯಪ್ರವೃತ್ತರಾಗಲು ಸಾರ್ವಜನಿಕರು ಕಾನೂನಿನ ಅರಿವು ಹೆಚ್ಚಿಸಿ ಕೊಳ್ಳಬೇಕಿದೆ.

ಮಕ್ಕಳ ರಕ್ಷಣೆಯಲ್ಲಿ ಸಾರ್ವಜನಿಕರಿಗೆ ವಿಶೇಷ ಜವಾಬ್ದಾರಿಗಳಿವೆ. ಅನಾಥ ಪರಿತ್ಯಕ್ತ ಮಕ್ಕಳನ್ನು ತಮ್ಮ ಇಚ್ಚೆಯಿಂದ ಆಸ್ಪತ್ರೆಗಳಿಂದ ನೇರವಾಗಿ ತಂದು ಸಾಕುವ ಪ್ರಕರಣಗಳು ಜಿಲ್ಲೆಯಲ್ಲಿ ಇನ್ನೂ ನಡೆಯುತ್ತಿವೆ. ಇದನ್ನು ತಡೆದು ಮಗುವಿಗೆ ಉತ್ತಮ ಬಾಲ್ಯವನ್ನು ನೀಡಬಲ್ಲ ಕುಟುಂಬದಲ್ಲಿ ತಲುಪಿಸಲು ದತ್ತು ನಿಯಮಗಳಿಗನುಸಾರ ದತ್ತು ಪಡೆದುಕೊಳ್ಳುವುದೊಂದೇ ದಾರಿ ಎನ್ನುವ ಅಂಶವನ್ನು ಸಾರ್ವಜನಿಕರು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ.

## ೧೪. ರೈಲ್ವೇ ನಿಲ್ದಾಣದ ಸಿಬ್ಬಂದಿ / ರೈಲ್ವೆ ಪೊಲೀಸ್:

ಉಡುಪಿ ಜಿಲ್ಲೆಯಲ್ಲಿ ಕೊಂಕಣ ರೈಲು ಮಾರ್ಗ ಹಾದುಹೋಗುತ್ತಿದ್ದು ರಾಜಧಾನಿಯಿಂದ ಕನ್ಯಾಕುಮಾರಿಯವರೆಗೆ ಹಾದುಹೋಗುವ ರೈಲು ರಸ್ತೆಯಲ್ಲಿ ಮಹಾನಗರಿಗಳ ಮೂಲಕ ಬರುವ ಬಹಳಷ್ಟು ರೈಲುಗಳು ಓಡಾಡುತ್ತವೆ. ವಿವಿಧ ಕಾರಣಗಳಿಂದ ಮನೆಯಿಂದ, ಬಲಮಂದಿರಗಳಿಂದ ತಪ್ಪಿಸಿಕೊಳ್ಳುವ ಮಕ್ಕಳಿಗೆ ರೈಲ್ವೆ ಮಾರ್ಗ ಬಹು ಸುಲಭ ಹಾಗೂ ಅನುಕೂಲಕರ ಮಾರ್ಗ ಎನಿಸಿಕೊಂಡಿದೆ. ರೈಲ್ವೇ ನಿಲ್ದಾಣದ ಪ್ಲಾಟಾಫಾರ್ಮ್‌ಗಳಲ್ಲಿ ಮಕ್ಕಳು ಕೈತಪ್ಪಿಸಿಕೊಂಡು ಭಿಕ್ಷೆ, ಕಾರ್ಮಿಕತೆಗೆ ಜನ ಒದಗಿಸುವ ದಲಾಲಿಗಳ ಕೈಗೆ ಸಿಕ್ಕುವ ಸನ್ನಿವೇಶಗಳಿವೆ. ಈ ಹಿಂದಿನ ಹಲವು ವರ್ಷಗಳಲ್ಲಿ ನಾಲ್ಕಾರು ಮಕ್ಕಳು ಮುಖ್ಯವಾಗಿ ಪಶ್ಚಿಮಬಂಗಾಳ, ಮಹಾರಾಷ್ಟ್ರ ಉತರಾಂಚಲದಿಂದ ರೈಲು ಮಾರ್ಗವಾಗಿ

ಉಡುಪಿ ಬಂದಾಗ ರೈಲ್ವೆ ಪೋಲೀಸರ ಸಹಾಯದಿಂದ ಮಕ್ಕಳ ಕಲ್ಯಾಣ ಸಮಿತಿಯ ಮೂಲಕವಾಗಿ ಜಿಲ್ಲೆಯ ಮಕ್ಕಳ ಪುನರ್ವಸತಿ ಕೇಂದ್ರಗಳನ್ನು ಸೇರಿದ್ದಿದೆ.

**೧೫. ಸಮಾಜ ಕಲ್ಯಾಣ ಇಲಾಖೆ: ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ:**

ಮಕ್ಕಳ ನ್ಯಾಯ ಕಾಯಿದೆ ೨೦೦೬ ಸೆಕ್ಷನ್ ೩೪ ಸರಕಾರಿ ಸಾಮ್ಯದ ಬಾಲಮಂದಿರಗಳು ಅಥವಾ ಖಾಸಗಿ ಸಂಸ್ಥೆಗಳು ಮಕ್ಕಳ ಕಲ್ಯಾಣ ಸಮಿತಿಯ ಅಡಿಯಲ್ಲಿ ೧೮ ವರ್ಷದೊಳಗಿನ ಮಕ್ಕಳ ಆರೈಕೆ, ಪೋಷಣೆ ರಕ್ಷಣೆಗೆ ಬರುವುದರಿಂದ ನೊಂದಾವಣೆಗೊಂಡಿರಬೇಕು. ಉಡುಪಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ಮಕ್ಕಳು ಮತ್ತು ಅಲ್ಪಸಂಖ್ಯಾತರ ಇಲಾಖೆ ಹಲವಾರು ಮಕ್ಕಳ ಮನೆ ಮಂದಿರಗಳನ್ನು ನಡೆಸುತ್ತಿದೆ ಹಾಗೂ ಮೇಲುಸ್ತುವಾರಿ ನಡೆಸುತ್ತಿದೆ. ಆದರೂ ಕಾಯಿದೆಯಲ್ಲಿ ಕಡ್ಡಾಯಗೊಳಿಸಲಾಗಿರುವ ಕನಿಷ್ಠ ಗುಣಮಟ್ಟ ಕಾಯ್ದಿಟ್ಟಿಲ್ಲ ಎನ್ನುವುದು ಶೋಚನೀಯ.

**೧೬. ಪಂಚಾಯತ್ ವ್ಯವಸ್ಥೆ:**

ಪಂಚಾಯತ್‌ರಾಜ್ ಕಾಯಿದೆ ವಿಕೇಂದ್ರಿತ ಆಡಳಿತ ವ್ಯವಸ್ಥೆಯ ಮೂಲಕ ಸಾಮಾನ್ಯ ಪ್ರಕರಣಗಳು, ಸಮಸ್ಯೆಗಳು ಮತ್ತು ಅಭಿವೃದ್ಧಿಯನ್ನು ಸ್ಥಳೀಯ ಸರಕಾರಿ ಪ್ರಾಧಿಕಾರ ನೇರವಾಗಿ ಕೈಗೆತ್ತಿಕೊಳ್ಳಲು ಅನುವುಮಾಡುತ್ತದೆ.

ಸ್ಥಳೀಯ ವ್ಯವಸ್ಥೆಗಳಾದ ಗ್ರಾಮಪಂಚಾಯ್ತಿ ನಗರ ಪಂಚಾಯತ್, ಪುರಸಭೆ, ಪಟ್ಟಣ ಪಂಚಾಯತ್ ಮಹಾನಗರ ಪಾಲಿಕೆಗಳನ್ನು ಸ್ಥಾಪಿಸಲಾಗಿದ್ದು ಸರ್ವರ ಮೂಲ ಅವಶ್ಯಕತೆಗಳನ್ನು ನಿರ್ವಹಿಸಲು ಬದ್ಧವಾಗಿವೆ. ಆದರೆ ಪ್ರಸ್ತುತ ಈ ವ್ಯವಸ್ಥೆಗಳು ಪ್ರೌಢ ಪ್ರಜೆಗಳ ಬಗ್ಗೆ ಮಾತ್ರ ತಮ್ಮ ಗಮನ ಹರಿಸುತ್ತಿದ್ದು ೪೨% ದಷ್ಟಿರುವ ಮಕ್ಕಳನ್ನು ೧೮, ವರ್ಷದ ಒಳಗಿರುವ ಸಮಾಜದ ಪ್ರಮುಖ ಅಂಗವಾಗಿರುವ ಮಕ್ಕಳನ್ನು ನಿರ್ಲಕ್ಷಿಸುತ್ತಿವೆ. ಪಂಚಾಯತ್‌ನ ಸಾಮಾನ್ಯ ಸಮಿತಿಗಳು ಶೈಕ್ಷಣಿಕ, ಆರೋಗ್ಯ ಹಾಗೂ ಸಾರ್ವಜನಿಕ ಕಾರ್ಯಗಳಿಗೆ ಜವಾಬ್ದಾರವಾಗಿರುತ್ತವೆ.

ಉಡುಪಿ ಜಿಲ್ಲೆಯನ್ನು ಗಮನಿಸಿದರೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ವರ್ಷಕ್ಕೊಮ್ಮೆ ಹೆಚ್ಚಾಗಿ ನವೆಂಬರ್ ತಿಂಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸುತ್ತವೆ. ಆದರೆ ಮೂಲ ಆಶಯವನ್ನು ಸಾಧಿಸುವ ಕೆಲಸ ನಡೆದಿರುವುದಿಲ್ಲ. ಆದರೆ ಇಡೀ ವ್ಯವಸ್ಥೆಯ ಗಮನ ಮಕ್ಕಳ ಹಕ್ಕುಗಳೆಡೆ ಸೆಳೆಯುವಲ್ಲಿ ಈ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು ಯಶಸ್ವಿಯಾಗಿವೆ.

ಗ್ರಾಮ ಪಂಚಾಯ್ತಿಮಟ್ಟದಲ್ಲಿ, ಮಹಿಳಾ ಮತ್ತು ಮಕ್ಕಳ ಮಾರಾಟ ಸಾಗಣೆ ತಡೆ ಸಮಿತಿಗಳು ಕಾರ್ಯನಿರ್ವಹಿಸಬೇಕಾಗಿದೆ. ಈ ಸಮಿತಿ ಕಾಲ ಕಾಲಕ್ಕೆ ಸೇರಿ ಮಕ್ಕಳ ಸ್ಥಿತಿಗತಿ ಬಗ್ಗೆ ವಿಮರ್ಶೆ ಮಾಡಬೇಕಾಗುತ್ತದೆ. ಈ ಸಮಿತಿಯಲ್ಲಿ ಗ್ರಾಮದ ಪ್ರತೀ ಮಗುವಿನ ಮಾಹಿತಿ ಇರಬೇಕಾಗುತ್ತದೆ. ಈ ಸಮಿತಿಯಲ್ಲಿ ಗ್ರಾಮದ ಒಟ್ಟು ಮಕ್ಕಳ ಅಂಕಿ ಅಂಶ ಇರಬೇಕಾಗುತ್ತದೆ. ಈ ಸಮಿತಿಯಲ್ಲಿ ಗ್ರಾಮಕ್ಕೆ ಪ್ರವೇಶಿಸುವ ಹಾಗೂ ನಿರ್ಗಮಿಸುವ ಮಕ್ಕಳ ಮಾಹಿತಿ ಇರಬೇಕಾಗುತ್ತದೆ. ಆದರೆ ಉಡುಪಿ ಜಿಲ್ಲೆಯಲ್ಲಿ ಈ ಸಮಿತಿಗಳು ಹೆಸರುಮಾತ್ರಕ್ಕೆ ಇದ್ದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ದಾಖಲೆಗಳು ಪುಷ್ಟೀಕರಿಸುತ್ತವೆ.

ಸಂಬಂಧಿಸಿದ ಪ್ರಾಧಿಕಾರ / ವ್ಯಕ್ತಿಗಳು, ಅಗತ್ಯವಿರುವೆಡೆ ಪ್ರಥಮ ತನಿಖಾ ವರದಿ (FIR)ಯನ್ನು ನೊಂದಾಯಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

⊙ ತನಿಖೆ ನಡೆಸುವ ಪ್ರಾಧಿಕಾರಿಗಳಿಗೆ ಸಹಕಾರ ನೀಡುವುದನ್ನು ಖಾತ್ರಿಪಡಿಸಿ ಕೊಳ್ಳುವುದು ಮತ್ತು ರಾಜಕೀಯ ಹಸ್ತಕ್ಷೇಪದಿಂದ ತನಿಖೆಗೆ ಅಡ್ಡಿಯಾಗದಂತೆ ಎಚ್ಚರ ವಹಿಸುವುದು.

⊙ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿಯ ನೆರವಿನೊಂದಿಗೆ ಶಾಲೆಗಳಲ್ಲಿನ ಸುರಕ್ಷತಾ ಉಲ್ಲಂಘನೆಗಳ ವಿರುದ್ಧ ಅಗತ್ಯಕ್ರಮಗಳನ್ನು ಕೈಗೊಳ್ಳುವುದು.

⊙ ಸರ್ಕಾರದ ಶಿಕ್ಷಣ ಸಂಸ್ಥೆಗಳಲ್ಲಿ ಸುರಕ್ಷತೆಯ ಉಲ್ಲಂಘನೆಯಾದಲ್ಲಿ, ಸಂಪನ್ಮೂಲದ ಹಂಚಿಕೆ ಮತ್ತು ಅನುಪಾಲನೆ ವ್ಯವಸ್ಥೆಯ ಲಭ್ಯತೆ ಬಗ್ಗೆ ಖಚಿತಪಡಿಸಿಕೊಳ್ಳುವುದು.

⊙ ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು.

⊙ ಪೊಲೀಸ್ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಮಗುವಿನ ಮೇಲಿನ ಲೈಂಗಿಕ ಹಲ್ಲೆ ಪ್ರಕರಣಗಳು ಮತ್ತು ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಲು ನೆರವು ನೀಡುವುದು. ಪಂಚಾಯತ್‌ರಾಜ್ ಸಂಸ್ಥೆಗಳು, ವಾರ್ಡ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಮಕ್ಕಳ ರಕ್ಷಣೆ, ಕರ್ನಾಟಕ ರಾಜ್ಯ ಮಕ್ಕಳ

ರಕ್ಷಣಾ ನೀತಿ, ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು ಮತ್ತು ಸಂಪನ್ಮೂಲ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಎಲ್ಲಾ ಸದಸ್ಯರಿಗೆ ಮಾಹಿತಿಯನ್ನು ನೀಡುವುದು.

⊙ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿ, ವಾರ್ಡ್, ಪಂಚಾಯ್ತಿ, ನಗರ ಸ್ಥಳೀಯ ಸಂಸ್ಥೆಯ ಕಛೇರಿಗಳಲ್ಲಿ ವ್ಯಾಪಕವಾಗಿ ಪ್ರಕಟಿಸುವುದು. ಶಾಲಾ ನಿರ್ವಹಣಾ ಸಮಿತಿಗಳ ಸಹಕಾರದೊಂದಿಗೆ ಸುರಕ್ಷತಾಕ್ರಮಗಳು ಕಾರ್ಯಾಚರಣೆ ಗೊಳ್ಳುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

⊙ ಮಕ್ಕಳ ಸಂರಕ್ಷಣೆ, ಮತ್ತು ಇತರೆ ಸಮಸ್ಯೆಗಳಾದ ಮಕ್ಕಳ ವಿರುದ್ಧದ ಅಪರಾಧ ಗಳಂತಹ ವಿಷಯಗಳನ್ನು ಉಪಗ್ರಹ ಆಧಾರಿತ ತರಬೇತಿಗಳ ಭಾಗವಾಗಿ ಸೇರ್ಪಡೆ ಗೊಳಿಸುವುದು ಮತ್ತು ಪರಿಶೀಲನೆ ನಡೆಸುವುದು. ಮಕ್ಕಳು ನಿರಂತರವಾಗಿ ಸಾಗಣೆ, ಮಾರಾಟ ಹಾಗೂ ಗೃಹ ಕಾರ್ಯದಲ್ಲಿ ಬಾಲಕಾರ್ಮಿಕತೆಯಲ್ಲಿ ತೊಡಗಿಕೊಂಡಿರುವ ಘಟನೆಗಳು ಬೆಳಕಿಗೆ ಬಂದಿವೆ ಮತ್ತು ಪಂಚಾಯತ್ ನಳು ದಿವ್ಯ ಮೌನಕ್ಕೆ ಶರಣಾಗಿರುವಂತೆ ಕಾಣುತ್ತದೆ.

**೧೭. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು:**

ಕಾನೂನಿನನ್ವಯ ಸರಕಾರಿ ಸಾರ್ವಜನಿಕ ಶಾಲೆಗಳು ನೇರವಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಡಿಯಲ್ಲಿ ಬರುವುದರಿಂದ ಶಾಲೆಗಳಲ್ಲಿ ಮುಖ್ಯ ಶಿಕ್ಷಕರು/ಶಿಕ್ಷಕರು ಕೇವಲ ಆಡಳಿತಾತ್ಮಕ ಜವಾಬ್ದಾರಿ ಹೊಂದಿದ್ದು, ನೈಜ್ಯ ಅಧಿಕಾರ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯದ್ದಾಗಿರುತ್ತದೆ. ಅವರು ನಿಜವಾದ ಅರ್ಥದಲ್ಲಿ ಶಾಲೆಯ ಯಜಮಾನರಾಗಿರುತ್ತಾರೆ.

ಉಡುಪಿ ಜಿಲ್ಲೆಯಲ್ಲಿ ಹೇಳುವುದಾದರೆ ಎಸ್.ಡಿ.ಎಂ.ಸಿ.(ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ)ಗಳ ರಚನೆ ಆಗಿ ಕ್ರಿಯಾತ್ಮಕ ಚಾಲನೆ ದೊರೆತಿದ್ದು ಸಾಕಷ್ಟು ತರಬೇತಿಗಳು ನಡೆದಿವೆ. ತರಬೇತಿಗಳಲ್ಲಿ ಮಕ್ಕಳ ರಕ್ಷಣೆ, ಮಕ್ಕಳ ಸಮಸ್ಯೆಗಳು, ಮಕ್ಕಳ ಅಭಿವೃದ್ಧಿ, ಮಕ್ಕಳ ಹಕ್ಕುಗಳು, ಮಕ್ಕಳ ಸ್ನೇಹಿ ಗ್ರಾಮಪಂಚಾಯತ್ ಮೊದಲಾದ ಮಕ್ಕಳ ಸಂಬಂಧಿ ಪ್ರಮುಖ ವಿಷಯಗಳಲ್ಲಿ ಮಾಹಿತಿ ಅರಿವು ನೀಡಲಾಗಿತ್ತು.

ಈ ಜಿಲ್ಲೆಯ ಶಿಕ್ಷಕರು, ಪೋಷಕರು ಮತ್ತು ಸಮುದಾಯಕ್ಕೆ ಮಕ್ಕಳ ಅಭಿವೃದ್ಧಿ ಸಾಧನೆಯಲ್ಲಿ ಮಹತ್ತರವಾದ ಜವಾಬ್ದಾರಿಯಿದೆ, ಪಾತ್ರವಿದೆ. ಮಕ್ಕಳ ಸಂಸತ್ತು, ದೂರು/ ಸಲಹಾ ಪೆಟ್ಟಿಗೆಯಂತಹಾ ಕಾರ್ಯಗಳು ಸುಮಾರು ಶೇ. ೯೦ಕ್ಕೂ ಹೆಚ್ಚು ಶಾಲೆಗಳಲ್ಲಿ ಚಾಲ್ತಿಯಲ್ಲಿವೆ. ಆದರೆ ಅದರ ಉಪಯೋಗದ ಬಗ್ಗೆ ಮಾಹಿತಿಯ ಕೊರತೆ ಇದೆ ಮತ್ತು ಅದು ತನ್ನ ಮೂಲ ಆಶಯಕ್ಕೆ ತಕ್ಕಂತೆ ಕೆಲಸ ನಿರ್ವಹಿಸುತ್ತಿಲ್ಲ. ಹೀಗಾಗಿ ಎಸ್.ಡಿ.ಎಂ.ಸಿ.ಗಳನ್ನು ಸೂಕ್ಷ್ಮಗೊಳಿಸುವ ಸಂವೇದನಾಶೀಲಗೊಳಿಸುವ ಅವಶ್ಯಕತೆ ಇದೆ.

**೧೮. ಆಸ್ಪತ್ರೆಗಳು ಮತ್ತು ಶುಶ್ರೂಶಾ ಮನೆಗಳು:**

ಉಡುಪಿ ಜಿಲ್ಲೆ ಹೆಸರಾಂತ ಆಸ್ಪತ್ರೆ ಹಾಗೂ ಶುಶ್ರೂಷ ಮನೆಗಳ ತವರೂರಾಗಿದೆ. ಕಸ್ತೂರ್ಬಾ ವೈದ್ಯಕೀಯ ಕಾಲೇಜು ಆಸ್ಪತ್ರೆ ಅಂತರಾಷ್ಟ್ರೀಯ ಖ್ಯಾತಿ ಹೊಂದಿದೆ ಮತ್ತು ವಿಶ್ವದ ಬಹಳಷ್ಟು ಸಮರ್ಥ ವೈದ್ಯರನ್ನು ಹೊರತರುತ್ತಿದೆ. ಆದರೆ ದೀಪದ ಅಡಿಯ ಕತ್ತಲೆಯಂತೆ ಇನ್ನೂ ಕಾನೂನುಬಾಹಿರ ಗರ್ಭಪಾತಗಳು, ಹಸುಕೂಸುಗಳ ಕೈಬದಲಾಯಿ ಸುವಿಕೆಯ ಘಟನೆಗಳು ದಿನೇ ದಿನೇ ಹೆಚ್ಚುತ್ತಿವೆ. ಸಾಕಷ್ಟು ವಿವಾಹಬಾಹಿರ ತಾಯ್ತನದ ಪ್ರಕರಣಗಳು ದಾಖಲಾಗುವುದು ಜಿಲ್ಲೆಯಲ್ಲಿ ಆಶ್ಚರ್ಯಕರ ಸಂಖ್ಯೆಯಲ್ಲಿದೆ. ಅವರ ಮಕ್ಕಳು ಸೂಕ್ತ ರೀತಿಯಲ್ಲಿ ಪುನರ್ವಸತಿಗೊಳ್ಳದೆ ಮಾರಾಟ ಸಾಗಣೆಗೆ ಒಳಗಾಗುತ್ತಾರೆ.

ಒಟ್ಟಾರೆ ಪ್ರಸ್ತುತ ಸ್ಥಿತಿಗತಿಯನ್ನು ನೋಡಿದರೆ ಮಕ್ಕಳ ಹಿತದೃಷ್ಟಿಗಿಂತ ಅಧಿಸೂಚನೆಗಳಿಗೆ ತಕ್ಕಂತೆ ಮಾತ್ರ ಕಾರ್ಯನಿರ್ವಹಿಸುತ್ತಿರುವುದು ಕಾಣಬಹುದಾಗಿದೆ. ಅಲ್ಲದೆ ಈ ತಳಮಟ್ಟದ ಸಿಬ್ಬಂದಿಗಳಿಗೆ ಮಕ್ಕಳ ಹಕ್ಕುಗಳ ಬಗ್ಗೆ ಹಾಗೂ ಅವುಗಳನ್ನು ಖಾತ್ರಿಪಡಿಸಿಕೊಳ್ಳಲು ಅವರು ಕಂಡುಕೊಳ್ಳಬೇಕಾದ ಕ್ರಮಗಳ ಬಗ್ಗೆ ತರಬೇತಿಯ ಅವಶ್ಯಕತೆ ಇದೆ. ಅಲ್ಲದೆ ಕೆಲವೊಮ್ಮೆ ನಿಯಮಗಳು ಮಕ್ಕಳ ಹಿತದಲ್ಲಿ ಇಲ್ಲದಿರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ಶಾಲಾ ರಜಾ ಅವಧಿಯಲ್ಲಿ ಮಕ್ಕಳಿಗೆ ವ್ಯವಸ್ಥೆಯ ಕೊರತೆ ಇರುತ್ತದೆ. ನಿಗದಿತ ತಿಂಗಳುಗಳ ನಂತರ ಪರೀಕ್ಷೆಗಳಿಗೆ ಕುಳಿತುಕೊಳ್ಳಬೇಕಾದ ವಿದ್ಯಾರ್ಥಿಗಳು ನಿರ್ಗತಿಕರಾಗಿ, ಕಂಗಾಲಾಗಿ ಸಾರ್ವಜನಿಕ ಸ್ಥಳಗಳಲ್ಲಿ ಮಠ-ಮಂದಿರಗಳ ಜಗಲಿಯಲ್ಲಿ ಆಶ್ರಯ ಪಡೆಯುತ್ತಿರುವುದು ಜಿಲ್ಲೆಯ ಚಿತ್ರಣವಾಗಿದೆ. ಇದು ಬದಲಾಗಬೇಕಿದೆ.

**ಉಡುಪಿ ಜಿಲ್ಲೆಯ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಸರಕಾರಿ ಸಂಸ್ಥೆಗಳು ವಸತಿ ವ್ಯವಸ್ಥೆಯ ಸ್ಥಿತಿಗತಿ:**

♦ ೧೨೦ಕ್ಕೂ ಹೆಚ್ಚು ನಿವಾಸಿಗಳಿರುವ ಗೃಹಗಳಲ್ಲಿ ಮೂರು ಶೌಚಾಲಯ ಎರಡು ಸ್ನಾನ ಗೃಹ ಇದೆ.

♦ ೭-೧೭ ವರ್ಷದೊಳಗಿನ ೮೦ ಗಂಡುಮಕ್ಕಳಿರುವ ಗೃಹಗಳಲ್ಲಿ ವ್ಯವಸ್ಥಿತ ಸ್ನಾನಗೃಹ ಶೌಚ ವ್ಯವಸ್ಥೆ ಇಲ್ಲ.

♦ ಹೆಚ್ಚಿನ ಗೃಹಗಳಲ್ಲಿ ಕೊನೆ ಕೊನೆಗೆ ಕುಡಿಯುವ ಹಾಗೂ ನಿತ್ಯ ಬಳಕೆಯ ನೀರಿಗೆ ಸಮಸ್ಯೆಯಾಗುತ್ತದೆ. ಹೆಚ್ಚಿನ ಗೃಹಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆ.

♦ ಒದಗಿಸುವ ದೈನಂದಿನ ಆಹಾರದಲ್ಲಿ ಪೌಷ್ಟಿಕಾಂಶ ಹಾಗೂ ಶುದ್ಧತೆ ಕಾಪಾಡಿದ ತರಕಾರಿಯಂತಹ ವಸ್ತುಗಳ ಕೊರತೆಯಿದೆ. ಮಕ್ಕಳಿಗೆ ಮನನೋಯುವ ರೀತಿಯಲ್ಲಿ ಸಿಬ್ಬಂದಿಗಳು ಬೈಯುತ್ತಾರೆ. ಸಿಬ್ಬಂದಿಗಳ ನಡುವೆ ಸಾಮರಸ್ಯದ ಕೊರತೆಯಿಂದಾಗಿ ಕಚ್ಚಾಟವಾದಾಗ ಅದರ ಪರಿಣಾಮ ನೇರವಾಗಿ ನಿಲಯ ನಿವಾಸಿ ಮಕ್ಕಳ ಮೇಲೆ ಬೀಳುವುದಿಲ್ಲ.

♦ ಒಬ್ಬ ಆಪ್ತಸಮಾಲೋಚಕರು ಎರಡು ಮೂರು ನಿಲಯಗಳಲ್ಲಿ ಕಾರ್ಯನಿರ್ವಹಿಸ ಬೇಕಾಗುತ್ತದೆ.

ಪ್ರಸ್ತುತ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾದ ಮಕ್ಕಳ ಕಾರ್ಯಕ್ರಮಗಳು:

**ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆ (ಮಕ್ಕಳ ಪಂಚಾಯತ್):**

ವಿಶ್ವದಲ್ಲಿ ಅತೀ ಹೆಚ್ಚು ಮಕ್ಕಳನ್ನು ಹೊಂದಿರುವ ದೇಶ ಭಾರತ. ಭಾರತದ ಸಂವಿಧಾನವು ದೇಶದ ಎಲ್ಲಾ ಮಕ್ಕಳಿಗೂ ಮೂಲಭೂತ ಹಕ್ಕುಗಳನ್ನು ಖಾತ್ರಿಗೊಳಿಸಿದೆ ಮತ್ತು ಸರ್ಕಾರವು ಮಕ್ಕಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸುವುದನ್ನು ಉತ್ತೇಜಿಸುತ್ತದೆ. ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳು ವಿಶೇಷವಾಗಿ ಮಕ್ಕಳ ಬಾಲ್ಯತನವನ್ನು ದುರುಪಯೋಗ ಪಡಿಸುವುದರಿಂದ ರಕ್ಷಿಸಲು ಮತ್ತು ಮಕ್ಕಳು ಸ್ವತಂತ್ರವಾಗಿ ಮತ್ತು ಗೌರವಯುತವಾದ ಆರೋಗ್ಯಕರವಾದ ವಾತಾವರಣದಲ್ಲಿ ಅಭಿವೃದ್ಧಿ ಹೊಂದಲು ಅವರಿಗೆ ಅವಕಾಶಗಳನ್ನು ಮತ್ತು ಸೌಲಭ್ಯಗಳನ್ನು ಖಾತ್ರಿಪಡಿಸುವುದನ್ನು ಸೂಚಿಸುತ್ತದೆ. ಮಕ್ಕಳ ಬಾಲ್ಯ ಶೋಷಣೆಗೆ ಗುರಿಯಾಗದಂತೆ ಮತ್ತು ಅವರು ನೈತಿಕವಾಗಿ ಮತ್ತು ಐಹಿಕವಾಗಿ/ ಪ್ರಾಪಂಚಿಕವಾಗಿ ಪಡೆಯಲೇಬೇಕಾದ ಸೌಲಭ್ಯಗಳಿಂದ ವಂಚಿತರಾಗದಂತೆ ರಕ್ಷಿಸಬೇಕು.

ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಭಾಗೀದಾರರಾದ ಅಥವಾ ಪಾಲುದಾರರಾದ ಸರ್ಕಾರವೂ ಸೇರಿದಂತೆ ವ್ಯಕ್ತಿಗಳು, ಕುಟುಂಬಗಳು, ಸ್ಥಳೀಯ ಸರ್ಕಾರಗಳು, ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯ ಸಂಸ್ಥೆಗಳು, ಮಾಧ್ಯಮ ಮತ್ತು ಖಾಸಗಿ ವಲಯ ಇವೇ ಮೊದಲಾದವರು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವುದನ್ನು, ಭಾಗವಹಿಸುವುದನ್ನು ಮತ್ತು ಸಾಮೂಹಿಕ ಕ್ರಿಯೆಗಳನ್ನು ಮಾಡುವುದನ್ನು ಸರ್ಕಾರವು ಉತ್ತೇಜಿಸುತ್ತದೆ.

ಸಮುದಾಯ ಮತ್ತು ಸ್ಥಳೀಯ ಸರ್ಕಾರಗಳು ಮಕ್ಕಳ ಸಂಪೂರ್ಣ ಅಭಿವೃದ್ಧಿ ಮತ್ತು ಸಾಮಾಜಿಕ ಒಗ್ಗೂಡುವಿಕೆಯನ್ನು ಖಾತ್ರಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಕರ್ನಾಟಕದಲ್ಲಿ ಮಕ್ಕಳ ಹಕ್ಕುಗಳ ವಿಚಾರದಲ್ಲಿ ೨೦೦೬ನೇ ವರ್ಷ ಒಂದು ಮೈಲಿಗಲ್ಲು. ಗ್ರಾಮೀಣ ಮಕ್ಕಳ ಹಿತದೃಷ್ಟಿಯಿಂದ ಪ್ರತೀ ಪಂಚಾಯತ್‌ಗಳಲ್ಲಿ ವರ್ಷಕ್ಕೊಮ್ಮೆ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯನ್ನು ಆಯೋಜಿಸಬೇಕು ಎಂದು ಕರ್ನಾಟಕ ಸರ್ಕಾರ ಸುತ್ತೋಲೆಯನ್ನು ಈ ವರ್ಷ ಹೊರಡಿಸಿತು. ಈ ವಿಶೇಷ ಗ್ರಾಮಸಭೆಗಳಲ್ಲಿ ಮಕ್ಕಳ ವಿಚಾರಗಳನ್ನು ಮಕ್ಕಳ ಭಾಗವಹಿಸುವಿಕೆಯೊಂದಿಗೆ ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂದು ಕಡ್ಡಾಯ ಮಾಡಲಾಯಿತು. ಈ ಮೂಲಕ ಮಕ್ಕಳ ಪರವಾಗಿ ಕೆಲಸ ನಿರ್ವಹಿಸುವವರಿಗೆ ಸರ್ಕಾರದ ಬಗ್ಗೆ ಒಂದಷ್ಟು ಭರವಸೆ ಬಂದಿದ್ದು ಸುಳ್ಳಲ್ಲ. ಇಂತಹದೊಂದು ಪರಿಕಲ್ಪನೆ ಕಾರ್ಯರೂಪಕ್ಕೆ ಬಂದಿದ್ದು ಭಾರತದಲ್ಲಿ ಪ್ರಥಮವಾಗಿತ್ತು.

ರಾಜ್ಯದ ಗ್ರಾಮ ಪಂಚಾಯತಿಗಳು ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ನಡೆಸಬೇಕೆಂಬ ಸುತ್ತೋಲೆ ಹೊರಡಿಸಿ ಈಗ ೧೨ ವರ್ಷಗಳು ಕಳೆದರೂ, ರಾಜ್ಯದ ಅನೇಕ ಗ್ರಾಮ ಪಂಚಾಯಿತಿಗಳಿಗೆ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯ ಸುತ್ತೋಲೆಗಳ ಬಗೆಗಾಗಲಿ, ಅದನ್ನು ನಡೆಸುವುದರ ವಿಧಾನವಾಗಲಿ ತಿಳಿಯದಿರುವ ನಿದರ್ಶನಗಳೂ ಇವೆ. ಈ ಜನೋಪಯೋಗಿ ಅಸ್ತ್ರವನ್ನು ಉಪಯೋಗಿಸಿ ಹಲವಾರು ಸಂಘ ಸಂಸ್ಥೆಗಳು ಮತ್ತು ಸ್ವ–ಇಚ್ಚೆಯಿಂದ ಅನೇಕ ಗ್ರಾಮಪಂಚಾಯತ್‌ಗಳು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳನ್ನು ಅನುಷ್ಠಾನಗೊಳಿಸುವಲ್ಲಿ ತಮ್ಮದೇ ಆದ ಗ್ರಾಮ ಪಂಚಾಯತ್‌ಗಳು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳನ್ನು ಅನುಷ್ಠಾನಗೊಳಿಸುವಲ್ಲಿ ತಮ್ಮದೇ ಆದ ಹಲವಾರು ಪ್ರಯತ್ನಗಳನ್ನು ಮಾಡುವಲ್ಲಿ ಸಫಲತೆ ಪಡೆದಿವೆ. ಎಷ್ಟೋ ಗ್ರಾಮಗಳಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳು ಮಕ್ಕಳ ಬಾಳಲ್ಲಿ ಹೊಸ ಚೈತನ್ಯ ತುಂಬಿವೆ, ಕೆಲವು ಕಡೆ ಮಕ್ಕಳ ಭಾಗವಹಿಸುವಿಕೆಯ ಹಕ್ಕನ್ನು ಎತ್ತಿಹಿಡಿಯುವಲ್ಲಿ ಸಹಕಾರಿಯಾಗಿವೆ.

ಉಡುಪಿ ಜಿಲ್ಲೆಯಲ್ಲೂ ರಾಜ್ಯದ ಇತರ ಹಲವು ಪಂಚಾಯತ್‌ಗಳಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಗಳು ಕಳೆದ ಸುಮಾರು ಹತ್ತು ವರ್ಷಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂಧೋಲನದ ಸದಸ್ಯ ಸಂಸ್ಥೆಗಳೂ ವಿವಿಧ ಸ್ಥಳೀಯ ಸಯಂ ಸೇವಾ ಸಂಘಟನೆಗಳು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಮಕ್ಕಳಿಗೆ ಸಂಬಂಧಿಸಿದ ಅನೇಕ ವಿಚಾರಗಳು/ಸಮಸ್ಯೆಗಳನ್ನು ಮಕ್ಕಳ ವಿಶೇಷ ಗ್ರಾಮಸಭೆಗಳಲ್ಲಿ ಸಮರ್ಪಕವಾಗಿ ಚರ್ಚಿಸಿ ಮಕ್ಕಳಿಗೆ ಅನುಕೂಲವಾಗುವಂತೆ ಗ್ರಾಮಪಂಚಾಯತ್‌ಗಳು, ಶಾಲೆಗಳು, ಅಂಗನವಾಡಿಗಳು, ಆರೋಗ್ಯ ಕೇಂದ್ರಗಳು ಕ್ರಮಗಳನ್ನು ಕೈಗೊಂಡಿದೆ. ಇದರಿಂದಾಗಿ ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸುವಲ್ಲಿ ಗ್ರಾಮಪಂಚಾಯತ್‌ಗಳೂ ಗುರುತರವಾದ ಜವಾಬ್ಧಾರಿಯನ್ನು ಹೊಂದಿವೆ ಮತ್ತು ಮಕ್ಕಳ ಪರವಾದ ನೀತಿ ನಿಯಮಗಳನ್ನು ಜಾರಿ ಮಾಡಲು ಕ್ರಿಯಾಶೀಲವಾಗಿವೆ ಎಂಬುದು ಕಂಡುಬರುತ್ತದೆ. ಇಂತಹ ಕಲ್ಪನೆಯ ಬಗ್ಗೆ ಅರಿತ ಕೂಡಲೇ ಗ್ರಾಮಪಂಚಾಯತ್‌ಗಳು ಸ್ಪಂದಿಸುವ ರೀತಿ ಮಾತ್ರ ರೋಮಾಂಚಕ.

ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳನ್ನು ನಡೆಸುವಲ್ಲಿ ಹಲವಾರು ಸಂಸ್ಥೆಗಳು ಸಾಕಷ್ಟು ಶ್ರಮವಹಿಸಿವೆ. ಕೆಲವು ಸಂಸ್ಥೆಗಳು ಪಂಚಾಯತ್‌ಗಳ ದುಂಬಾಲುಬಿದ್ದಿವೆ, ಮಕ್ಕಳ ಹಕ್ಕುಗಳು ಗ್ರಾಮಮಟ್ಟದಲ್ಲಿ ನಿನಾದಿಸಲು ನೆರವಾಗಿವೆ. ಜಿಲ್ಲೆಯಾಧ್ಯಂತ ಬದಲಾವಣೆಯ ಅಲೆ ಆರಂಭವಾಗಿವೆ. ಈ ಸಫಲತೆಯ ವಿಚಾರಗಳು ಕೇವಲ ಒಂದು ಹಳ್ಳಿ, ಕೆಲವು ಪಂಚಾಯತ್‌ಗಳು ಮತ್ತು ಆ ಕುರಿತು ಅಧ್ಯಯನಗಳು ಮತ್ತು ಪುಸ್ತಕಗಳಿಗೆ ಮೀಸಲಾಗದೆ, ಈ ವಿಚಾರಗಳು ಎಲ್ಲಾ ಕಡೆ ಹರಡಬೇಕು. ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳಿಂದ ಏನೂ ಪ್ರಯೋಜನ ಇಲ್ಲ ಎನ್ನುವವರಿಗೆ ಇತ್ತೀಚಿನ ಬದಲಾವಣೆಗಳು ಸವಾಲಾಗಿವೆ.

ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯಲ್ಲಿ ಮಕ್ಕಳ ಸಂಬಂಧಿ ಇಲಾಖೆಗಳಾದ ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸರ್ಕಾರೇತರ ಸಂಸ್ಥೆಗಳು , ಶಿಕ್ಷಣ ಇಲಾಖೆ, ಗ್ರಾಮಪಂಚಾಯಿತಿ ಪೊಲೀಸ್ ಇಲಾಖೆಯ ಪ್ರತಿನಿಧಿಗಳು ಭಾಗವಹಿಸಿ ಮಕ್ಕಳಿಗೆ ತಮ್ಮ ಇಲಾಖೆಯಿಂದ ಇರುವ ಯೋಜನೆಗಳನ್ನು ವಿವರಿಸುವುದಲ್ಲದೆ ಮಕ್ಕಳ ಅಹವಾಲುಗಳನ್ನು ಆಲೈಸಿ ಪೂರಕ ಕಾರ್ಯಯೋಜನೆಯನ್ನು ರಚಿಸುತ್ತದೆ. ಗ್ರಾಮದ ೧/೩ ಭಾಗ ಮಕ್ಕಳು ಈ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯಲ್ಲಿ ಭಾಗವಹಿಸಿ ತಮ್ಮ ಹಕ್ಕುಗಳ ಪ್ರತಿಪಾಧನೆ ಬಗ್ಗೆ ಚರ್ಚಿಸುತ್ತಾರೆ.

**ಮೀನಾ ಕ್ಲಬ್:**

ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣಕ್ಕಾಗಿ ಹುಟ್ಟಿರುವ ಮೀನಾ ಈ ಶತಮಾನದ ಜಾಗೃತ ಬಾಲಕಿಯರ ಸಂಕೇತ. ಈ ಸ್ವಾಭಿಮಾನಿ ಹುಡುಗಿಯ ಪ್ರಯತ್ನಗಳ ಧ್ಯೋತಕವಾಗಿ ಹುಟ್ಟು ಹಾಕಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಮೀನಾ ದಿನಾಚರಣೆ ಪ್ರತೀ ವರ್ಷ ೨೪ ನೇ ಸೆಪ್ಟೆಂಬರ್ ರಂದು ಹಿರಿಯ ಪ್ರಾಥಮಿಕ ಶಾಲೆಗಳ ಮೀನಾ ತಂಡ ಹೆಣ್ಣು ಮಕ್ಕಳ ಸಬಲೀಕರಣದತ್ತ ಒಂದು ಆಂದೋಲನಕಾರಿ ಹೆಜ್ಜೆಯಾಗಿದೆ. ಮೀನಾ ತಂಡಗಳು ಕಳೆದ ಸುಮಾರು ೯ ವರ್ಷಗಳಿಂದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯಗತವಾಗಿದೆ. ಈ ಮೀನಾ ತಂಡಗಳ ವಿಶೇಷತೆ ಎಂದರೆ ಬಾಲಕಿಯರ ಆತ್ಮ ವಿಶ್ವಾಸ ಹೆಚ್ಚಳ ಮಾಡುವ ಪ್ರಯತ್ನ ಮಾಡಲಾಗುತ್ತದೆ. ಮೀನಾ ತಂಡಗಳ ಮೂಲಕ ಸಮುದಾಯ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಸ್ಥಳೀಯ ಹೆಣ್ಣುಮಕ್ಕಳ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಗಳನ್ನು ಮೀನಾ ತಂಡಗಳ ಮೂಲಕ ಮಾಡಲಾಗುತ್ತದೆ. ಈ ತಂಡ ವಾರಕ್ಕೊಮ್ಮೆ ಸೇರಿ ಉದ್ದೇಶ ಈಡೇರಿಕೆಗಾಗಿ ಚಟುವಟಿಕೆಗಳನ್ನು 'ಮೀನಾ ಡೈರಿ'ಯಲ್ಲಿ ದಾಖಲಿಸಲಾಗುತ್ತದೆ. ಬಾಲಕಿಯರಲ್ಲಿ ಚುರುಕುತನ ಹೆಚ್ಚಿಸಿ, ಸಂವಹನ, ಆತ್ಮವಿಶ್ವಾಸ ಧೈರ್ಯಗಳಿಗೆ ಮೀನಾ ಸ್ಫೂರ್ತಿಯಾಗಿದೆ. 'ಮೀನಾ'.

ಮಕ್ಕಳು ತಮ್ಮ ಕುಟುಂಬಗಳಲ್ಲಿ ಬೆಳೆಯಬೇಕಾದದ್ದು ತತ್ವದ ಅವರ ಹಕ್ಕು. ಭಾರತದ ಮಕ್ಕಳ ನ್ಯಾಯ ಕಾಯಿದೆ(ಜೆ.ಜೆ. ಕಾಯ್ದೆ) ಪ್ರಕಾರ ಸಾಂಸ್ಥೀಕರಣ ಅಂತಿಮ ಆಯ್ಕೆಯಾಗಿರಬೇಕು. ದುರದೃಷ್ಟವಶಾತ್ ಭಾರತದ ಮಿಲಿಯಗಟ್ಟಲೆ ಮಕ್ಕಳು ಕುಟುಂಬದ ಆರೈಕೆಯಿರದೆ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಿಸಲ್ಪಟ್ಟು ಅಲ್ಲಿ ಸಾಂಸ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಕ್ಕಳ ನ್ಯಾಯ ಕಾಯಿದೆಯ (ಜೆಜೆ ಕಾಯ್ದೆ ೨೦೧೫) ಸೆಕ್ಷನ್ ೧ (೨೧)ರ ಪ್ರಕಾರ ಮಕ್ಕಳ ಪಾಲನಾ ಸಂಸ್ಥೆ ಅಂದರೆ ಬಾಲಮಂದಿರಗಳು, ತೆರೆದ ಮನೆ, ಪರಿವೀಕ್ಷಣಾಲಯಗಳು, ವಿಶೇಷ ಗೃಹ, ಭದ್ರತಾ ಸ್ಥಳಗಳು, ವಿಶೇಷ ದತ್ತು ಕೇಂದ್ರಗಳು ಹಾಗೂ ಅರ್ಹ ಸೌಲಭ್ಯಗಳು ಎಂದು ಈ ಕಾಯಿದೆಯಲ್ಲಿ ಗುರುತಿಸಲಾಗಿದೆ. ಯುನಿಸೆಫ್ ಮೂಲದ ಪ್ರಕಾರ ಭಾರತದಲ್ಲಿ ೨೫ ಮಿಲಿಯ ಅನಾಥ ತ್ಯಜಿಸಲ್ಪಟ್ಟ ಮಕ್ಕಳಿದ್ದಾರೆ. ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಇಲಾಖೆಯ ವರದಿಯಂತೆ (೨೦೧೭) ರಾಜ್ಯದಲ್ಲಿ ಒಟ್ಟು ೮೩೪ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ತಂದೆ–ತಾಯಿಯಿಂದ ಎಚ್.ಐ.ವಿ ಬಾಧಿತ ಕುಟುಂಬದಿ ಸೋಂಕಿತ ತಂದೆ–ತಾಯಿಗಳಿಂದ ಬಲಿಪಶುಗಳಾಗಿ ಪ್ರಾಕೃತಿಕ ಹಾಗೂ ಮಾನವ ನಿರ್ಮಿತ

ವಿಕೋಪಗಳಿಂದಾಗಿ ಯುದ್ಧ ಪರಿಣಾಮವಾಗಿ, ಅಂಗ ವೈಕಲ್ಯ, ಮುರಿದ ಕುಟುಂಬ, ಹೆತ್ತವರ ಸಾವು, ಕೌಟುಂಬಿಕ ದೌರ್ಜನ್ಯ, ಬಡತನ, ವಿಶೇಷ ಅವಶ್ಯಕತೆಯುಳ್ಳ ಮಕ್ಕಳು ಹಾಗೂ ಸಾಮಾಜಿಕ ಕುಸಿತಗಳು ಸಾಂಸ್ಥೀಕರಣಕ್ಕೆ ಕಾರಣಗಳೆಂದು ಪರಿಗಣಿಸಲಾಗಿದೆ. ಕುಟುಂಬದ ಭದ್ರ ಜಾಲದಿಂದ ಹೊರಗೆ ಬಿದ್ದು ತ್ಯಜಿಸಲ್ಪಟ್ಟ, ದೌರ್ಜನ್ಯಕ್ಕೊಳಗಾಗಿ, ಓಡಿಹೋಗಿ ಹಾಗೂ ಕಾನೂನಿನೊಡನೆ ಸಂಘರ್ಷಕ್ಕೊಳಪಟ್ಟು ಸಂಕಟಕ್ಕೆ ಒಳಗಾಗುತ್ತಾರೆ. ಸಾಮಾನ್ಯವಾಗಿ ಬಾಲ ಕಾರ್ಮಿಕತೆ ಬಾಲ್ಯವಿವಾಹ ಹಾಗೂ ಬಾಲಬಿಕ್ಷುಕತೆಗಳ ಬಲಿಪಶುಗಳು ಕೂಡಾ ಸಾಂಸ್ಥೀಕರಣಗೊಳ್ಳುತ್ತಾರೆ(ಪೋಷಕರ ಪಾಲನಾ ದೋಷಗಳಿಂದಾಗಿ).

ಸಾಂಸ್ಥೀಕರಣಗೊಂಡ ಮಕ್ಕಳು ಹೆಚ್ಚಿನ ದೌರ್ಜನ್ಯ ನಿರ್ಲಕ್ಷ್ಯಗಳಿಗೆ ಒಳಗಾಗುತ್ತಾರೆ. ಆರೋಗ್ಯಕರ ಬೆಳವಣಿಗೆಗೆ ಅವಶ್ಯವಿರುವ ಪೋಷಣೆ ಹಾಗೂ ಮೇಲುಸ್ತುವಾರಿಯ ಕೊರತೆಯಿಂದಾಗಿ. ಇಂತಹ ಮಕ್ಕಳು ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಬುದ್ಧಿವಂತಿಕೆಯ ಬೆಳವಣಿಗೆಯಲ್ಲಿ ಕೊರತೆ ಅನುಭವಿಸುತ್ತಾರೆ. ಸಾಂಸ್ಥಿಕ ಪುನರ್ವಸತಿ ಯಲ್ಲಿರುವ ಮಕ್ಕಳು ಸಾಮಾಜಿಕರಣದ ಜಾಲಗಳಿಂದಾಗಿ ಹೊರಗೆ ಉಳಿದಿರುತ್ತಾರೆ. ಸಾಮಾನ್ಯವಾಗಿ ಅವರ ನಡತೆ ಸಮಸ್ಯೆ ಮನೋ ಆರೋಗ್ಯ ಸಮಸ್ಯೆಗಳನ್ನು ಅನುಭವಿಸುತ್ತಿರುತ್ತಾರೆ. ಇಲಾಖೆ ನಡೆಸಿದೆ ಮಕ್ಕಳ ಮೇಲಿನ ದೌರ್ಜನ್ಯದ ಬಗೆಗಿನ ಅಧ್ಯಯನದಲ್ಲಿ (೨೦೦೬) ಬಂದಾಗ ನೀಡಿರುವ ಐದು ಸ್ಥಳಗಳು ಸಂಸ್ಥೆಗಳು ಎಂದು ಗುರುತಿಸಲಾಗಿದೆ.

ಪೋಷಕರಿಲ್ಲದ ಮಕ್ಕಳೂ ಇತರ ಮಕ್ಕಳಿಗೆ ಸಿಗಲೇಬೇಕಾಗಿರುವ ಎಲ್ಲಾ ಹಕ್ಕುಗಳಿಗೆ ಅರ್ಹರಾಗಿರುತ್ತಾರೆ. ಹೆಚ್ಚುತ್ತಿರುವ ಸಾಂಸ್ಥೀಕೃತ ಮಕ್ಕಳ ಸಂಖ್ಯೆಯನ್ನು ನೋಡಿದರೆ ವಿಶೇಷ ಆರೈಕೆ ಪೋಷಣೆಯ ಅವಶ್ಯಕತೆ ಇಂದಿನ ಅವಶ್ಯಕತೆ ಎನ್ನುವುದು ಮನದಟ್ಟಾಗಿ ರುವುದು ಮಕ್ಕಳಿಗೆ ಈ ಹಕ್ಕುಗಳನ್ನು ನೀಡಲೇಬೇಕಾಗಿರುವುದರಿಂದ ಮಕ್ಕಳ ಪಾಲನಾ ಸಂಸ್ಥೆಯ ಪಾಲಕರದ್ದಾಗಿರುತ್ತದೆ.

**ಸಾಂಸ್ಥಿಕ ಆರೈಕೆಯಲ್ಲಿರುವ ಮಕ್ಕಳ ಸಮಸ್ಯೆಗಳು**

ಮಕ್ಕಳ ಪಾಲನಾ ಸಂಸ್ಥೆ ಎಂಬ ಪರಿಕಲ್ಪನೆಗೆ ಸೂಕ್ತ ವ್ಯಾಖ್ಯಾನ ಸಿಗುವುದಿಲ್ಲ, ಆದರೆ ದಿನದ ೨೪ಘಂಟೆಗಳೂ ವಸತಿಯ ಆರೈಕೆ ಅದರಲ್ಲೂ ಕುಟುಂಬದ ಭದ್ರತೆಯಿಂದ ಹೊರಬಿದ್ದಿರುವ ಮಕ್ಕಳಿಗೆ ಮನೆ ಎನಿಸಿಕೊಂಡಿರುವ ವ್ಯವಸ್ಥೆಯನ್ನು ಮಕ್ಕಳ ಪಾಲನಾ ಸಂಸ್ಥೆ ಎಂದು ಕರೆಯಬಹುದಾಗಿದೆ. ಇಂತಹ ಪಾಲನಾ ಕೇಂದ್ರಗಳ ವಿಸ್ತಾರ ಹಾಗೂ

ದೊರಕುವ ಆರೈಕೆಯ ವಿಧಾನದಲ್ಲಿ ವ್ಯತ್ಯಾಸವಿರಬಹುದು. ಇಂತಹ ಸಂಸ್ಥೆಗಳು ಕೌಟುಂಬಿಕ ಆರೈಕೆಯಿಂದ ಹೊರಬಿದ್ದಿರುವ ಮಕ್ಕಳಿಗೆ ಬಾಲ್ಯವಿಡೀ ಕಳೆಯಬೇಕಾಗುವ ಸ್ಥಾನ ಅನಿಸಿಕೊಂಡಿರುತ್ತದೆ. ಅವರ ಶಿಕ್ಷಣ, ಕೆಲಸ, ವಿರಾಮ, ಆರಾಮ, ನಿದ್ರೆ, ಇವೆಲ್ಲವೂ ಇಂತಹ ಸಂಸ್ಥೆಯೊಳಗೇ ಆಗುತ್ತದೆ.

ಸಂಸ್ಥೆಗಳಲ್ಲಿ ಇರುವ ಮಕ್ಕಳನ್ನು ಉದ್ದೇಶಿತ ಹಾಗೂ ಅನುದ್ದೇಶಿತ ಅಪಾಯಗಳಿಂದ ರಕ್ಷಿಸುವ ಜವಾಬ್ದಾರಿ ಸಂಸ್ಥೆಗಳದ್ದಾಗಿರುತ್ತದೆ. ತಮ್ಮ ಪೋಷಣೆಯಲ್ಲಿರುವ ಮಕ್ಕಳಿಗೆ ಸಂಪೂರ್ಣ ಸಂರಕ್ಷಣೆ ನೀಡುವುದು ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ.

**ಸಾಂಸ್ಥಿಕ ಆರೈಕೆ:**

ತ್ಯಜಿಸಲ್ಪಟ್ಟ ಹಾಗೂ ಅನಾಥಮಕ್ಕಳಿಗೆ ನೆಲೆಯಾಗುವ ಸಂಸ್ಥೆಗಳನ್ನು ಮಕ್ಕಳ ಪಾಲನಾ ಸಂಸ್ಥೆಗಳು ವಿವಿಧ ಸಂಸ್ಕೃತಿ, ಆರ್ಥಿಕ ಹಿನ್ನೆಲೆ ಹೊಂದಿದ್ದರೂ ಒಂದೇ ಉದ್ದೇಶದಿಂದ ಕಾರ್ಯನಿರ್ವಹಿಸುತ್ತವೆ.

ಪಾಲನಾ ಸಂಸ್ಥೆಗಳು ಕೇವಲ ಊಟ, ನಿದ್ರೆಗೆ ಮಾತ್ರವಲ್ಲದೆ ತಲೆಯ ಮೇಲೆ ಸೂರಿಗಾಗಿ ಅಲ್ಲದೆ ಮಕ್ಕಳ ಆರೋಗ್ಯ, ಪೌಷ್ಠಿಕತೆ ಹಾಗೂ ಸಾಂಬಂಧಿಕ ಅವಶ್ಯಕತೆಗಳನ್ನೂ ಪೂರೈಸಬೇಕಾಗಿ ನಿರೀಕ್ಷಿಸಲಾಗುತ್ತದೆ.

ವಾಸ್ತವದಲ್ಲಿ ಸರಕಾರಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಪಾಲನಾ ಸಂಸ್ಥೆಗಳನ್ನು ನಡೆಸುತ್ತಿವೆ. ಉಡುಪಿ ಜಿಲ್ಲೆಯಲ್ಲಿ ಒಟ್ಟು ೨೬ಸಂಸ್ಥೆಗಳು ಮಕ್ಕಳ ಪಾಲನಾ ಸಂಸ್ಥೆಗಳಿಗಾಗಿ ಅನುಮೋದಿಸಲ್ಪಟ್ಟಿವೆ. ಅವುಗಳಲ್ಲಿ ೨ ಸರಕಾರಿ ಸಾಮ್ಯದ್ದಾದರೆ ೨೪ ಖಾಸಗಿ ಅಥವಾ ಅನುದಾನಿತವಾಗಿದೆ.

ಮಕ್ಕಳ ಪಾಲನೆಮಾಡುವ ಎಲ್ಲಾ ಸಂಸ್ಥೆಗಳು ಮಕ್ಕಳ ನ್ಯಾಯ ಕಾಯಿದೆ ೨೦೦೦, ಜೆ.ಜೆ. ಕಾಯ್ದೆ ಅಡಿಯಲ್ಲಿ ನೋಂದಾಯಿಸಲ್ಪಡಬೇಕಾಗಿದೆ. ಸರಿ ಸುಮಾರು ೧೦ ವರ್ಷ ಗಳಿಂದೀಚೆಗೆ ಮಕ್ಕಳಿಗಾಗಿ ನಡೆಯುತ್ತಿರುವ ಸಂಸ್ಥೆಗಳ್ನು ಅರ್ಹ ಸಂಸ್ಥೆಗಳೆಂದು ಮಾನ್ಯ ಮಾಡಲಾಗಿದೆ.

ಸಾಮಾನ್ಯವಾಗಿ ಸಾಂಸ್ಥಿಕ ಆರೈಕೆಯಲ್ಲಿರುವ ಮಕ್ಕಳು ಪ್ರಾಯ ಪ್ರಬುದ್ಧರಾಗುತ್ತಲೇ ಸಾಂಸ್ಥಿಕ ಪುನರ್ವಸತಿಯಿಂದ ಭಯ ಕಾಡಲಾರಂಭಿಸುತ್ತದೆ. ಅಂಕಿ ಅಂಶಗಳ ಪ್ರಕಾರ, ಸರಕಾರಿ ಸಾಮ್ಯದ ಸಂಸ್ಥೆಗಳಲ್ಲಿ ಬೆಳೆದ ಮಕ್ಕಳಲ್ಲಿ ವರ್ಷಂಪ್ರತಿ ೧೦% ರಷ್ಟು ಮಕ್ಕಳೂ

ಪಾಲನಾ ವ್ಯವಸ್ಥೆಯಿಂದ ಹೊರಬೀಳುತ್ತಾರೆ. ಈ ಯುವಜನರು ಏನಾಗುತ್ತಾರೆ? ಸಮಾಜದ ಮುಖ್ಯವಾಹಿನಿಯಲ್ಲಿ ಹೊಂದಿಕೊಳ್ಳುವ ಸವಾಲು ದುತ್ತೆಂದು ಎದುರು ನಿಂತುಬಿಡುತ್ತದೆ. ಈ ಪ್ರಕ್ರಿಯೆ ಅವರವರ ಸಾಂಸ್ಕೃತಿಕ ಹಿನ್ನೆಲೆಗೆ ತಕ್ಕಂತೆ ಬೇರೆ ಬೇರೆ ರೀತಿಯದ್ದಾಗಿರುತ್ತದೆ. ಅವರ ಲಿಂಗ, ವಯಸ್ಸು ಸಂಸ್ಥೆಗೆ ಬರುವಾಗ ಎದುರಾಗಿದ್ದ ಪರಿಸ್ಥಿತಿ, ಅನುಭವಿಸಿದ ದೌರ್ಜನ್ಯದ ತೀವ್ರತೆ, ಸಾಮಾಜಿಕ ಪುನರ್ ಸಂಘಟನೆಗೆ ತಯಾರಿ, ಸಾಮಾಜಿಕ ಜಾಲಗಳ ಸಹಕಾರ, ಸಾಂಸ್ಥಿಕ ಆರೈಕೆಯಲ್ಲಿರುವಾಗಿನ ಅನುಭವ ಅವರಲ್ಲಿ ಅದರಲ್ಲೂ ಮುಖ್ಯವಾಗಿ ಹೆಣ್ಣುಮಕ್ಕಳಿಗೆ ಸಾಕಷ್ಟು ಸವಾಲುಗಳನ್ನು ಒಡ್ಡುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣುಮಕ್ಕಳು ಹೆಚ್ಚು ಸಂವೇದನಾಶೀಲರಾಗಿರುತ್ತಾರೆ. (ಯುನಿಸೆಫ್ ನ ಭಟ್ಟಾಚಾರ್ಯ ೨೦೧೨–೦೭ರಲ್ಲಿ ನಮೂದಿತವಾಗಿರುವಂತೆ) ಇತ್ತೀಚೆಗೆ ಒಡೆಯುತ್ತಿರುವ ಕುಟುಂಬವ್ಯವಸ್ಥೆಯ ಪರಿಣಾಮವಾಗಿ ಅತೀ ಹೆಚ್ಚು ಸಂಕಟಕ್ಕೊಳಗಾಗುವವರು ಮಕ್ಕಳು ಹಿಂದೆ ತೊಂದರೆ ಸಂಕಟಕ್ಕೊಳಗಾಗ ಯುವ ಜನತೆಯನ್ನು ಮುಖ್ಯ ವಾಹಿನಿಯೊಂದಿಗೆ ಸೇರಿಸುವುದು ವ್ಯವಸ್ಥಿತವಾಗಿ ನಡೆಯುತ್ತಿರಲಿಲ್ಲ ಮತ್ತು ಇವರು ಹಿಂಸೆ ದೌರ್ಜನ್ಯ ನಿರ್ಲಕ್ಷ ತೊರೆಯುವಿಕೆ ಹಾಗೂ ತಾರತಮ್ಯಕ್ಕೆ ಸುಲಭದಲ್ಲಿ ಬಲಿಯಾಗುತ್ತಿದ್ದರು> ಹೀಗೆ ಮಕ್ಕಳಿಗೆ ಬದಲಿ ಪಾಲನಾ ಸಂಸ್ಥೆಯ ಅವಶ್ಯಕತೆ ಒದಗಿ ಬರುತ್ತಿತ್ತು. ಹೀಗೆ ಮಕ್ಕಳ ಪಾಲನಾ ರಕ್ಷಣೆ ಹಾಗೂ ಅಭಿವೃದ್ಧಿಗೆ ಬದಲಿ ಕೌಟುಂಬಿಕ ವ್ಯವಸ್ಥೆ ಅನಿವಾರ್ಯವೆನಿಸಿ ಕೊಂಡಿತು.

ಅಂತರಾಷ್ಟ್ರೀಯ ನೀತಿಗಳ ಪ್ರಕಾರ ಕುಟುಂಬ ಸಾಮಾನ್ಯ ಮೂಲಭೂತ ಹಕ್ಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ಅಸಮಗ್ರ ಕುಟುಂಬ ವ್ಯವಸ್ಥೆ ಭೌಗೋಳಿಕ ವಿಷಯ ಅನಿಸಿಕೊಂಡಿದೆ. ಅನಾರೋಗ್ಯ, ಸಾವು, ಬೇರ್ಪಡುವಿಕೆ ತೊರೆಯುವಿಕೆ ಆರ್ಥಿಕ, ಮಾನಸಿಕ ಹಾಗೂ ಇತರ ಒತ್ತಡಗಳು ಕುಟುಂಬಗಳ ಒಡೆಯುವಿಕೆಯಲ್ಲಿ ಅಂತ್ಯ ಕಾಣುವಂತೆ ಮಾಡಿದೆ. ೨೦೦೫ ರ ಅಧ್ಯಯನಗಳ ಪ್ರಕಾರ ಹೆಣ್ಣುಮಕ್ಕಳು ಸಂಕೀರ್ಣ ಸಾಮಾಜಿಕ ಪ್ರಕ್ರಿಯೆಯಲ್ಲಿ ಬಂಧಿತವಾಗುತ್ತಾರೆ. ಒಂದು ವೇಳೆ ವೃತ್ತಿಪರ ಲೈಂಗಿಕ ನಿರತರ ಮಕ್ಕಳಾದಲ್ಲಿ ಅವರ ಸಮಸ್ಯೆ ಹೆಚ್ಚು ಅನಿಸಿಕೊಳ್ಳುತ್ತದೆ.

ಬೀದಿ ಮಕ್ಕಳೂ, ಕೊಳಚೆವಾಸಿ ಮಕ್ಕಳೂ ಮದುವೆಯ ಹೊರಗೆ ಹುಟ್ಟಿದ ಮಕ್ಕಳು, ಅನಾಥರು, ವಿಕೋಪ, ಅಮಲು ಸೇವನೆ ಅಥವಾ ಎಚ್.ಐ.ವಿ. ಏಡ್ಸ್ ನಿಂದಾಗಿ/ನೊಂದಿಗೆ ಹುಟ್ಟಿ ಮಕ್ಕಳ ಕಲ್ಯಾಣ ರಾಷ್ಟ್ರಗಳು ಇಂತಹ ಮಕ್ಕಳಿಗೆ ಬದಲಿ

ಪಾಲನಾ ವ್ಯವಸ್ಥೆ ಮಾಡಲು ಬದ್ಧತೆ ಹೊಂದುತ್ತವೆ. ಮಕ್ಕಳ ಪಾಲನೆಗಾಗಿ ೨೦೦೦ ಇಸವಿಯಲ್ಲಿ ಹುಟ್ಟಿಕೊಂಡು ೨೦೦೬ರಲ್ಲಿ ತಿದ್ದುಪಡಿಗೊಂಡಿರುವ ಮಕ್ಕಳ ನ್ಯಾಯ ಕಾಯಿದೆ, ೨೦೦೯ರ ಸಮಗ್ರ ಮಕ್ಕಳ ರಕ್ಷಣಾ ಯೋಜನೆಗಳು ಭಾರತದ ಅಸ್ತ್ರಗಳು ಎಣಿಸಿಕೊಂಡಿವೆ. ಗೃಹ ಆರೈಕೆ ಮುಖ್ಯವಾಗಿ ದತ್ತು, ಪೋಷಕತ್ವ, ಪ್ರಾಯೋಜಕತ್ವ ಹಾಗೂ ಗೃಹ ಆರೈಕೆಗಳು ಅವುಗಳಲ್ಲಿ ಪ್ರಮುಖ ಎಣಿಸಿವೆ. ಶಿಶುಗಳ ದತ್ತುಗಿಂತ ಹಿರಿಯ ಮಕ್ಕಳ ದತ್ತು ಪ್ರಕ್ರಿಯೆ ಹೆಚ್ಚು ಸವಾಲುದಾಯಕ ವಾಗಿದೆ.

ಭಾರತದ ಹಿನ್ನೆಲೆಯಲ್ಲಿ ಗಮನಿಸಿದರೆ ಪ್ರಾಥಮಿಕ ಆರೈಕೆದಾರರ ಅನುಪಸ್ಥಿತಿಯಲ್ಲಿ ಅಥವಾ ಆರೈಕೆಗೆ ಅಸಮರ್ಥರಾದಲ್ಲಿ ಸಮೀಪ ಸಂಬಂಧಿಗಳು, ಜಾತಿ ಹಾಗೂ ಸಮುದಾಯ ಬಾಂಧವರು ಮಕ್ಕಳಿಗೆ ರಕ್ಷಣೆ, ಪೋಷಣೆ ನೀಡುತ್ತಿದ್ದರು(ನ್ಯಾಯ ೧೯೮೬ ರವಿ ೨೦೧೧). ಹತ್ತಿರ ಸಂಬಂಧಿಯಿಂದ ದತ್ತು ತೀರಾ ಸಾಮಾನ್ಯವಾಗಿತ್ತು. ಹೇಗೆ ಇರಲಿ ಈ ರಾಜಕೀಯ ವ್ಯವಸ್ಥೆಯಲ್ಲಿ, ಮಕ್ಕಳ ಅಭಿವೃದ್ಧಿಯ ದೃಷ್ಟಿಕೋನವನ್ನು ಬದಲಾಯಿಸಿತು. ಬ್ರಿಟಿಷರ ಆಡಳಿತ ಕಾಲದಲ್ಲಿ ಕೂಡು ಕುಟುಂಬಗಳ ಅಸಮಗ್ರತೆಯಿಂದಾಗಿ ಮಕ್ಕಳ ಪಾಲನೆ ಪೋಷಣೆಗೆ ಬದಲಿ ವ್ಯವಸ್ಥೆ ಆರಂಭವಾಯಿತು. ಬ್ರಿಟಿಷರ ಆಡಳಿತ ಕಾಲದಲ್ಲಿ ಕೂಡು ಕುಟುಂಬಗಳು ವಿಭಜನೆ ಆದಾಗ ಕುಟುಂಬದ ವ್ಯವಸ್ಥೆಯಿಂದ ಹೊರಗುಳಿದ ಮಕ್ಕಳಿಗೆ ಪಾಲನೆ, ರಕ್ಷಣೆಯ ಬದಲಿ ವ್ಯವಸ್ಥೆ ಆರಂಭವಾಯಿತು. ೧೮೫೦ರಲ್ಲಿ ಪ್ರಥಮ ಸಂಸ್ಥೆ ಅನಾಥ ಮಕ್ಕಳಿಗಾಗಿ ಹೈದರಾಬಾದ್‌ನಲ್ಲಿ ಅಸ್ಥಿತ್ವಕ್ಕೆ ಬಂತು. ನಂತರ ೧೮೫೫ರಲ್ಲಿ ಮದ್ರಾಸ್‌ನಲ್ಲಿ ಈ ಎರಡು ಸಂಸ್ಥೆಗಳನ್ನು ರೋಮನ್ ಕ್ಯಾಥೋಲಿಕ್ ಮೀಷನರಿಗಳು ಆರಂಭಿಸಿದರು. ೧೮೬೫-೧೯೦೫ರ ನಡುವೆ ಭಾರತದಲ್ಲಿ ಅನಾಥರು ಮುಖ್ಯವಾಗಿ ಮಕ್ಕಳಿಗಾಗಿ ೪೮ ಸಂಸ್ಥೆಗಳು ಆರಂಭವಾದವು. (ಜೊರ್ಜ್ ಆ್ಯಂಡ್ ಅಡ್ವೈಸರಿ ಕಮಿಟಿ ಇನ್ ಆಪ್ಟರ್ ಕೇರ್ ಪ್ರೋಗ್ರಾಂ, ೧೯೫೫) ಹಿಂದೂಗಳು ಈ ಆಶ್ರಮವನ್ನು ಅನಾಥಾಲಯ ಎಂದು ಕರೆದರೆ ಮುಸಲ್ಮಾನರು "ಯತೀಂಖಾನಾ" ಎಂದು ಕರೆದರು. ಈ ವಸತಿ ಪುನರ್ವಸತಿ ಕೇಂದ್ರಗಳನ್ನು ಹೆಚ್ಚಿನ ಬ್ರಿಟಿಷ್ ಸಾಮ್ರಾಜ್ಯದ ರಾಜ್ಯಗಳು ಮಕ್ಕಳ ಕಾಯಿದೆಗಳನ್ನು ರಚಿಸಿದಾಗ ಸುಮಾರು ೨೦ಶತಮಾನದಲ್ಲಿ ಔಪಚಾರಿಕ ರೂಪಕ್ಕೆ ತರಲಾಯಿತು. ಅದೇ ಅವದಿಯಲ್ಲಿ ಮದ್ರಾಸ್ ಚಿಲ್ಡ್ರನ್ ಆ್ಯಕ್ಟ್ (೧೯೨೦). ಬೆಂಗಾಲ್ ಚಿಲ್ಡ್ರನ್ ಆ್ಯಕ್ಟ್ (೧೯೨೪)ರ ಕಾಯಿದೆಗಳಿಗನ್ವಯ ಈ ಪುನರ್ವಸತಿ ಕೇಂದ್ರಗಳು ಕಾರ್ಯನಿರ್ವಹಿಸ ಲಾರಂಭಿಸಿದವು. ಸ್ವಾತಂತ್ರ್ಯಾ ನಂತರ ಪಂಚವಾರ್ಷಿಕ ಯೋಜನೆಗಳಲ್ಲಿ ಮಕ್ಕಳ ಪಾಲನೆ ರಕ್ಷಣೆಗೆ ಸಂಬಂದಿಸಿದ ಯೋಜನೆಯನ್ನು ಕಾರ್ಯಗತಗೊಳಿಸಲಾಯತು. ಪಂಚವಾರ್ಷಿಕ

ಯೋಜನೆಯಲ್ಲಿಸಮಾಜ ಕಲ್ಯಾಣ ವಿಭಾಗಕ್ಕೆ ಅತೀ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯ್ತು. ೧೯೭೪ರಲ್ಲಿ ರಾಷ್ಟ್ರೀಯ ಮಕ್ಕಳ ನೀತಿ ರೂಪಿಸಲಾಯಿತು. ಅದು ರಾಷ್ಟ್ರೀಯ ಮಟ್ಟದ ಅವಶ್ಯಕತೆ ಇರುವ ಮಕ್ಕಳ ಕಲ್ಯಾಣ ಹಾಗೂ ಅಭಿವೃದ್ಧಿಗಾಗಿ ಪ್ರಾಯೋಜಕ ಕಾರ್ಯಕ್ರಮ ವಾಗಿತ್ತು. ಅದನ್ನು ಅನಾಥ ಹಾಗೂ ಮಾನಸಿಕ ಮಕ್ಕಳ ಶೈಕ್ಷಣಿಕ ಹಾಗೂ ತರಭೇತಿ ಹಾಗೂ ನಿರ್ವಹಣೆಗಾಗಿ ರೂಪಿಸಲಾಗಿತ್ತು. (ಗೂಯಲ್ ೧೯೮೯) ಕೇಂದ್ರ ಸರಕಾರ ಇದನ್ನು ಮುಂದುವರೆಸಿ ೧೯೮೬ರಲ್ಲಿ ಜ್ಯುವೆನೈಲ್ ಜಸ್ಟೀಸ್ ಆ್ಯಕ್ಟ್ ೧೯೮೬ನ್ನು ಅನುಷ್ಠಾನಗೊಳಿಸಿತು. ಹೀಗಾಗ್ಯೂ ೨೦೦೦ ಮಕ್ಕಳ ನ್ಯಾಯ ಕಾಯಿದೆ (೨೦೦೬ರಲ್ಲಿ ತಿದ್ದುಪಡಿಗೊಂಡಿದ್ದು) ಅಲ್ಲದೆ ಹಿಂದೂ ಹಾಗೂ ಮುಸ್ಲಿಂ ವೈಯಕ್ತಿಕ ಕಾನೂನು ಕೂಡಾ ಭಾರತದ ಮಕ್ಕಳಿಗೆ ಸಂಬಂಧಿಸುತ್ತದೆ.

**ಸಾಂಸ್ಥಿಕ ಆರೈಕೆಯ ವಿಧಗಳು**

ಸಾಂಸ್ಥಿಕ ಆರೈಕೆ ಗಾತ್ರ ಗುಣಲಕ್ಷಣ ಹಾಗೂ ಉದ್ದೇಶಗಳು ಬಹು ವಿಧದವುಗಳಾಗಿವೆ. ಅವು ಮಕ್ಕಳ ವಯಸ್ಸು, ಲಿಂಗ, ಹಿನ್ನೆಲೆ, ಮತ. ಧರ್ಮ, ಭೌಗೋಳಿಕ ಮಿತಿ ಅಥವಾ ನಿರ್ಧಿಷ್ಟ ಅವಶ್ಯಕತೆಗಳಿಗೆ ಸಂಬಂಧಿಸಿ ವೈವಿಧ್ಯಮಯ ವಾಗಿರುತ್ತದೆ. ಪುನರ್ವಸತಿಯ ಕಾಲಾವಧಿಗೆ ಸಂಬಂಧಿಸಿದ ವ್ಯತ್ಯಾಸಗಳೂ ಇರಬಹುದು. ಕೆಲವು ಪುನರ್ವಸತಿ ವ್ಯವಸ್ಥೆಗಳು ಮಕ್ಕಳ ತುರ್ತು ಪರಿಸ್ಥಿತಿಗನುಣವಾಗಿ ತೀರಾ ಕಡಿಮೆ ಅವದಿಯದ್ದಾಗಿರುತ್ತದೆ. ಕೆಲವು ಸಂದರ್ಭದಲ್ಲಿ ಮಕ್ಕಳಿಗೆ ಹಲವು ತಿಂಗಳುಗಳು ವರ್ಷಗಳ ಮಧಸ್ಥಿಕೆ ವ್ಯವಸ್ಥೆಯ ಅವಶ್ಯಕತೆ ಇರಬಹುದು. ಇದು ಮಗುವಿನ ವೈಯಕ್ತಿಕ ಅವಶ್ಯಕತೆಗೆ ಹೊಂದಿಕೊಂಡಿರಬಹುದು ಶೈಶವ್ಯದಿಂದ ನಿರ್ದಿಷ್ಟ ವಯಸ್ಸಿನವರೆಗೆ, ಅವರು ಸ್ವಾವಲಂಬಿಯಾಗಿ ಬದುಕು ಸಾಗಿಸುವ ಹಂತದವರೆಗೂ ಮುಂದುವರೆಯಬಹುದು, ನಿರ್ದಿಷ್ಟ ಕಾಲಮಿತಿಯಲ್ಲಿ ಮಕ್ಕಳೂ ತಮ್ಮ ಸ್ವಂತ ಅಥವಾ ಬದಲಿ ಕುಟುಂಬಗಳಿಗೆ ಸೇರುವವರೆಗೂ ಸಾಂಸ್ಥಿಕ ಪುನರ್ವಸತಿ ಅವಶ್ಯವಿರಬಹುದು ಭಾರತದಲ್ಲಿ ಮಕ್ಕಳ ಪುನರ್ವಸತಿ ಸಂಸ್ಥೆಗಳು ಕೆಲವು, ಮಕ್ಕಳ ನ್ಯಾಯ ಕಾಯಿದೆ ೨೦೦೦ ದಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಇನ್ನು ಕೆಲವು ಮಹಿಳೆ ಮತ್ತು ಮಕ್ಕಳ ಸಂಸ್ಥೆಯಾಗಿ ೧೯೫೬ರ ಕಾಯಿದೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರಬಹುದು.

ಭಾರತದ ಸಂಸ್ಥೆಗಳ ಈ ಕೆಳಗಿನ ನಾಲ್ಕು ವಿಭಾಗಗಳಲ್ಲಿ ಹಂಚಿಕೊಂಡಿವೆ.

೧. ಮಕ್ಕಳ ನ್ಯಾಯ ಕಾಯಿದೆಯಡಿಯಲ್ಲಿ ಕಾನೂನಿನೊಡನೆ ಸಂಘರ್ಷದಲ್ಲಿರುವ ಇತ್ಯರ್ಥವು ಬಾಕಿ ಇರುವ ಪ್ರಕರಣಗಳಲ್ಲಿ ಮಕ್ಕಳ ಸಂಸ್ಥೆಗಳು.

೨. ಮಕ್ಕಳ ನ್ಯಾಯ ಕಾಯಿದೆಯ ಸೆಕ್ಷನ್ ೩೪(ಜಿ)ಯಂತೆ ಮಕ್ಕಳ ಕಲ್ಯಾಣ ಸಮಿತಿಯ ಮಾರ್ಗದರ್ಶನದಂತೆ ಮಕ್ಕಳ ಪಾಲನೆ, ಪೋಷಣೆ, ಪುನರ್ವಸತಿಗಾಗಿ ತೆರೆದಿರುವ ತಂಗುದಾಣ ಅಥವಾ ಬಾಲಕ/ಬಾಲಕಿಯರ ಮಂದಿರಗಳು.

೩. ಸ್ವಯಂ ಸೇವಾ ಸಂಸ್ಥೆಗಳು ಮತ್ತು ದಾರ್ಮಿಕ ಗುಂಪುಗಳು ಮಕ್ಕಳ ಪೋಷಣೆ ಪಾಲನೆ ಹಾಗೂ ರಕ್ಷಣೆಗಾಗಿ ನಡೆಸುತ್ತಿರುವ ಸಂಸ್ಥೆಗಳು.

೪. ವಂಚಿತ ಮಕ್ಕಳಿಗಾಗಿ ಪರಿಶಿಷ್ಟ ಜಾತಿ ವರ್ಗದ ಸರಕಾರ ನಡೆಸುತ್ತಿರುವ ಸಂಸ್ಥೆಗಳು.

ಹೆಚ್ಚಿನ ಇಂತಹ ಸಂಸ್ಥೆಗಳು ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳಾಗಿರುವುದರಿಂದ, ಸಾಂಸ್ಥಿಕ ಆರೈಕೆಯಲ್ಲಿರುವ ಮಕ್ಕಳ ಅಂಶಗಳು ದೊರಕುತ್ತಿಲ್ಲವಾದರೂ ಮಿಲಿಯಗಟ್ಟಲೆ ಮಕ್ಕಳು ಅನಾಥರಲ್ಲದಿರುವವರೂ ಸೇರಿ ಸಾಂಸ್ಥಿಕ ಆರೈಕೆಯಲ್ಲಿದ್ದಾರೆ. (ಜಗನ್ನಾಥನ್ ೨೦೧೪)ಒಮ್ಮೆ ಈ ಮಕ್ಕಳ ಮಿಲನದ ಸಾಧ್ಯತೆ ಕಡಿಮೆಯಾಗುತ್ತದೆ. ಇಂತಹ ಮಕ್ಕಳ ಹೆತ್ತವರು ಕೂಡಾ ಸಾಂಸ್ಥಿಕ ವ್ಯವಸ್ಥೆಗಳಿಗೆ ಪ್ರಥಮ ಆಯ್ಕೆ ನೀಡುತ್ತಾರೆ. ಈ ಬಗ್ಗೆ ಜಾಗತಿಕವಾಗಿ ನಡೆಯುತ್ತಿರುವ ಚರ್ಚೆಗಳ ನಡುವೆಯೂ ಸಾಂಸ್ಥೀಕರಣ ಹಾಗೂ ಸವಸತಿ ಪಾಲನೆ ಅತಿ ಸುಲಭ ಹಾಗೂ ಅತಿ ಅನುಕೂಲಕಾರಿ ದಾರಿಯಾಗಿ ಭಾರತದ ವಂಚಿತ ಮಕ್ಕಳ ಹಿನ್ನೆಲೆಯಲ್ಲಿ ಗುರುತಿಸಲ್ಪಟ್ಟವೆ. ಭಾರತದಲ್ಲಿ ಸೂಕ್ತ ಕಾನೂನು ಹಾಗೂ ನೀತಿಗಳ ಹಿಡಿತವಿಲ್ಲದೆ ಮಕ್ಕಳಿಗೆ ಲಭ್ಯವಿರುವ ಸಾಂಸ್ಥಿಕ ಆರೈಕೆಯ ಗುಣಮಟ್ಟ ಚಿಂತನಾರ್ಹ ವಿಷಯವೆನಿಸಿಕೊಂಡಿದೆ. ಸಂಸ್ಥೆಗಳಿಗೆ ಏಕರೂಪದ ನಿಶ್ಚಿತ ಗುಣಮಟ್ಟ ಮಾನದಂಡಗಳಿಲ್ಲದೆ ಸಂಸ್ಥೆಗಳನ್ನು ನೋಂದಾಯಿಸುವ ಸೂಕ್ತ ದಾರಿಗಳಿಲ್ಲದೆ ಇರುವುದು ನಾವು ಕಾಣುತ್ತೇವೆ. ಸಂಸ್ಥೆಗಳಲ್ಲಿ ವಾಸಿಸುತ್ತಿರುವ ಭಾರತದ ಮಕ್ಕಳ ಪೈಕಿ ಕೇವಲ ೭೫,೦೫೨ ಮಕ್ಕಳು ವಿವಿಧ ರೀತಿಯ ೧೯೯೫ ಗೃಹಗಳಲ್ಲಿ ವಾಸಿಸುತ್ತಿದ್ದಾರೆ. ಸಂಪನ್ಮೂಲಗಳ ಕೊರತೆ, ಜನನಿಬಿಡತೆ ಹಾಗೂ ಇತರ ಮೂಲಭೂತ ಸೌಕರ್ಯಗಳ ಕೊರತೆ ನಮ್ಮ ದೇಶದ ಸಂಸ್ಥೆಗಳ ಸಾಮಾನ್ಯ ಲಕ್ಷಣ ಅನಿಸಿಕೊಂಡಿದೆ (ಇಂಡಿಯನ್ ಕೌನ್ಸಿಲ್ ಫಾರ್ ಚೈಲ್ಡ್ ವೆಲ್ಫೇರ್, ೧೯೯೪ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಪಬ್ಲಿಕ್ ಕೋ-ಅಪರೇಷನ್ ಆ್ಯಂಡ್ ಚೈಲ್ಡ್ ಡೆವಲಪ್‌ಮೆಂಟ್ ೧೯೯೧: ೭ ೨೦೦೨) ಸಂಸ್ಥೆಗಳಲ್ಲಿ ಸೂಕ್ತ ವಿಶ್ಲೇಷಣೆ, ಗೇಟ್ ಕೀಪಿಂಗ್ ಪಾಲಿಸಿ ಹಾಗೂ ವೈಯಕ್ತಿಕ ಪಾಲನಾ ಯೋಜನೆಗಳನ್ನು ಸರಿಯಾಗಿ ಮೇಲುಸ್ತುವಾರಿ ಮಾಡಲಾಗುತ್ತಿಲ್ಲ. ಕಳಪೆ ಕಾನೂನು ಅನುಷ್ಠಾನ ಸೂಕ್ತಹಣಕಾಸಿನ ಒದಗಣೆಯ ಕೊರತೆ ಇದೆ ಎನ್ನುವುದು ಕಂಡುಬಂದಿರುತ್ತದೆ.

**ಸಂಸ್ಥೇತರ ಪುನರ್ವಸತಿ**

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ ೨೦೦೦ದ ವ್ಯಾಪ್ತಿ ಕೇವಲ ರಕ್ಷಣೆ ಮತ್ತು ನ್ಯಾಯ ಒದಗಿಸುವ ಪ್ರಕರಣಗಳಿಗಷ್ಟೆ ನಿಲ್ಲುವುದಿಲ್ಲ. ಒಂದು ವೇಳೆ ಯಾವುದಾದರೂ ಮಗು (ವಿವಿಧ ವಯೋಮಾನದ ಮಕ್ಕಳೂ) ಸರ್ಕಾರದ ಸಂಸ್ಥೆಗಳಲ್ಲಿ ಅಥವಾ ಸರ್ಕಾರದ ಮನ್ನಣೆ ಪಡೆದ ಸರ್ಕಾರೇತರ ಸಂಸ್ಥೆಗಳಲ್ಲಿ ಉಳಿಯುವ ಅನಿವಾರ್ಯತೆ ಬಂದಲ್ಲಿ (ಪರಿತ್ಯಕ್ತರಾದ ಮಕ್ಕಳು, ಕುಟುಂಬದಿಂದ ಹೊರಬಿದ್ದು ಕಳೆದು ಹೋದ ಮತ್ತು ಸಂಸ್ಥೆ/ಸರ್ಕಾರದಿಂದ ಎಷ್ಟೇ ಪ್ರಯತ್ನ ಪಟ್ಟರೂ ಮಕ್ಕಳ ಪೋಷಕರು ಪತ್ತೆಯಾಗದಿದ್ದಲ್ಲಿ) ಅಂತಹ ಮಕ್ಕಳನ್ನು ಸಂಸ್ಥೆಯಲ್ಲಿ ದೀರ್ಘಕಾಲ ಮತ್ತು ಅವರ ಪುನರ್ವಸತಿಗೆ ಮತ್ತು ಸಮಾಜದಲ್ಲಿ ಅರ್ಥಪೂರ್ಣ ಬಾಳು ಪಡೆಯುವ ನಾಗರಿಕರಾಗಲು ನೆರವಾಗುವಂತಹ ಯಾವುದೇ ನಿರ್ದಿಷ್ಟ ಯೋಜನೆ ಇಲ್ಲದೆ ಅನಿರ್ದಿಷ್ಟ ಕಾಲ ಇಟ್ಟುಕೊಳ್ಳಬಾರದೆಂದು ಕಾಯಿದೆ ಸ್ಪಷ್ಟಡಿಸಿದೆ.

ಮಕ್ಕಳು ಅನಾಥರು ಅಥವಾ ಪರಿತ್ಯಕ್ತರಾಗಿದ್ದಲ್ಲಿ ಅಥವಾ ನಿರ್ಗತಿಕರಾಗಿದ್ದು ಪೋಷಕರ ಬಳಿ ಹೋಗುವ ಸಾಧ್ಯತೆಗಳೇ ಇಲ್ಲದಿದ್ದಲ್ಲಿ ಅಂತಹ ಮಕ್ಕಳ ಭವಿಷ್ಯದ ದೃಷ್ಟಿಯಿಂದ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಸೂಕ್ತ ಪೋಷಕರಿಗೆ ದತ್ತು/ಪೋಷಕತ್ವ (ಫಾಸ್ಟರ್‌ಕೇರ್)ದಲ್ಲಿ ನೀಡಲು ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆಯಲ್ಲಿ ಅವಕಾಶ ಮಾಡಲಾಗಿದೆ (ಕಲಂ–೪೦,೪೧ ಮತ್ತು ೪೨ ಕರ್ನಾಟಕ ನಿಯಮಗಳು ೨೮,೨೯. ಮಗು ತನ್ನ ಪೋಷಕರೊಡನೆ ಇದ್ದರೂ ಸಹ ಪೋಷಕರ ಆರ್ಥಿಕ ಸ್ಥಿತಿಗತಿಯ ಹಿನ್ನೆಲೆಯಲ್ಲಿ ಪ್ರಾಯೋಜಕತ್ವ (ಶಿಕ್ಷಣ, ವೈದ್ಯಕೀಯ ವೆಚ್ಚಕ್ಕಾಗಿ ಆರ್ಥಿಕ ಸಹಾಯ) ನೀಡಿದ್ದೆ ಆದಲ್ಲಿ ಅದರಿಂದ ಮಗುವಿಗೆ ಒಳಿತಾಗುತ್ತದೆ ಎಂಬ ಸೂಚನೆ ಇದ್ದಲ್ಲಿ ಅದಕ್ಕೂ ಈ ಕಾಯಿದೆಯಲ್ಲಿ ಅವಕಾಶವಿದೆ (ಕಲಂ–೪೩ ಕರ್ನಾಟಕ ನಿಯಮಗಳು ೩೦).

ಮಕ್ಕಳಿಗೆ ಶಿಕ್ಷಣ ಮತ್ತು ಆರೋಗ್ಯ ಸಹಾಯಕ್ಕಾಗಿ ಪ್ರಾಯೋಜಕತ್ವ ನೀಡಲಾಗುತ್ತದೆ. ದತ್ತು ಹೋಗಲಾಗದ ಮತ್ತು ಪೋಷಕರೇ ಸಿಗದಂತಹ ಅಥವಾ ಪೋಷಕರೊಂದಿಗೆ ಹೋಗಲಾಗದಂತಹ ನಿಜವಾದ ಹಿನ್ನೆಲೆಯಿರುವ ಮಕ್ಕಳಿಗೆ ಮಾತ್ರ ಅನಾಥಾಲಯಗಳಲ್ಲಿ ಆಶ್ರಯವೆಂಬ ಪರಿಪಾಠ ಬೆಳೆಯಬೇಕು(ಕರ್ನಾಟಕ ನಿಯಮಗಳು ೨೮ಕಲಂ).

ಈಗ ರಾಜ್ಯಾದಾದ್ಯಂತ ಇರುವ ಅನಾಥಾಲಯಗಳು, ನಿರ್ಗತಿಕರ ಗೃಹಗಳೇ ಮೊದಲಾದ ಸಂಸ್ಥೆಗಳಲ್ಲಿ ನಿಜವಾಗಿಯೂ ಎಷ್ಟು ಮಕ್ಕಳಿದ್ದಾರೆ, ಅವರ ಅವಶ್ಯಕತೆಗಳೇನು, ಅಂತಹಾ ಒಂದೊಂದು ಸಂಸ್ಥೆ ಎಷ್ಟು ಹಣವನ್ನು ದೇಣಿಗೆ(ಸ್ವದೇಶಿ ಮತ್ತು ಸರ್ಕಾರದ ಅನುದಾನ ಇತ್ಯಾದಿ)ಯಾಗಿ ಸಂಗ್ರಹಿಸಿ ಎಷ್ಟು ಖರ್ಚು ಮಾಡುತ್ತಿವೆ ಎಂಬುದನ್ನೆಲ್ಲಾ ಪರೀಕ್ಷಿಸುವ ಮತ್ತು ಈ ಕುರಿತು ರಾಜ್ಯದ ವಾರ್ಷಿಕ ವರದಿಯನ್ನು ನೀಡುವಂತಾದಾಗ ಮಾತ್ರ ಮಕ್ಕಳಿಗೆ ನ್ಯಾಯಬದ್ಧ ಬದುಕು ದೊರೆಯುತ್ತದೆ.

**ದತ್ತು ಕಾರ್ಯಕ್ರಮ**

ಯಾವುದೇ ಮಗು ಅನಾವಶ್ಯಕವಾಗಿ ಮಕ್ಕಳ ನಿಲಯಗಳು/ಅನಾಥಾಲಯಗಳು/ ಶಿಶು ಮಂದಿರಗಳಲ್ಲಿ ದೀರ್ಘಕಾಲ ಇರಬಾರದು ಎಂಬುದು ಮಕ್ಕಳ ಹಿತ ಕಾಪಾಡುವ ಮತ್ತು ಮಕ್ಕಳ ಹಕ್ಕುಗಳನ್ನು ಗೌರವಿಸುವ ಮನೋಭಾವವಿರುವ ಎಲ್ಲರ ಅನಿಸಿಕೆ. ಇದೇ ಅಭಿಪ್ರಾಯವನ್ನು ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ ೨೦೦೦ ಕೂಡಾ ವ್ಯಕ್ತಪಡಿಸುತ್ತದೆ. ಮಕ್ಕಳು ಅವರವರ ಪೋಷಕರ ವಶದಲ್ಲಿ/ ಸುಪರ್ದಿನಲ್ಲಿ / ಪಾಲನೆ ಪೋಷಣೆಯಲ್ಲಿದ್ದರೆ ಮಾತ್ರ ಅವರಿಗೆ ನಿಜವಾದ ಅರ್ಥದಲ್ಲಿ ರಕ್ಷಣೆ ಸಿಗುತ್ತದೆ ಮತ್ತು ಅವರ ಭವಿಷ್ಯ ನಿರ್ಮಾಣಕ್ಕೆ ಅರ್ಥ ಬರುತ್ತದೆ ಎಂಬುದು ಇಲ್ಲಿನ ಆಶಯ. (ಆದರೆ ಕೆಲವೊಮ್ಮೆ ಮಕ್ಕಳನ್ನು ಅವರವರ ಪೋಷಕರ ಬಳಿಯೇ ಬಿಟ್ಟರೆ ಅದೇ ಆಯಾ ಮಕ್ಕಳ ಬದುಕಿಗೆ ಅನರ್ಥವಾದೀತು ಎಂಬ ಅಭಿಪ್ರಾಯಕ್ಕೆ ನ್ಯಾಯಾಲಯವು ಬಂದಲ್ಲಿ ಅಂತಹಾ ಮಕ್ಕಳನ್ನು ಸೂಕ್ತ ಕಾಯಿದೆಗಳಡಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬಹುದು). ವಿವಾಹೇತರ ಸಂಬಂಧಗಳು, ಮೋಸದ ಮದುವೆ, ಅತ್ಯಾಚಾರ, ಗರ್ಭ ನಿಂತ ಮೇಲೆ ಅಥವಾ ಮಗುವಾದ ಮೇಲೆ ಗಂಡ ಓಡಿ ಹೋದಲ್ಲಿ ಪೋಲಿಸ್ ದೂರು ನೀಡಲು ಅಥವಾ ಸಾಂತ್ವನ ಮತ್ತು ಮಹಿಳಾ ಸಹಾಯವಾಣಿ'ಯ ಮೂಲಕ ನೊಂದ ಮಹಿಳೆಯರಿಗೆ ನ್ಯಾಯ ಒದಗಿಸಲು ಇರುವ ವ್ಯವಸ್ಥೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಬೇಕು.

ಮಕ್ಕಳನ್ನು ಅನಾಥರಾದಲ್ಲಿ ಅಥವಾ ಪೋಷಕರಿಂದ ಕಳೆದುಹೋದಲ್ಲಿ ಮಕ್ಕಳು ಮತ್ತು ಪೋಷಕರನ್ನು ಒಂದು ಗೂಡಿಸುವ ಪ್ರಯತ್ನಕ್ಕಾಗಿ ಎಲ್ಲ ಕ್ರಮಗಳನ್ನು ಕೈಗೊಳ್ಳುವುದು ಕಡ್ಡಾಯವಾಗಿದೆ. ಕೈಮೀರಿದ ಪ್ರಸಂಗಗಳಲ್ಲಿ, ಯಾವುದೇ ಪ್ರಯತ್ನ ಪಟ್ಟರೂ ಮಕ್ಕಳಿಗೆ ಅವರ ನಿಜವಾದ/ಮೂಲ ಪೋಷಕರು ಸಿಕ್ಕದೇ ಇದ್ದಲ್ಲಿ ಅಂತಹ ಮಕ್ಕಳನ್ನು ಪರ್ಯಾಯ ಪೋಷಕರ ವಶಕ್ಕೆ ನೀಡಬಹುದು. ಹಾಗೆ ಗುರುತಿಸಿದ ಸೂಕ್ತವಾದ ಪೋಷಕರಿಗೆ

ಮಕ್ಕಳನ್ನು ದತ್ತು ನೀಡಬಹುದೆಂದು ಮಕ್ಕಳ ನ್ಯಾಯ ಕಾಯಿದೆ ೨೦೦೦ ನಿರ್ದೇಶಿಸುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ದತ್ತು ನಿಯಮಗಳು, ನಿರ್ದೇಶನಗಳ ಆಧಾರದ ಮೇಲೆ ಮಕ್ಕಳನ್ನು ದತ್ತು ನಿಡುವ ಅಧಿಕಾರವನ್ನು **ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರಕ್ಕೆ** ನೀಡಲಾಗಿದೆ.

ಭಾರತದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಹಿಂದೂ ದತ್ತು ಮತ್ತು ಪೋಷಣೆ ಕಾಯಿದೆ ೧೯೫೬ (HAMA-Hindu Adoption and Maintenance Act ೧೯೫೬) ಮತ್ತು ಪೋಷಕರು ಮತ್ತು ಮಕ್ಕಳ ಕಾಯಿದೆ ೧೮೯೦(GAWA- Guardians Wards Act. ೧೮೯೦) ಇವುಗಳಿಗೆ ವಿರೋಧವಾಗಿರುವಂತೆ ಅಥವಾ ಅದನ್ನು ತಿರಸ್ಕರಿಸುವಂತೆ ಇದು ಕಾಣುತ್ತದೆ ಎಂಬುದು ಈ ಕಾಯಿದೆಯ ಟೀಕಾಕಾರರ ಮಾತು. ಮಕ್ಕಳ ನ್ಯಾಯ ಕಾಯಿದೆ ಸಾಮಾನ್ಯ ಕಾಯಿದೆ(general law) ಯಷ್ಟೇ. ಆದರೆ ಹಿಂದೂ ದತ್ತು ಮತ್ತು ಪೋಷಣೆ ಕಾಯಿದೆ ವಿಶೇಷ ಕಾಯಿದೆ(special law). ಹೀಗಾಗಿ ಇದಕ್ಕೆ ಹೆಚ್ಚಿನ ಸ್ಥಾನಮಾನವಿದೆ. ಮಕ್ಕಳ ನ್ಯಾಯ ಕಾಯಿದೆಯಡಿ ಮಕ್ಕಳನ್ನು ದತ್ತು ನೀಡಿದ್ದೇ ಆದಲ್ಲಿ ಅಂತಹ ಮಕ್ಕಳಿಗೆ ಸ್ವಾಭಾವಿಕ ಮಕ್ಕಳಿಗೆ ಸಿಗುವಂತಹ ಆಸ್ತಿ ಹಕ್ಕು ಇತ್ಯಾದಿ ಸಿಗುವುದಿಲ್ಲ. ಇದು ಕೇವಲ ಪೋಷಕತ್ವವನ್ನಷ್ಟೇ ನೀಡುತ್ತದೆ. ಹೀಗಾಗಿ ದತ್ತು ಕುರಿತು ಎಲ್ಲ ಧರ್ಮೀಯರಿಗೂ ಅನ್ವಯಿಸುವಂತೆ ಸಮಗ್ರವಾದ ಒಂದೇ ಕಾನೂನಿನ ಅವಶ್ಯಕತೆ ಮನಗಂಡು ಮಕ್ಕಳ ದತ್ತು ಪ್ರಕ್ರಿಯೆಯನ್ನು ಮಕ್ಕಳ ನ್ಯಾಯ ಕಾಯಿದೆಯಡಿ ಮಕ್ಕಳ ಪುನರ್ವಸತಿಯ ಬಹು ಮುಖ್ಯ ಅಂಶವಾಗಿ ಸ್ವೀಕರಿಸಲಾಗಿದೆ.

ಪ್ರತಿ ಮಗುವಿಗೂ ಕೌಟುಂಬಿಕ ಜೀವನವನ್ನು ಬಾಳುವ ಹಕ್ಕು ಇದೆ ಎಂಬುದನ್ನು ಮಾನ್ಯ ಮಾಡಿರುವ ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ ೨೦೦೦, ನಿರ್ಲಕ್ಷ್ಯಕ್ಕೊಳಗಾಗದ, ಪರಿತ್ಯಕ್ತರಾದ, ಅನಾಥರಾದ ಮಕ್ಕಳ ಹಿತದೃಷ್ಟಿಯನ್ನು ಗೌರವಿಸುತ್ತದೆ. ಕಾರಾ(**ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರ**)ದ ಮೂಲಕ ಪಾರದರ್ಶಕ ರೀತಿಯ ಹೊಸ ತಂತ್ರಗಾರಿಕೆಯನ್ನೊಳಪಡಿಸಿ ಕಳೆದ ಸುಮಾರು ಐದು ವರ್ಷಗಳಿಂದ ಶ್ರಮಿಸುತ್ತಿದೆ.

ಹಿಂದೆ ಚಾಲ್ತಿಯಲ್ಲಿದ್ದ ಹಿಂದೂ ದತ್ತಕ ಕಾನೂನು ಕೇವಲ ಹಿಂದೂಗಳಿಗೆ ಮಾತ್ರ ಮಕ್ಕಳನ್ನು ದತ್ತು ಪಡೆಯುವ ಹಕ್ಕನ್ನು ನೀಡುತ್ತದೆ. ಕ್ರೈಸ್ತರು ಮತ್ತು ಇಸ್ಲಾಂ ಧರ್ಮೀಯರಿಗೆ ಮಕ್ಕಳನ್ನು ಕಾನೂನು ಪ್ರಕಾರ ದತ್ತು ಪಡೆಯುವ ಸಾಧ್ಯತೆಗಳು ಭಾರತದಲ್ಲಿ ಚಾಲ್ತಿಯಲ್ಲಿರುವ

ದತ್ತು ಕಾನೂನುಗಳಿಂದ ಸಾಧ್ಯವಿರಲಿಲ್ಲಲ್ಲ. ಆದರೂ, ಪೋಷಕರು ಮತ್ತು ಮಕ್ಕಳ ಕಾಯಿದೆ ೧೮೯೦ರ ಅಡಿಯಲ್ಲಿ ಯಾವ ಧರ್ಮೀಯರು ಬೇಕಾದರೂ ಎಷ್ಟು ಮಕ್ಕಳಿಗೆ ಬೇಕಾದರೂ ಪೋಷಕತ್ವದ ರಕ್ಷಣೆ ನೀಡಬಹುದು

**ಮಕ್ಕಳ ರಕ್ಷಣೆ ಕಾಯಿದೆ ಮತ್ತು ಮಕ್ಕಳ ದತ್ತು**

ಮಕ್ಕಳ ನ್ಯಾಯ ಕಾಯಿದೆಯಲ್ಲಿನ ದತ್ತು ಕುರಿತಾದ ಪ್ರಸ್ತಾವನೆ ಸಲಹೆಗಳನ್ನು ಗಮನಿಸಿದರೆ ಇದರಡಿಯಲ್ಲಿ ಎಲ್ಲ ಧರ್ಮೀಯರಿಗೂ ಮಕ್ಕಳ ನ್ಯಾಯಮಂಡಳಿಯ ಮೂಲಕ ಮಕ್ಕಳನ್ನು ದತ್ತು ನೀಡಲು ಅನುಮತಿ ನೀಡಬಹುದೆಂಬ ಸ್ಪಷ್ಟ ನಿರ್ದೇಶನ ಕಾಣುತ್ತದೆ.

ದತ್ತು ನೀಡಲು ಇರುವ ನಿಯಮ ಮತ್ತು ಪ್ರಕ್ರಿಯೆಗಳಂತೆ 'ಅನಾಥರಾದ ಭಾರತೀಯ ಮಕ್ಕಳಿಗೆ ಭಾರತದಲ್ಲೇ ದತ್ತು ಪೋಷಕರನ್ನು ಪಡೆಯುವುದಕ್ಕೆ ಮೂಲ ಹಕ್ಕು ಇದೆ: ಭಾರತದಲ್ಲಿ ಪೋಷಕರು ದೊರೆಯದಿದ್ದಲ್ಲಿ ಅನಿವಾಸಿ ಭಾರತೀಯರಿಗೆ ಪ್ರಥಮ ಆದ್ಯತೆ ನೀಡಬೇಕು ಮತ್ತು ಆ ಪ್ರಯತ್ನದಲ್ಲೂ ಫಲ ಸಿಗದಿದ್ದಲ್ಲಿ ಮಾತ್ರ ವಿದೇಶಿ ಪೋಷಕರನ್ನು ಹುಡುಕಬೇಕು' ಎಂದು ೧೯೮೪ರ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೇಳುತ್ತದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದತ್ತು ಕುರಿತು ಸರ್ವೋಚ್ಚ ನ್ಯಾಯಾಲಯ ನೀಡಿದ ಸಲಹೆ ಹಾಗೂ ನಿರ್ದೇಶನಗಳಲ್ಲಿ ಕೆಲವು ಬದಲಾವಣೆಗಳನ್ನು ೧೯೫ರಲ್ಲಿ ಮಾಡಲಾಯಿತು. ಇದೇ ವಿಚಾರವನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲೆಂದೇ ಕಾರಾ (CARA) ಕೂಡಾ ಕಾರ್ಯೋನ್ಮುಖವಾಗಿದ್ದು ಅಂತಾರಾಷ್ಟ್ರೀಯ ದತ್ತುವಿನ ಎಲ್ಲ ಪ್ರಕ್ರಿಯೆಗಳನ್ನು ತೀವ್ರವಾಗಿ ಗಮನಿಸುತ್ತದೆ.

ದತ್ತು ಎಂಬುದು ಪೋಷಕರಿಲ್ಲದ ಮಕ್ಕಳಿಗೆ ಶಾಶ್ವತ ಪೋಷಕರನ್ನು ಒದಗಿಸುವ ಪ್ರಕ್ರಿಯೆ (ಮಕ್ಕಳಿಲ್ಲದ ಪೋಷಕರಿಗೆ ಮಕ್ಕಳನ್ನು ಶಾಶ್ವತವಾಗಿ ಒದಗಿಸುವುದು ದತ್ತು ಸಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ದತ್ತು ಎಂಬುದು ಮಕ್ಕಳ ಹಿತ ಕಾಪಾಡುವ ಮತ್ತು ಮಕ್ಕಳ ಹಕ್ಕುಗಳಿಗೆ ಪ್ರಾಧಾನ್ಯತೆ ಕೊಡುವ ಪ್ರಕ್ರಿಯೆ). ಈ ರೀತಿಯಲ್ಲಿ ದತ್ತು ಹೋಗಲು ಅರ್ಹತೆ ಪಡೆಯುವ ಮಕ್ಕಳನ್ನು ಕುರಿತು ಮಕ್ಕಳ ನ್ಯಾಯ ಕಾಯಿದೆಯಲ್ಲಿ ಕಾಯಿದೆಯಲ್ಲಿ ಸ್ಪಷ್ಟ ವಿವರಣೆ ಇದೆ. ಕಾಯಿದೆಯ ಜಾರಿಗೆ ಕರ್ನಾಟಕ ರಾಜ್ಯ ನಿಯಮಗಳಲ್ಲೂ ಸಹ ಇದೇ ಧಾಟಿಯ ಮತ್ತು ಹೆಚ್ಚು ಅರ್ಥಪೂರ್ಣವಾದ ನಿರ್ದೇಶನಗಳನ್ನು (ಭಾಗ ೪ ನಿಯಮ) ಕಾಣಬಹುದು.

**ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಮಗುವಿನ ದೈಹಿಕ ದಂಡನೆ ತಡೆಗಟ್ಟುವಲ್ಲಿ ಪ್ರಕಟಿಸಲಾದ ಮಾರ್ಗಸೂಚಿಗಳು:**

**ದೈಹಿಕ ದಂಡನೆಯ ವ್ಯಾಖ್ಯಾನ:**

ದೈಹಿಕ ದಂಡನೆಯನ್ನು ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ ೨೦೦೯ (ಸೆಕ್ಷನ್ ೧೭)ರ ದೈಹಿಕ ದಂಡನೆ, ಮಾನಸಿಕ ಪೀಡನೆ ಹಾಗೂ ತಾರತಮ್ಯ ಎಂಬುದಾಗಿ ವಿಭಾಗಿಸುತ್ತದೆ. ದೈಹಿಕ ದಂಡನೆಯೆಂದರೆ ಮಗುವಿಗೆ, ನೋವು ಗಾಯ ಅಥವಾ ಯಾವುದೇ ಕಿರಿಕಿರಿ ಉಂಟುಮಾಡುವ ಕೃತ್ಯ. ಹೊಡೆಯುವುದು ಒದೆಯುವುದು, ಚಿವುಟುವುದು, ಪರಚುವುದು ಕಚ್ಚುವುದು, ಕೂದಲು ಜಗ್ಗುವುದು, ಕಿವಿ ಹಿಂಡುವುದು, ಗುದ್ದುವುದು, ಕಪಾಲಕ್ಕೆ ಹೊಡೆಯುವುದು, ಚಾಕ್, ಬೆತ್ತ ಅಥವಾ ಯಾವುದೇ ವಸ್ತುವನ್ನು ಮಗುವಿಗೆ ಎಸೆಯುವುದು, ವಿದ್ಯುತ್ ಶಾಕ್ ದೊಡುವುದು, ಬೆಲ್ಟ್ ಬೀಸುವುದು ಇತ್ಯಾದಿ. ಬೇಡವಾದ ಅಪಾಯಕಾರಿ ವಸ್ತುಗಳಾದ ಸಾಬೂನುಮ್ ಖಾರದಪುಡಿ, ಮಣ್ಣು, ಚಾಕ್ ಪೌಡರ್ ಇತ್ಯಾದಿ ಮಗುವಿನ ಮೇಲೆ ಹಾಕುವುದು, ಮಗುವನ್ನು ಗ್ರಂಥಾಲಯ, ಶೌಚಾಲಯ, ತರಗತಿಯಲ್ಲಿ ಕೂಡಿ ಹಾಕುವುದು.

**ಮಗುವಿನ ಭವಿಷ್ಯದ ಮೇಲೆ ದೈಹಿಕ ದಂಡನೆಯ ಪರಿಣಾಮಗಳೇನು?**

ಪ್ರಪಂಚದಾದ್ಯಂತ ಮಕ್ಕಳಿಗೆ ನೀಡುವ ಯಾವುದೇ ತರಹದ ದಂಡನೆ / ಹಿಂಸೆ ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಋಣಾತ್ಮಕ ಪರಿಣಾಮಗಳಿರುವುದು ಒಪ್ಪಿಕೊಂಡಿರುವಂತಹಾ ಸಂಗತಿ. ಹಿರಿಯರು ಹೊಡೆಯುವುದು/ ದಂಡಿಸುವುದು/ ಹಿಂಸಿಸುವುದು ಮಕ್ಕಳಿಗೆ ಸಂಘರ್ಷವನ್ನು ಹತ್ತಿಕ್ಕಲು ಹೊಡೆಯುವುದು, ಬಡಿಯುವುದು, ಸರಿಯಾದ ವಿಧಾನವೆಂಬುದನ್ನು ಕಲಿಸುತ್ತದೆ. ಹೆಚ್ಚು ಹೊಡೆಸಿಕೊಂಡ ಮಕ್ಕಳು ದೊಡ್ಡವರಾದಾಗ ಹೆಚ್ಚು ಸಿಟ್ಟು /ಕ್ರೌರ್ಯವನ್ನು ತೋರಿಸುವುದು ವರದಿಯಾಗಿದೆ. ಅವರು ಹಿರಿಯರಾದಾಗ ಅವರು ಉಪಯೋಗಿಸುವ ವಿಧಾನ ಕ್ರೌರ್ಯ/ದಂಡನೆ. ದೈಹಿಕ ದಂಡನೆ ಮಗುವಿನ ಮೇಲೆ ದೈಹಿಕ ಮಾನಸಿಕ ಮತ್ತು ಶೈಕ್ಷಣಿಕವಾಗಿ ಹಿನ್ನಡೆ ಉಂಟುಮಾಡುತ್ತದೆ. ಮಗುವಿನಲ್ಲಿ ಸಿಡುಕು ಮತ್ತು ವಿನಾಶಕಾರಿ ನಡತೆ, ತರಗತಿಯಲ್ಲಿ ಕೀಟಲೆ ಅಥವಾ ತೊಂದರೆ ಕೊಡುವುದು, ಶಾಲಾ ಪ್ರಗತಿಯಲ್ಲಿ ಹಿನ್ನಡೆ, ಮನಸ್ಸನ್ನು ಕೇಂದ್ರೀಕರಿಸಲು ಕಷ್ಟವಾಗುವುದು, ಶಾಲೆಯಿಂದ ಹೊರಗೆ ಉಳಿಯುವುದು, ಶಾಲೆಯ ಬಗ್ಗೆ ಭಯ ಸ್ವಪ್ರತಿಷ್ಠೆಯ ಅಭಾವ, ನಿರಂತರ ಭಯ ಆತಂಕ, ತುಮುಲ, ಆಗಾಗ ದೂರು, ಖಿನ್ನತೆ,

ಆತ್ಮಹತ್ಯೆ ಹಾಗೂ ಶಿಕ್ಷಕರ ಮೇಲೆ ತಿರುಗಿ ಬೀಳುವಂತಹಾ ನಡತೆಗಳಿಗೆ ಕಾರಣವಾಗುತ್ತದೆ. ಇದು ಭಾವನಾತ್ಮಕವಾಗಿ ಭವಿಶ್ಯದ ಬಗ್ಗೆ ಆತಂಕ ಉಂಟುಮಾಡುತ್ತದೆ.

**ಶಾಲೆಗಳಲ್ಲಿ ದೈಹಿಕ ಹಿಂಸೆ ಕೊನೆಗೊಳಿಸಲು ಮಾರ್ಗಸೂಚಿಗಳು**

ಮಕ್ಕಳ ರಕ್ಷಣೆ ಮತ್ತು ಪೋಷಣೆ ಮಾಡಬೇಕಾದ ಶಾಲೆ ಹಾಸ್ಟೆಲ್ ಅನಾಥಾಲಯ ಬಾಲಮಂದಿರ ಹಾಗೂ ಕುಟುಂಬದಂತಹ ಸಂಸ್ಥೆಗಳಲ್ಲಿ ಮಕ್ಕಳು ದೈಹಿಕ ಹಿಂಸೆಗೆ ಒಳಪಡುತ್ತಾರೆ, ಭಾರತ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ನಡೆಸಿದ ಭಾರತದಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ೨೦೦೭ ಎಂಬ ಸಮೀಕ್ಷೆ ಪ್ರಕಾರ ೬೯% ಮಕ್ಕಳು ದೈಹಿಕ ಹಿಂಸೆ ಅನುಭವಿಸುವುದು ದೃಡಪಟ್ಟಿದೆ. ಕಾನೂನಿನ ಜೊತೆ ಸಂಘರ್ಷದಲ್ಲಿರುವ ಮಕ್ಕಳಲ್ಲಿ ೭೦.೨೦% ಮಕ್ಕಳ ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ೫೨.೬೮% ಮಕ್ಕಳು ದೈಹಿಕ ಹಿಂಸೆ ಅನುಭವಿಸಿದ್ದಾರೆ. ಸಂಸ್ಥೆಗಳಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಭಾಷಿಕ ಹಿನ್ನೆಲೆಯ ಮೇಲೆ ಹಾಗೂ ರೋಗ ಮತ್ತು ದೈಹಿಕ ಅಂಗವಿಕಲತೆಯ ಆಧಾರದ ಮೇಲೆ ಹಿಂಸೆ, ತಾರತಮ್ಯ ಅನುಭವಿಸಿರುವುದು ದಾಖಲೆಗಳಿಂದ ದೃಡಪಟ್ಟಿದೆ.

**ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೋ) ಕಾಯ್ದೆ ೨೦೧೨:**

ಮಕ್ಕಳನ್ನ ಕಾಮದ ವಸ್ತುವಾಗಿ ನೋಡುವ ವಿಕೃತ ಮನಸ್ಸಿನ ಜನರು ಹೆಚ್ಚಾಗುತ್ತಿದ್ದಾರೆ. ಸಂಬಂಧಗಳ ಬಗ್ಗೆ ಇರುವ ನಂಬಿಕೆಗಳಿಂದಲೇ ದೌರ್ಜನ್ಯಗಳು ನಡೆದರೂ ಗಮನಕ್ಕೆ ಬರುವುದಿಲ್ಲ. ದೌರ್ಜನ್ಯಕ್ಕೊಳಗಾದವರಿಗೆ ಕಳಂಕ ಅಂಟಿಸುವ ನಮ್ಮ ವ್ಯವಸ್ಥೆ ಇದಕ್ಕೆ ಕಾರಣ. ಲೈಂಗಿಕ ಶೋಷಣೆಯಿಂದ ಮಕ್ಕಳನ್ನು ಹೇಗೆ ರಕ್ಷಿಸಬೇಕು ಎನ್ನುವುದು ಇತ್ತೀಚಿನ ದಿನಗಳಲ್ಲಿ ಅತ್ಯಂತ ಹೆಚ್ಚು ಆತಂಕ ಒಡ್ಡಿರುವ ವಿಚಾರ. ಇದು ಕೇವಲ ಹೆಣ್ಣಿಮಕ್ಕಳಿಗೆ ಮಾತ್ರ ಸೀಮಿತವಾಗಿಲ್ಲ. ಗಂಡು ಮಕ್ಕಳಿಗೂ ಅಷ್ಟೇ ಪ್ರಸ್ತುತ. ಈ ವಿಷಯ ಎಷ್ಟು ಸೂಕ್ಷ್ಮ ಎಂದರೆ, ಬೇರೆ ಅಪರಾಧಿಗಳಿಗೆ ಹೋಲಿಸಿ ನೋಡಿದರೆ ಇಂತಹ ಪ್ರಕರಣಗಳು ಬೆಳಕಿಗೆ ಬರುವುದು ಕೇವಲ ೩ ರಿಂದ ೫ ಪ್ರತಿಶತ ಮಾತ್ರ. ಮಕ್ಕಳ ಮೇಲೆ ನಡೆಯುವ ಈ ಲೈಂಗಿಕ ಶೋಷಣೆಯ ಪ್ರಕರಣಗಳು ಬಹುತೇಕ ಮುಚ್ಚಿ ಹಾಕಲ್ಪಡುತ್ತವೆ.

ಮಕ್ಕಳ ಮೇಲೆ ಹಲವು ಸಲ ರಕ್ಷಕರೇ ದೌರ್ಜನ್ಯ ಎಸಗಿದಾಗ ಇವುಗಳನ್ನು ವಿಪರೀತ (ಅಗ್ರವೇಟಡ್) ಅಥವಾ ಘೋರ ಅಪರಾಧವೆಂದು ಪರಿಗಣಿಸಲಾಗಿದೆ. ಅಪರಾಧಗಳ ಪ್ರಮಾಣಕ್ಕೆ ಅನುಗುಣವಾಗಿ ಶಿಕ್ಷೆಯೂ ಜಾಸ್ತಿಯಾಗುತ್ತಾ ಹೋಗುತ್ತದೆ. ಇವುಗಳನ್ನೆಲ್ಲಾ

ಪ್ರತ್ಯೇಕವಾಗಿ ಈ ರೀತಿಯಲ್ಲಿ ವಿವರಿಸಲಾಗಿದೆ. ಈ ನಿಟ್ಟಿನಲ್ಲಿ ೨೦೧೨ರಲ್ಲಿ ಪೋಕ್ಸೋ ಕಾಯಿದೆ ಜಾರಿಗೆ ಬರುತ್ತದೆ. ಈ ಕಾಯಿದೆಯ ಪ್ರಕಾರ ಮಕ್ಕಳ ಮೇಲೆ ದೌರ್ಜನ್ಯ ಎಂದರೆ:

೧. ತೂರಿಸುವ ಮೂಲಕ ಲೈಂಗಿಕ ದೌರ್ಜನ್ಯ ಕಲಂ ೩: ಯಾವುದೇ ಒಂದು ಮಗುವಿಗೆ ದೇಹದ ಗುಪ್ತ ಭಾಗಗಳನ್ನು ತೋರಿಸಿದರೆ ಅಥವಾ ದೇಹದ ಯಾವುದೇ ಒಂದು ಭಾಗವನ್ನು ದುರುಪಯೋಗಪಡಿಸಿ ತೂರಿಸುವಿಕೆಯನ್ನು ಸಾಧ್ಯಮಾಡಿದರೆ ಮತ್ತು ಲೈಂಗಿಕ ಕ್ರಿಯೆಗೆ ತೊಡಗಿದರೆ ಅಥವಾ ಮಾಡಿಸಿಕೊಂಡರೆ ಅದು 'ತೂರಿಸುವ ಮೂಲಕದ ಲೈಂಗಿಕ ದೌರ್ಜನ್ಯ' ಎಣಿಸಿಕೊಳ್ಳುವುದು. ಇಂಥಹಾ ಅಪರಾಧ ಎಸಗುವವರು ಏಳು ವರ್ಷಗಳಿಂದ ಜೀವಾವಧಿ ಶಿಕ್ಷೆಗೆ ಅರ್ಹರಾಗುತ್ತಾರೆ.

- ಘೋರ ತೂರಿಸುವ ಮೂಲಕ ಲೈಂಗಿಕ ದೌರ್ಜನ್ಯ: ಕಲಂ–೫ ಮೇಲಿನ ಅಪರಾಧಗಳನ್ನು ಇಲ್ಲಿ ನಮೂದಿಸಲಾದ ವ್ಯಕ್ತಿಗಳು
- ಪೋಲೀಸ್ ಅಧಿಕಾರಿ ತನ್ನ ವೃತ್ತಿಯೊಳಗೆ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ
- ಭದ್ರತಾ ಅಧಿಕಾರಿ ತನ್ನ ಕಾರ್ಯ ಕ್ಷೇತ್ರ ಅಥವಾ ಹೊರಗಡೆ
- ಸರಕಾರೊ ನೌಕರ, ಸೆರೆಮನೆಯ ಅಧಿಕಾರಿ, ಪರಿವೀಕ್ಷಣಾಧಿಕಾರಿ ಅಥವಾ ಮಕ್ಕಳ ರಕ್ಷಣೆಯ ಜವಾಬ್ಧಾರಿ ಹೊತ್ತಿರುವ ವ್ಯಕ್ತಿ
- ಕುಟುಂಬದ ಸದಸ್ಯರು

ಈ ಕೆಳಗಿನ ಸಂದರ್ಭಗಳಲ್ಲಿ ನಡೆಸಿದರೆ ಅದನ್ನು ಘೋರ ಅಪರಾಧವೆಂದು ಪರಿಗಣಿಸಲಾಗುತ್ತದೆ.

- ಒಂದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಸೇರಿ ದೌರ್ಜನ್ಯ ಎಸಗಿದಾಗ
- ಮಗುವನ್ನು ಗರ್ಭ ಧರಿಸುವಂತೆ ಮಾಡಿದಾಗ
- ಗರ್ಭಿಣಿಯಾದ ಮಗುವಿನ ಮೇಲೆ ಈ ದೌರ್ಜನ್ಯ ಎಸಗಿದಾಗ
- ೧೨ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಾಗಿದ್ದ ಸಂದರ್ಭದಲ್ಲಿ
- ಈ ಕೃತ್ಯದಿಂದ ಮಗುವಿಗೆ ಎಚ್.ಐ.ವಿ ಸೋಂದು ಬಂದಲ್ಲಿ
- ದೈಹಿಕ ಅಥವಾ ಮಾನಸಿಕ ಅಂಗವಿಕಲತೆಯುಳ್ಳ ಮಗುವಿನ ಮೇಲೆ ಪದೇ ಪದೇ ಮಗುವಿನ ಮೇಲೆ ಈ ಕೃತ್ಯ ನಡೆಸಿದಲ್ಲಿ

- ಬೆಂಕಿ, ಕೆರೋಸಿನ್/ಕಾಯಿಸಿದ ವಸ್ತು ಅಥವಾ ಆಯುಧಗಳನ್ನು ಬಳಸಿದಲ್ಲಿ
- ಇಂಥ ದೌರ್ಜನ್ಯ ಎಸಗಲು ಮಗುವನ್ನು ಹತ್ಯೆ ಮಾಡಲು ಪ್ರಯತ್ನಿಸಿದಲ್ಲಿ
- ಕೋಮು, ಜಾತಿ ಗಲಭೆಗಳ ಸಂದರ್ಭದಲ್ಲಿ

ಅಪರಾಧಿಗಳಿಗೆ ಕಠಿಣವಾದ ೧೦ ವರ್ಷದ ಸೆರೆವಾಸದಿಂದ ಹಿಡಿದು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಲಾಗುವುದು.

ಯಾವುದೇ ವ್ಯಕ್ತಿ ಒಂದು ಮಗುವನ್ನು ಬಳಸಿ ನೀಲಿ ಚಿತ್ರ(ಅಶ್ಲೀಲ) ತಯಾರಿಸಿ, ಅದನ್ನು ಮುದ್ರಿಸಿ ಚಿತ್ರಿಸಿ ಅಥವಾ ಅಂತರ್ಜಾಲದ ಮೂಲಕ ಪಸರಿಸಿದರೆ ಅದೂ ಕಲಂ ೧೩ ಮತ್ತು ಕಲಂ ೧೪ ರಂತೆ ಅದು ಅಪರಾಧವೆನಿಸುತ್ತದೆ. ಅಶ್ಲೀಲ ಚಿತ್ರೀಕರಣದ ಪರಿಕರಗಳನ್ನು ಸಂಗ್ರಹಿಸಿಟ್ಟವರಿಗೂ ಈ ಕಾನೂನಿನಡಿಯಲ್ಲಿ ಶಿಕ್ಷೆ ಇದೆ. ಈ ಅಪರಾಧಗಳನ್ನು ಅಧಿಕಾರದಲ್ಲಿರುವವರು ಅಥವಾ ಮಕ್ಕಳ ರಕ್ಷಣೆಯ ಜವಾಬ್ದಾರಿ ಹೊತ್ತಿರುವವರು ಮಾಡಿದಲ್ಲಿ ಅಥವಾ ಕುಟುಂಬದ ಸದಸ್ಯರೇ ಭಾಗಿಯಾಗಿದಲ್ಲಿ ಅವರೆಲ್ಲರೂ ಹೆಚ್ಚಿನ ಶಿಕ್ಷೆಗೆ ಗುರಿಯಾಗುವರು.

ಈ ಮೇಲಿನ ಎಲ್ಲಾ ಅಪರಾಧಗಳನ್ನು ಮಾಡಲು ಪ್ರಚೋದನೆ ನೀಡಿದ, ಸಹಾಯ ಮಾಡಿದ ಅಥವಾ ಯಾವುದೇ ರೀತಿಯಲ್ಲಿ ಭಾಗಿಯಾದ ಎಲ್ಲರೂ ಅಪರಾಧಿಗಳೆನಿಸುವರು. ಆ ಅಪರಾಧಗಳು ನಡೆದ ಬಗ್ಗೆ ಮಾಹಿತಿ ಇದ್ದು, ಇದಕ್ಕೆ ಸಂಬಂಧಿಸಿದ ದೂರು ಕೊಡದವರೂ ಕೂಡಾ ತಪ್ಪಿತಸ್ಥರು. ನೇರವಾಗಿ ಅಪರಾಧ ಮಾಡಿದವರಿಗೆ ನೀಡುವ ಶಿಕ್ಷೆಯ ಅರ್ಧದಷ್ಟನ್ನು ಇವರು ಅನುಭವಿಸಬೇಕು.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ಅಶ್ಲೀಲ ಚಿತ್ರ ಪ್ರದರ್ಶನ ಇಂಥಹಾ ಅಪರಾಧಗಳನ್ನು ತಡೆಯಲು ಪೋಕ್ಸೋ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡಲು ವಿಶೇಷ ನ್ಯಾಯಾಲಯಗಳನ್ನು ರಚಿಸಲಾಗಿದೆ.

**ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ನೀತಿ**

**ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ನೀತಿ ೨೦೧೮** – ಈ ನೀತಿಯು ಕರ್ನಾಟಕ ರಾಜ್ಯದಲ್ಲಿ ಹೆಣ್ಣುಮಕ್ಕಳು ಸದ್ಯ ಎದುರಿಸುತ್ತಿರುವ ಮತ್ತು ಅಲ್ಲಿ ಉದ್ಭವವಾಗುತ್ತಿರುವ ಸವಾಲುಗಳನ್ನು ಎದುರಿಸುವ ಹಕ್ಕುಗಳ ಪರಿಭಾಷೆಯ ದೃಷ್ಟಿಕೋನವನ್ನು ಮನ್ನಿಸುತ್ತವೆ.

ಹೆಣ್ಣುಮಕ್ಕಳು ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಎದುರಿಸುವ ತಾರತಮ್ಯಗಳನ್ನು, ಸಮಾಜದಲ್ಲಿನ ಅವರ ಸ್ಥಾನಮಾನ ಹಾಗೂ ಅವರ ಅಭಿವೃದ್ಧಿಯ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ಎದುರಿಸುವ ಬದ್ಧತೆಯನ್ನು ಗುರುತಿಸಿ, ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ನೀತಿಯನ್ನು ರೂಪಿಸುವ ಮೂಲಕ ಸರ್ಕಾರವು ತನ್ನ ಬದ್ಧತೆಯನ್ನು ಪ್ರತಿಪಾದಿಸಿದೆ. ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ನೀತಿಯಲ್ಲಿ ಸರ್ಕಾರದ ದೂರದರ್ಶಿತ್ವವನ್ನು ೦-೧೮ ವರ್ಷಗಳ ವಯೋಮಾನದ ಹೆಣ್ಣುಮಕ್ಕಳ ಬಗೆಗಿನ ಬದ್ಧತೆಯನ್ನು, ಗುರಿಗಳನ್ನು ಮತ್ತು ಆದ್ಯತೆಗಳನ್ನು ವಿವರಿಸಲಾಗಿದೆ ಹಾಗೂ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಬದುಕುಳಿಯುವ ಹಕ್ಕು, ಅಭಿವೃದ್ಧಿ, ಸುರಕ್ಷತೆ ಮತ್ತು ಸಹಭಾಗಿತ್ವದ ಹಕ್ಕುಗಳನ್ನು ಒದಗಿಸಿರುವುದರ ವಿವರಗಳನ್ನೂ ನೀಡಲಾಗಿದೆ. ಈ ನೀತಿಯು ಹೆಣ್ಣುಮಕ್ಕಳಿಗೆ ವಿಶಿಷ್ಟವಾದ ಹಾಗೂ ಪ್ರಸ್ತುತವಾದ ಆದ್ಯತೆಗಳು ಮತ್ತು ಕ್ರಮಗಳನ್ನು ವ್ಯಕ್ತಪಡಿಸುತ್ತದೆ. ಇವೆಲ್ಲವುಗಳ ಜೊತೆಗೆ ರಾಷ್ಟ್ರೀಯ ಮಕ್ಕಳ ನೀತಿ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಮತ್ತು ಜಾಗತಿಕ ಸುಸ್ಥಿರಗತಿ ಗುರಿಗಳಿಗೆ ಸರ್ಕಾರದ ಬದ್ಧತೆಯನ್ನು ಪ್ರಕಟಿಸುತ್ತದೆ.

೨. **ವೈಚಾರಿಕತೆ** : ನಮ್ಮ ಸಮಾಜದಲ್ಲಿ ಕಂಡುಬರುವ ಗಂಡು ಮಕ್ಕಳ ಬಗೆಗಿನ ಅತಿಯಾದ ವ್ಯಾಮೋಹ, ಹೆಣ್ಣು ಭ್ರೂಣಹತ್ಯೆ, ಪುರುಷ ಪ್ರಧಾನ ಮನೋಭಾವ ಮತ್ತು ಲಿಂಗಸಂಬಂಧಿ ತಾರತಮ್ಯಗಳಿಂದಾಗಿ ಹೆಣ್ಣುಮಕ್ಕಳು ಗರ್ಭಾವಸ್ಥೆಯಲ್ಲಿ, ಜನನದ ಸಂದರ್ಭದಲ್ಲಿ ಮತ್ತು ಬಾಲ್ಯಾವಸ್ಥೆಯಲ್ಲಿ ನಿರ್ಲಕ್ಷ್ಯಕ್ಕೆ ಮತ್ತು ಅವಗಣನೆಗೆ ಒಳಗಾಗುತ್ತಿದ್ದಾರೆ. ಇದರಿಂದಾಗಿ, ಗಂಡು-ಹೆಣ್ಣುಗಳ ನಡುವಿನ ಅನುಪಾತ, ಮಕ್ಕಳ ಲಿಂಗ ಅನುಪಾತ, ಮರಣ ಪ್ರಮಾಣ, ಅಪೌಷ್ಟಿಕತೆ, ಶಾಲಾ ದಾಖಲೀಕರಣ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಮುಂತಾದ ಸೂಚಿಗಳಲ್ಲಿ ವ್ಯತ್ಯಾಸ ಕಂಡುಬರುತ್ತವೆ. ತತ್ಪರಿಣಾಮವಾಗಿ ಹೆಣ್ಣುಮಕ್ಕಳು ಶೋಷಣೆಗೆ ಮತ್ತು ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಉದಾಹರಣೆಗೆ ಬಲವಂತದ ಬಾಲಕಾರ್ಮಿಕತೆ, ಬಾಲ್ಯವಿವಾಹಗಳು, ಮಕ್ಕಳ ಮಾರಾಟ ಮತ್ತು ಲೈಂಗಿಕ ಶೋಷಣೆ ಮುಂತಾದವುಗಳಿಗೆ ಒಳಗಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ನಮ್ಮ ರಾಜ್ಯದಲ್ಲಿ ಹೆಣ್ಣು ಮಕ್ಕಳ ಸ್ಥಿತಿಗತಿಗಳಲ್ಲಿ ಪ್ರಾದೇಶಿಕ ಅಸಮಾನತೆಗಳಿವೆ, ಜಿಲ್ಲೆ-ಜಿಲ್ಲೆಗಳ ನಡುವೆ ತಾರತಮ್ಯಗಳಿವೆ, ಗ್ರಾಮೀಣ-ನಗರ ಪ್ರದೇಶಗಳ ನಡುವೆ ಭಿನ್ನತೆಗಳಿವೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ ಹೆಣ್ಣುಮಕ್ಕಳ, ವಿಕಲಚೇತನ ಹೆಣ್ಣುಮಕ್ಕಳ ಹಾಗೂ ವಲಸೆಗಾರರ ಕುಟುಂಬಗಳಿಗೆ ಸೇರಿದ ಹೆಣ್ಣುಮಕ್ಕಳ

ಸ್ಥಿತಿಗತಿಯು ರಾಜ್ಯಮಟ್ಟದಲ್ಲಿನ ಮಕ್ಕಳ ಸ್ಥಿತಿಗತಿಯ ಸರಾಸರಿಗಿಂತ ಹೆಚ್ಚಿನ ದುಸ್ಥಿತಿಯಲ್ಲಿದೆ. ೨.೨ ಎಲ್ಲಾ ಮಕ್ಕಳು ದೌರ್ಜನ್ಯ ಮತ್ತು ಶೋಷಣೆಯ ಗಂಡಾಂತರದಲ್ಲಿದ್ದಾರೆ. ಗಂಡು ಮಕ್ಕಳಿಗಿಂತ ಹೆಚ್ಚಿನ ರೀತಿಯಲ್ಲಿ ಹೆಣ್ಣುಮಕ್ಕಳು, ಬಾಲ್ಯವಿವಾಹಕ್ಕೆ, ಲೈಂಗಿಕ ಶೋಷಣೆಗೆ, ಅತ್ಯಾಚಾರಕ್ಕೆ ಮತ್ತು ಕಳ್ಳಸಾಗಾಣಿಕೆಗೆ ಹಾಗೂ ಬಾಲಕಾರ್ಮಿಕತೆಗೆ ಒಳಗಾಗುತ್ತಿದ್ದಾರೆ.

೩. ದೂರದರ್ಶಿತ್ವ ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಹೆಣ್ಣುಮಗುವೂ ತಾರತಮ್ಯ ರಹಿತವಾದ ಮತ್ತು ದೌರ್ಜನ್ಯ ಮುಕ್ತವಾದ ವಾತಾವರಣದಲ್ಲಿ ಘನತೆಯಿಂದ ಜೀವಿಸಬೇಕು. ಪ್ರತಿ ಹೆಣ್ಣುಮಗುವಿನ ಜೀವಿಸುವ, ಅಭಿವೃದ್ಧಿ ಹೊಂದುವ, ಸುರಕ್ಷಿತವಾಗಿ ಬದುಕುವ, ಸಹಭಾಗಿತ್ವದ ಹಾಗೂ ಪಾಲುದಾರಿಕೆಯ ಹಕ್ಕುಗಳನ್ನು ಬಾಲ್ಯಾವಸ್ಥೆಯಲ್ಲಿ ಸಂರಕ್ಷಿಸಿ ಈಡೇರಿಸಬೇಕು.

೪. ಧ್ಯೇಯೋದ್ದೇಶ ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ನೀತಿಯು, ಹೆಣ್ಣುಮಕ್ಕಳು ಸುರಕ್ಷತೆಯಿಂದ, ಘನತೆಯಿಂದ, ಸಮಾನತೆಯಿಂದ ಮತ್ತು ಸ್ವಾತಂತ್ರ್ಯದಿಂದ ಬದುಕುವ ಹಕ್ಕುಗಳನ್ನು ಅದರಲ್ಲೂ, ಗಂಡಾಂತರ ಮತ್ತು ಅಪಾಯಗಳನ್ನು ಎದುರಿಸುವ ಎಲ್ಲ ಹಕ್ಕುಗಳನ್ನು ಅವರು ವಯಸ್ಕರಾಗುವವರೆಗೆ ರಕ್ಷಿಸಿ ಈಡೇರಿಸುತ್ತದೆ. ಈ ನೀತಿಯು ಪುನರುಚ್ಚರಿಸುವ ಮತ್ತೊಂದು ಸಂಗತಿಯೆಂದರೆ ತಾರತಮ್ಯ ಮತ್ತು ಪೂರ್ವಗ್ರಹಗಳಿಲ್ಲದ ರೀತಿಯಲ್ಲಿ ಹೆಣ್ಣುಮಕ್ಕಳು, ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಹೊಂದಿರುತ್ತಾರೆ. ಹೆಣ್ಣುಮಕ್ಕಳ ನೀತಿಯು ಹೆಣ್ಣುಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಮತ್ತು ಸಬಲೀಕರಣವನ್ನು ಪ್ರತಿಪಾದಿಸುತ್ತದೆ. ಹೆಣ್ಣುಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸುವುದಕ್ಕೆ ತಡೆಯೊಡ್ಡುವ, ಅವುಗಳನ್ನು ಉಲ್ಲಂಘಿಸುವ ಅಥವಾ ಸಂಕುಚಿತಗೊಳಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳು, ರೂಢಿಗಳು ಮತ್ತು ಮೂಢನಂಬಿಕೆಗಳಿಗೆ ಅಥವಾ ಧಾರ್ಮಿಕ ಆಚರಣೆಗಳಿಗೆ ನೀತಿಯು ಅವಕಾಶ ನೀಡುವುದಿಲ್ಲ.

# ಅಧ್ಯಾಯ ಆರು

# ಉಪಸಂಹಾರ

## ಫಲಿತಗಳು ಮತ್ತು ಶಿಫಾರಸ್ಸುಗಳು

## ಅಧ್ಯಾಯ ಆರು

# ಉಪಸಂಹಾರ

ಸಹಜವಾದ ಪ್ರಕ್ರಿಯೆಯಲ್ಲಿ ಮಕ್ಕಳು ಬೆಳೆಯಬೇಕಾದುದು ನೈಸರ್ಗಿಕ ನಿಯಮ. ನಮ್ಮ ಸಮಾಜದಲ್ಲಿ ಜನ್ಮತಾಳುವ ಪ್ರತಿಯೊಂದು ಮಗುವು ಅಭಿವೃದ್ಧಿ ಹೊಂದಬೇಕೆಂಬುವುದು ಸಾಮಾಜಿಕ ನ್ಯಾಯ. ಆದರೆ ನಮ್ಮ ಸುತ್ತಮುತ್ತ ಕಣ್ಣು ಹಾಯಿಸಿದರೆ ಪ್ರತೀ ಹಂತದಲ್ಲೂ ಮಕ್ಕಳು ಜಾತಿ, ಧರ್ಮ, ಲಿಂಗ ತಾರತಮ್ಯದಿಂದ ಕೂಡಿದ ವ್ಯವಸ್ಥೆಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸಿಲುಕಿ ನಾನಾ ಸಂಕಷ್ಟಕ್ಕೊಳಗಾಗುತ್ತಿದ್ದು ತಮ್ಮ ಬಾಲ್ಯವನ್ನು ಕಳೆದು ಕೊಳ್ಳುತ್ತಿದ್ದಾರೆ. ಸಮಾಜದ ಒಟ್ಟು ಹರಿವಿನಲ್ಲಿ ಮಕ್ಕಳ ಅಸಹಾಯಕತೆಯೂ ಕೊಚ್ಚಿ ಹೋಗಿ ನಿರ್ಲಕ್ಷಕ್ಕೆ ಒಳಗಾಗುತ್ತಿದೆ. ವ್ಯವಸ್ಥೆಗಳು ಮಕ್ಕಳ ಸ್ಥಿತಿಯನ್ನು ಉತ್ತಮೀಕರಿಸುವುದರಲ್ಲಿ ಸೋತಿವೆ.

ಭಾರತದ ಸಂವಿದಾನದಲ್ಲಿ ಮಕ್ಕಳಿಗೆ ಬದುಕುವ, ರಕ್ಷಣೆಯ, ಭಾಗವಹಿಸುವ, ವಿಕಾಸಹೊಂದುವ ಹಕ್ಕು ಇದೆ. ಆದರೂ ಇದನ್ನು ರಕ್ಷಿಸಿಕೊಳ್ಳಲು ನಾನಾ ಕಾರಣಗಳಿಂದ ಅಸಮರ್ಥರಾಗಿದ್ದಾರೆ. ಮಕ್ಕಳು ತಮಗಾಗುತ್ತಿರುವ ಅನ್ಯಾಯದ ವಿರುದ್ದ ಧ್ವನಿ ಎತ್ತಲಾಗದ ಸ್ಥಿತಿಯಿಂದಾಗಿ ಬಾಲಕಾರ್ಮಿಕತೆ, ಬಾಲ ವೇಶ್ಯಾವಾಟಿಕೆ, ಮಕ್ಕಳ ಮಾರಾಟ–ಸಾಗಾಟದ ಜಾಲಗಳು, ಬಾಲ್ಯವಿವಾಹ, ಮಕ್ಕಳ ಮೇಲಿನ ಅಪರಾಧಗಳು ಹೆಚ್ಚುತ್ತಾ ಇದೆ. ಜಾಗತೀಕರಣದ ರಭಸದಿಂದ ಅಭಿವೃದ್ಧಿಯ ಹೆಸರಿನಲ್ಲಿ ಬರುವ ಯೋಜನೆಗಳು ಮತ್ತು ಸಮಾಜದಲ್ಲಿ ಆಗುತ್ತಿರುವ ಕ್ಷಿಪ್ರ ಬೆಳವಣಿಗೆಯ ಪರಿಣಾಮವಾಗಿ ನಿರ್ಲಕ್ಷಿಸಲ್ಪಡುತ್ತಾರೆ.

ಸಮಾಜ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ಪ್ರಥಮತವಾಗಿ ಸಂಕಷ್ಟದಲ್ಲಿರುವ ಮಕ್ಕಳನ್ನು ರಕ್ಷಿಸಬೇಕು, ಅವರಿಗೆ ನ್ಯಾಯ ನೀಡುವ ಸಮಾಜ ನಿರ್ಮಾಣವಾಗಬೇಕು. ಪ್ರತಿಯೊಂದು ಮಗುವಿನ ರಕ್ಷಣೆ, ಬದುಕುವ, ಭಾಗವಹಿಸುವ, ವಿಕಾಸ ಹೊಂದುವ ಹಕ್ಕನ್ನು ಅನುಭವಿಸುತ್ತ ನಾವೆಲ್ಲರೂ ಶ್ರಮಿಸಬೇಕು. ಆಗ ಮಾತ್ರ ನಾವೆಲ್ಲರೂ ಉತ್ತಮ

ಅಭಿವೃದ್ಧಿಯ ಪ್ರಜ್ಞಾವಂತ ಸಮಾಜವನ್ನು ಹೊಂದುವ ಸಾಧ್ಯತೆ ಇದೆ. ಮಕ್ಕಳನ್ನು ಸಮಾಜದಿಂದಾಗುವ ಸಂಕಷ್ಟಗಳಿಂದ ವಿಮುಕ್ತಗೊಳಿಸಬೇಕಾದರೆ, ನಾವೆಲ್ಲರೂ ಮಕ್ಕಳ ಧ್ವನಿಯಾಗಬೇಕು. ಅವರಿಗೆ ನ್ಯಾಯ ದೊರಕಿಸುವ ವ್ಯವಸ್ಥೆಯನ್ನು ಒದಗಿಸಿಕೊಡಬೇಕು. ಈ ಚಿಂತನೆಯೊಂದಿಗೆ ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳಿಗೆ ಮನ್ನಣೆ ದೊರಕಿದ ನಂತರ ಈ ದೇಶದಲ್ಲಿ ಮಕ್ಕಳ ಕಾನೂನುಗಳಿಗೆ ಈಗಾಗಲೇ ಹೊಸ ರೂಪ ಪಡೆಯುತ್ತಿದೆ. ಇರುವ ಕಾನೂನುಗಳು ವ್ಯಾಪಕ ಪ್ರಚಾರ ಮತ್ತು ಅದರ ಸದ್ಬಳಕೆಯ ಬಗ್ಗೆ ಸಾರ್ವಜನಿಕ ಮಾಹಿತಿ ಸಿಗದಿರುವುದರಿಂದ ಕಾಯ್ದೆಗಳ ಸಂದರ್ಭಗಳಲ್ಲಿ ನಮ್ಮ ಮಕ್ಕಳ ರಕ್ಷಣೆ ಸಾಧ್ಯವಾಗಲಿಲ್ಲ ಎನ್ನುವ ಅಂಶವನ್ನು ನಾವು ಗಮನಿಸಬೇಕಾಗುತ್ತದೆ.

ಮಾನವ ಸಂಪನ್ಮೂಲ ಅಭಿವೃದ್ಧಿಯ ಒಂದು ಪ್ರಕ್ರಿಯೆಯಾಗಿದ್ದು ತನ್ಮೂಲಕ ವ್ಯಕ್ತಿಗಳು ಯೋಜಿತ ರೀತಿಯಲ್ಲಿ ನಿರಂತರವಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯದಲ್ಲಿ ದಕ್ಷತೆಯನ್ನು ಪಡೆಯುತ್ತಾರೆ. ಜನಸಾಮಾನ್ಯರಿಗೆ ಈ ಕಾಯಿದೆಯ ಅರಿವಾದಾಗ ಮಾತ್ರ ಅನ್ಯಾಯ ನಡೆದ ಸಂದರ್ಭದಲ್ಲಿ ಮಕ್ಕಳಪರ ಧ್ವನಿಯೆತ್ತಲು ಈ ಕಾಯಿದೆ ಖಂಡಿತವಾಗಿ ಸಹಕಾರಿಯಾಗುತ್ತದೆ. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಕೂಡಾ ಅರಿವು ಹೊಂದಿ ಭಾರತದ ಪ್ರತಿ ಮಗುವಿಗೂ ಬದುಕು ಕಟ್ಟಿಕೊಳ್ಳಲು ಸಹಾಯ ವಾಗಬಲ್ಲ ಶಿಕ್ಷಣ ನೀಡುವಲ್ಲಿ ಕಟೀಬದ್ಧರಾಗಬೇಕು. ಕಾಯಿದೆಗಳ, ನಿಯಮಾಗಳಿಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾದ ಸಮುದಾಯ ಜಾಗೃತಿಯನ್ನು ಮೂಡಿಸುವ ಅವಶ್ಯಕತೆ ಇದೆ.

ನಾನಾ ಸಂದರ್ಭ ಮತ್ತು ಪರಿಸ್ಥಿತಿಯಲ್ಲಿ ಮಕ್ಕಳೇ ಹೆಚ್ಚಿನ ಸಂಕಷ್ಟಕ್ಕೆ ಒಳಪಡುವ ದುರ್ಬಲ ಸ್ಥಿತಿಯಲ್ಲಿರುತ್ತಾರೆ. ಯಾವುದೇ ಪ್ರದೇಶದಲ್ಲಿ ನಡೆಯುವ ಮತೀಯ ಗಲಭೆ, ನಾಗರಿಕ ಕ್ಷೋಭೆ, ನೈಸರ್ಗಿಕ ವಿಕೋಪ, ಯುದ್ಧ ಮುಂತಾದ ಪ್ರಸಂಗಗಳಲ್ಲಿಮಕ್ಕಳೇ ಹೆಚ್ಚು ಸಾವು ನೋವು ಸಂಕಷ್ಟ ಅನುಭವಿಸಿದ್ದಾರೆ. ಸಂಕಷ್ಟದ ಪರಿಸ್ಥಿತಿಯಿಂದ ಮಕ್ಕಳನ್ನು ರಕ್ಷಿಸಲು ಮಕ್ಕಳ ಹಕ್ಕುಗಳ ಪರಿಕಲ್ಪನೆಯನ್ನು ೧೯೧೯ರಲ್ಲಿ ರಚಿತವಾದ ಸಂಯುಕ್ತ ರಾಷ್ಟ್ರದ ಉಪಸಮಿತಿ ೧೯೨೪ರಲ್ಲಿ ಮಕ್ಕಳ ಹಕ್ಕುಗಳ ಸನ್ನದನ್ನು ಅಂಗೀಕರಿಸುವುದರೊಂದಿಗೆ ಕ್ರಮಬದ್ಧವಾಗಿ ಪ್ರಾರಂಭವಾಯಿತು. ಸೇವ್ ದ ಚಿಲ್ಡ್ರನ್ ಸಂಸ್ಥೆಯ ಸಂಸ್ಥಾಪಕಿ ಇಂಗ್ಲಟನ್ ಜೋಸ್ ಈ ಹಕ್ಕು ಪತ್ರದ ಮೊದಲ ಕರಡು ಪ್ರತಿಯನ್ನು ತಯಾರಿಸಿದರು.

೧೯೫೯ರಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಮಕ್ಕಳ ಹಕ್ಕುಗಳ ಘೋಷಣೆಯನ್ನು ಒಪ್ಪಿಕೊಂಡಿತು. ೧೯೭೯ನ್ನು ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಘೋಷಿಸಿದ್ದು ಮಕ್ಕಳ ಹಕ್ಕುಗಳ ಚಳುವಳಿಗಳಿಗೆ ಹೊಸ ರೂಪ ನೀಡಿತು. ಮೊತ್ತ ಮೊದಲು ಪೋಲೆಂಡ್, ಮಕ್ಕಳ ಹಕ್ಕುಗಳ ಒಡಂಬಡಿಕೆ ರೂಪಿಸುವ ಸಮಿತಿಯನ್ನು ಹುಟ್ಟುಹಾಕಲು ವಿಶ್ವಸಂಸ್ಥೆಗೆ ಸೂಚಿಸಿತು. ಇದರ ಪರಿಣಾಮ ಸತತ ೧೦ ವರ್ಷಗಳ ಸುದೀರ್ಘ ಕೆಲಸ ಅಂದರೆ ೧೯೮೯ ನವೆಂಬರ್ ೨೦ರಂದು ವಿಶ್ವಸಂಸ್ಥೆ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಅಂಗೀಕರಿಸಿತು. ವಿಶ್ವದ ೧೯೬ ರಾಷ್ಟ್ರಗಳು ಈ ಒಡಂಬಡಿಕೆಗೆ ಸಹಿ ಹಾಕುವುದರ ಮೂಲಕ ಮಕ್ಕಳ ಹಕ್ಕುಗಳನ್ನು ಖಾತ್ರಿ ಪಡಿಸುವಲ್ಲಿ ತಮ್ಮ ಬದ್ಧತೆಯನ್ನು ಸೂಚಿಸಿವೆ. ಭಾರತ ಸರ್ಕಾರ ೧೯೯೨ ಡಿಸೆಂಬರ್ ೧೧ ರಂದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಿದೆ. ಸಹಿ ಹಾಕಿದ ರಾಷ್ಟ್ರಗಳು ಮಕ್ಕಳ ಹಕ್ಕುಗಳನ್ನು ಖಾತ್ರಿಪಡಿಸಲು ಕ್ರಮ ವಹಿಸುವಂತೆ ಮಕ್ಕಳ ಹಕ್ಕುಗಳಿಗೆ ಪೂರಕವಾದ ಕಾನೂನುಗಳನ್ನು ಮತ್ತು ಶಾಸನಗಳನ್ನು ಜಾರಿಗೊಳಿಸುವುದು ಮಕ್ಕಳ ಹಕ್ಕುಗಳು ಮತ್ತು ಸರಕಾರದ ಬದ್ಧತೆ ಎಣಿಸಿಕೊಂಡಿದೆ. ಈ ಕಾಯಿದೆಗಳ ಅನುಷ್ಠಾನಕ್ಕೆ ಸರಿಯಾದ ಕಾರ್ಯಕ್ರಮಗಳನ್ನು ರೂಪಿಸುವುದು ಸರಕಾರದ ಬದ್ಧತೆಯಾಗಿದೆ. ಈ ಕಾರ್ಯಕ್ರಮಗಳನ್ನು ತಳಮಟ್ಟಕ್ಕೆ ಮುಖ್ಯವಾಗಿ ಮಕ್ಕಳಿಗೆ ತಲುಪುವಂತೆ ಅವಶ್ಯಕವಾಗಿ ಸಿಬ್ಬಂಧಿಗಳನ್ನು ನಿಯೋಜಿಸುವುದು ತೀರಾ ಅವಶ್ಯಕ.

ಭಾರತ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೩೯ರಷ್ಟು ಮಕ್ಕಳು ಇದ್ದಾರೆ. ಇದರಲ್ಲಿ ೨೭.೫೫% ಅನಾನುಕೂಲ ಮತ್ತು ಪ್ರತಿಕೂಲ ವರ್ಗಕ್ಕೆ ಸೇರಿದ ಮಕ್ಕಳು ಇದ್ದಾರೆ. ಇದರಲ್ಲಿ ೧೭.೬% ಮಕ್ಕಳು ಪರಿಶಿಷ್ಟ ಜಾತಿಗೆ ಸೇರಿದ ಮತ್ತು ೯.೭% ಮಕ್ಕಳು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಕ್ಕಳು ಇದ್ದಾರೆ. ೨೦೧೧ರ ಗಣತಿಯ ಪ್ರಕಾರ ಹುಡುಗಿಯರ ಲಿಂಗಾನುಪಾತವು ೧೦೦೦ ಹುಡುಗಿಯರ ಜನನವಾಗುತ್ತದೆ. ನ್ಯಾಷನಲ್ ಕ್ರೈಮ್ ರಿಪೋರ್ಟ್ ಬ್ಯೂರೋದ ಅಂಕಿ ಅಂಶಗಳ ಪ್ರಕಾರ ೨೦೧೦ರಲ್ಲಿ ಕಾನೂನಿನೊಡನೆ ಸಂಘರ್ಷದಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ ೧.೯% ಮತ್ತು ೨೦೧೪ರಲ್ಲಿ ೨.೭% ರಷ್ಟು ಹೆಚ್ಚಾಗಿರುತ್ತದೆ. ೨೦೧೩ ಗಣತಿಯ ಪ್ರಕಾರ ಭಾರತದಲ್ಲಿ ೧೦೦೦ ಶಿಶು ಜನನವಾದಾಗ ಇದರಲ್ಲಿ ೪೦ ಶಿಶುಗಳು ಸಾವನ್ನಪ್ಪುತ್ತವೆ. ೮೮.೪೫% ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ದಾಖಲಾತಿಯನ್ನು ಪಡೆಯುತ್ತಾರೆ. ೨೦೧೪ರಲ್ಲಿ ಮಾನವ ಸಂಪನ್ಮೂಲ ಕೇಂದ್ರದವರು ನಡೆಸಿದ ಅಧ್ಯಯನದ ಮೇರೆಗೆ ೩೬.೩% ಮಕ್ಕಳು ಪ್ರಾಥಮಿಕ ಶಿಕ್ಷಣದಲ್ಲೇ ಶಾಲೆಯಿಂದ ಹೊರಗುಳಿದಿದ್ದಾರೆ.

